ಸಂವಾದ

ಸೆಪ್ಟೆಂಬರ್ 2008 ರೂ.20



ಒಡೆತನಕ್ಕೆ ಕೇಡಿಲ್ಲವಾಗಿ...

ಶಿಕ್ಷಣ ಮಾಧ್ಯಮ ತೀರ್ಪು:

ಕಾನೂನು ಬದ್ಧ ಕುಮ್ಮಕ್ಕು

•

ಜಾತಿ ಧರ್ಮ ತಾರತಮ್ಯ ಮುಂದುವರೆದ ಚರ್ಚೆ

ಸಂವಾದ

ಮಾಸ ಪತ್ರಿಕೆ

ಸಂಪುಟ ೬ ಸಂಚಿಕೆ ೧೧

ಸೆಪ್ಟೆಂಬರ್ ೨೦೦೮

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಬಿ.ಯು. ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿ ರಸ್ತೆ.

ವಿಶ್ವನೀಡಂ ಅಂಚೆ

ಬೆಂಗಳೂರು-೫೬೦ ೦೯೧

✆ ೨೩೪೮೦೨೭೮/೯೪೪೮೦ ೪೮೩೦೬

ಇ-ಮೇಲ್ : samvaada@hotmail.com

honnapura@yahoo.co.in

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

✆ 080-23480278, 94480 48306

e-mail : samvaada@hotmail.com

honnapura@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩

❑ ಹೊಸ ಪುಸ್ತಕ ೦೪

❑ ಅಂತರಂಗ ೦೫

❑ ಜಾತಿ, ಧರ್ಮ, ತಾರತಮ್ಯ ಚರ್ಚೆ

○ ಕಿರಣ್ ಎಂ. ಗಾಜನೂರು ೦೬

○ ರಾಜಾರಾಮ ಹೆಗಡೆ ೦೮

○ ಪ್ರೊ ಜಿ. ಎಸ್. ಸದಾನಂದ ೧೦

❑ ವಿಶೇಷ ಪತ್ರಗಳು

○ ವೈ ಮರಿಸ್ವಾಮಿ ೧೨

○ ಕು. ಸ. ಮಧುಸೂದನ ೧೩

❑ ಶಿಕ್ಷಣ ಮಾಧ್ಯಮ ತೀರ್ಪು: ಕಾನೂನು ಬದ್ಧ ಕುಮ್ಮಕ್ಕು

○ ರಂಗನಾಥ ಕಂಟನಕುಂಟೆ ೧೪

❑ ಕೃಷಿ ಬಿಕ್ಕಟ್ಟನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ

○ ಶ್ರೀಶ ಉಡುಪ ೧೬

❑ ಉನ್ನತ ಶಿಕ್ಷಣ: ಪಠ್ಯಕ್ರಮದ ಸ್ವರೂಪ, ಸಮಸ್ಯೆಗಳು

○ ಡಾ. ಬಿ ಎಂ ಪುಟ್ಟಯ್ಯ ೧೮

❑ ಸಮಾಜವಾದಿ ಆಂದೋಲನದ ಪುನರುಜ್ಜೀವನ ಏಕೆ? ಮತ್ತು ಹೇಗೆ ೨೦

○ ಡಿ. ಎಸ್ ನಾಗಭೂಷಣ

❑ ಸುಳ್ಳು ಭರವಸೆಗಳ ಬಿಜೆಪಿ ಬಜೆಟ್-೨

○ ಶಿವಸುಂದರ್ ೨೬

❑ ಪ್ರಸವದ ನೋವಿನಲ್ಲಿ ನೇಪಾಳ-೨

○ ಸತ್ಯ ೩೨



❑ ವಾಸ್ತವದ ಭೂತ ಕಾಡಿದಾಗ.. ಕತೆ

○ ನಾ. ದಿವಾಕರ ೩೬

❑ ಬೌದ್ಧ ಸೌಂದರ್ಯ ಮೀಮಾಂಸೆ

○ ಡಾ. ಎಸ್. ನಟರಾಜ್ ಬೂದಾಳು ೪೦

❑ ಧರೆ ಹತ್ತಿ ಉರಿದರೆ...

○ ಡಾ. ಟಿ. ಆರ್ ಚಂದ್ರ ಶೇಖರ್ ೪೨

❑ ದಲಿತ್ ಡೈರಿ ೪೬

○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್

❑ ಬುದ್ಧಾಯಣ ೫೦

○ ಸಿ.ಎಚ್ ರಾಜಶೇಖರ್



ಕವನಗಳು : ❑ ಬೆಳವನ ಹಕ್ಕಿ ಮತ್ತು ಸಂತ ೨೪ ❑ ಓಟನ ಶಕ್ತಿ ೨೫

❑ ಎಲ್ಲರೂ ಸಭ್ಯರೇ ಇಲ್ಲಿ ೩೫

ಮುಖಪುಟ ಕಲೆ: ಡಿ. ರಂಗಸ್ವಾಮಿ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ದೇವರು ಧರ್ಮ ನಿರಾಕರಿಸಿದ ಐನ್‌ಸ್ಟೀನ್

ಮಾನ್ಯ ಸಂಪಾದಕರೇ,

ಆಲ್ಬರ್ಟ್ ಐನ್‌ಸ್ಟೀನ್ (೧೮೭೯-೧೯೫೫) ಭೌತಶಾಸ್ತ್ರದಲ್ಲಿ ದೊಡ್ಡ ಹೆಸರು. ಆತನಿಗೆ ೧೯೨೧ರಲ್ಲಿ ನೋಬೆಲ್ ಪ್ರಶಸ್ತಿ ಲಭಿಸಿತು. ಆತನ 'ಸೈನ್ಸ್ ಅಂಡ್ ರಿಲಿಜನ್' ಎಂಬ ಪ್ರಬಂಧ ಪ್ರಸಿದ್ಧವಿದೆ. ಅದರಲ್ಲಿ ಆತ 'ಸೈನ್ಸ್ ವಿತೌಟ್ ರಿಲಿಜನ್ ಲೇಮ್', 'ರಿಲಿಜನ್ ವಿತೌಟ್ ಸೈನ್ಸ್ ಇಸ್ ಬ್ಲೈಂಡ್'(೧೯೪೧) 'ವಿಜ್ಞಾನವಿಲ್ಲದ ಧರ್ಮ ಕುಂಟು, ಧರ್ಮವಿಲ್ಲದ ವಿಜ್ಞಾನ ಕುರುಡು' ಎಂದು ಹೇಳಿದ್ದಾನೆ. ಇದನ್ನು ಪ್ರಪಂಚದ ಎಲ್ಲಾ ಮತದ ಮುಖಂಡರುಗಳು, ಆಧ್ಯಾತ್ಮವಾದಿಗಳು, ವಿಜ್ಞಾನಿಗಳು, ತತ್ವಜ್ಞಾನಿಗಳು, ಸಾಹಿತಿಗಳು ಉಲ್ಲೇಖಿಸುತ್ತಿದ್ದಾರೆ. ಐನ್‌ಸ್ಟೀನ್‌ನಂಥ ಮಹಾನ್ ವಿಜ್ಞಾನಿಯು ದೇವರು ಮತ್ತು ಧರ್ಮದಲ್ಲಿ ನಂಬಿಕೆ ಇಟ್ಟಿದ್ದ ಎಂದು ಎಲ್ಲರೂ ಹೇಳುವುದು ಪರಿಪಾಠವಾಗಿದೆ.

ಆದರೆ ಜನವರಿ ಮೂರು ೧೯೫೪ರಲ್ಲಿ ತತ್ವಜ್ಞಾನಿ ಎರಿಕ್ ಗೂಟ್‌ಕಿಂಡ್‌ಗೆ ಬರೆದ ಪತ್ರದಲ್ಲಿ ಐನ್‌ಸ್ಟೀನ್ ದೇವರು ಮತ್ತು ಧರ್ಮ ಕುರಿತು ತಳೆದಿರುವ ನಿಲುವು ಮಾನವ ಜನಾಂಗವನ್ನು ಎಚ್ಚರಿಸುವಂತಿದೆ: ಐನ್‌ಸ್ಟೀನ್ ಹೇಳುತ್ತಾನೆ: 'ದೇವರು ಎಂಬ ಶಬ್ದ, ನನ್ನಷ್ಟಕ್ಕೆ ಹೇಳುವುದಾದರೆ, ಮಾನವ ದೌರ್ಬಲ್ಯಗಳ ಉತ್ಪನ್ನ ಹಾಗೂ ಅಭಿವ್ಯಕ್ತಿ. ಬೈಬಲ್ ಗೌರವಾರ್ಹವಾದರೂ ಅದು ಪುರಾತನ ದಂತಕತೆಗಳ ರಾಶಿ. ಇವು ಪೂರಾ ಬಾಲಿಶ ಕತೆಗಳು... ನನ್ನ ಈ ಅಭಿಪ್ರಾಯವನ್ನು ಎಷ್ಟೇ ಸೂಕ್ಷ್ಮ ವ್ಯಾಖ್ಯಾನದಿಂದಲೂ ಬದಲಾಯಿಸಲು ಸಾಧ್ಯವಿಲ್ಲ'

ಇಸ್ರೇಲಿನ ರಾಷ್ಟ್ರಾಧ್ಯಕ್ಷರಾಗಿ ಎಂದು ಆಮಂತ್ರಣ ನೀಡಿದಾಗ ಈ ವಿಶ್ವವಿಖ್ಯಾತ ವಿಜ್ಞಾನಿ ಅದನ್ನು ನಿರಾಕರಿಸಿದ. ಅಲ್ಲದೆ ಯಹೂದಿಗಳು ತಾವು 'ದೇವರಿಂದ ಆಯ್ಕೆಗೊಂಡ ಜನಾಂಗ' ಎಂದು ಹೇಳಿಕೊಳ್ಳುವುದನ್ನು ಸಹ ಆತ ಒಪ್ಪಲಿಲ್ಲ. 'ಯಹೂದಿ ಧರ್ಮ, ನನ್ನ ಮಟ್ಟಿಗೆ ಹೇಳುವುದಾದರೆ, ಎಲ್ಲಾ ಧರ್ಮಗಳ ಹಾಗೆ, ಅತ್ಯಂತ ಶಿಶುಸಹಜ ಮೂಢನಂಬಿಕೆಗಳ ಅವತರಣ. ನಾನು ಯಹೂದಿ ಜನಾಂಗಕ್ಕೆ ಸೇರಿದವನೆಂದೂ, ಅವರ ಮನೋಭಾವದೊಂದಿಗೆ ಗಾಢ ಸಂಬಂಧವುಳ್ಳವನೆಂದೂ ಹೇಳಲು ಸಂತೋಷಪಡುತ್ತೇನೆ. ಅವರು ಇತರ ಎಲ್ಲಾ ಜನಾಂಗಗಳಿಗಿಂತ ಭಿನ್ನ ಗುಣದವರೆಂದು ನಾನು ಹೇಳಲಾರೆ' ಎಂದು ಮುಂದುವರೆದು, 'ಅಧಿಕಾರ ಹೀನರಾಗಿ ಅತ್ಯಂತ ಕೆಟ್ಟ ಕೆಡುಕುಗಳಿಂದ ಅವರು ರಕ್ಷಿತವಾಗಿದ್ದರೂ, ನನ್ನನುಭವದಲ್ಲಿ ಅವರು ಇತರ ಮಾನವ ಸಮುದಾಯಗಳಿಗಿಂತ ಉತ್ತಮರಲ್ಲ. ಮೋಕ್ಷ ಪಡೆಯಲು ಭಗವಂತನಿಂದ ಆಯ್ಕೆಯಾದ ಜನಾಂಗ ಅವರು ಎಂದು ನನಗೆ ಕಾಣಿಸುವುದಿಲ್ಲ.' ಎಂದಿರುವುದು ಗಮನೀಯ.

ಐನ್‌ಸ್ಟೀನ್‌ನ ಸತ್ಯದ ಮಾತುಗಳು ಮಾನವ ಪ್ರೇಮದಿಂದ ಪ್ರೇರಿತವಾಗಿವೆ. ತಾವು ಪ್ರತ್ಯೇಕ, ಭಿನ್ನ ಎಂದುಕೊಳ್ಳುವ ಜನರಿಗೆ ಇವು ಜ್ಞಾನೋದಯ ಉಂಟು ಮಾಡುತ್ತವೆ ಎನ್ನುವುದರಲ್ಲಿ ಸಂದೇಹವಿಲ್ಲ. ಐನ್‌ಸ್ಟೀನ್ ಸಮಾನತಾವಾದಿ. ಐನ್‌ಸ್ಟೀನ್ ನಿಧನವಾಗುವುದಕ್ಕೆ ಒಂದು ವರ್ಷ ಮುಂಚೆ ಜರ್ಮನ್ ಭಾಷೆಯಲ್ಲಿ ಬರೆದಿದ್ದ ಈ ಮಹತ್ವದ ಪತ್ರ ಕಳೆದ ಐವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಖಾಸಗಿ ಸಂಗ್ರಹದಲ್ಲಿ ಇತ್ತು. ಮೇ ಹದಿನೈದು ೨೦೦೮ರಂದು ಇದು ಲಂಡನ್‌ನಲ್ಲಿ ಹರಾಜಾಯಿತು. ಮಾರಾಟದ ಮೊತ್ತ ೨೦೦ ಸಾವಿರ ಪೌಂಡುಗಳು. ಸುಮಾರು ಎರಡು ಕೋಟಿ ರೂಪಾಯಿ.

ಲಂಡನ್‌ನ 'ಗಾರ್ಡಿಯನ್' (೧೬-೫-೨೦೦೮) ದಿನಪತ್ರಿಕೆ ಇದನ್ನು ವರದಿ ಮಾಡಿದೆ.

ಡಾ. ಕೆ.ಎಸ್. ಭಗವಾನ್,
ಮೈಸೂರು

ವೈಚಾರಿಕತೆಯ ಧಾರಾವಾಹಿ

ಮಾನ್ಯ ಸಂಪಾದಕರೇ,

'ಸಂವಾದ'ವು ವೈಚಾರಿಕತೆಯ ಧಾರಾವಾಹಿಯಾಗಿದೆ. ಪ್ರಸ್ತುತ ಸಂಚಿಕೆ (೧೦ ಆಗಸ್ಟ್ ೨೦೦೮) ಯಲ್ಲಿ ಪ್ರಕಟವಾಗಿರುವ ಚರ್ಚೆಯ ಜಾತಿ, ಧರ್ಮ ತಾರತಮ್ಯವು ಹಿಂದಿನ ಮೂರು ಸಂಚಿಕೆಗಳನ್ನು ಎದುರಿಟ್ಟುಕೊಳ್ಳಲು ಪ್ರೇರೇಪಿಸುತ್ತದೆ.

ಜಾತಿ, ಧರ್ಮ ತಾರತಮ್ಯ ಚರ್ಚೆಯು ಕುವೆಂಪು ವಿಶ್ವವಿದ್ಯಾಲಯದ ಸಂಶೋಧನೆಯ ಮೂಲ ಧಾತು(ಪ್ರತಿ)ವನ್ನು ಓದದಿರುವವರ ಗ್ರಹಿಕೆಗೆ ಸುಲಭದಲ್ಲಿ ನಿಲುಕುವುದಿಲ್ಲ. ಆದರೆ ಜಾತಿ ಧರ್ಮಗಳನ್ನು ಮನುಶಾಸ್ತ್ರದ ತಳಪಾಯದಿಂದಲೇ ಡಾ. ಬಾಲಗಂಗಾಧರ ಮತ್ತು ಅವರ ಅನುಯಾಯಿ ಷಣ್ಮುಖ ಅವರು ಪರಿಗ್ರಹಿಸಿರುವುದನ್ನು ವಿ.ಎಸ್. ಶ್ರೀಧರ್, ಸಿ.ಜಿ. ಲಕ್ಷ್ಮೀಪತಿ ಮತ್ತು ಡೊಮಿನಿಕ್ ಡಿ. ಅವರುಗಳ ಚರ್ಚೆಯಿಂದ ಭಾವನೆಗೆ ತಂದು ಕೊಳ್ಳ ಬಹುದು.

೧. ಒಬ್ಬ ವ್ಯಕ್ತಿಯ ಸ್ಥಾನ ಮಾನದ ಮಾಪನವು (scale) ಈ 'ಜಾತಿ'.

೨. ಅತ್ಯಂತ ಹೆಚ್ಚು ವಿಕಟಾರ್ಥಗಳಿಗೊಳಪಟ್ಟಿರುವುದು ಧರ್ಮ.

೩. ಅಂತೆಯೇ 'ಜಾತಿ ಧರ್ಮ' ಎನ್ನುವ ಪಡೆನುಡಿಯು ಕ್ರೌರ್ಯಾತಿ ಕ್ರೌರ್ಯವನ್ನು ಹುದುಗಿಸಿಕೊಂಡಿರುವ ಚಿನ್ನದ ಕತ್ತಿ.

ಈ ಸ್ಥಿತ್ಯಂತರವು ಭೂತಕಾಲದಲ್ಲಿತೆಂಬುದನ್ನು ಇತಿಹಾಸಗಳಿಂದ ಕಾಣಬಹುದು. ವರ್ತಮಾನದಲ್ಲಿ ಅನುಭವಿಸುತ್ತಿದ್ದೇವೆ. ಇದರೊಂದಿಗೆ ಬೆನ್ನನ್ನು ಎದೆಯನ್ನು ಮುಖವನ್ನು ತಿವಿಯುತ್ತಿರುವುದು ಗೋರಕ್ಷಣೆಯ ಕೂಗು. ಲೇಖಕ ಶ್ರೀ ಜಯಪ್ರಕಾಶ್ ಎಚ್. ಅವರು ಈ ಕೂಗಿಗೆ ಶೂದ್ರ, ರೈತರು, ದಲಿತರು ಬಲಿ ಬೀಳುತ್ತಿರುವ ಭಯಾನಕತೆಯನ್ನು ತಿಳಿಸಿದ್ದಾರೆ, ಚಿತ್ರಣವನ್ನು ಕೊಟ್ಟಿದ್ದಾರೆ.

ಸಂಚಿಕೆಯ ಒಂದೊಂದು ಪುಟವೂ ವಿಷಯಾಸಕ್ತ ಓದುಗರನ್ನು ಚಿಂತನೆಗೆ ಹಚ್ಚುವುದರಲ್ಲಿ ಸಂಶಯವಿಲ್ಲ.

ಶುಭಾಶಯಗಳೊಂದಿಗೆ
ಪಿ.ಗೋಕುಲ್‌ದಾಸ್ ಮಂಗಳೂರು.

ಯಾತನಾ ಶಿಬಿರಗಳು

ಮಾನ್ಯರೆ,

ಚಿಕ್ಕನಾಯಕನ ಹಳ್ಳಿಯಲ್ಲಿ ಗಣಿ ವಿರುದ್ಧ ನಡೆದ ಪ್ರತಿಭಟನೆಗಳನ್ನು ತಾವು ಬಲ್ಲಿರಷ್ಟೇ. ಗಣಿಯ ಆಳ, ವಿಸ್ತಾರ ನಾವೆಲ್ಲ ಊಹಿಸಿದಿದ್ದಕ್ಕಿಂತಲೂ ಭೀಕರವಾಗಿದೆ. ಈ ವ್ಯವಸ್ಥೆ/ಪಿಡುಗು ನಮ್ಮ ಹಳ್ಳಿಗಳನ್ನು Hitler ರೂಪಿಸಿದಂತಹ Concentration campಗಳನ್ನಾಗಿ ನಮ್ಮ ಒಪ್ಪಿಗೆ ಪಡೆದೇ ನಿರ್ಮಾಣ ಮಾಡುತ್ತದೆ. ಆದರೆ ಈ ghettoಗಳು ಸಹಜ ಎಂಬಂತೆ ಪರಿವರ್ತಿತವಾಗುತ್ತಿವೆ.

ಪೊಲೀಸರು ಬಿತ್ತುತ್ತಿರುವ ಭಯದ ವಾತಾವರಣಕ್ಕೆ ಜನ ದಿಗ್ಭ್ರಾಂತರಾಗಿದ್ದಾರೆ. ಹಳ್ಳಿಗಳಲ್ಲಿ ಗಂಡಸರು ತಲೆ ಮರೆಸಿಕೊಂಡಿದ್ದಾರೆ. ಸಂತೆಗಳಲ್ಲಿ, ಬೀದಿಗಳಲ್ಲಿ ಭಯ ಮಿಶ್ರಿತ ಆತಂಕವಿದೆ. ಹಿಂಗಾರು ಬಿತ್ತನೆ ಕೆಲಸಗಳು ನಿಂತುಹೋಗಿವೆ. ಮನೆ ಮಂದಿಯ ಮೇಲೆಲ್ಲಾ ಕೇಸು ಹಾಕಿದ್ದಾರೆ. ಸಾಮಾಜಿಕ ವ್ಯವಸ್ಥೆಯೇ ಪಲ್ಲಟಗೊಂಡಿದೆ. ಕೇವಲ ಕೆಲವೇ ಜನರ ಉಪಯೋಗಕ್ಕೆ, ಗಣಿ ಮಾಲೀಕರನ್ನು ಬಲಪಡಿಸಲಿಕ್ಕೆ.

ನಮ್ಮ ಶಿಕ್ಷಣವಾಗಲಿ, ರಾಜಕಾರಣವಾಗಲಿ ಇದಕ್ಕೆಲ್ಲಾ ಕುರುಡಾಗಿದೆ. ಮೌನವಾಗಿರೋದೇ ಬದುಕಾದರೆ, ಕುರುಡುತನವೇ ಆರೋಗ್ಯ ಎನ್ನುವಂತಾದರೆ, ಬದುಕಿಗೆ ಜನ ಸಾಮೂಹಿಕ ವಿದಾಯ ಹೇಳಬೇಕಾದ ದಿನಗಳು ದೂರವಿಲ್ಲ.

'ಸಂವಾದ' ಪತ್ರಿಕೆ ಆರೋಗ್ಯವಾಗಿದೆ. ಶುಭವಾಗಲಿ. ವಿಶ್ವಾಸದಿಂದ,

ಸರಸ್ವತಿ. ಕೆ.ಬಿ, ಚಿಕ್ಕನಾಯಕನಹಳ್ಳಿ

ಪತ್ರಾಗಾರ



ಚಂದಾ ವಿವರ
ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಒ./ಡಿ.ಡಿ. ಮಾತ್ರ ಕಳುಹಿಸಬೇಕು.

ಇವಾಳಜ್ಜಿಯೂ ಆದಮಜ್ಜನೂ (ನಾಟಕ)
ಲೇ: ಮೋಹನಚಂದ್ರ ಯು.
ಬೆಲೆ: ರೂ. ೩೦/-

ಮೋಹನಚಂದ್ರ ಯು. ರಂಗಭೂಮಿಯೊಂದಿಗೆ ಮೂರು ದಶಕಗಳಿಂದ ನಂಟು ಹೊಂದಿದವರು. ರಂಗಕ್ಕಷ್ಟೇ ಸೀಮಿತವಾಗಿದ್ದ ಅವರ ಅನೇಕ ನಾಟಕಗಳಮೊದಲ ಪ್ರಕಟಿತ ಕೃತಿ ಇದು. ಗಂಡು-ಹೆಣ್ಣಿನಲ್ಲಿ ಇರಬಹುದಾದ ಸಾಮ್ಯತೆಗಳನ್ನು ಪ್ರಕೃತಿ, ಪುರುಷ ಪಾತ್ರದ ಮೂಲಕ ಇಲ್ಲಿ ಸಾದರಪಡಿಸಿದ್ದಾರೆ. ಅನಾದಿ ಕಾಲ ದಿಂದಲೂ ಸ್ತ್ರೀ ಪುರುಷರ ಸಂಬಂಧಗಳು ಹೇಗಿದ್ದವು, ಪ್ರಸ್ತುತ ಸಂದರ್ಭದಲ್ಲಿ ಅವು ಪಡೆದು ಕೊಂಡ ವಿವಿಧ ರೂಪಗಳನ್ನು ಇಲ್ಲಿ ಚರ್ಚಿಸಿದ್ದಾರೆ.

ಪ್ರಕಾಶಕರು: ಸಂವೇದಿ c/o ಡೀಡ್ಸ್ ಕದ್ರಿ, ಮಂಗಳೂರು.



ಊರ ಒಳಗಣ ಬಯಲು
ಲೇ: ಡಾ. ವಿನಯಾ
ಬೆಲೆ: ರೂ. ೪೦/-

ಗಟ್ಟಿ ದನಿಯ ಕವಿತೆಯ ಮೂಲಕ ಕಾವ್ಯ ಕ್ಷೇತ್ರದಲ್ಲಿ ಭದ್ರ ನೆಲೆ ನಿಂತವರು ಡಾ. ವಿನಯಾ. ಈಗ ಈ ಕೃತಿಯ ಮೂಲಕ ಕಥಾಲೋಕಕ್ಕೆ ಲಗ್ಗೆ ಇಟ್ಟಿದ್ದಾರೆ. ಹನ್ನೊಂದು ಬಗೆಯ ವಿವಿಧ ಕಥೆಗಳಲ್ಲಿ ತಮ್ಮ ಮನಸ್ಸಿನ ಹೊಯ್ದಾಟ, ತಲ್ಲಣ್ಣವನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ. ಇಲ್ಲಿನ ಎಲ್ಲ ಕಥೆಗಳು ನಿರಾಳವಾಗಿ ಓದಿಸಿಕೊಂಡು ಹೋಗುವ ಗುಣವನ್ನು ಹೊಂದಿವೆ. ಇದರ ಮೂಲಕ ಕಥಾಲೋಕದಲ್ಲೂ ಡಾ. ವಿನಯಾ ತಮ್ಮ ಸ್ಥಾನ ಭದ್ರಪಡಿಸಿ ಕೊಳ್ಳುವುದರಲ್ಲಿ ಅನುಮಾನವೇ ಇಲ್ಲ.

ಪ್ರಕಾಶಕರು: ಛಂದ ಪುಸ್ತಕ ಪ್ರಕಾಶನ ಬನ್ನೇರುಘಟ್ಟ ರಸ್ತೆ ಬೆಂಗಳೂರು-೭೬



ಪದಗಳು ನಡೆದಾಡುತಿವೆ ಪಾದಗಳಾಗಿ
ಲೇ: ಜಂಬಣ್ಣ ಅಮರಚಿಂತ
ಬೆಲೆ: ರೂ. ೩೦/-

ರುಬಾಯಿ ಸಾಹಿತ್ಯ ಪ್ರಕಾರ ಮೊದಲು ಇರಾನಿನಲ್ಲಿ ಹುಟ್ಟಿ ಬೆಳೆಯಿತು. ನಂತರ ಅದು ತನ್ನ ಕಬಂಧ ಬಾಹುವನ್ನು ಎಲ್ಲೆಡೆ ಚಾಚಿತು. ಮುಖ್ಯವಾಗಿ ಹೈದ್ರಾಬಾದ್-ಕರ್ನಾಟಕದಲ್ಲಿ ಇದರ ಪ್ರಭಾವ ಹೆಚ್ಚಿರುವುದನ್ನು ನಾವು ಕಾಣಬಹುದು. ಜಂಬಣ್ಣ ಅಮರಚಿಂತ ಪ್ರಸ್ತುತ ಕೃತಿಯಲ್ಲಿ ನಾಲ್ಕು ಸಾಲಿನ ರುಬಾಯಿಗಳನ್ನು ಉಣಬಡಿಸಿದ್ದಾರೆ. ಒಂದೊಂದು ಪದ್ಯವು ಬಿಡಿ ಅಲೆ. ಒಂದೊಂದು ಸುಂಟರಗಾಳಿ. ಉದ್ದಕ್ಕೆ ಅವಸರವಾಗಿ ನಡುನಡುವೆ ಮನನಕ್ಕೆ ಬಿಡದೆ ಓದತಕ್ಕದ್ದಲ್ಲ. ಸಾವಕಾಶವಾಗಿ ಓದಿದರೆ ಮಾತ್ರ ಇಡೀ ರುಬಾಯಿಗಳ ಸವಿಯ ಪ್ರಯೋಜನೆ ದೊರೆಯುತ್ತದೆ. ಇದೊಂದು ವಿಶೇಷ ಪ್ರಯತ್ನ.

ಪ್ರಕಾಶಕರು: ಕನಸು ಪ್ರಕಾಶನ, ರಾಯಚೂರು.





ಹೊಸ ಪುಸ್ತಕ

ಕಾಯದ ಕಾರ್ಪಣ್ಯ.
ಲೈಂಗಿಕ ವೃತ್ತಿ ನಿರತರ ಕಥೆ ವ್ಯಥೆ
ಲೇ: ಕುಸುಮಾ ಶಾನಭಾಗ
ಬೆಲೆ: ರೂ. ೭೫/-

ಪತ್ರಕರ್ತೆ, ಕಥೆಗಾರ್ತಿಯಾಗಿ ಸಮಾಜದಲ್ಲಿ ಗುರುತಿಸಿಕೊಂಡವರು ಕುಸುಮಾ ಶಾನಭಾಗ. ಈ ಕೃತಿಯಲ್ಲಿ ಲೈಂಗಿಕ ಕಾರ್ಯಕರ್ತೆಯರ ಬದುಕಿನ ವಿವಿಧ ಮಗ್ಗಲುಗಳನ್ನು ವಿವರಿಸಿದ್ದಾರೆ. ಸ್ವತಃ ಅವರಿದ್ದ ಸ್ಥಳಗಳಿಗೆ ಭೇಟಿ ನೀಡಿ ಅವರ ಮನದಾಳದ ಮಾತುಗಳನ್ನು ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಮೌರ್ಯನ ಕಾಲದಲ್ಲಿ ಮುಖ್ಯ ವಾಹಿನಿಗೆ ಬಂದ ಈ ವೇಶಾವೃತ್ತಿ ಹೊಸ ಯುಗದಲ್ಲಿ ಯಾವ ರೂಪಪಡೆದು ಕೊಂಡಿದೆ ಎಂದು ಇದರಲ್ಲಿ ಯಥಾವತ್ತಾಗಿ ವಿವರಿಸಿದ್ದಾರೆ.

ಪ್ರಕಾಶಕರು: ಹೇಮಾಂಶು ಪ್ರಕಾಶನ, ಮಂಗಳೂರು

ಕಡಲು ಕಳೆದಿದೆ.
ಲೇ: ಮಾಧವಿ ಭಂಡಾರಿ ಕೆರೆಕೋಣ
ಬೆಲೆ: ರೂ. ೪೦/-

ತಮ್ಮ ಮೊದಲ 'ಹರಿದ ಸ್ಕರ್ಟಿನ ಹುಡುಗಿ' ಕವನ ಸಂಕಲನದಿಂದ ಸಾಹಿತ್ಯ ಕ್ಷೇತ್ರಕ್ಕೆ ಪರಿಚಿತರಾಗಿರುವ ಮಾಧವಿ ಭಂಡಾರಿ ಅವರ ಎರಡನೇ ಸಂಕಲನ ಇದು. ಈ ಸಂಕಲನದಲ್ಲಿ ೩೮ ವಿವಿಧ ಕವಿತೆಗಳಿವೆ. ಸೀತೆ, ದ್ರೌಪದಿ, ಅಹಲ್ಯ ರೇಣುಕೆ, ಶಕುಂತಲೆ ಕವಿತೆಯ ರೂಪಕಗಳಾಗಿದ್ದಾರೆ. ಹೆಣ್ಣನ್ನು ಇತಿಹಾಸ, ಪ್ರಸ್ತುತ ಸಮಾಜ ಕಾಣುವ ರೀತಿಯನ್ನು ಕವಿತೆಯ ಮೂಲಕ ನೋಡಲು ಪ್ರಯತ್ನಿಸಿದ್ದಾರೆ. ಹೆಣ್ಣಿಗೆ ನೈತಿಕ ವಿಶ್ವಾಸವನ್ನು ತುಂಬುವಲ್ಲಿ ಈ ಕವಿತೆಗಳು ಸಹಕಾರಿ ಯಾಗಬಲ್ಲವು.

ಪ್ರಕಾಶಕರು: ಬಂಡಾಯ ಪ್ರಕಾಶನ, ಅರೇಅಂಗಡಿ, ಹೊನ್ನಾವರ (ಉ.ಕ.)



ವಚನ-ಸಂಸ್ಕೃತಿ
ಲೇ: ಡಾ. ಬಸವರಾಜ ಸಬರದ
ಬೆಲೆ: ರೂ. ೧೫೦/-

ಸಾಹಿತ್ಯದ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ಕೈಯಾಡಿಸಿರುವ ಲೇಖಕರ ಅಪರೂಪದ ಕೃತಿ ಇದು. ವಚನಕಾರರ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಾಮಾಜಿಕ ಜವಾಬ್ದಾರಿಗಳನ್ನು ಈ ಕೃತಿಯಲ್ಲಿ ವಿಶ್ಲೇಷಿಸಲಾಗಿದೆ. ಜಾಗತೀಕರಣ ಯುಗದಲ್ಲಿ ವಚನಗಳ ಮೂಲಕ ಜಗತ್ತನ್ನು ಮಾನವೀಯಗೊಳಿಸುವ ಕ್ರಮದ ಕುರಿತು ಚಿಂತನೆ ಮಾಡಲಾಗಿದೆ. ನವವಸಾಹತುಶಾಹಿ ಆಕ್ರಮಣದ ಹಿನ್ನೆಲೆಯಲ್ಲಿ ವಚನ ಸಾಹಿತ್ಯದ ಓದು ಹೇಗೆ ಪರಿಹಾರವನ್ನು ಒದಗಿಸಬಲ್ಲದು ಎಂಬುದಕ್ಕೆ ಇಲ್ಲಿ ಉತ್ತರಗಳಿವೆ.

ಪ್ರಕಾಶಕರು:ಪಲ್ಲವಿ ಪ್ರಕಾಶನ ಗುಲಬರ್ಗಾ-೫೮೫೧೦೬

ಸಂಪಾದಕೀಯ



ಅಂತರಂಗ

ಭಂಡ ಸಾಹಿತಿಗಳೂ... ಪುಂಡ ರಾಜಕಾರಣಿಗಳೂ...!

ಇಡೀ ರಾಜ್ಯ ಅಯೋಮಯವಾಗಿದೆ.

ಒಂದು ಕಡೆ ರಾಜಕಾರಣಿಗಳು ಹಡಬೆ ದನಗಳಂತೆ ಎಲ್ಲೆಂದರಲ್ಲಿ ಹಾಯ್ದಾಡುತ್ತಿದ್ದರೆ, ಮತ್ತೊಂದು ಕಡೆ ಸಾಹಿತ್ಯ ಪರಿಷತ್ತೆಂಬ ಸತ್ತ ಸಾಹಿತ್ಯ ಸಂಸ್ಥೆಯ ಪಟ್ಟಾಧಿಕಾರಕ್ಕಾಗಿ ಸಾಹಿತಿಗಳೆಂಬ ಭಂಡರು ಮಾನ ಮರ್ಯಾದೆಗಳನ್ನು ಬಿಟ್ಟು ತಮ್ಮ ತಮ್ಮ ಜಾತಿ ಜನಗಳನ್ನು ಕಟ್ಟಿಕೊಂಡು ಜಂಗಿ ಕುಸ್ತಿಗಿಳಿದಿದ್ದಾರೆ.

ಕಳೆದ ಚುನಾವಣೆಯ ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸಂಪೂರ್ಣ ಬಹುಮತ ಪಡೆಯಲು ಮಾಡುತ್ತಿರುವ ಹಲ್ಕಟ್‌ಗಿರಿ ಎಂಥವರನ್ನು ನಾಚಿಸುವಂತಿದೆ. ಬಹುಶಃ ಕಾಂಗ್ರೆಸ್ ಸರ್ಕಾರಗಳು ಕಳೆದ ೬೦ ವರ್ಷಗಳಲ್ಲಿ ಮಾಡಿದ ಎಲ್ಲಾ ಅದ್ವಾನಗಳನ್ನು ಬಿಜೆಪಿ ಕೇವಲ ಮೂರು ತಿಂಗಳಲ್ಲಿ ಮಾಡಿ ಮುಗಿಸುವಂತಿದೆ.

ಅಧಿಕಾರ ಉಳಿಸಿಕೊಳ್ಳಲು ಮುಖ್ಯಮಂತ್ರಿ ಯಡಿಯೂರಪ್ಪ ಅವಕಾಶವಾದಿಗಳನ್ನೆಲ್ಲ 'ತ್ಯಾಗಮಯಿ'ಗಳೆಂದು ಕೊಂಡಾಡುತ್ತಾ, ಪಕ್ಷಾಂತರಿಗಳಿಗೆಲ್ಲ ಅಧಿಕಾರದ ಎಂಜಲನ್ನು ಹಂಚುತ್ತಿದ್ದರೆ, ಅಧಿಕಾರದ ಆಶೆಗಾಗಿ ಬಿಜೆಪಿ ಸೇರುತ್ತಿರುವ ಅಯೋಗ್ಯ ಶಾಸಕರುಗಳೆಲ್ಲ, ನಮ್ಮ ಕ್ಷೇತ್ರಗಳ ಉದ್ಧಾರಕ್ಕಾಗಿ 'ತ್ಯಾಗ' ಮಾಡುತ್ತಿರುವುದಾಗಿ ಬೊಗಳೆ ಬಿಡುತ್ತಿದ್ದಾರೆ. ಆದರೆ ಹಲವು ದಶಕಗಳ ಕಾಲ ಬಿಜೆಪಿಯನ್ನು ಕಟ್ಟಿ ಬೆಳೆಸಿದ ನಿಜವಾದ 'ತ್ಯಾಗಮಯಿ'ಗಳು ಅಬ್ಬೆಪಾರಿಗಳಂತೆ ಮಿಕ ಮಿಕ ನೋಡುತ್ತಾ, ದಂಡ-ಕಮಂಡಲ ಹಿಡಿದು ತೀರ್ಥಯಾತ್ರೆಗೆ ಸಿದ್ಧರಾಗುತ್ತಿದ್ದಾರೆ!

ಜನಾರ್ಧನ ರೆಡ್ಡಿ ಮೊದಲಾದ ದಗಲ್ಬಾಜಿಗಳು ಬಿಜೆಪಿ ಅಧಿಕಾರಕ್ಕೆ ಬರಲು ತಾವೇ ಕಾರಣ ಎಂದು, ಮುಖ್ಯಮಂತ್ರಿಯ ಮೇಲೆ ಸವಾರಿಗೆ ಸಿದ್ಧರಾಗುತ್ತಿದ್ದರೆ, ಬಚ್ಚೇಗೌಡ ಮೊದಲಾದವರು ಬಿಜೆಪಿಗೆ ಓಟು ಹಾಕದ ಮತದಾರರಿಗೆ ತಕ್ಕ ಪಾಠ ಕಲಿಸಲು ತಾಲೀಮು ನಡೆಸುತ್ತಿದ್ದಾರೆ. ಈ ನಡುವೆ ಜನರ ಶ್ರದ್ಧಾ ಕೇಂದ್ರಗಳಾಗಿದ್ದ ದೇವಸ್ಥಾನಗಳೆಲ್ಲ ಒಂದೊಂದಾಗಿ ಚೆಡ್ಡಿ ಮಠಾಧೀಶರ ಪಾಲಾಗುತ್ತಿವೆ!

ಗಣಿಗಾರಿಕೆ ಹೆಸರಿನಲ್ಲಿ ನಡೆಯುತ್ತಿರುವ ಅವ್ಯಾಹತ ಲೂಟಿಯನ್ನು ನೀವು ನೋಡಿರುತ್ತೀರಿ. ಗಣಿಗಾರಿಕೆ ಹೆಸರಿನಲ್ಲಿ ಭೂತಾಯಿಯ ಗರ್ಭವನ್ನೇ ಸೀಳಿ ಮಾರಾಟ ಮಾಡುತ್ತಿರುವ ಖದೀಮರು ಈಗ 'ಕಾನೂನು ಪಾಲಿಸಲು' ಹೊರಟ್ಟಿದ್ದಾರೆ! ಎರಡು ಹೊತ್ತಿನ ಕೂಳಿಗಾಗಿ ಪಟ್ಟಾ ಭೂಮಿಯ ಮಣ್ಣನ್ನು ಕೆರೆದು ಮಾರಿ ಜೀವನ ಮಾಡುತ್ತಿದ್ದವರ ಮೇಲೆ 'ಅಕ್ರಮ'ದ ಹೆಸರಿನಲ್ಲಿ ದಬ್ಬಾಳಿಕೆ ನಡೆಯುತ್ತಿದೆ. ಕಳೆದ ಕೆಲವು ವಾರಗಳಿಂದ ಬಳ್ಳಾರಿ ಸುತ್ತ ಮುತ್ತ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದರೆ, ಕೆಲವೇ ದಿನಗಳಲ್ಲಿ ಬಳ್ಳಾರಿ ಸುತ್ತಲಿನ ರೈತರೆಲ್ಲ ಸಾಮೂಹಿಕ ಆತ್ಮಹತ್ಯೆಗೆ ಸಿದ್ಧವಾಗಬೇಕಾಗುತ್ತದೆ!

ನನ್ನ ವ್ಯಂಗ್ಯದ ಹಿಂದಿನ ಕಾಳಜಿಯನ್ನು ನೀವು ಅರ್ಥ ಮಾಡಿಕೊಂಡಿದ್ದೀರಿ ಅಂದುಕೊಳ್ಳುವೆ. ಬಿಜೆಪಿ ಅಧಿಕಾರಕ್ಕೆ ಬಂದದ್ದು ಆಕಸ್ಮಿಕವೂ ಅಲ್ಲ, ಅಪರಾಧವೂ ಅಲ್ಲ. ದೇವೇಗೌಡ-ಕುಮಾರಸ್ವಾಮಿ ಅವರ ಹಡಬೆ ರಾಜಕಾರಣ ಮತ್ತು ಕಾಂಗ್ರೆಸ್ಸಿಗರ 'ಸ್ವಧ್ವಂಸ' ರಾಜಕಾರಣದಿಂದ ಬೇಸತ್ತ ಮತದಾರನ ಆಯ್ಕೆ ಅದಾಗಿತ್ತು. ಆದರೆ ಅಧಿಕಾರಕ್ಕೆ ಬಂದ ನಂತರ ಬಿಜೆಪಿ ನಡೆದುಕೊಳ್ಳುತ್ತಿರುವ ರೀತಿ ಮಾತ್ರ ಆಘಾತಕಾರಿಯಾದುದು. ಮುಖ್ಯಮಂತ್ರಿಯಾಗಿರುವ ಯಡಿಯೂರಪ್ಪ ಅವರಾಗಲಿ ಅವರು ಪ್ರತಿನಿಧಿಸುವ ಬಿಜೆಪಿ ಪಕ್ಷವಾಗಲಿ ರಾಜಕಾರಣದಲ್ಲಿ ಮೊದಲನೆಯದೂ ಅಲ್ಲ ಕೊನೆಯದೂ ಅಲ್ಲ.

ಆದರೆ ಯಡಿಯೂರಪ್ಪ ತಾನೇ ಮೊದಲನೆ ಮತ್ತು ಕೊನೆಯ ಮುಖ್ಯಮಂತ್ರಿಯಂತೆ ಹಾರಾಡುತ್ತಿದ್ದಾರೆ. ಅಧಿಕಾರಕ್ಕಾಗಿ ಅವರು ಮಾಡುತ್ತಿರುವ ಪ್ರತಿ ತಂತ್ರವೂ, ಪ್ರಜಾಸತ್ತೆಯ ಮೇಲೆ ನಡೆಯುತ್ತಿರುವ ಅತ್ಯಾಚಾರ ಎಂಬುದು ಅವರ ಕಣ್ಣಿಗೆ ಕಾಣಿಸುತ್ತಿಲ್ಲ. ಉಂಡಾಡಿ ಬೀಡು ದನಗಳಂತೆ ಶಾಸಕರುಗಳೆಲ್ಲ ಪಕ್ಷಾಂತರ ಮಾಡುವುದಾದರೆ ಅದಕ್ಕೆ ಪಕ್ಷಗಳೇಕೆ ಬೇಕು? ತತ್ವ ಸಿದ್ಧಾಂತಗಳೇಕೆ ಬೇಕು? ಚುನಾವಣೆ ಪ್ರಕ್ರಿಯೆ ಏಕೆ ಬೇಕು? ಇದು ಯಡಿಯೂರಪ್ಪ ಅಥವಾ ಬಿಜೆಪಿ ಪಕ್ಷದ ಅಳಿವು ಉಳಿವಿನ ಪ್ರಶ್ನೆಯಲ್ಲ. ದೇಶದ ನೈತಿಕತೆಯ ಪ್ರಶ್ನೆ. ಯಾರೇ ಅಧಿಕಾರದಲ್ಲಿರಲಿ ಇಲ್ಲದರಲಿ ದೇಶದ ಘನತೆ ಉಳಿಸಬೇಕಾಗಿದ್ದು, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾದ್ದು ಎಲ್ಲದಕ್ಕಿಂತ ದೊಡ್ಡದು. ತಾವು ಮಾತ್ರ ಶಾಶ್ವತ ಎಂದುಕೊಂಡು ಇಂದು ಬಿಜೆಪಿ ಮಾಡುತ್ತಿರುವ ಅನೈತಿಕ ರಾಜಕಾರಣ ಇಡೀ ದೇಶವನ್ನು ಅಧೋಗತಿಗೆ ತಳ್ಳುವುದು ಗ್ಯಾರಂಟಿ!

ಇನ್ನು ನಮ್ಮ ಭಂಡ ಸಾಹಿತಿಗಳ ಕಡೆ ಸ್ವಲ್ಪ ನೋಡೋಣ. ಯಾವ ಮೂರನೇ ದರ್ಜೆ ರಾಜಕಾರಣಕ್ಕೂ ಕಡೆ ಇಲ್ಲದಂತೆ ಸಾಹಿತ್ಯ ಪರಿಷತ್ತಿನ ಚುನಾವಣೆ ನಡೆಯುತ್ತಿದೆ. ಒಕ್ಕಲಿಗ-ಲಿಂಗಾಯತರೆಂದು ತಮ್ಮ ತಮ್ಮನ್ನೇ ವಿಭಜಿಸಿಕೊಂಡಿರುವ ಅಭ್ಯರ್ಥಿಗಳು ಮತಯಾಚನೆಗೆ ಅನುಸರಿಸುತ್ತಿರುವ ಮಾರ್ಗಗಳೆಲ್ಲ ನಾಚಿಕೆಗೇಡಿನವು. ಯಾವೊಬ್ಬ ಅಭ್ಯರ್ಥಿಯೂ ತನ್ನ ಯೋಗ್ಯತೆ ನೋಡಿ ಮತಹಾಕಿ ಅಂತ ಕೇಳುತ್ತಿಲ್ಲ. ಬದಲಾಗಿ ತನ್ನ ಜಾತಿಯನ್ನೇ ಮುಂದೆ ಮಾಡಿ ಮತ ಕೇಳುತ್ತಿದ್ದಾರೆ.

ನಾಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಬದುಕಿನ ವೇದಿಕೆಯಾಗಬೇಕಾದ ಸಾಹಿತ್ಯ ಪರಿಷತ್ತು ಜನ ವಿರೋಧಿಯಾಗಿ ಎಷ್ಟೋ ದಶಕಗಳೇ ಕಳೆದು ಹೋದವು. ಅದರ ಜನವಿರೋಧಿ ನೀತಿಯಿಂದ ಸಿಡಿದು ನಿಂತ ಪರ್ಯಾಯ ಸಾಹಿತ್ಯ ಸಾಂಸ್ಕೃತಿಕ ವೇದಿಕೆಗಳಿಂದಾಗಿ ಕೆಲಕಾಲ ಜೀವಂತಿಕೆ ಮೈತುಂಬಿಕೊಡರೂ ಮತ್ತೆ ಮತ್ತೆ ತನ್ನ ಹಳೇ ಚಾಳಿಗೆ ಸಾಹಿತ್ಯ ಪರಿಷತ್ತು ಜಾರುತ್ತಿದೆ. ಅದನ್ನು ಜನಪರವಾಗಿಸುವ ಮಾತು ಯಾರ ಬಾಯಿಂದಲೂ ಬರುತ್ತಿಲ್ಲ. ಅಲ್ಲಿರುವ ಹಣ, ಅಧಿಕಾರಗಳೇ ಮುಖ್ಯವಾಗುತ್ತಿವೆ. ಅದಕ್ಕಾಗಿಯೇ ಪರಿಷತ್ತಿನ ಗದ್ದುಗೆ ಏರಬೇಕೆಂದು ಈ ಎರಡು ಜಾತಿಗಳು ಮುಗಿಬಿದ್ದಿವೆ. ಇಲ್ಲಿ ಜಾತಿಗಳ ಮೇಲಾಟ ನಡೆದಿದೆಯೇ ಹೊರತು ಸಾಹಿತ್ಯ-ಸಂಸ್ಕೃತಿಗಳ ಜೀವಂತಿಕೆ ಅಲ್ಲ.

ಸಾಹಿತ್ಯ ಪರಿಷತ್ತಿಗೆ ಯಾರು ಅಧ್ಯಕ್ಷರಾದರೂ ಅಷ್ಟೇ. ಅದೊಂದು ಜನವಿರೋಧಿ ಸಂಸ್ಥೆ. ಕನಿಷ್ಟ ಸಾಹಿತ್ಯಕ ವಾತಾವರಣವಾಗಲಿ, ಸೃಜನಾತ್ಮಕ ಕೆಲಸಗಳಾಗಲಿ ಅಲ್ಲಿ ನಡೆಯುತ್ತಿಲ್ಲ. ಸಾಹಿತ್ಯ ಪರಿಷತ್ತಿಗೆ ಜೀವ ತುಂಬುತ್ತೇವೆಂದು ಬಂದವರೆಲ್ಲ ತಮ್ಮ ಪ್ರತಿಷ್ಠೆ ಬೆಳೆಸಿಕೊಳ್ಳುತ್ತಿದ್ದಾರೆಯೇ ಹೊರತು ಬೇರೇನೂ ಮಾಡಲಿಲ್ಲ. ನಮ್ಮ ಬಹುತೇಕ ಬಂಡಾಯಗಾರರು, ಪ್ರಗತಿಪರರು ಈಗಾಗಲೇ ಪ್ರಭುತ್ವದ ಪದತಲದಲ್ಲಿ ತಮ್ಮ ತಲೆಯನ್ನು ಇಟ್ಟಿದ್ದಾರೆ. ಇನ್ನು ಉಳಿದ ಕೆಲವರಾದರೂ ಹೊರಗುಳಿದು ಪರ್ಯಾಯ ಸಾಹಿತ್ಯ-ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡಲಿ ಎಂದು 'ಸಂವಾದ' ಹಾರೈಸುತ್ತದೆ.

○ ಇಂದೂಧರ ಹೊನ್ನಾಪುರ

ಸಮಾಜ ವಿಜ್ಞಾನ ಮತ್ತು ಜಾತಿ ವ್ಯವಸ್ಥೆ

ಕಿರಣ್ ಎಂ,
ಗಾಜನೂರು

ಪ್ರಸ್ತುತ ಲೇಖನದಲ್ಲಿ ನಾನು ಒಬ್ಬ ಸಮಾಜ ವಿಜ್ಞಾನದ ವಿದ್ಯಾರ್ಥಿಯಾಗಿ ನನ್ನ ಜ್ಞಾನದ ಮಿತಿಯಲ್ಲಿ ಜಾತಿ, ಧರ್ಮ ಮತ್ತು ತಾರತಮ್ಯ ಕುರಿತಾಗಿನ ಚರ್ಚೆಗೆ ಪ್ರತಿಕ್ರಿಯೆ ನೀಡಲು ಬಯಸುತ್ತೇನೆ. ಇಲ್ಲಿನ ನನ್ನ ವಾದಗಳು ಯಾರ ಪರವೂ ಅಲ್ಲ ವಿರುದ್ಧವೂ ಅಲ್ಲ ಬದಲಾಗಿ ಸಮಾಜ ವಿಜ್ಞಾನಗಳ ಸಂಶೋಧನೆಯ ಬಗೆಗಿನ ನನ್ನ ಆಸಕ್ತಿಯಿಂದ ನೀಡಿದಂತಹವು. ಒಟ್ಟಾರೆ ಈ ಲೇಖನದ ಪ್ರಯತ್ನ ಕುಸಿಯುತ್ತಿರುವ ಸಮಾಜ ವಿಜ್ಞಾನಗಳ ಜನಪ್ರಿಯತೆಯ ಬಗೆಗಿನ ನನ್ನ ಕಾಳಜಿ ಮಾತ್ರವಾಗಿದೆ. ಹೊಸ ಆಲೋಚನೆಗಳು ಅಥವಾ ಅವುಗಳ ಪರ ವಿರೋಧ ವಾದಗಳು ಸಮಾಜ ವಿಜ್ಞಾನಗಳ ಈಗಿನ ಕುಸಿತ ತಡೆದು ಅವುಗಳಿಗೆ ಒಂದು ಭದ್ರ ಸೈದ್ಧಾಂತಿಕ ಬುನಾದಿ ನೀಡಬಹುದು ಎಂಬ ಆಲೋಚನೆ ನನ್ನ ಈ ಬರವಣಿಗೆಗೆ ಕಾರಣ.

ಆಗಸ್ಟ್ ತಿಂಗಳ "ಸಂವಾದ" ಪ್ರತಿಕೆಯಲ್ಲಿ ಪ್ರಕಟಗೊಂಡ ಜಾತಿ, ಧರ್ಮ, ತಾರತಮ್ಯ ಕುರಿತಾದ ಚರ್ಚೆ ಸಮಾಜ ವಿಜ್ಞಾನ ಶಾಖೆಗಳಲ್ಲಿ ಸಂಶೋಧನೆ ಕೈಗೊಂಡಿರುವ ಸಂಶೋಧಕರಿಗೆ ಒಂದು ಹೊಸ ರೀತಿಯ ಆಲೋಚನೆಗೆ ಆಹ್ವಾನ ನೀಡುತ್ತದೆ, ಪ್ರಸ್ತುತ ಚರ್ಚೆ ಸಮಾಜ ವಿಜ್ಞಾನದ ಸಂಶೋಧನಾ ವಿದ್ಯಾರ್ಥಿಯಾದ ನನ್ನ ದೃಷ್ಟಿಯಲ್ಲಿ ಅಗತ್ಯ ಮಾತ್ರವಲ್ಲದೆ ಅನಿವಾರ್ಯವೂ ಆಗಿದೆ. ಈ ಒಂದು ಚರ್ಚೆಗೆ ವೇದಿಕೆಯನ್ನು ಒದಗಿಸಿಕೊಟ್ಟ ಸಂವಾದದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ನಾನು ನೋಡಿದಂತೆ ಕಳೆದ ಮೂರು ಸಂಚಿಕೆಗಳಿಂದ ಈ ಕುರಿತಾದ ಚರ್ಚೆಗಳು ನಡೆಯುತ್ತಿವೆ. ಡಾ. ಡೊಮಿನಿಕ್.ಡಿ ರವರ ಲೇಖನಕ್ಕೆ ಪ್ರತಿಕ್ರಿಯಿಸಿರುವ ಡಾ. ಎ. ಷಣ್ಮುಖರವರು ಭಾರತದಲ್ಲಿನ *"ಜಾತಿ ಪದ್ಧತಿಯ"* ಕುರಿತಾದ ಪ್ರೊ. ಬಾಲಗಂಗಾಧರ್ ರವರ ತಾತ್ವಿಕವಾದಂತಹ ನಿಲುವುಗಳನ್ನು ವಿವರಿಸಿದ್ದಾರೆ. ಡಾ.ಎ.ಷಣ್ಮುಖ ರವರ ಲೇಖನಕ್ಕೆ ಪ್ರತಿಕ್ರಿಯಿಸಿ ಡಾ.ಸಿ.ಜಿ. ಲಕ್ಷ್ಮೀಪತಿ, ಡಾ. ವಿ.ಎಸ್. ಶ್ರೀಧರ್ ಮತ್ತು ಡಾ. ಡಿ ಡೊಮಿನಿಕ್ ರವರು ತಮ್ಮ ಲೇಖನಗಳನ್ನು ಬರೆದಿದ್ದಾರೆ. ಸಂಶೋಧನೆಯ ದೃಷ್ಟಿಯಿಂದ ಈ ಎಲ್ಲಾ ಲೇಖನಗಳು ಬಹಳಷ್ಟು ವಿದ್ವತ್‌ಪೂರ್ಣವಾಗಿ ಮತ್ತು ಉಪಯುಕ್ತವಾಗಿವೆ (Informative) ಎಂಬುದನ್ನು ನಾವೆಲ್ಲರೂ ಒಪ್ಪಬೇಕಾಗಿದೆ. ನಿಜವಾಗಿಯೂ ಸೈದ್ಧಾಂತಿಕ ತಳಹದಿಯಲ್ಲಿ ಗ್ರಹಿಸುವುದಾದರೆ ಎಲ್ಲಾ ವಾದಗಳು ಪ್ರಸ್ತುತವೇ (ಪರ ವಿರೋಧ ಎಂಬ ಭಾವನೆಯನ್ನು ತೆಗೆದುನೋಡಿದಾಗ) ನಾನು ಪ್ರೊ. ಬಾಲುರವರ The Heathen in his Blindnes ಮತ್ತು ಅವರ ಇತರ ಲೇಖನಗಳನ್ನು ಅರ್ಥಮಾಡಿಕೊಂಡಂತೆ ಅವರ ಪ್ರಮುಖವಾದ ವಾದವೇನೆಂದರೆ ಇಂದು ಸಮಾಜ ವಿಜ್ಞಾನಗಳಲ್ಲಿ ಕಂಡುಬರುವ ಭಾರತದ ಸಮಾಜದ ಕುರಿತ ವಿವರಣೆ (ಸಿದ್ಧಾಂತಗಳು) ನಮ್ಮ ಸಮಾಜದ ನಿಜವಾದ ಸ್ವರೂಪವನ್ನು ಕಟ್ಟಿಕೊಡುವಲ್ಲಿ ಸೋತಿವೆ. ಅದಕ್ಕೆ ಪ್ರಬಲವಾದ ಕಾರಣ ಈ ಸಿದ್ಧಾಂತಗಳು ಪಾಶ್ಚಾತ್ಯ ಚಿಂತನಾ/ಪರಿಕಲ್ಪನಾ ಚೌಕಟ್ಟಿನಿಂದ ಪ್ರೇರಿತವಾಗಿ ಕಟ್ಟಲ್ಪಟ್ಟವು. ಅವು ಅವರ ಅಂದರೆ ಪಾಶ್ಚಾತ್ಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿಯೇ ನಿರೂಪಣೆಗೊಂಡಂತಹವು. ಆದ್ದರಿಂದ ಈ ಸಿದ್ಧಾಂತಗಳು ನಮ್ಮ ಸಮಾಜದ ಬಗ್ಗೆ ಪರಿಣಾಮಕಾರಿಯಾದಂತಹ ವಿವರಣೆ ನೀಡುವ ಬದಲು ಒಂದು ರೀತಿಯ ad-hoc ವಿವರಣೆಗಳನ್ನು ನೀಡಿವೆ. ಇದಕ್ಕೆ ಮೂಲ ಕಾರಣ ಪಾಶ್ಚಾತ್ಯರ ಒಂದು ರಿಲಿಜಿಯಸ್ ಸಾಂಸ್ಕೃತಿಕ ಹಿನ್ನೆಲೆಯಾಗಿದೆ. ಇದನ್ನು ಸ್ವಲ್ಪ ವಿವರಿ ಸುವ ಅಗತ್ಯವಿದೆ.

ಏಕೆ ಭಾರತವನ್ನು ಕುರಿತಂತೆ ಈ ರೀತಿಯ ಗ್ರಹಿಕೆಗಳಿವೆ ?

ಪ್ರೊ. ಬಾಲಗಂಗಾಧರ್ ರವರು ತಮ್ಮ ಒಂದು ಪುಸ್ತಕ "ದ ಹಿದನ್ ಇನ್ ಹಿಸ್ ಬ್ಲೈಂಡ್ನೆಸ್" ನಲ್ಲಿ ಭಾರತದ ಸಮಾಜವನ್ನು ಕುರಿತಂತೆ ವಿಭಿನ್ನವಾದ ವಾದಗಳನ್ನು ಮಂಡಿಸಿದ್ದಾರೆ. ಭಾರತವನ್ನು ಕುರಿತ ಪ್ರಸ್ತುತ ಇರುವ ಸಿದ್ಧಾಂತ ಮತ್ತು ವಿವರಣೆಗಳು ಹೇಗೆ ಭಾರತದ ಸಾಮಾಜಿಕ ರಚನೆಯನ್ನು ವಾಸ್ತವದಲ್ಲಿರುವಂತೆ ಅರ್ಥಮಾಡಿಕೊಳ್ಳಲು ವಿಫಲವಾಗಿವೆ ಎಂಬುದನ್ನು ವಿವರಿಸಿದ್ದಾರೆ. ಬಾಲಗಂಗಾಧರ ರವರ ವಿವರಣೆಯ ಪ್ರಕಾರ ಪಾಶ್ಚಾತ್ಯ ಪ್ರವಾಸಿಗರು, ಕ್ರಿಶ್ಚಿಯನ್ ಮಿಷನರಿಗಳು, ನಂತರ ಬಂದಂತಹ ಪಾಶ್ಚಿಮಾತ್ಯ ಚಿಂತಕರು ಭಾರತದ ಸಂಸ್ಕೃತಿಯನ್ನು ತಮ್ಮ ಒಂದು ಸಾಂಸ್ಕೃತಿಕ ಹಿನ್ನೆಲೆ ಯಲ್ಲಿಯೇ ಗ್ರಹಿಸಿ ವಿವರಿಸಿದ್ದಾರೆ. ಪಾಶ್ಚಾತ್ಯರ ಪ್ರಕಾರ ರಿಲಿಜಿಯನ್ ಎಂಬುದು ಸಾರ್ವತ್ರಿಕವಾಗಿ ಸಂಸ್ಕೃತಿಯೊಂದಿಗೆ ಸಮ್ಮಿಲನಗೊಂಡಿರುವ (Religion is an integral part of the culture) ಅಂಶ. ಅಥವಾ ಜಗತ್ತಿನಲ್ಲಿ ಎಲ್ಲೂ ರಿಲಿಜನ್ ಇಲ್ಲದ ಸಂಸ್ಕೃತಿಗಳು ಇರಲು ಸಾಧ್ಯವಿಲ್ಲ ಎನ್ನುವ ನಂಬಿಕೆ. ಇಂತಹ ನಂಬಿಕೆಯ ಹಿಂದಿರುವ ಬಲವಾದ ಕಾರಣವೇನೆಂದರೆ ಪಾಶ್ಚಿಮಾತ್ಯರ ಬದುಕಿನ ಅನುಭವ (lived experience). ಈ ಅಂಶ ಅವರನ್ನು ಜಗತ್ತಿನ ಎಲ್ಲಾ ಸಂಸ್ಕೃತಿಗಳು ರಿಲಿಜಿಯನ್ ಹೊಂದಿವೆ ಎಂಬ ನಂಬಿಕೆಗೆ ನಿರ್ಬಂಧಗೊಳಿಸಿದೆ. (Their pre theoretical assumptions of religion as a cultural universe.) ಭಾರತೀಯ ಸಂಸ್ಕೃತಿಯಲ್ಲಿ ಹಿಂದೂಯಿಸಂ ಅವರಿಗೆ ಕಾಣಿಸಿದ್ದು ಅಂತಹ ನಂಬಿಕೆಯಿಂದಾಗಿಯೆ. ಜಾತಿ ವ್ಯವಸ್ಥೆ ಮತ್ತು ವರ್ಣದ ಸಿದ್ಧಾಂತಗಳು ಇಲ್ಲಿನ ಸ್ಥಳೀಯ ರಿಲಿಜಿಯನ್ ಆದ ಹಿಂದೂಯಿಸಂನ ಅಂತಸ್ಸತ್ವಗಳಾಗಿ ಗುರುತಿಸಲ್ಪಟ್ಟವು. ಮನುಧರ್ಮ ಶಾಸ್ತ್ರ, ವೇದಗಳು ಮತ್ತು ಪುರುಷಸೂಕ್ತಗಳು ಹಿಂದೂ ರಿಲಿಜಿಯನ್‌ನ ರಿಲಿಜಿಯಸ್ ಗ್ರಂಥಗಳಾದವು. ಒಟ್ಟಾರೆಯಾಗಿ ಹೇಳುವುದಾದರೆ ರಿಲಿಜಿಯನ್ ಎನ್ನುವುದು ಪ್ರತಿ ಸಂಸ್ಕೃತಿಯ ಸಾರ್ವತ್ರಿಕ ಮತ್ತು ಮೂಲಭೂತ ಲಕ್ಷಣ ಎನ್ನುವ ಗ್ರಹಿಕೆಯ ಮೇಲೆ ಅವರು ಭಾರತವನ್ನು ಅಧ್ಯಯನ ಮಾಡಿದ್ದಾರೆ.

ಇಲ್ಲಿನ ಸಮಸ್ಯೆ ಎಂದರೆ ಪಾಶ್ಚಾತ್ಯರ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಿರೂಪಿತವಾದ ಭಾರತದ ಸಮಾಜದ ಕುರಿತಾದ ಈ ವಿವರಣೆ ಒಂದು ವೈಜ್ಞಾನಿಕ ನಿರೂಪಣೆ ಎಂದೇ ಸಮಾಜ ವಿಜ್ಞಾನದ ವಲಯದಲ್ಲಿ ಇಂದಿಗೂ ನಂಬಲಾಗಿದೆ. ಅಷ್ಟೇ ಅಲ್ಲ ಈ ವಿಶ್ಲೇಷಣೆಗಳು ಭಾರತದ ಸಾಮಾಜಿಕ ನ್ಯಾಯ, ಮೀಸಲಾತಿ, ಶಿಕ್ಷಣ ವ್ಯವಸ್ಥೆಗಳನ್ನು ಪ್ರಭಾವಿಸಿರುವುದು ಮಾತ್ರವಲ್ಲದೆ, ಭಾರತದ ಸಮಾಜದ ಬಗೆಗಿನ ಒಟ್ಟಾರೆ ಸಂಶೋಧನೆಯ ಮೇಲೆ ಯಜಮಾನ್ಯತೆಯನ್ನು ಹೊಂದಿವೆ. ಪಾಶ್ಚಾತ್ಯರು ಮತ್ತು ಕ್ರೈಸ್ತ ಮಿಷನರಿಗಳು ಮಧ್ಯಯುಗದ ಯುರೋಪ್‌ನಲ್ಲಿದ್ದ ತಮ್ಮ ಅನುಭವಾತ್ಮಕ ರಿಲಿಜಿಯನ್, ಸಂಸ್ಕೃತಿ ಮತ್ತು ಸಾಮಾಜಿಕ ವ್ಯವಸ್ಥೆಗಳ ಮಾದರಿಯಲ್ಲಿ ಭಾರತೀಯ ಸಮಾಜವನ್ನು ವಿವರಿಸಿದ್ದಾರೆ. ಕಳೆದ ೫ ಶತಮಾನಗಳಿಂದಲೂ ಈ ಜ್ಞಾನ ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಕುರಿತಂತೆ ಕೆಲಸ ಮಾಡುತ್ತಿರುವ ವಿದ್ವಾಂಸರು ಮತ್ತು ಚಿಂತಕರ ಮೇಲೆ ಗಾಢವಾದ ಪ್ರಭಾವ ಬೀರಿದೆ.

ಭಾರತ ಸಮಾಜವನ್ನು ತಮಗಿಂತ ಹಿಂದುಳಿದ ಸಮಾಜವಾಗಿದೆ ಎಂಬ ಪೂರ್ವಗ್ರಹಿಕೆ ಪಾಶ್ಚಾತ್ಯರನ್ನು ಇಲ್ಲಿ ರಿಲಿಜಿಯನ್, ಜಾತಿವ್ಯವಸ್ಥೆ ಮುಂತಾದವನ್ನು ಗುರುತಿಸುವಂತೆ ಮಾಡಿದೆ. (ಇದು Universal History ಯ ಪರಿಕಲ್ಪನೆಯೊಳಗಿನಿಂದ ಪಡೆದ ಗ್ರಹಿಕೆ) ಪ್ರೊ. ಬಾಲಗಂಗಾಧರ್ ರವರು ಹೇಳುವಂತೆ ಕ್ರಿಶ್ಚಿಯನ್ ಥಿಯಾಲಜಿಯ ಚೌಕಟ್ಟಿನಲ್ಲಿ ತಮ್ಮ ಚಿಂತನೆಯನ್ನು ರೂಪಿಸಿಕೊಂಡ

ಪಾಶ್ಚ್ಯಾತ್ಯರ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಿರೂಪಿತವಾದ ಭಾರತದ ಸಮಾಜದ ಕುರಿತಾದ ಈ ವಿವರಣೆ ಒಂದು ವೈಜ್ಞಾನಿಕ ನಿರೂಪಣೆ ಎಂದೇ ಸಮಾಜ ವಿಜ್ಞಾನದ ವಲಯದಲ್ಲಿ ಇಂದಿಗೂ ನಂಬಲಾಗಿದೆ. ಅಷ್ಟೇ ಅಲ್ಲ ಈ ವಿಶ್ಲೇಷಣೆಗಳು ಭಾರತದ ಸಾಮಾಜಿಕ ನ್ಯಾಯ, ಮೀಸಲಾತಿ, ಶಿಕ್ಷಣ ವ್ಯವಸ್ಥೆಗಳನ್ನು ಪ್ರಭಾವಿಸಿರುವುದು ಮಾತ್ರ ವಲ್ಲದೆ, ಭಾರತ ಸಮಾಜದ ಬಗೆಗಿನ ಒಟ್ಟಾರೆ ಸಂಶೋಧನೆಯ ಮೇಲೆ ಯಜಮಾನ್ಯತೆಯನ್ನು ಹೊಂದಿವೆ. ಪಾಶ್ಚಾತ್ಯರು ಮತ್ತು ಕ್ರೈಸ್ತ ಮಿಷನರಿಗಳು ಮಧ್ಯಯುಗದ ಯುರೋಪ್‌ನಲ್ಲಿದ್ದ ತಮ್ಮ ಅನುಭವಾತ್ಮಕ ರಿಲಿಜಿಯನ್, ಸಂಸ್ಕೃತಿ ಮತ್ತು ಸಾಮಾಜಿಕ ವ್ಯವಸ್ಥೆಗಳ ಮಾದರಿಯಲ್ಲಿ ಭಾರತೀಯ ಸಮಾಜವನ್ನು ವಿವರಿಸಿದ್ದಾರೆ. ಕಳೆದ ೫ ಶತಮಾನಗಳಿಂದಲೂ ಈ ಜ್ಞಾನ ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಕುರಿತಂತೆ ಕೆಲಸ ಮಾಡುತ್ತಿರುವವರ ಮೇಲೆ ಗಾಢವಾದ ಪ್ರಭಾವ ಬೀರಿದೆ.

ಚರ್ಚೆ ಜಾತಿ ಧರ್ಮ ತಾರತಮ್ಯ

> **ಭಾರತೀಯ ಸಂಸ್ಕೃತಿ ರಿಲಿಜಿಯನ್ ಅನ್ನು ಹೊಂದಿರದೆ ಕ್ರಿಶ್ಚಿಯನ್ ಸಂಸ್ಕೃತಿಗಿಂತ ಭಿನ್ನವಾಗಿರಬಹುದು ಎಂಬ ಆಲೋಚನೆಯನ್ನು ಪಾಶ್ಚಾತ್ಯರು ಮಾಡಲೇ ಇಲ್ಲ. ಪಾಶ್ಚಾತ್ಯ ಸಂಸ್ಕೃತಿಗೆ ಹೋಲಿಸಿದರೆ ಭಾರತೀಯ ಸಂಸ್ಕೃತಿ ಇನ್ನು ಬಾಲ್ಯವಸ್ಥೆಯಲ್ಲಿ ಇದೆ ಎಂಬ ಗ್ರಹಿಕೆಯನ್ನು ಹೊಂದಿದ್ದರು.**

ಪಾಶ್ಚಾತ್ಯರು ಕ್ರಿಶ್ಚಿಯನ್‌ರಲ್ಲದವರು ಸುಳ್ಳಾದ ರಿಲಿಜಿಯನ್ ಹೊಂದಿದ್ದಾರೆ ಎಂಬ ಪ್ರಬಲವಾದ ನಂಬಿಕೆಯನ್ನು ಹೊಂದಿದ್ದರು. (ಬೈಬಲ್ ನ ಪ್ರಕಾರ ದೇವದೂತ ಏಸು ಜನರಿಗೆ ಸತ್ಯವಾದ ದೈವವಾಣಿಯನ್ನು ತಿಳಿಸುವ ಮೊದಲು ವಿಶ್ವದ ಎಲ್ಲ ಜನರು ಸುಳ್ಳು ದೇವರುಗಳನ್ನು ಪೂಜಿಸುತ್ತಿದ್ದರು) ಅಂತಹ ನಂಬಿಕೆಗೆ ಪೂರಕವಾಗಿ ಭಾರತೀಯರೂ ಸಹ ತಪ್ಪಾದ ರಿಲಿಜಿಯನ್ ಹೊಂದಿದ್ದಾರೆ ಎಂದು ಗ್ರಹಿಸಿದರು ಏಕೆಂದರೆ ಇವರು ಪ್ರಾಣಿ, ಮರ, ಗಿಡಗಳಂತಹ ಸುಳ್ಳು ದೇವರುಗಳಾದ ಡೆವಿಲ್ಸ್ (ದೆವ್ವ)ಗಳನ್ನು ಪೂಜಿಸುತ್ತಾರೆ. ಆದ್ದರಿಂದಲೆ ಮಿಷನರಿಗಳು ಭಾರತೀಯರು ಅಥವಾ ಹಿದನ್‌ಗಳನ್ನು ಕ್ರಿಶ್ಚಿಯಾನಿಟಿಯ ಮೂಲಕ ಪಾವಿತ್ರ್ಯಗೊಳಿಸಿ ಅವರನ್ನು ಸರಿಯಾದ ರಿಲಿಜಿಯನ್ ಕಡೆಗೆ ತರುವುದು ಅಗತ್ಯವಾದ ಒಂದು ಅಂಶ ಎಂದು ಚಿಂತಿಸಿದರು. ಆದರೆ ಹಾಗೆ ಮಾಡಲು ಅವರಿಗೆ ಈ ಸುಳ್ಳು ರಿಲಿಜನ್ ನ ಸ್ವರೂಪವೇನು ಎನ್ನುವುದು ತಿಳಿಯ ಬೇಕಿತ್ತು.

ಈ ಒಂದು ಹಿನ್ನೆಲೆಯಲ್ಲಿಯೇ ಕ್ರೈಸ್ತ ಮಿಷನರಿಗಳು ಭಾರತೀಯ ಸಂಸ್ಕೃತಿಯನ್ನು ಕ್ರಿಶ್ಚಿಯನ್ ಚೌಕಟ್ಟಿನ ಒಳಗೆ ಅಧ್ಯಯನ ಮಾಡಲು ಪ್ರಾರಂಬಿಸಿದರು. ಭಾರತೀಯ ಸಂಸ್ಕೃತಿ ರಿಲಿಜಿಯನ್ ಅನ್ನು ಹೊಂದಿರದೆ ಕ್ರಿಶ್ಚಿಯನ್ ಸಂಸ್ಕೃತಿಗಿಂತ ಭಿನ್ನವಾಗಿರಬಹುದು ಎಂಬ ಆಲೋಚನೆಯನ್ನು ಪಾಶ್ಚಾತ್ಯರು ಮಾಡಲೇ ಇಲ್ಲ. ಪಾಶ್ಚಾತ್ಯ ಸಂಸ್ಕೃತಿಗೆ ಹೋಲಿಸಿದರೆ ಭಾರತೀಯ ಸಂಸ್ಕೃತಿ ಇನ್ನು ಬಾಲ್ಯವಸ್ಥೆಯಲ್ಲಿ ಇದೆ ಎಂಬ ಗ್ರಹಿಕೆಯನ್ನು ಹೊಂದಿದ್ದರು. ಈ ಒಂದು ಅಂಶದ ಹಿನ್ನೆಲೆಯಲ್ಲಿ ಪ್ರೊ. ಬಾಲಗಂಗಾಧರ್‌ರವರು ರಿಲಿಜಿಯನ್ ವಿಶ್ವ ವ್ಯಾಪಿಯಾಗಿದೆಯೇ ಎಂಬ (Is religion is cultural universe?) ಪ್ರಶ್ನೆಯನ್ನು ಎತ್ತುತ್ತಾರೆ. ಉದಾ: ಎಲ್ಲಾ ಸಂಸ್ಕೃತಿಗಳು ರಿಲಿಜಿಯನ್ ಹೊಂದಿವೆ ಎಂಬ ಪಾಶ್ಚಾತ್ಯ ಚಿಂತನೆಯನ್ನು ಪ್ರಶ್ನಿಸುತ್ತಾರೆ. ಮುಂದುವರಿದು ತಮ್ಮ ಗ್ರಂಥದಲ್ಲಿ ಪ್ರತಿಯೊಂದು ಸಂಸ್ಕೃತಿಯು ಅವುಗಳದ್ದೆ ಆದಂತಹ ಕಲಿಯುವಿಕೆಯ ವಿಧಾನವನ್ನು ಹೊಂದಿರುತ್ತವೆ. ಅಂತೆಯೇ ಪಾಶ್ಚಾತ್ಯ ಸಂಸ್ಕೃತಿಯು ಸಿದ್ಧಾಂತ ಪ್ರಧಾನವಾದ (Theoretical way of learning) ಕಲಿಯುವಿಕೆಯನ್ನು ಹೊಂದಿದ್ದು ಕ್ರಿಶ್ಚಿಯನ್ನರು ಸಿದ್ಧಾಂತಗಳಿಂದ ಪ್ರಭಾವಿತರಾದ ಜನರಾಗಿದ್ದಾರೆ. ಆದ್ದರಿಂದಲೇ ಅವರಿಗೆ Belief, Faith ಗಳು ಆಚರಣೆಗಳಿಗಿಂತಲೂ ತುಂಬಾ ಪ್ರಮುಖವಾಗಿರುತ್ತವೆ. ಮತ್ತು ಅವರ ಪ್ರಬಲ ನಂಬಿಕೆಯೆಂದರೆ ಎಲ್ಲಾ ಸಂಸ್ಕೃತಿಗಳಲ್ಲೂ ಆಚರಣೆಗಳ ಹಿಂದೆ Belief ಇರುತ್ತದೆ ಮತ್ತು ಅದು ಆಚರಣೆಯನ್ನು ನಿರ್ದೇಶಿಸುತ್ತದೆ ಎನ್ನುವುದಾಗಿತ್ತು.

ಆದರೆ ಏಷ್ಯಾ ಅದರಲ್ಲಿಯೂ ಭಾರತ ಸಂಸ್ಕೃತಿ ಇದಕ್ಕಿಂತ ಭಿನ್ನವಾದ ಒಂದು ಕಲಿಕಾ ವಿಧಾನವನ್ನು ಹೊಂದಿದೆ. ಉದಾ: ಇಲ್ಲಿ ಆಚರಣೆಯೇ ಪ್ರಧಾನ, ಮತ್ತು ಅಂತಹ ಆಚರಣೆಯನ್ನು ಯಾವುದೇ ರೀತಿಯ Belief ನಿರ್ದೇಶಿಸುತ್ತಿರುವುದಿಲ್ಲ. ಕ್ರಿಶ್ಚಿಯನ್ನರಿಗೆ ರಿಲಿಜಿಯನ್ ಎಷ್ಟು ಮುಖ್ಯವೋ ಭಾರತೀಯ ಸಮಾಜಕ್ಕೆ Ritual (ಸಂಪ್ರದಾಯ) ಅಷ್ಟೇ ಮುಖ್ಯವಾಗಿದೆ. ಆದ್ದರಿಂದಲೇ ಭಾರತೀಯ ಸಮಾಜ ಒಂದು ಆಚರಣೆ ಪ್ರಧಾನ ಜ್ಞಾನದ (Performative knowledge) ಸಮಾಜವೇ ಹೊರತು ಪಾಶ್ಚಾತ್ಯರು ವಿವರಿಸುವಂತೆ ಸಿದ್ಧಾಂತ ಪ್ರಧಾನವಾದ ರಿಲಿಜಿಯಸ್ ಸಮಾಜವಲ್ಲ ಆದ್ದರಿಂದ ರಿಲಿಜಿಯನ್ ಎಂಬ ಪರಿಕಲ್ಪನೆ ಭಾರತದಂತಹ ಆಚರಣೆಯ ಪ್ರಧಾನ ಸಂಸ್ಕೃತಿಯನ್ನು ಪ್ರತಿನಿಧಿಸಲು ಸಾಧ್ಯವಿಲ್ಲ ಮತ್ತು ಆ ಜ್ಞಾನದ ಸೈದ್ಧಾಂತಿಕ ಚೌಕಟ್ಟಿನಲ್ಲಿ (Religious) ಭಾರತದಂತಹ ಸಂಪ್ರದಾಯ ಪ್ರಧಾನ ಸಮಾಜವನ್ನು ವಿವರಿಸಲು ಸಾಧ್ಯವಿಲ್ಲ. ರಿಲಿಜಿಯನ್ ಎಂಬ ಒಂದು ಪರಿಕಲ್ಪನೆಯೇ ಭಾರತದ ಸಾಮಾಜಿಕ ಸಂದರ್ಭಕ್ಕೆ ಅಗತ್ಯವಿಲ್ಲದ್ದಾಗಿದೆ. ವಸಾಹತುಶಾಹಿ ಚಿಂತಕರ ಪ್ರಮುಖವಾದ ಸಮಸ್ಯೆಯೆಂದರೆ ಅವರು ಈ ಎರಡು ಕಲಿಕಾ ವಿಧಾನಗಳ ನಡುವಿನ ಭಿನ್ನತೆಯನ್ನು ಗುರುತಿಸಲು ವಿಫಲರಾಗಿದ್ದಾರೆ. ಆದರೆ ಪಾಶ್ಚಾತ್ಯ ದೃಷ್ಠಿಕೋನದ ಹಿನ್ನೆಲೆಯಲ್ಲಿ ಕಟ್ಟಲ್ಪಟ್ಟ ಹಲವಾರು ಪ್ರಖ್ಯಾತ ವಾದಗಳು ಭಾರತ ಸಮಾಜ ಕುರಿತಂತೆ ಅಸ್ಥಿತ್ವದಲ್ಲಿವೆ. ಅವುಗಳಲ್ಲಿ ಪ್ರಮುಖವಾದುದು ಜಾತಿ ವ್ಯವಸ್ಥೆಯು ಭಾರತದ ಹಿಂದೂ ರಿಲಿಜನ್ ಸಮಾಜದ ಅಂತಃಸ್ಸತ್ವವಾಗಿದೆ ಹಾಗೂ ಶತಮಾನಗಳಿಂದಲೂ ಯಾವುದೇ ಬದಲಾವಣೆಗೆ ಒಳಗಾಗದೆ ತನ್ನತನವನ್ನು ಉಳಿಸಿಕೊಂಡಿದೆ ಎನ್ನುವುದು.

ಪ್ರೊ. ಬಾಲಗಂಗಾಧರ್ ರವರ ಪ್ರಕಾರ ಭಾರತದ ಸಮಾಜದಲ್ಲಿ Caste ಅಥವಾ ಜಾತಿಯನ್ನು ಒಂದು ವ್ಯವಸ್ಥೆಯಾಗಿ ಗುರುತಿಸುವುದು ಅರ್ಥವಾಗದ ವಿಶ್ಲೇಷಣೆ (ad-hoc explanation) ಭಾರತದ ಸಮಾಜದಲ್ಲಿ ನಮಗೆಲ್ಲರಿಗೂ ತಿಳಿದಿರುವಂತೆ ಹಲವಾರು ಜಾತಿಗಳು ಅಸ್ಥಿತ್ವದಲ್ಲಿವೆ. ಆದರೆ ಅವುಗಳನ್ನೆಲ್ಲ ಈಗಾಗಲೇ ನಾವು ಬೌದ್ಧಿಕ ವಾದಗಳಲ್ಲಿ ಗುರುತಿಸಿರುವಂತೆ ಒಂದು ವ್ಯವಸ್ಥೆಯ ಮಾದರಿಯಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಜಾತಿ ಗಳ ಪರಸ್ಪರ ಸಂಬಂಧ ಅವುಗಳ ಆಚರಣೆಯ ನಿರ್ದೇಶಿಸುವ ಸಂಪ್ರದಾಯಗಳ ಸ್ವರೂಪ ಪಾಶ್ಚಾತ್ಯರು ನೀಡಿರುವ ಸೈದ್ಧಾಂತಿಕ ಚೌಕಟ್ಟಿನಲ್ಲಿ ವಿವರಿಸಿರುವುದಕ್ಕಿಂತ ಭಿನ್ನವಾಗಿವೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿನ ಜಾತಿಗಳು ಸಮಾಜದಲ್ಲಿ ಹೇಗೆ ಸಂಘಟನೆಗೊಂಡವು ಮತ್ತು ಹೇಗೆ ಜನರಿಂದ ಗುರುತಿಸಲ್ಪಡುತ್ತವೆ ಎನ್ನುವುದರ ಕುರಿತ ಅಧ್ಯಯನವು ಇಂದಿನ ಅಗತ್ಯವಾಗಿದೆ. ಈ ರೀತಿಯ ಅಧ್ಯಯನಕ್ಕೆ ನಾವು ಜಾತಿಯನ್ನು ಭಿನ್ನ ದೃಷ್ಠಿಕೋನದಿಂದಲೇ ನೋಡಬೇಕಾಗುತ್ತದೆ.

ನನಗನಿಸಿದಂತೆ ಮೇಲಿನ ವಿವರಣೆಗಳಿಂದ ತಿಳಿಯುವ ಅಂಶಗಳೆಂದರೆ.

೧. ಭಾರತದ ಸಮಾಜ ವಿಜ್ಞಾನಗಳಲ್ಲಿ ಅಡಕವಾಗಿರುವ ಪರಿಕಲ್ಪನೆಗಳು ಮತ್ತು ವರ್ಗೀಕರಣ ಪದ ಗುಚ್ಚಗಳು (ಕೆಟೆಗರಿಸ್) ಕ್ರಿಶ್ಚಿಯನ್ ಥಿಯಾಲಜಿಯ ಮೂಲದಿಂದ ಬಂದವುಗಳಾದ್ದರಿಂದ ನಮ್ಮ ಸಮಾಜ ಮತ್ತು ಸಾಮಾಜಿಕ ಸಮಸ್ಯೆಗಳ ನಿಜರೂಪವನ್ನು ಗುರುತಿಸಲು ವಿಫಲವಾಗಿವೆ. ಪಾಶ್ಚಾತ್ಯರು ಪ್ರಜ್ಞಾಪೂರ್ವಕವಾಗಿ ಇದನ್ನು ಮಾಡಿದ್ದಾರೆ ಎಂದು ಅವರು (ಬಾಲು) ಹೇಳುವುದಿಲ್ಲ. ಯುರೋಪಿನವರು ಬಂದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಭಾರತೀಯ ಸಮಾಜದ ಸ್ವರೂಪವನ್ನು ಹಾಗೆ ಗುರುತಿಸದೆ ಅನ್ಯ ಮಾರ್ಗವೇ ಅವರಿಗಿರಲಿಲ್ಲ ಎನ್ನುವುದು ಅವರ ವಾದ. ಒಂದು ರೀತಿಯಲ್ಲಿ ಇದು ಎರಡು ಭಾಗಗಳ (East and west) ನಡುವಿನ ಸಾಂಸ್ಕೃತಿಕ ಹಿನ್ನೆಲೆ ಅಲ್ಲಿರುವ ಜ್ಞಾನದ ಸ್ವರೂಪವನ್ನು ನಿರ್ಧರಿಸುವ ಪ್ರಶ್ನೆಯಾಗಿ ಕಾಡುತ್ತದೆ. ಇದನ್ನು ನಾವು ಒಂದು ಪ್ರಾಕಲ್ಪನೆ ಎಂದು ಸ್ವೀಕರಿಸಿದರೂ ಪ್ರಸ್ತುತ ಸಮಾಜ ವಿಜ್ಞಾನಿಗಳ ಸಂಶೋಧನೆಯನ್ನು ಒಂದು ಭಿನ್ನವಾದಂತಹ ದೃಷ್ಟಿಕೋನದಿಂದ ಪರೀಕ್ಷಿಸಲು ಅರ್ಹವಾಗಿದೆ. ಡಾ. ವಿ.ಎಸ್. ಶ್ರೀಧರ್ ಮತ್ತು ಡಾ. ಸಿ.ಜಿ ಲಕ್ಷ್ಮಿಪತಿ ಇವರು ಪ್ರತಿಪಾದಿಸಿರುವಂತೆ Methodology ಯ ಸಮಸ್ಯೆ ತುಂಬಾ ಗಂಭೀರವಾದುದಾಗಿದೆ. ಅಂದರೆ ನಾವು ಈ ಒಂದು ಪ್ರಮೇಯ ಮತ್ತು ಗ್ರಹಿತಗಳನ್ನು ಯಾವ ಒಂದು Methodology ಯನ್ನು ಬಳಸಿ ಸಾಧಿಸಬಹುದಾಗಿದೆ ಎಂಬುದು.

೨. ಬಾಲಗಂಗಾಧರ ಅವರ ವಾದವನ್ನು ಒಪ್ಪುವುದು ಅಥವಾ ಒಪ್ಪದೆ ಇರುವುದು ಬೇರೆ ವಿಷಯ ಆದರೆ ಪ್ರಸ್ತುತ ಅವರ ಚಿಂತನೆ ಇದುವರೆಗೂ ನಡೆದಿರುವ ಸಮಾಜ ವಿಜ್ಞಾನಗಳ ಸಂಶೋಧನೆಯ ದಿಕ್ಕಿಗೆ ಭಿನ್ನವಾದ ಬೆಳಕನ್ನು ಚೆಲ್ಲುತ್ತದೆ ಎಂಬುದು ಸಮಾಜ ವಿಜ್ಞಾನಗಳ ಸಂಶೋಧನೆಯ ದೃಷ್ಟಿಯಿಂದ ಸ್ವಾಗತಾರ್ಹ ಎನ್ನುವುದು ನನ್ನ ನಂಬಿಕೆ. ಅವರ ಚಿಂತನೆಗಳು, ಪ್ರಮೇಯಗಳು ಮತ್ತು ಗ್ರಹಿತಗಳಂತೆ ಕಂಡರೂ ಸಹ ಡಾ. ಡೊಮಿನಿಕ್.ಡಿ ಇವರು ಹೇಳಿದಂತೆ ಈ ಪ್ರಮೇಯ ಮತ್ತು ಗ್ರಹಿತಗಳು ಮುಂದೆ ಕೈಗೊಳ್ಳಬಹುದಾದ ಸಂಶೋಧನೆಯ ದಿಕ್ಕನ್ನು ಸೂಚಿಸುತ್ತವೆ ಎಂಬುದು ಸಹ ಆಸಕ್ತಿಕರ ಅಂಶವೆ. ಇಲ್ಲಿ ಗಮನಿಸಬಹುದಾದ ಪ್ರಮುಖ ಅಂಶವೆಂದರೆ ಸ್ವತಃ ಬಾಲುರವರೇ ತಮ್ಮ ಗ್ರಂಥದ ಮೊದಲನೇ ಅಧ್ಯಾಯದಲ್ಲಿ ಹೇಳುವಂತೆ "ನಾನು ಇಂದು ಪ್ರಭಾವಶಾಲಿಯಾಗಿರುವ ವಿಚಾರಗಳನ್ನು ಮುಖಾಮುಖಿ ಮಾಡುತ್ತ ಈ ಪ್ರಶ್ನೆಗಳನ್ನು ರೂಪಿಸುತ್ತೇನೆ. ಏಕೆಂದರೆ ಭಾಗಶಃ ಈ ವಿಚಾರಗಳು ತಾವೇ ಸಮಸ್ಯೆಯನ್ನು ರಚಿಸುತ್ತವೆ. ಅಂದರೆ ರಿಲಿಜನ್ನಿನ ಸ್ವರೂಪಕ್ಕೆ ಸಂಬಂಧಿಸಿದ ಸಮಸ್ಯೆಗಳ ಜೊತೆಗೇ, ಅನ್ಯ ಸಂಸ್ಕೃತಿಗಳಲ್ಲಿ ನಮ್ಮ ಲೇಖಕರು ರಿಲಿಜನ್ನುಗಳನ್ನು ಕಾಣುವುದೇ ಒಂದು ಸಮಸ್ಯೆಯಾಗಿದೆ ಎಂದು ವಾದಿಸುತ್ತೇನೆ. ಈ ಅರ್ಥದಲ್ಲಿ ಈ ಅಧ್ಯಾಯದಲ್ಲಿ ಬಳಸಲಾಗುವ ವಾದಗಳು "ಸಂಶೋಧನೆಗೆ ಪ್ರವೇಶವನ್ನು ನೀಡುತ್ತವೆಯೇ ವಿನಃ ಅದರ ಸಮಸ್ಯೆಯನ್ನು ಯಾವುದೇ ರೀತಿಯಲ್ಲೂ ಪರಿಹರಿಸುವುದಿಲ್ಲ" ಅಂದರೆ ಈ ಒಂದು ಪ್ರಯತ್ನ ಒಂದು ಪ್ರಮುಖ ಸಂಶೋಧನೆಗೆ ಸಿದ್ಧತೆಯಾಗಿರುವುದು ಕಂಡುಬರುತ್ತದೆ (Heuristic functions)

೩. ತಮ್ಮ ಲೇಖನದಲ್ಲಿ ಡಾ.ಸಿ.ಜಿ. ಲಕ್ಷ್ಮೀಪತಿಯವರು ಹೇಳುವಂತೆ ಒರಿಯಂಟಲಿಸಂನ ದೃಷ್ಟಿ

(೯ನೇ ಪುಟಕ್ಕೆ)

ಸಂಶೋಧನೆಯು ಪ್ರಶ್ನೆಗಳಲ್ಲ

ರಾಜಾರಾಮ ಹೆಗಡೆ

ಸಂವಾದದಲ್ಲಿ ಡಾ. ಷಣ್ಮುಖ ಅವರ ಪ್ರತಿಕ್ರಿಯೆಗೆ ಪ್ರತ್ಯುತ್ತರವಾಗಿ ಬಂದ ಲೇಖನಗಳಿಗೆ ಸಂಬಂಧಿಸಿ ನನ್ನ ಕೆಲವು ಅನಿಸಿಕೆಗಳು. ಡೊಮಿನಿಕ್ ಅವರು ಮಾಡಿದ ಆರೋಪವನ್ನು ನಾವು ಕಳೆದ ಕೆಲವು ವರ್ಷಗಳಿಂದ ಬೇರೆ ಬೇರೆಯವರ ಮುಖಾಂತರ ಕೇಳುತ್ತಲೇ ಬಂದಿದ್ದೇವೆ. ಷಣ್ಮುಖ ಅವರು ಸ್ಪಷ್ಟೀಕರಣವನ್ನು ನೀಡಿದರೂ, ಆ ಆರೋಪಗಳೇ ಈ ಪ್ರತ್ಯುತ್ತರಗಳಲ್ಲೂ ಕಾಣಿಸಿಕೊಂಡಿವೆ. ಈ ಕುರಿತು ಮೊದಲು ತಮಗೆಲ್ಲ ಮನದಟ್ಟಾದ ಹೊರತೂ ನಮ್ಮ ವಿಚಾರದ ಕುರಿತು ತಮಗೆ ಆಸ್ಥೆ ಹುಟ್ಟಲು ಸಾಧ್ಯವಿಲ್ಲ ಎಂಬುದು ನನ್ನ ಅನ್ನಿಸಿಕೆ. ಆರೋಪ ಯಾವುದು? ೧)ಈ ಸಂಶೋಧನೆಯಲ್ಲಿ ವಿಶ್ವವಿದ್ಯಾನಿಲಯದ ಕೆಲವರು ತೊಡಗಿಸಿಕೊಳ್ಳಲಿಕ್ಕೆ 'ಕ್ಯಾಷ್'ನ (ಶ್ರೀಧರ ಅವರ ವ್ಯಂಗ್ಯವನ್ನು ಗಮನಿಸಿ) ಆಕರ್ಷಣೆಯೇ ಕಾರಣ. ೨) ಪುಕ್ಕಟೆ ವಿದೇಶಕ್ಕೆ ಹೋಗಿ ಮಜಾ ಉಡಾಯಿಸುವ ಆಮಿಷ. ೩) ಬಾಲಗಂಗಾಧರ ಅವರು ಬಲಪಂಥೀಯ ಶಕ್ತಿಗಳ ಜೊತೆಗೆ ಕೈಜೋಡಿಸಿ ಸ್ವದೇಶೀ ಹಾಗೂ ವಿದೇಶೀ ಬಲಪಂಥೀಯರಿಂದ ಅಕ್ರಮ ಹಣವನ್ನು ಪಡೆದು ಅವರ ತತ್ವಗಳನ್ನು ಪ್ರಚುರಪಡಿಸುವ ಹುನ್ನಾರವನ್ನು ಹೊಂದಿದ್ದಾರೆ. ೪) ಇಲ್ಲಿನ ಕೆಲವರು ಅವರು ಒಡ್ಡಿದ ಆಮಿಷಕ್ಕೆ ಬಲಿಬಿದ್ದು ಅವರು ಏನು ಹೇಳಿದರೂ ಅದನ್ನು ಕೇಳಲಿಕ್ಕೆ ತಯಾರಾಗಿ ನಿಂತಿದ್ದಾರೆ. ಈ ಆರೋಪಗಳ ಜೊತೆಗೆ ಇವರ ನಿಜ ಹುನ್ನಾರವೇನು? ಹಿಂದುತ್ವದ ವಾದಗಳನ್ನು ಪುಷ್ಟೀಕರಿಸುವುದು. ಈ ಹಿಂದುತ್ವವಾದವು ಬ್ರಾಹ್ಮಣ ಪುರೋಹಿತಶಾಹಿಯನ್ನು ಸ್ಥಾಪನೆ ಮಾಡಲಿಕ್ಕೆ ಹೊರಟಿರುವುದರಿಂದ ದಲಿತ ವಿರೋಧಿಯಾಗಿದೆ. ಇದು ನಡೆಸುವ ಸಂಶೋಧನೆಗಳಿಗೆ ಹಿಂದುತ್ವವಾದಿಗಳು ಕ್ಯಾಷ್ ನೀಡುತ್ತಾರೆ ಎಂಬ ಕಾರಣದಿಂದ ಈ ಸಂಶೋಧನೆ ನಡೆಯುತ್ತಿದೆ. ಮುಚ್ಚುಮರೆಯಿಲ್ಲದೇ ನೇರವಾಗಿ ಹೇಳಿದರೆ ಇಷ್ಟು ಸ್ಪಷ್ಟವಾಗಿ ಜನರಿಗೆ ತಲುಪಬಹುದಾದ ವಿಚಾರಗಳನ್ನು ಅವರು ಸಂದಿಗ್ಧಪೂರ್ಣವಾಗಿ ಮಾಡುತ್ತಿರುವುದರಿಂದ ನಾನು ಈ ವಾದಗಳನ್ನು ಓದುಗರ ಅನುಕೂಲತೆಗಾಗಿ ಕ್ರೋಢೀಕರಿಸಿ ಇಡುತ್ತಿದ್ದೇನೆ.

ಒಂದೊಮ್ಮೆ ಈ ಆರೋಪಗಳು ನಿಜವಾಗಿದ್ದಲ್ಲಿ, ಇಂಥ ಮೋಸಗಾರರ ಗುಂಪಿನ ವಿಚಾರಗಳ ಕುರಿತು ಯಾರಿಗೂ ಸಂಶಯ ಹುಟ್ಟೇ ಹುಟ್ಟುತ್ತದೆ. ಶ್ರೀಧರ, ಡೊಮಿನಿಕ್, ಲಕ್ಷ್ಮೀಪತಿ ಮುಂತಾದವರ ಜಾಗದಲ್ಲಿ ನಾನೇ ಇದ್ದರೂ ಕೂಡ ಇಂಥವರು ಹೇಳುತ್ತಿರುವುದನ್ನು ಸಂಶಯದಿಂದಲೇ ನೋಡುತ್ತೇನಲ್ಲದೇ ಅದನ್ನು ನಂಬಿಬಿಡುವುದಿಲ್ಲ. ಆದರೆ ನನ್ನ ಮೂಲಭೂತ ಪ್ರಶ್ನೆ ಎಂದರೆ ಈ ಆರೋಪಗಳು ಸತ್ಯವೆ? ಹಾಗೂ ಉಚಿತವೆ? ನಮ್ಮ ಯಾವ ಚಟುವಟಿಕೆಯನ್ನೂ ನಾವು ಗೌಪ್ಯವಾಗಿ ಇಟ್ಟುಕೊಂಡಿಲ್ಲ. ಕಳೆದ ನಾಲ್ಕಾರು ವರ್ಷಗಳಿಂದ ಬಹಿರಂಗವಾಗಿ ಚರ್ಚಿಸಿದ್ದೇವೆ. ಎಲ್ಲರಿಗೂ ಮಾಹಿತಿ ಹಕ್ಕು ಇದೆ. ನಮ್ಮ ಕೇಂದ್ರದಲ್ಲಾಗಲೀ ನಮ್ಮ ವಿಶ್ವವಿದ್ಯಾನಿಲಯದಲ್ಲಾಗಲೀ ಸಂಬಂಧಪಟ್ಟ ಕಛೇರಿಗಳಲ್ಲಿ ಅವುಗಳನ್ನು ಪರಿಶೀಲಿಸಿ ಯಾರ್‍ಯಾರು ಯಾರ್‍ಯಾರ ಜೊತೆಗೆ ಒಳ ಒಪ್ಪಂದ ಮಾಡಿಕೊಂಡಿದ್ದಾರೆ, ಎಷ್ಟೆಷ್ಟು ಹಣವನ್ನು ಮಾಡಿಕೊಂಡಿದ್ದಾರೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಬಹುದು. ಅದರ ಜೊತೆಗೇ ನಾನು, ಸದಾನಂದ, ಷಣ್ಮುಖ ಇವರೆಲ್ಲರ ಕುರಿತು ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸಿ ನಾವಿಲ್ಲಿ ಏನು ಮಾಡುತ್ತಿದ್ದೇವೆ? ಬಾಲಗಂಗಾಧರ ಅವರನ್ನು ಬಿಟ್ಟು ನಮಗೇನಾದರೂ ಅಸ್ತಿತ್ವ ಹಾಗೂ ವಿಚಾರಗಳಿವೆಯೆ? ಇದ್ದರೆ ಅದೇನು? ಇದಕ್ಕೂ ಹಿಂದೆ ಏನೇನು ಬರೆದಿದ್ದೇವೆ, ಮಾತನಾಡಿದ್ದೇವೆ, ಯಾವ ಯಾವ ಚಳುವಳಿಗಳಲ್ಲಿ ಗುರುತಿಸಿಕೊಂಡಿದ್ದೇವೆ ಮುಂತಾದ ವಿವರಗಳನ್ನೂ ಸಂಗ್ರಹಿಸಬಹುದು. ಬಾಲಗಂಗಾಧರ ಅವರೂ ಕೂಡಾ ಒಮ್ಮೆ ಎಡಪಂಥೀಯ ಚಳುವಳಿಯಲ್ಲಿದ್ದವರೇ. ನಮ್ಮ ಸಾಮಾಜಿಕ ಸಮಸ್ಯೆಗಳ ಕುರಿತು ನಮಗೆ ಕಳಕಳಿ ಮತ್ತು ಪ್ರಶ್ನೆಗಳಿದ್ದುದರಿಂದಲೇ ನಾವು ಅದರೊಳಗೆ ಹೋದೆವು. ಹಾಗೂ ಆ ಕಳಕಳಿ ಇನ್ನೂ ಜಾಗೃತವಾಗಿರುವುದರಿಂದಲೇ ಉತ್ತರದ ಹುಡುಕಾಟದಲ್ಲಿ ಅಲ್ಲಿಂದ ಮುಂದೆ ಸಾಗುವ ಅನಿವಾರ್ಯತೆ ಇದೆ ಎಂಬುದನ್ನು ಮನಗಂಡು ಆ ಕುರಿತು ಸಂಶೋಧನೆ ಕೈಗೊಂಡಿದ್ದೇವೆ. ಇದು ನಿಮಗೆಲ್ಲ ಮನದಟ್ಟಾಗಿ ನೀವು ಹೇಳುವಂಥ ಯಾವ ಉದ್ದೇಶಗಳೂ ಇವರಿಗೆ ಇಲ್ಲ ಎಂಬುದಾಗಿ ಕಂಡುಬಂದರೆ, ಇವರ ವಿಚಾರಗಳನ್ನು ಮತ್ತೆ ಯಾವ ರೀತಿ ಹೇಗೆ ತೆಗೆದುಕೊಳ್ಳಬೇಕು ಎಂಬುದು ಹೊಳೆಯಬಹುದು.

ಈ ಮೇಲಿನ ವಿಚಾರಗಳನ್ನು ಏಕೆ ಹೇಳುತ್ತಿದ್ದೇನೆಂದರೆ ಯಾರ ಕುರಿತಾದರೂ ಸಂಶಯ ಪಿಶಾಚಿ ಹುಟ್ಟಿಕೊಂಡರೆ ಅವರ ವಿಚಾರಗಳನ್ನು ಸದ್ಭಾವನೆಯಿಂದ ತೆಗೆದುಕೊಳ್ಳಲು ಕಷ್ಟವಾಗುತ್ತದೆ. ಮೊದಲು ನಮ್ಮ ತಂಡ ಜಾತಿಗಳೇ ಇಲ್ಲ ಎಂಬುದಾಗಿ ಹೇಳುತ್ತಿದೆ ಎಂಬ ಆರೋಪ ಮಾಡಲಾಯಿತು. ಈಗ ಇದು ಹಿಂದುತ್ವಕ್ಕೆ ಜಾತ್ಯಾತೀತತೆಯ(ಅದರ ಅರ್ಥವೇನು ಎಂಬುದು ನನಗೆ ತಿಳಿದಿಲ್ಲ, ಅದು ಸೆಕ್ಯುಲರ್ ಎಂಬ ವಿಚಾರವೋ, ಜಾತಿ ಸಮಾನತೆಗೆ ಸಂಬಂಧಿಸಿದ್ದೋ?) ಪಟ್ಟ ನೀಡುವ ಪ್ರಯತ್ನ ಎಂಬುದಾಗಿ ಹೇಳಲಾಗುತ್ತಿದೆ, ಕ್ಯಾಷ್ ಗಾಗಿ ಸಂಶೋಧನೆ ಎನ್ನಲಾಗುತ್ತಿದೆ. ಹಾಗೂ ಜಾತಿ ಬೇಧಗಳನ್ನು ಗಟ್ಟಿಮಾಡಿ, ಉಳ್ಳವರ ಅನುಕೂಲಗಳನ್ನು ಮತ್ತೆ ಸ್ಥಿರೀಕರಿಸುವಂಥ ಸಿದ್ಧಾಂತ ಹಾಗೂ ಸಿದ್ಧಾಂತಿಗಳನ್ನು ಹುಟ್ಟುಹಾಕುತ್ತದೆ ಎಂದು ಎಚ್ಚರಿಕೆ ನೀಡಲಾಗಿದೆ. ಅಂದರೆ ನಮ್ಮ ಸಂಶೋಧನೆಗಳಿಗೂ ಈ ಮೇಲಿನ ಪರಿಣಾಮಗಳಿಗೂ ಸಮೀಕರಣವನ್ನು ಏರ್ಪಡಿಸುತ್ತಿದ್ದಾರೆ ಎಂಬುದು ಸ್ಪಷ್ಟ. ನನಗಂತೂ ಈ ಮಾತುಗಳು ಅಕ್ಷರಶಃ ಅರ್ಥವಾಗಿಲ್ಲ. ಈ ಹೇಳಿಕೆಗಳು ಮತ್ತೆ ಮತ್ತೆ ಒಂದು ಅನೈತಿಕ ಸಂಬಂಧವೊಂದರ ಕುರಿತು ಅಥವಾ ಕುತಂತ್ರವೊಂದರ ಕುರಿತು ತಿಳಿಸುತ್ತಿವೆ. ಸಮಾಜ ವಿಜ್ಞಾನದಲ್ಲಿ ನಂಬಿಕೆಯಿರುವ ನಮಗೆ ಇವು ಸಮಾಜ ವೈಜ್ಞಾನಿಕ ಪ್ರಶ್ನೆಗಳಲ್ಲ ಎಂಬುದಂತೂ ವೇದ್ಯವಾಗುತ್ತದೆ. ಏಕೆಂದರೆ ಸಾಮಾಜಿಕ ಸಂಶೋಧನೆಯು ವಿಶ್ವವಿದ್ಯಾನಿಲಯಗಳಲ್ಲಿ ನಡೆಯುವುದು ಅಸ್ವಾಭಾವಿಕವೇನಲ್ಲ. ಹಾಗೂ ಸಂಶೋಧನೆಗಳನ್ನು ನಡೆಸುವುದೇ ವೈಜ್ಞಾನಿಕ ಸಮಸ್ಯೆಗಳಿಗೆ ಹೊಸ ಉತ್ತರಗಳನ್ನು ಕಂಡುಹಿಡಿಯುವುದಕ್ಕೆ ಹಾಗೂ ಹೊಸದೇನನ್ನೋ ಹೇಳುವುದಕ್ಕೆ. ಹೊಸದೇನೂ ಹೇಳುವುದಕ್ಕಿಲ್ಲ ಎಂದರೆ ಸಂಶೋಧನೆ ಯಾಕೆ ಮಾಡುತ್ತಾರೆ? ಇನ್ನು ವಿದೇಶೀ ಸಹಯೋಗದ ಕುರಿತು ಹೇಳಬೇಕೆಂದರೆ, ಎಷ್ಟೊಂದು ಅಂಥ ಸಂಶೋಧನೆಗಳು ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಿಲ್ಲ? ಎಷ್ಟೊಂದು NGO ಗಳು ನಮ್ಮ ರಾಜ್ಯದಲ್ಲೇ ವಿದೇಶೀ ಧನಸಹಾಯವನ್ನು ಬಳಸಿಕೊಂಡು ಸಂಶೋಧನೆ ನಡೆಸುತ್ತಿಲ್ಲ? ಯಾರಿಗಾದರೂ ಅವುಗಳ ಕುರಿತು ಸ್ಪಷ್ಟತೆ ಬೇಕಿದ್ದರೆ ಹೋಗಿ ಅವರೊಂದಿಗೆ ಚರ್ಚಿಸುತ್ತಾರೆ. ಅಂಥ ಅವಕಾಶವನ್ನು ನಾವೂ ತಡೆದಿಲ್ಲ. ಅದರ ಬದಲಾಗಿ ಏನೇನೋ ಭಾವಿಸಿಕೊಂಡು, ಇಲ್ಲಿ ಏನೋ ಅನೈತಿಕ, ಸಮಾಜ ಘಾತುಕ ಕೆಲಸ ನಡೆಯುತ್ತಿದೆ ಎಂಬಂತೆ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯಗಳನ್ನು ರೂಪಿಸಲು ಯತ್ನಿಸುವುದು ಸರಿಯೆ? ನಿರ್ದಿಷ್ಟವಾಗಿ ನಮ್ಮ ಸಂಶೋಧನೆಯ ಕುರಿತು ಗಾಳಿಮಾತುಗಳನ್ನು ಹುಟ್ಟುಹಾಕುವ ಹಿತಾಸಕ್ತಿ ಏನಿದೆ? ಈ ಪ್ರಶ್ನೆಗಳ ನೆಲೆಯೇನು? ಇಂಥ ಪ್ರಶ್ನೆಗಳು ಏಕೆ ಹುಟ್ಟಿಕೊಳ್ಳುತ್ತವೆ ಎಂಬುದೂ ಕುತೂಹಲಕಾರಿಯಾದ ವಿಷಯ.

ಜಾತಿಯ ಕುರಿತ ಸಂಶೋಧನೆ ನಮ್ಮ ಒಂದು ಪ್ರಶ್ನೆ ಅಷ್ಟೆ. ಈ ಪ್ರಶ್ನೆ ಎದ್ದಿರುವುದೂ ಕೂಡಾ ಸಮಾಜಶಾಸ್ತ್ರದಲ್ಲಿ ಜಾತಿಯ ಕುರಿತು ನಡೆದ ಸಂಶೋಧನೆಗಳ ಫಲಶೃತಿಯೇ ಆಗಿದೆ.

ಎಷ್ಟೊಂದು NGO ಗಳು ನಮ್ಮ ರಾಜ್ಯದಲ್ಲೇ ವಿದೇಶೀ ಧನಸಹಾಯವನ್ನು ಬಳಸಿಕೊಂಡು ಸಂಶೋಧನೆ ನಡೆಸುತ್ತಿಲ್ಲ? ಯಾರಿಗಾದರೂ ಅವುಗಳ ಕುರಿತು ಸ್ಪಷ್ಟತೆ ಬೇಕಿದ್ದರೆ ಹೋಗಿ ಅವರೊಂದಿಗೆ ಚರ್ಚಿಸುತ್ತಾರೆ. ಅಂಥ ಅವಕಾಶವನ್ನು ನಾವೂ ತಡೆದಿಲ್ಲ. ಅದರ ಬದಲಾಗಿ ಏನೇನೋ ಭಾವಿಸಿಕೊಂಡು, ಇಲ್ಲಿ ಏನೋ ಅನೈತಿಕ, ಸಮಾಜ ಘಾತುಕ ಕೆಲಸ ನಡೆಯುತ್ತಿದೆ ಎಂಬಂತೆ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯಗಳನ್ನು ರೂಪಿಸಲು ಯತ್ನಿಸುವುದು ಸರಿಯೆ? ನಿರ್ದಿಷ್ಟವಾಗಿ ನಮ್ಮ ಸಂಶೋಧನೆಯ ಕುರಿತು ಗಾಳಿಮಾತುಗಳನ್ನು ಹುಟ್ಟುಹಾಕುವ ಹಿತಾಸಕ್ತಿ ಏನಿದೆ? ಈ ಪ್ರಶ್ನೆಗಳ ನೆಲೆಯೇನು? ಇಂಥ ಪ್ರಶ್ನೆಗಳು ಏಕೆ ಹುಟ್ಟಿಕೊಳ್ಳುತ್ತವೆ ಎಂಬುದೂ ಕುತೂಹಲಕಾರಿಯಾದ ವಿಷಯ.

ಚರ್ಚೆ

ಜಾತಿ ಧರ್ಮ ತಾರತಮ್ಯ

ಸಂವಾದದಲ್ಲಿ ಪ್ರತ್ಯುತ್ತರ ನೀಡುತ್ತಿರುವವರು ಜಾತಿಯ ಕುರಿತು ಏನನ್ನು ವಾದಿಸುತ್ತಿದ್ದಾರೋ, ಅವುಗಳನ್ನೆಲ್ಲ ಸಮಾಜ ವಿಜ್ಞಾನಿಗಳು ಪ್ರಾರಂಭದಿಂದಲೇ ಸಮಸ್ಯೆಗಳೆಂದು ಗುರುತಿಸಿದ್ದಾರೆ ಹಾಗೂ ಇಂಥ ವಾದಗಳನ್ನೆಲ್ಲ ಒಬ್ಬಿಲ್ಲೊಬ್ಬರು ಸಾಧಾರಣವಾಗಿ ಅಲ್ಲಗಳೆದಿದ್ದಾರೆ. (ವಿದ್ವಾಂಸರು ಹೋಗಲಿ, ಇಲ್ಲಿ ಪ್ರತ್ಯುತ್ತರ ನೀಡುತ್ತಿರುವವರೇ ಅಲ್ಲಗಳೆದಿದ್ದಾರೆ. ಒಂದೆಡೆ ಜಾತಿ ವ್ಯವಸ್ಥೆಯನ್ನು ಸಂವಿಧಾನಕ್ಕೆ ಹೋಲಿಸುತ್ತಾರೆ, ಮತ್ತೊಂದೆಡೆ ನಮ್ಮ ಇತಿಹಾಸವು ಜಾತಿಯನ್ನು ಅಲ್ಲಗಳೆದವರಿಂದ ಕಿಕ್ಕಿರಿದಿದೆ ಎಂದು ಸಾರುತ್ತಾರೆ. ಅಂಥವರಿಗೆಲ್ಲ ಯಾವ ಯಾವ ಕಲಮಿನ ಪ್ರಕಾರ ಏನೇನು ಶಿಕ್ಷೆಯಾಯಿತು ಎಂಬುದನ್ನು ಉಲ್ಲೇಖಿಸುವುದಿಲ್ಲ.(ಉದಾ: ಬುದ್ಧ, ಬಸವ). ಇಂದು ೭೫% ಜನರು ತಮಗೆ ಸಂವಿಧಾನ ಎಂಬುದು ಗೊತ್ತೇ ಇಲ್ಲ ಎಂದು ಕಾನೂನು ಬಾಹಿರ ಚಟುವಟಿಕೆ ನಡೆಸಿದರೆ ಅವರನ್ನು ಸುಮ್ಮನೆ ಬಿಟ್ಟುಬಿಡುತ್ತಾರೆಯೆ?) ಹಾಗಾಗಿ ನಮ್ಮ ಮೆಥಡಾಲಜಿಯ ಕುರಿತು ಚರ್ಚಿಸುವುದಕ್ಕಿಂತ ಮೊದಲು ರಿಸ್ಲೆಯನ್ನೊ, ಡ್ಯೂಮೋನನ್ನೋ, ಕ್ವಿಗ್ಲೆಯನ್ನೋ, ಡರ್ಕ್ಸನನ್ನೋ ಅಥವಾ ಇನ್ಯಾರನ್ನೋ ತೆಗೆದು ಓದಿ ನೋಡಿ, ಜಾತಿಯ ಕುರಿತ ಈ ಕಥೆಯು ಸಮಸ್ಯಾತ್ಮಕವಾಗಿದೆ ಎನ್ನುವುದು ವೇದ್ಯವಾಗುತ್ತದೆ. ಹಾಗೂ ಈ ಎಲ್ಲರೂ ಜಾತಿ ವ್ಯವಸ್ಥೆಯ ಕುರಿತು ಪರಸ್ಪರ ವಿರುದ್ಧ ಹೇಳಿಕೆಗಳನ್ನು ಮಾಡುತ್ತಾರೆ. ಯಾರು ಹೇಳುವುದು ನಿಜವಾದ ವ್ಯವಸ್ಥೆ? ಈ ವ್ಯವಸ್ಥೆ ಎನ್ನುವ ಕಲ್ಪನೆ ಏನು? ಮುಂತಾದವೆಲ್ಲ ಸಮಸ್ಯೆಗಳು. ಬಾಲಗಂಗಾಧರ ಅವರ ವಾದವು ಈ ಚರ್ಚೆಯನ್ನು ಉದ್ದೇಶಿಸಿ ಹುಟ್ಟಿಕೊಂಡಿದೆ. ಹಾಗಾಗಿ ಇಲ್ಲಿ ನಾವು ಓರಿಯೆಂಟಲಿಸ್ಟರನ್ನು ಎಳೆದು ತರುವ ಅಗತ್ಯವಿಲ್ಲ. ಅವರು ಯಾರೇ ಇರಬಹುದು ನಮಗೆ ಇದು ವಾಸ್ತವ ಎಂದು ಮನದಟ್ಟಾಗುವಂತೆ ಚಿತ್ರಣವನ್ನು ನೀಡುತ್ತಿದ್ದಾರೆಯೋ ಇಲ್ಲವೋ ಎಂಬುದು ಮೂಲಭೂತ ಪ್ರಶ್ನೆ. ಅಂಥ ಚಿತ್ರವನ್ನು ಪಾಶ್ಚಾತ್ಯರೇ ನೀಡುತ್ತಾರೆ ಎಂದರೆ ನಮಗೇನೂ ತೊಂದರೆಯಿಲ್ಲ. ಒಬ್ಬ ಸಂಶೋಧಕನ ಮೂಲಭೂತ ಕಾಳಜಿ ಎಂದರೆ ವಾಸ್ತವವನ್ನು ಹೇಗೆ ವಿವರಿಸಬೇಕು ಎಂಬುದು. ಏಕೆಂದರೆ ಅವನು ವಿದ್ವಾಂಸರ ಸಮೂಹದಲ್ಲಿ ಯಾವ್ಯಾವುದೋ ಕುತಂತ್ರಗಳನ್ನಿಟ್ಟುಕೊಂಡು ಜಯಿಸಲಿಕ್ಕಾಗುವುದಿಲ್ಲ, ಪ್ರಾಮಾಣಿಕನಾದ ಸಂಶೋಧಕನೊಬ್ಬನಿಗೆ ಕುತಂತ್ರದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಂಶೋಧನೆಯ ಪ್ರಶ್ನೆಯು ಅವನಿಗೆ ಒಂದು ಮೌಲ್ಯವಾಗಿರುತ್ತದೆ. ನಮ್ಮ ಗುಂಪಿನಲ್ಲಿರುವವರು ನಮ್ಮ ನಮ್ಮ ಸಮಾಜವಿಜ್ಞಾನಗಳಲ್ಲಿ ಸಾಕಷ್ಟು ಓದು ಹಾಗೂ ಸಂಶೋಧನೆಗಳನ್ನು ಕೈಗೊಂಡಿದ್ದೇವೆ. ಇಂದಿನ ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿ ಹಾಗೂ ಸಮಾಜದ ಕುರಿತ ಸಂಶೋಧನೆಗಳು ಎದುರಿಸುತ್ತಿರುವ ಸಮಸ್ಯೆಗಳಿಂದ ಹೊರಬರಲು ಬಾಲಗಂಗಾಧರ ಅವರ ವಾದಗಳು ಒಂದು ದಾರಿಯನ್ನು ಸೂಚಿಸುತ್ತಿವೆ ಎಂಬುದಾಗಿ ನಮಗೆ ಅನ್ನಿಸಿದೆ. ಹಾಗಾಗಿ ನಾವು ಅವರ ಜೊತೆ ಸೇರಿ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸಿಕೊಂಡಿದ್ದೇವೆ.

ನಮ್ಮ ಸಂಶೋಧನೆಯ ಉದ್ದೇಶದ ಕುರಿತು ಈ ರೀತಿಯ ಚರ್ಚೆಗಳು ಏಳುತ್ತಿರುವುದನ್ನು ನೋಡಿದರೆ ಸಮಾಜ ಸಂಶೋಧನೆಯ ಕುರಿತು ಎತ್ತಲಿಕ್ಕೆ ಬೇರೆ ಪ್ರಶ್ನೆಗಳೇ ಇಲ್ಲ. ಏಕೆಂದರೆ ಅದರ ಮೂಲ ಉದ್ದೇಶವೇ ಜನರಿಗೆ ಮರೆತುಹೋಗಿದೆ ಎನ್ನದೇ ಗತ್ಯಂತರವಿಲ್ಲ. ವಿಷಾದದ ಸಂಗತಿ ಎಂದರೆ, ಸಾಮಾಜಿಕ ಸಾಂಸ್ಕೃತಿಕ ಸಮಸ್ಯೆಗಳ ಕುರಿತು ಅಧಿಕಾರವಾಣಿಯಿಂದ ಮಾತನಾಡಬೇಕಾದವರಿಗೆ ಆ ವಿಷಯಗಳ ಚರ್ಚೆಯು ಆಯಾ ಶಾಸ್ತ್ರಗಳಲ್ಲಿ ಯಾವ ನಿಟ್ಟಿನಲ್ಲಿ ನಡೆಯುತ್ತಿದೆ ಎಂಬುದು ತಿಳಿದಿರಲೇ ಬೇಕಿಲ್ಲ ಎನ್ನುವುದಕ್ಕೆ ಪ್ರಸ್ತುತ ವಿವಾದವೇ ಸಾಕ್ಷಿ. ಸಾಮಾಜಿಕ ಚಳುವಳಿಗಾರರಿಗೆ ಹಾಗೂ ಸಾಹಿತಿಗಳಿಗೆ ಸಮಾಜ ಸಂಶೋಧಕರ ಕುರಿತು ಕನಿಷ್ಠ ಕುತೂಹಲ ಹಾಗೂ ನಂಬಿಕೆಯೂ ಹುಟ್ಟದಿದ್ದರೆ ಅದಕ್ಕೆ ಸಂಶೋಧಕರೂ ಹೊಣೆಗಾರರೇ ಸರಿ. ಹೀಗಾಗುವುದು ಸಹಜ ಕೂಡಾ. ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಸಮಾಜ ಸಂಶೋಧನೆಯ ಶಿಸ್ತೇ ಮಾಯವಾಗಿದೆ ಎಂದರೂ ತಪ್ಪಲ್ಲ. ನಾವೆಲ್ಲ ಇದರ ಬಲಿಪಶುಗಳೇ ಆಗಿದ್ದೇವೆ. ಆದರೆ ಸರಿಯಾಗಿ ತರಬೇತಿ ನೀಡಿದರೆ ನಮ್ಮ ಗ್ರಾಮೀಣ ವಿದ್ಯಾರ್ಥಿಗಳೂ ಇಂಥ ಚರ್ಚೆಗಳಲ್ಲಿ ಜಗತ್ತಿನ ಉಳಿದವರಿಗೆ ಸರಿಸಾಟಿಯಾಗಿ ವಾದಿಸಬಲ್ಲರು. ಅಂಥ ತರಬೇತಿಯನ್ನು ಎಷ್ಟು ವಿಶ್ವವಿದ್ಯಾನಿಲಯಗಳು ನೀಡುತ್ತಿವೆ? ಸಮಾಜ ವಿಜ್ಞಾನವು ಸಾಮಾಜಿಕ, ಸಾಂಸ್ಕೃತಿಕ ಚರ್ಚೆಗಳಲ್ಲಿ ಏಕೆ ಉಪಯೋಗಕ್ಕೆ ಬರುತ್ತಿಲ್ಲ? ಹಿಂದುತ್ವವಾದಿಗಳಿಗೆ ಜಾತಿಯ ಕುರಿತು ಸಂಶೋಧನೆ ಮಾಡಿ ಕೊಡುವುದೇ ನಮ್ಮ ಕೇಂದ್ರದ ಉದ್ದೇಶ ಎಂಬಂತೇ ಆರೋಪಿಸಲಾಗಿದೆ. ವಾಸ್ತವವೆಂದರೆ, ಯುವ ಸಂಶೋಧಕರಿಗೆ ತರಬೇತಿಯನ್ನು ನೀಡುವುದು ನಮ್ಮ ಕೇಂದ್ರದ ಮುಖ್ಯ ಉದ್ದೇಶ. ನಮಗೆ ಯಾವ ಅದ್ಭುತ ಸತ್ಯವನ್ನು ಹೇಳಲಿಕ್ಕಾಗದಿದ್ದರೂ ಚಿಂತೆಯಿಲ್ಲ. ಇಂಥದೊಂದು ಸಂಶೋಧನಾ ಸಂಸ್ಕೃತಿಯನ್ನು ಬೆಳೆಸಬೇಕು, ನಮ್ಮ ಸಮಾಜ ವಿಜ್ಞಾನದ ವಿದ್ಯಾರ್ಥಿಗಳು ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳ ಚರ್ಚೆಯಲ್ಲಿ ಅಧಿಕಾರವಾಣಿಯಿಂದ ಹೀಗಲ್ಲ ಹೀಗೆ ಎಂದು ಹೇಳಲು ಸಾಧ್ಯವಾಗಬೇಕು. ಆಗ ಮುಂದೊಂದು ದಿನ ಸಾಮಾಜಿಕ ಸಮಸ್ಯೆಗಳ ಕುರಿತು ಗಂಭೀರ ಚರ್ಚೆಗಳು ಸಾಧ್ಯವಾಗಬಹುದು ಎಂಬುದೇ ನಮ್ಮ ಆಶಯ. □

ಯಾರ ಕುರಿತಾದರೂ ಸಂಶಯ ಪಿಶಾಚಿ ಹುಟ್ಟಿಕೊಂಡರೆ ಅವರ ವಿಚಾರಗಳನ್ನು ಸದ್ಭಾವನೆಯಿಂದ ತೆಗೆದುಕೊಳ್ಳಲು ಕಷ್ಟವಾಗುತ್ತದೆ. ಮೊದಲು ನಮ್ಮ ತಂಡ ಜಾತಿಗಳೇ ಇಲ್ಲ ಎಂಬುದಾಗಿ ಹೇಳುತ್ತಿದೆ ಎಂಬ ಆರೋಪ ಮಾಡಲಾಯಿತು. ಈಗ ಇದು ಹಿಂದುತ್ವಕ್ಕೆ ಜಾತ್ಯಾತೀತತೆಯ ಪಟ್ಟ ನೀಡುವ ಪ್ರಯತ್ನ ಎಂಬುದಾಗಿ ಹೇಳಲಾಗುತ್ತಿದೆ, ಜಾತಿ ಬೇಧಗಳನ್ನು ಗಟ್ಟಿಮಾಡುವ ಸಿದ್ಧಾಂತಿಗಳನ್ನು ಹುಟ್ಟುಹಾಕುತ್ತದೆ ಎಂದು ಎಚ್ಚರಿಕೆ ನೀಡಲಾಗಿದೆ.

ಸಮಾಜ ವಿಜ್ಞಾನ ಮತ್ತು ಜಾತಿ ವ್ಯವಸ್ಥೆ

(೭ನೇ ಪುಟದಿಂದ)

ಕೋನದಿಂದ ಜಾತಿಯನ್ನು ವಿವರಿಸ ಹೊರಟ ಕೂಡಲೇ ಅನ್ಯಾಯಕ್ಕೆ, ಅಸಮಾನತೆಗೆ ಗುರಿಯಾಗಿರುವ ಜಾತಿಗಳು, ಕುಲಸಮುದಾಯಗಳು ಆತಂಕಕ್ಕೆ ಒಳಗಾಗುವುದು ಸಹಜ. ಏಕೆಂದರೆ ಒರಿಯಂಟಲಿಸಂ ಪಶ್ಚಿಮದ ಅಧಿಕಾರವನ್ನು ವಿರೋಧಿಸುವ ನೆಲೆಯಲ್ಲಿಯೇ ಆಧುನಿಕತೆ, ತರ್ಕ, ಕಾರ್ಯಕಾರಣ ಸಂಬಂಧ, ವೈಜ್ಞಾನಿಕ ಮನೋಭಾವ ಮತ್ತು ಉದಾರ ಪ್ರಜಾಸತ್ತಾತ್ಮಕ ನೆಲೆಗಳನ್ನು ವಿರೋಧಿಸುವ ಸ್ವರೂಪ ಒಳಗೊಂಡಿದೆ. ಎಂಬುದು ತುಂಬಾ ಗಮನಾರ್ಹ ಅಂಶವಾದರೂ ಪ್ರೊ. ಬಾಲಗಂಗಾಧರ ರವರ ವಿಚಾರಗಳು ಒರಿಯಂಟಲಿಸಂನ ಮುಂದುವರೆದ ತಾತ್ವಿಕ ಪ್ರಣಾಳಿಕೆಯಂತೆ ಕಾಣುತ್ತವೆ ಎಂಬದು ಸಮಸ್ಯಾತ್ಮಕವಾಗಿದೆ. ಸಮಾಜ ವಿಜ್ಞಾನಗಳ ಜ್ಞಾನ ಮೀಮಾಂಸೆಯಲ್ಲಿ ಎಡ್ವರ್ಡ್ ಸೈದ್‌ನ ನಂತರ ಮುಂದೇನಾದರೂ ಇದೆಯೇ? ಎಂಬ ಪ್ರಶ್ನೆಯಲ್ಲಿ ಡಾ.ಲಕ್ಷ್ಮೀಪತಿಯವರ ವಾದ ನೆಲೆ ಕಂಡುಕೊಂಡಿರುವಂತೆ ಅನ್ನಿಸುತ್ತದೆ. ವಸಾಹತುಶಾಹಿ ಪಠ್ಯಗಳನ್ನು ಓದುವ ರೀತಿ ಮತ್ತು ಅರ್ಥೈಸುವ ಕ್ರಮದ ಬಗ್ಗೆ ಎತ್ತಿರುವ ಪ್ರಶ್ನೆ ತುಂಬಾ ಸೂಕ್ಷ್ಮವಾಗಿದ್ದು ಗಮನ ಸೆಳೆಯುತ್ತದೆ.

ಒಟ್ಟಾರೆ ಸಮಾಜ ವಿಜ್ಞಾನಗಳ ಸಂಶೋಧನೆ ಒಂದು ಆಸಕ್ತಿಯಾಗಿ ಕಂಡವರಿಗೆ ಈ ರೀತಿಯ ಬೆಳವಣಿಗೆಗಳು ನಿಜವಾಗಲು ಒಂದು ಹೊಸ ರೀತಿಯ ಚೈತನ್ಯವನ್ನು, ನೆಲೆಗಳನ್ನು ಸಂಶೋಧನೆಯ ಹಾದಿಯಲ್ಲಿ ತೆರೆಯುತ್ತದೆ. ಸಮಾಜ ವಿಜ್ಞಾನಿಗಳಿಗಿರಬೇಕಾದ ಮೂಲ ಗುಣಗಳಾದ ವಸ್ತುನಿಷ್ಠತೆ (Objectivity and value Neutrality) ಮತ್ತು ಮೌಲ್ಯ ತಟಸ್ಥ ನೆಲೆಯಿಂದ ತರ್ಕ ಮಾಡಿದ್ದೆ ಆದರೆ ಈ ಚರ್ಚೆ ಸಮಾಜ ವಿಜ್ಞಾನಗಳ ಸಂಶೋಧಕರಿಗೆ ಉಪಯುಕ್ತವಾಗಬಲ್ಲದ್ದಾಗಿದೆ. Objectivity ಮತ್ತು value Neutrality ಗಳು ಪಾಶ್ಚಾತ್ಯರ ಸಮಾಜ ವಿಜ್ಞಾನಗಳ ನೆಲೆಯಿಂದಲೇ ಜನ್ಮತಾಳಿದವು ಎಂಬ ವಾದ ಮುಂದಿಟ್ಟರೆ ಈ ಪ್ರಶ್ನೆಗಳಿಗೆ ಉತ್ತರ, ಸಮಾಜ ವಿಜ್ಞಾನಗಳ ಥಿಯರಿ ಮತ್ತು ಸಂಶೋಧನೆಯ ಬೆಳವಣಿಗೆಯ ವಿವಿಧ ಹಂತಗಳನ್ನು ವಿವರಿಸಬೇಕಾಗುತ್ತದೆ.

ಪ್ರಸ್ತುತ ಬಾಲುರವರ ಚಿಂತನೆ ಮತ್ತು ಸಮಸ್ಯೆ ಇರುವುದು ಭಾರತದ ಸಮಾಜವನ್ನು ಕುರಿತಂತೆ ಇರುವ ಜ್ಞಾನ ಯಾವ ರೀತಿ ತನ್ನನ್ನು ನಿರ್ವಹಿಸಿಕೊಂಡಿದೆ. ಇದರಲ್ಲಿರುವ ಸಮಸ್ಯೆಗಳೇನು? ಎಂಬುದಾಗಿದೆಯೇ ಹೊರತು ನನಗೆ ತಿಳಿದಿರುವಂತೆ 'ಜಾತಿ'ಯ ಪ್ರಶ್ನೆಯನ್ನು ಕೇಂದ್ರವಾಗಿ ಟ್ಟುಕೊಂಡು ಅವರು ತಮ್ಮ ಸಿದ್ಧಾಂತವನ್ನು ಮುಂದಿಡುತ್ತಿಲ್ಲ. ಒಟ್ಟು ಸಮಾಜ ವಿಜ್ಞಾನಗಳ ಸಮಸ್ಯೆಯನ್ನು ಕುರಿತಂತೆ ಅವರು ಎತ್ತಿರುವ ಪ್ರಶ್ನೆಯ ವ್ಯಾಪ್ತಿಯಲ್ಲಿ ಜಾತಿಯ ಕುರಿ ತಾದ ಸಿದ್ಧಾಂತಗಳು ಸಹ ಬರುತ್ತವೆ ಎನ್ನುವುದನ್ನು ನಾವು ಪ್ರಮುಖವಾಗಿ ಗಮನಿಸಬೇಕಾಗುತ್ತದೆ. ಬಾಲುರವರ ವಾದವನ್ನು ನಾವು ಸಮಾಜ ವಿಜ್ಞಾನಗಳ ನಿರೂಪಣೆಯಲ್ಲಿನ ಸಮಸ್ಯೆಯಾಗಿ ಗ್ರಹಿಸಿದರೆ ಇನ್ನು ಹೆಚ್ಚು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬಹುದಾಗಿದೆ. ಬದಲಾಗಿ ಕೇವಲ ಜಾತಿ ವ್ಯವಸ್ಥೆಯ ಕುರಿತಾದಂತೆ ಸಂಕುಚಿತ ಅರ್ಥದಲ್ಲಿ ಅವರ ವಾದಗಳು ಅರ್ಥವಾಗುವುದು ಕಷ್ಟಸಾಧ್ಯವಾಗಿದೆ. □

KASSH ಒಂದು ಟಿಪ್ಪಣಿ

ಪ್ರೊ.ಜೆ.ಎಸ್.ಸದಾನಂದ

ವಿಶ್ವ ವಿದ್ಯಾನಿಲಯಗಳಲ್ಲಿ ಸಾಮಾಜಿಕ ವಿಭಾಗಗಳ ಅಧ್ಯಯನ ಹಾಗೂ ಸಂಶೋಧನೆ ಕೈಗಾರೀಕರಣ ಹಾಗೂ ಜಾಗತೀಕರಣದ ಹೊಡೆತಕ್ಕೆ ಸಿಕ್ಕಿ ನಲುಗಿ ಹೋಗುತ್ತಿದೆ. ಎಲ್ಲೆಲ್ಲೂ ತಲೆಯೆತ್ತುತ್ತಿರುವ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಅವುಗಳು ಉತ್ಪಾದನೆ ಮಾಡುತ್ತಿರುವ ಜ್ಞಾನ ನೈಸರ್ಗಿಕ ವಿಜ್ಞಾನ ಹಾಗೂ ಸಾಮಾಜಿಕ ವಿಭಾಗಗಳ ನಡುವಿನ ಸಮತೋಲನವನ್ನು ಕಳೆದುಕೊಂಡಿದೆ. ಅತ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿಗಳು ಸಾಮಾಜಿಕ ವಿಜ್ಞಾನದ ಅಧ್ಯಯನ ದಿಂದ ವಿಮುಖರಾಗಿ ವೃತ್ತಿಪರ ಶಿಕ್ಷಣದ ಕಡೆಗೆ ವಾಲುತ್ತಿದ್ದಾರೆ. ಸಾಮಾಜಿಕ ಸಮಸ್ಯೆಗಳ ಸ್ವರೂಪವನ್ನು ಗ್ರಹಿಸಲು ವಿಫಲರಾದ ಇಂತಹವರು ನಮ್ಮ ಸಮಾಜ ಹಾಗೂ ಸಂಸ್ಕೃತಿ ಕುರಿತು ಸಾರ್ವಜನಿಕ ನೀತಿಯನ್ನು ನಿರೂಪಿಸುವ ಆಯಕಟ್ಟಿನ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ.

'ಸಂವಾದ'ದ ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಡಾ.ಶ್ರೀಧರ ಅವರ ಲೇಖನದಲ್ಲಿ ಕರ್ನಾಟಕ ಅಕಾಡೆಮಿ ಆಫ್ ಸೋಷಿಯಲ್ ಸೈನ್ಸ್‌ಸ್ ಅಂಡ್ ಹ್ಯುಮ್ಯಾನಿಟೀಸ್ (KASSH) ಕುರಿತು ಉಲ್ಲೇಖಿಸಲಾಗಿದೆ. ಅದನ್ನು ಓದಿದವರಿಗೆ ಅಕಾಡೆಮಿಯ ಸ್ಥಾಪನೆಯ ಬಗ್ಗೆ ತಪ್ಪು ಅಭಿಪ್ರಾಯ ಬರುವುದು ಸಹಜವಾಗಿದೆ. ಕರ್ನಾಟಕದಲ್ಲಿ ಸಾಮಾಜಿಕ ವಿಜ್ಞಾನಗಳ ಅಧ್ಯಯನ ಮತ್ತು ಸಂಶೋಧನೆಗಳ ಸಮಸ್ಯೆಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕೆ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ನಾವು ಮಾಡುತ್ತಿರುವ ಒಂದು ಗಂಭೀರ ಪ್ರಯತ್ನದ ಉದ್ದೇಶವನ್ನು ಸಂಕ್ಷಿಪ್ತವಾಗಿ ವಿವರಿಸುವ ಉದ್ದೇಶದಿಂದ ಇದನ್ನು ಬರೆಯುತ್ತಿದ್ದೇನೆ.

(ಅ) ಸಾಮಾಜಿಕ ವಿಭಾಗಗಳ ಅಕಾಡೆಮಿ ಸ್ಥಾಪನೆಯ ಸಂದರ್ಭ:

ಇಂದು ಸಾಮಾಜಿಕ ವಿಭಾಗಗಳ ಅಧ್ಯಯನ ಹಾಗೂ ಸಂಶೋಧನೆ ಕೈಗಾರೀಕರಣ ಹಾಗೂ ಜಾಗತೀಕರಣದ ಹೊಡೆತಕ್ಕೆ ಸಿಕ್ಕಿ ನಲುಗಿ ಹೋಗುತ್ತಿದೆ. ಎಲ್ಲೆಲ್ಲೂ ತಲೆಯೆತ್ತುತ್ತಿರುವ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಅವುಗಳು ಉತ್ಪಾದನೆ ಮಾಡುತ್ತಿರುವ ಜ್ಞಾನ ನೈಸರ್ಗಿಕ ವಿಜ್ಞಾನ ಹಾಗೂ ಸಾಮಾಜಿಕ ವಿಭಾ ಗಗಳ ನಡುವಿನ ಸಮತೋಲನವನ್ನು ಕಳೆದುಕೊಂಡಿದೆ. ಅತ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿಗಳು ಸಾಮಾಜಿಕ ವಿಜ್ಞಾನದ ಅಧ್ಯಯನದಿಂದ ವಿಮುಖರಾಗಿ ಇಂಜಿನಿಯರಿಂಗ್, ಮೆಡಿಕಲ್ ಮುಂತಾದ ವೃತ್ತಿಪರ ಶಿಕ್ಷ ಣದ ಕಡೆಗೆ ವಾಲುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಸಮಸ್ಯೆ ಗಳ ಸ್ವರೂಪವನ್ನು ಗ್ರಹಿಸಲು ವಿಫಲರಾದ ಇಂತಹ ರೋಬೋಟ್‌ಗಳು ನಮ್ಮ ಸಮಾಜ ಹಾಗೂ ಸಂಸ್ಕೃತಿಯ ಕುರಿತು ಸಾರ್ವಜನಿಕ ನೀತಿಯನ್ನು ನಿರೂಪಿಸುವ ಆಯಕಟ್ಟಿನ ಸ್ಥಾನವನ್ನು ಆಕ್ರಮಿಸಿಕೊಳ್ಳು ತ್ತಿದ್ದಾರೆ. ಇದಕ್ಕೆ ಪೂರಕವಾಗಿ ಸಾಮಾಜಿಕ ವಿಜ್ಞಾನಗಳ ವಲಯ ಸರ ಕಾರದ ಸಂಪೂರ್ಣ ಅವಗಣನೆಗೊಳಪಟ್ಟು ಅಲ್ಲಿ ನಡೆಯುತ್ತಿರುವ ಸಮಾಜ ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ಸಂಶೋದನೆಗಳು ಸಾರ್ವಜನಿಕ ನೀತಿಯನ್ನು ರೂಪಿಸುವ ಚರ್ಚೆಯಲ್ಲಿ ಪರಿಣಾಮಕಾರಿ ಯಾಗಿ ಮಧ್ಯ ಪ್ರವೇಶಿಸಲು ವಿಫಲವಾಗುತ್ತಿವೆ.

(ಆ) ಸಾಮಾಜಿಕ ವಿಜ್ಞಾನಗಳ ಬಗ್ಗೆ ಈಗಿರುವ ಸಾಮಾನ್ಯ ಅಭಿಪ್ರಾಯ:

ಸಾಮಾಜಿಕ ವಿಜ್ಞಾನಗಳ ಬಗ್ಗೆ ಈಗಿರುವ ಸಾಮಾನ್ಯ ಅಭಿಪ್ರಾಯಗಳೆಂದರೆ ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಿರುವ ಸಂಶ 'ೋಧನೆಗಳು ಸಮಕಾಲೀನ ಸಮಸ್ಯೆಗಳನ್ನು ಅರ್ಥೈಸುವಲ್ಲಾಗಲಿ, ಅದಕ್ಕೆ ಪರಿಹಾರ ಸೂಚಿಸುವಲ್ಲಾಗಲಿ ವಿಫಲವಾಗಿವೆ. ಎಲ್ಲಿಯೂ ಸಲ್ಲದವರು ಕೊನೆಯ ಆಶ್ರಯವಾಗಿ ಸಾಮಾಜಿಕ ವಿಜ್ಞಾನಗಳ ಅಧ್ಯಯನದಲ್ಲಿ ತೊಡಗುತ್ತಾರೆ. ಉತ್ಪಾದನಾ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗದವರು ಸಾಮಾಜಿಕ ವಿಜ್ಞಾನಗಳ ಅಧ್ಯಯನದಲ್ಲಿ ತೊಡಗಿದ್ದು ಅವರಿಗಿರುವ ಒಂದೇ ಮಾರ್ಗ ಎಂದರೆ ಉಪನ್ಯಾಸಕ ಹುದ್ದೆ. ಇದು ಹೀಗೆಯೆ ಮುಂದುವರೆದರೆ ಸಾಮಾಜಿಕ ವಿಜ್ಞಾನಗಳು ಅಧ್ಯಯನದ ಶಿಸ್ತಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವ ಕಾಲ ದೂರವಿಲ್ಲ. ಸಾಮಾಜಿಕ ವಿಭಾಗಗಳ ಸಂಶೋಧನೆಯ ಗುಣಮಟ್ಟ ಗಣನೀಯವಾಗಿ ಕುಸಿದಿದೆ. ನಾವುಗಳು ನೀಡುತ್ತಿರುವ ಉಪನ್ಯಾಸಕ್ಕೂ ನಮ್ಮ ಕಲಿಕೆಗೂ ಹಾಗೂ ಸಮಕಾಲೀನ ಸಮಸ್ಯೆಗಳಿಗೂ ಸಂಬಂಧವೇ ಇಲ್ಲದಂತಾಗಿ ವಿದ್ಯಾರ್ಥಿಗಳು ಬೋಧನೆಯನ್ನು ಗಂಭೀರವಾಗಿ ತೆಗೆದುಕೊಳ್ಳದಂತಹ ಸ್ಥಿತಿ ನಿರ್ಮಾಣವಾಗಿದೆ. ಮೂಲಗ್ರಂಥಗಳ ಪರಿಚಯವೇ ಇಲ್ಲದೆ ಬೋಧನೆಯಲ್ಲಿ ತೊಡಗಿದ್ದೇವೆ. ಸಂಶೋಧನೆಗೆ ಕೈಗೆತ್ತಿಕೊಳ್ಳುವ ಪ್ರಶ್ನೆಗಳಲ್ಲಿ ಹೊಸತೇನೂ ಇಲ್ಲ ಹಾಗೂ ಅವು ಯಾರಲ್ಲೂ ಆಸಕ್ತಿಯನ್ನು ಕುದುರಿಸುತ್ತಿಲ್ಲ. ಸಂಶೋಧನಾ ಕೇಂದ್ರಗಳು ಎಂದು ಗುರುತಿಸಲ್ಪಟ್ಟಿರುವ ಸಂಸ್ಥೆಗಳೂ ಸಹ ನ್ಯೂಯಾರ್ಕ್, ಕ್ಯಾಲಿಫೋರ್ನಿಯಾದ ಜಾರ್ಗನ್‌ಗಳನ್ನು ಪುನರುತ್ಪಾದಿಸುತ್ತಿದ್ದಾರೆ. ನಮ್ಮಲ್ಲಿನ ಸಾಮಾಜಿಕ ವಿಜ್ಞಾನಗಳ ಅಧ್ಯಯನದ ಪರಂಪರೆಯೂ ಸಹ ಇಂದಿನ ದುಃಸ್ಥಿತಿಗೆ ತಮ್ಮದೆ ಕೊಡುಗೆಯನ್ನು ಸಲ್ಲಿಸುತ್ತಿವೆ. ನಮ್ಮ ಪಠ್ಯಗಳಲ್ಲಿ ಸಮಾಜ ಹಾಗೂ ಸಂಸ್ಕೃತಿಯ ಬಗೆಗಿನ ಪಾಶ್ಚಾತ್ಯರ ಅನುಭವಗಳೇ ತುಂಬಿಕೊಂಡಿವೆ. ಇಪ್ಪತ್ತೊಂದನೆ ಶತಮಾನದಲ್ಲಿ ಶಿಕ್ಷಣದ ಸ್ವರೂಪ ಹೇಗಿರಬೇಕು ಎನ್ನುವ ದೃಷ್ಟಿ ಕೋನವನ್ನೇ ರೂಪಿಸಿಕೊಳ್ಳಲು ಸಾಧ್ಯವಾಗದಿರುವುದು ಇಂತಹ ದಾರುಣ ಸ್ಥಿತಿಯ ಮುಂದುವರಿಕೆಗೆ ಕಾರಣವಾಗಿದೆ. ಅಕಾಡೆಮಿ ಇಂತಹ ಸಂದರ್ಭಗಳ ಒಂದು ಶಿಶು.

(ಇ) ಅಕಾಡೆಮಿಯ ಇತಿಹಾಸ:

ಮೊದಲಿಗೆ ಕುವೆಂಪು ವಿಶ್ವವಿದ್ಯಾನಿಲಯ ಬೆಲ್ಜಿಯಂನ ಗೆಂಟ್ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಯುರೋಪಿಯನ್ ಆಯೋಗದ ಧನ ಸಹಾಯದೊಂದಿಗೆ ಏಷಿಯಾ-ಲಿಂಕ್ ಸಂಶೋಧನಾ ಪ್ರಾಜೆಕ್ಟ್‌ನ್ನು ೨೦೦೪ರಲ್ಲಿ ಪ್ರಾರಂಭಿಸಿತು. ಇದರಲ್ಲಿ ಭಾಗವಹಿಸಿದ ಇತರ ಸಂಸ್ಥೆಗಳೆಂದರೆ ನೆದರ್‌ಲ್ಯಾಂಡ್‌ನ ಅಮ್‌ಸರ್‌ಡ್ಯಾಂ ವಿಶ್ವವಿದ್ಯಾನಿಲಯ, ಶ್ರೀಲಂಕಾದ ಪೆರೆದಿನಿಯಾ ವಿಶ್ವವಿದ್ಯಾನಿಲಯ ಹಾಗೂ ಬೆಂಗಳೂರಿನ ಸಾಮಾಜಿಕ ಹಾಗೂ ಸಂಸ್ಕೃತಿ ಅಧ್ಯಯನ ಕೇಂದ್ರ. ಪಶ್ಚಿಮ ಹಾಗೂ ಏಷಿಯಾ ಸಂಸ್ಕೃತಿಗಳ ನಡುವೆ ಪ್ರಚಲಿತವಿರುವ ಸಿದ್ಧಮಾದರಿಗಳು (Stereotypes) ಏಷಿಯಾ ಲಿಂಕ್ ಪ್ರಾಜೆಕ್ಟ್‌ನ ಸಂಶೋಧನಾ ವಿಷಯ. ಈ ಸಹಯೋಗದ ಮುಂದುವರಿಕೆಯೆ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತಿ ಅಧ್ಯಯನ ಕೇಂದ್ರದ ಸ್ಥಾಪನೆ. ಈ ಕೇಂದ್ರದಲ್ಲಿ ನಾವು ಕೈಗೆತ್ತಿಕೊಂಡ ಸಂಶೋಧನೆ ಸಾಮಾಜಿಕ ವಿಜ್ಞಾನಗಳ ಸಂಶೋಧನೆಯಲ್ಲಿನ ಸಮಸ್ಯೆಗಳ ಸ್ವರೂಪವನ್ನು ಗುರುತಿಸಲು ಸಹಾಯಮಾಡಿತು. ಅದರ ಫಲಶ್ರುತಿಯೆ ಅಕಾಡೆಮಿ ಸ್ಥಾಪನೆಗೆ ನಾವು ಮಾಡುತ್ತಿರುವ ಪ್ರಯತ್ನ.

(ಈ) ಅಕಾಡೆಮಿಯ ಸ್ವರೂಪ:

ಕುವೆಂಪು ವಿಶ್ವವಿದ್ಯಾನಿಲಯದ initiativeನಿಂದಾಗಿ ಈ ಯೋಜನೆ ಪ್ರಾರಂಭವಾಗಿರುವುದರಿಂದ ಇದರ ಮುಖ್ಯ ಶಾಖೆ ಕುವೆಂಪು ವಿಶ್ವವಿದ್ಯಾನಿಲಯದಲ್ಲಿರುತ್ತದೆ. ಆದರೆ ಕರ್ನಾಟಕದ ಸಾಮಾಜಿಕ ವಿಜ್ಞಾನಗಳ ಬೋಧನೆ/ಸಂಶೋಧನೆಯಲ್ಲಿ ತೊಡಗಿರುವ ಎಲ್ಲ ವಿಶ್ವವಿದ್ಯಾನಿಲಯಗಳು ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಇದರ ಪಾಲುದಾರ ಸಂಸ್ಥೆಗಳಾಗಿವೆ. ಧನ ಸಹಾಯಕ್ಕಾಗಿ ಪ್ರಸ್ತುತ ಪ್ರಸ್ತಾವನೆಯನ್ನು ಮೂರು ಸಂಸ್ಥೆಗಳಿಗೆ ಸಲ್ಲಿಸಲು ಯೋಜಿಸಲಾಗಿದೆ. ಒಂದು ಫ್ಲೆಮಿಷ್ ಅಂತರ್ ವಿಶ್ವವಿದ್ಯಾನಿಲಯ ಸಂಸ್ಥೆ, ಎರಡು ಯುರೋಪಿಯನ್ ಆಯೋಗ, ಮೂರು ಫ್ಲೆಮಿಷ್ ಸರ್ಕಾರ. ಈ ಪ್ರಸ್ತಾವನೆಯನ್ನು ಸಲ್ಲಿಸಲು ಪೂರಕವಾಗಿ ಕರ್ನಾಟಕ ಸರ್ಕಾರ ಹಾಗೂ ಕುವೆಂಪು ವಿಶ್ವವಿದ್ಯಾನಿಲಯಗಳು ಅಕಾಡೆಮಿಯ ಸ್ಥಾಪನೆಗೆ ತಾತ್ವಿಕ ಒಪ್ಪಿಗೆ ನೀಡುವ ಅಗತ್ಯವಿತ್ತು. ಫ್ಲೆಮಿಷ್ ಅಂತರ್ ವಿಶ್ವವಿದ್ಯಾನಿಲಯ ಮಂಡಳಿಯು ಧನ ಸಹಾಯ ನೀಡುವುದಾದರೆ ಅಕಾಡೆಮಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುತ್ತೇವೆ ಎನ್ನುವ ಒಡಂಬಡಿಕೆಗೆ ಸಹಿ ಹಾಕುವ ಸಲು ವಾಗಿ ನಮ್ಮ ವಿಶ್ವವಿದ್ಯಾನಿಲಯದ ಕುಲಪತಿಗಳು, ಕುಲಸಚಿವರು ಹಾಗೂ ಉನ್ನತ ಶಿಕ್ಷಣ ಸಚಿವಾಲಯದ ಪ್ರಧಾನ ಕಾರ್ಯದ ರ್ಶಿಗಳು ಗೆಂಟ್ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ್ದರು. ಅದರ ಪರಿಣಾಮವಾಗಿಯೇ ಕರ್ನಾಟಕದ ಅಂತರ್ ವಿಶ್ವವಿದ್ಯಾನಿಲಯ ಮಂಡಳಿಯಲ್ಲಿ

ಈ ಪ್ರಸ್ತಾಪವನ್ನು ಮಂಡಿಸಿ ಅದರ ಒಪ್ಪಿಗೆಯನ್ನು ಪಡೆಯಲಾಯಿತು. ಆ ಸಮಯದಲ್ಲಿ ಕರ್ನಾಟಕದಲ್ಲಿ ಜೆ.ಡಿ.ಎಸ್ ಹಾಗೂ ಬಿ.ಜೆ.ಪಿ.ಯ ಸಮ್ಮಿಶ್ರ ಸರ್ಕಾರ. ಅಸ್ತಿತ್ವದಲ್ಲಿದ್ದು ಶ್ರೀ ಡಿ.ಹೆಚ್.ಶಂಕರ ಮೂರ್ತಿ ಯವರು ಶಿಕ್ಷಣ ಮಂತ್ರಿಗಳಾ ಗಿದ್ದರು. ಅಂತರ್ ವಿಶ್ವವಿ ದ್ಯಾನಿಲಯ ಮಂಡಳಿಯ ಸಭೆಯಲ್ಲಿ ಕೈಗೊಂಡ ತೀರ್ಮಾನವನ್ನು ಅವರು ಮಾಧ್ಯಮಗಳಿಗೆ ತಿಳಿಸಿದರು. ಡಾ.ಶ್ರೀಧರ್‌ಅವರು ಉದ್ದರಿಸಿದ 'ಹಿಂದೂ' ದಿನಪತ್ರಿಕೆಯ ವರದಿಯ ಹಿನ್ನೆಲೆ ಇದು. ಶ್ರೀ ಡಿ.ಹೆಚ್.ಶಂಕರಮೂರ್ತಿ ಯವರು ಅಕಾಡೆಮಿಯ ಬಗ್ಗೆ ವಿಶೇಷ ಆಸಕ್ತಿ ವಹಿಸುತ್ತಿ ರುವುದು ನಿಜ. ಇಂತಹ ಒಂದು ಅಂತಾರಾಷ್ಟ್ರೀಯ ಮಟ್ಟದ ಸಂಸ್ಥೆ ಶಿವಮೊಗ್ಗ ಜಿಲ್ಲೆಯ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪನೆಯಾಗುತ್ತಿರುವುದು ಇದಕ್ಕೆ ಮುಖ್ಯ ಕಾರಣವೆ ಹೊರತು ಮತ್ತೇನು ಅಲ್ಲ.

ನಂತರ ನಮ್ಮ ವಿಶ್ವವಿದ್ಯಾನಿಲಯದ ಕುಲಪತಿಗಳು ಕರ್ನಾಟಕದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳು ಹಾಗೂ ಕಲಾ ನಿಕಾಯದ ಡೀನರುಗಳ ಸಭೆಯನ್ನು ದಿನಾಂಕ೨೮.೦೧.೨೦೦೮ ರಂದು ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಿದ್ದರು. ಆ ಸಭೆಯಲ್ಲಿ ಪ್ರೊ.ಬಾಲಗಂಗಾಧರ ಅವರು ಈ ಅಕಾಡೆಮಿ ಸ್ಥಾಪನೆಯ ಅಗತ್ಯ ಹಾಗೂ ಉದ್ದೇಶಗಳನ್ನು ವಿವರಿಸಿದರು. ಸಭೆಯಲ್ಲಿ ಅಕಾಡೆಮಿಯನ್ನು ಸ್ಥಾಪಿಸುವ ಅತ್ಯಂತ ತುರ್ತು ಅಗತ್ಯವಿದೆ ಎನ್ನುವ ಸರ್ವಾನುಮತದ ನಿರ್ಣಯ ಕೈಗೊಳ್ಳಲಾಯಿತು.

ಸಮಾಜ ವಿಜ್ಞಾನಗಳ ಸಮಸ್ಯೆಯನ್ನು ಗುರುತಿಸುವ ಮೊದಲ ಪ್ರಯತ್ನವಾಗಿ ಇದೇ ವರ್ಷದ ಜನವರಿ ತಿಂಗಳಲ್ಲಿ ಕುವೆಂಪು ವಿಶ್ವವಿದ್ಯಾನಿಲಯವು ಗೆಂಟ್ ವಿಶ್ವ ವಿದ್ಯಾನಿಲಯದ ಸಹಯೋಗದೊಂದಿಗೆ ದೆಹಲಿಯಲ್ಲಿ 'Re-thinking Religion' ಕುರಿತು ಒಂದು ಅಂತರಾಷ್ಟ್ರೀಯ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಸುಮಾರು ಹದಿನೆಂಟು ದೇಶಗಳಿಂದ ಆಗಮಿಸಿದ ಸಮಾಜ ವಿಜ್ಞಾನಿಗಳು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಅದರಲ್ಲಿ ಮಂಡಿತವಾದ ಎಲ್ಲ ಉಪನ್ಯಾಸಗಳು http://www.youtube.com/cultuurwetenschap ಅಂತರ್ಜಾಲದಲ್ಲಿ ಲಬ್ಯವಿದೆ.

ಪ್ರೊ. ಬಾಲಗಂಗಾಧರ ಅವರು ಅಕಾಡೆಮಿಯ ಸ್ಥಾಪನೆಗೆ ಧನ ಸಹಾಯವನ್ನು ಕೋರಿ ಸಲ್ಲಿಸಿದ ಸುದೀರ್ಘ ಪ್ರಸ್ತಾವನೆಯನ್ನು ಬೆಲ್ಜಿಯಂನ ಫ್ಲೆಮಿಷ್ ಅಂತರ್ ವಿಶ್ವವಿದ್ಯಾನಿಲಯ ಮಂಡಳಿಯ ತಜ್ಞರ ಸಮಿತಿ ಯೆದುರು ಮೇ ತಿಂಗಳಲ್ಲಿ ಸಮರ್ಥಿಸಿಕೊಂಡಿರುತ್ತಾರೆ. FLIR (ಫ್ಲೆಮಿಷ್ ಅಂತರ್ ವಿಶ್ವವಿದ್ಯಾನಿಲಯ ಸಂಸ್ಥೆ) ಪ್ರತಿವರ್ಷ Own Initiative ಸ್ಕೀಂನಲ್ಲಿ ಇಂಥಹ ಪ್ರಸ್ತಾವನೆಗಳನ್ನು ಅಹ್ವಾನಿಸುತ್ತದೆ. ಆದರೆ ನಮಗೆ ಸಂಬಂಧಿಸಿದಂತೆ ಇದ್ದ ಒಂದು ತೊಡಕೆಂದರೆ ಭಾರತ ಆ ಸ್ಕೀಮಿನ ಅದ್ಯತೆಯ ಪಟ್ಟಿಯಲ್ಲಿಲ್ಲದೆ ಇರುವುದು. ಹಾಗಿದ್ದೂ ಇಂತಹ ಒಂದು ಪ್ರಸ್ತಾವನೆಯ ಬಗ್ಗೆ ಬಹಳ ಮೆಚ್ಚುಗೆ ವ್ಯಕ್ತಪಡಿಸಿದ ತಜ್ಞರ ಸಮಿತಿ ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ ಭಾರತ ಆದ್ಯತೆಯ ಪಟ್ಟಿಯಲ್ಲಿಲ್ಲದಿದ್ದರೂ ಅದನ್ನು ಪರಿಗಣಿಸುವ ಭರವಸೆ ನೀಡಿ ಕೆಲವು ನಿಬಂಧನೆಗಳನ್ನು ಹಾಕಿದೆ. ಅವುಗಳೆಂದರೆ:

FLIR ನ ಧನ ಸಹಾಯ ೧೦ ವರ್ಷಗಳಿಗೆ (ವರ್ಷಕ್ಕೆ ಸುಮಾರು ೪.೫ ಕೋಟಿ ರೂ.ಗಳು) ಮಾತ್ರ

ಕುವೆಂಪು ವಿಶ್ವವಿದ್ಯಾನಿಲಯ ಬೆಲ್ಜಿಯಂನ ಗೆಂಟ್ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಯುರೋಪಿಯನ್ ಆಯೋಗದ ಧನ ಸಹಾಯದೊಂದಿಗೆ ಏಷಿಯಾ-ಲಿಂಕ್ ಸಂಶೋಧನಾ ಪ್ರಾಜೆಕ್ಟ್‌ನ್ನು ೨೦೦೪ರಲ್ಲಿ ಪ್ರಾರಂಭಿಸಿತು. ಪಶ್ಚಿಮ ಹಾಗೂ ಏಷಿಯಾ ಸಂಸ್ಕೃತಿಗಳ ನಡುವೆ ಪ್ರಚಲಿತವಿರುವ ಸಿದ್ಧ ಮಾದರಿಗಳು ಏಷಿಯಾ ಲಿಂಕ್ ಪ್ರಾಜೆಕ್ಟ್‌ನ ಸಂಶೋಧನಾ ವಿಷಯ. ಈ ಸಹಯೋಗದ ಮುಂದುವರಿಕೆಯೆ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತಿ ಅಧ್ಯಯನ ಕೇಂದ್ರದ ಸ್ಥಾಪನೆ. ಈ ಕೇಂದ್ರದಲ್ಲಿ ನಾವು ಕೈಗೆತ್ತಿಕೊಂಡ ಸಂಶೋಧನೆ ಸಾಮಾಜಿಕ ವಿಜ್ಞಾನಗಳ ಸಂಶೋಧನೆಯಲ್ಲಿನ ಸಮಸ್ಯೆಗಳ ಸ್ವರೂಪವನ್ನು ಗುರುತಿಸಲು ಸಹಾಯ ಮಾಡಿತು. ಅದರ ಫಲಶ್ರುತಿಯೆ ಅಕಾಡೆಮಿ ಸ್ಥಾಪನೆಗೆ ನಾವು ಮಾಡುತ್ತಿರುವ ಪ್ರಯತ್ನ.

ಸೀಮಿತವಾಗಿರುವುದರಿಂದ ನಂತರ ಈ ಅಕಾಡೆಮಿಯ ಖರ್ಚು ವೆಚ್ಚಗಳನ್ನು ಭರಿಸುವುದಾಗಿ ಕರ್ನಾಟಕ ಸರ್ಕಾರ ಲಿಖಿತ ಒಪ್ಪಂದ ಮಾಡಿಕೊಳ್ಳಬೇಕು (ಈ ಪ್ರಸ್ತಾವನೆ ಸರ್ಕಾರದ ಮುಂದಿದೆ).

ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳು ಈ ಅಕಾಡಮಿಯ ಪಾಲುದಾರರಾಗುತ್ತೇವೆಂದು ಮತ್ತು ಸಾಮಾಜಿಕ ವಿಜ್ಞಾನಗಳ ಸಂಶೋಧನೆಯಲ್ಲಿ ಆಸಕ್ತಿ ಇರುವವರನ್ನು ಹೆಚ್ಚಿನ ಸಂಶೋಧನೆಗೆ ಅಕಾಡೆಮಿಗೆ ಸಂಬಳ ಸಹಿತವಾಗಿ ನಿಯೋಜಿಸುತ್ತೇವೆಂದು ಪ್ರತ್ಯೇಕ ಒಡಂಬಡಿಕೆ ಮಾಡಿಕೊಳ್ಳಬೇಕು.

ಎಲ್ಲಾ ವಿಶ್ವವಿದ್ಯಾನಿಲಯಗಳ ಸಾಮಾಜಿಕ ವಿಜ್ಞಾನ ಹಾಗೂ ಮಾನವಿಕ ವಿಷಯಗಳ ವಿಭಾಗಗಳು ಮುಂದಿನ ಐದು ವರ್ಷಗಳವರೆಗೆ ಭೋದನೆ ಹಾಗೂ ಸಂಶೋದನೆಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಯೋಜನೆಯನ್ನು ರೂಪಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಇದೆ ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳು ಪ್ರೊ. ಬಾಲಗಂಗಾಧರ ಅವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡಲಿದ್ದಾರೆ.

(ಉ) ಅಕಾಡೆಮಿಯು ಹಮ್ಮಿಕೊಳ್ಳಲು ಯೋಜಿಸಿರುವ ಸ್ಥೂಲ ನಕಾಶೆ ಹೀಗಿದೆ.

ಸಾಮಾಜಿಕ ವಿಜ್ಞಾನಗಳ ಪಠ್ಯಕ್ರಮವನ್ನು ಮೌಲೀಕರಿಸಿ ಸಮಕಾಲೀನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸವಾಲುಗಳಿಗೆ ಪೂರಕವಾಗಿ ಸ್ಪಂದಿಸುವಂತೆ ಪುನರ್ ರಚಿಸುವುದು.

ಪಠ್ಯದ ಪರಿಶೀಲನೆಗೆ ಹಿನ್ನಲೆಯಾಗಿ ೨೧ನೇ ಶತಮಾನಕ್ಕೆ ಅಗತ್ಯವಾಗಿರುವ ಶಿಕ್ಷಣದ ಸಮಗ್ರ ದೃಷ್ಟಿಕೋನವನ್ನು ರೂಪಿಸುವುದು.

ಸಾಮಾಜಿಕ ವಿಜ್ಞಾನಗಳ ವಿವಿಧ ಶಿಸ್ತುಗಳಲ್ಲಿ ಕೆಲಸ ಮಾಡುತ್ತಿರುವ ಪ್ರಖ್ಯಾತ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ತಜ್ಞರುಗಳನ್ನು ಒಳಗೊಂಡ ಸಮಿತಿ ಯನ್ನು ರಚಿಸಿ ಪಠ್ಯಕ್ರಮದ ಪರಿಶೀಲನೆ ನಡೆಸುವುದು.

ಸಾಮಾಜಿಕ ವಿಜ್ಞಾನ ಹಾಗೂ ಮಾನವಿಕ ಶಿಸ್ತುಗಳ ಪಠ್ಯಕ್ರಮವನ್ನು ವಿಶೇಷವಾಗಿ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಉಪಯೋಗವಾಗುವ ರೀತಿಯಲ್ಲಿ ರಚಿಸುವುದು.

.ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕವಾಗಿ ಮಹತ್ವವಾಗಿರುವ ವಿಷಯಗಳಲ್ಲಿ ವಿನೂತನವಾದ ಸಂಶೋಧನೆ ಕೈಗೊಳ್ಳುವವರಿಗೆ ಪ್ರೊತ್ಸಾಹ ನೀಡುವುದು.

.ಹೊಸ ಪಠ್ಯಕ್ರಮವನ್ನು ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಭೋಧಿಸಲು ಬೇಕಾದ ತರಬೇತಿಯನ್ನು ನೀಡುವುದು ಮತ್ತು ಕನ್ನಡದಲ್ಲಿ ಒಳ್ಳೆ ಗುಣಮಟ್ಟದ ಭೋಧನಾ ಸಾಮಾಗ್ರಿಗಳು ದೊರೆಯುವಂತೆ ಮಾಡುವುದು.

ಅಕಾಡೆಮಿಯ ಈ ಎಲ್ಲಾ ಕಾರ್ಯಕ್ರಮಗಳ ಸಂಪೂರ್ಣ ರೂಪುರೇಷೆಯನ್ನು ತಯಾರಿಸುವ ಕೆಲಸ ಕರ್ನಾಟಕದ ಎಲ್ಲ ವಿಶ್ವವಿದ್ಯಾನಿಲಯಗಳ ಸಾಮಾಜಿಕ ಹಾಗೂ ಮಾನವೀಕ ಶಿಸ್ತುಗಳಲ್ಲಿ ಭೋಧನೆ ಹಾಗೂ ಸಂಶೋಧನೆ ಮಾಡುತ್ತಿರುವ ತಜ್ಞರುಗಳ ಸಮಿತಿಗೆ ವಹಿಸಲಾಗುವುದು. ಅಕಾಡೆಮಿಯಲ್ಲಿ ಸಂಶೋಧನೆ ಮಾಡುವವರಿಗೆ ಇಂತಹುದೆ ಸಂಶೋಧನೆಯನ್ನು ಕೈಗೆತ್ತಿಕೊಳ್ಳಬೇಕೆಂಬ ನಿರ್ಬಂಧವಿಲ್ಲ. ಆದರೆ ಸಂಶೋಧನೆಯು ವೈಜ್ಞಾನಿಕವಾಗಿದ್ದು ಅಂತರಾಷ್ಟ್ರಿಯ ಮಟ್ಟದಲ್ಲಿ ಗುರುತಿಸಲ್ಪಡುವಂತಿರಬೇಕೆಂಬ ಆಶಯವಿದೆ.

ಕರ್ನಾಟಕದಲ್ಲಿ ವಿಶ್ವವಿದ್ಯಾನಿಲಯಗಳ ಒಕ್ಕೂಟದ ರೀತಿಯಲ್ಲೇ ಯೂರೋಪಿನ ಪ್ರಸಿದ್ಧ ವಿಶ್ವವಿದ್ಯಾನಿಲಯಗಳ ತಜ್ಞರುಗಳ ಒಕ್ಕೂಟವನ್ನು ಸಹ ರಚಿಸಲಾಗುವುದು. ಈಗಾಗಲೇ ಆ ಕಾರ್ಯ ಪ್ರಾರಂಭವಾಗಿದೆ. ಅಲ್ಲಿನ ತಜ್ಞರುಗಳು ಅಕಾಡೆಮಿಯಲ್ಲಿ ನಿರ್ಧಿಷ್ಠ ಅವಧಿಯವರೆಗೆ ಸಂಶೋಧನೆ/ತರಬೇತಿಯಲ್ಲಿ ಕಾರ್ಯನಿರ್ವಹಿಸಲು ಒಪ್ಪಿಗೆ ನೀಡಬೇಕಾಗಿರುತ್ತದೆ.

ಈ ಎಲ್ಲಾ ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಎರಡು ಹಂತದ ಟಾಸ್ಕ್ ಫೋರ್ಸ್‌ನ್ನು ರಚಿಸಲಾಗುತ್ತದೆ.

೧) ಕುವೆಂಪು ವಿಶ್ವವಿದ್ಯಾನಿಲಯದ ಟಾಸ್ಕ್ ಫೋರ್ಸ್

೨) ಎಲ್ಲಾ ವಿಶ್ವವಿದ್ಯಾನಿಲಯಗಳ ತಜ್ಞರು ಹಾಗೂ ಇತರ ಸಂಶೋಧಕರನ್ನೊಳಗೊಂಡ ರಾಜ್ಯ ಮಟ್ಟದ ಟಾಸ್ಕ್ ಫೋರ್ಸ್

ಅಕಾಡೆಮಿಯ ಕಾರ್ಯಕ್ರಮಗಳ ಉಸ್ತುವಾರಿ ಹಾಗೂ ಸಮಗ್ರ ರೂಪುರೇಷೆಯನ್ನು ರಚಿಸುವ ಕೆಲಸವನ್ನು ಟಾಸ್ಕ್ ಫೋರ್ಸ್‌ಗೆ ವಹಿಸಲಾಗುತ್ತದೆ.

ಸಾಮಾಜಿಕ ವಿಜ್ಞಾನಗಳ ಬಗ್ಗೆ ಕಳಕಳಿ ಇರುವವರಿಗೆ ಅಕಾಡೆಮಿಯ ಅವಶ್ಯಕತೆ ಇದೆ ಎಂದೆನಿಸುವುದಿಲ್ಲವೆ? ಈ ಅಕಾಡೆಮಿಯ ಸ್ಥಾಪನೆಯ ಹಿಂದೆ ಬೇರೆ ಹುನ್ನಾರ ಇದೆ ಎಂದು ಯಾರಿಗಾದರು ಅನಿಸುತ್ತದೆಯೆ? □

ಮಣ್ಣಿನ ಸಂಪನ್ಮೂಲ,

ಮಾನತೆ ಮತ್ತು ಮಾನವೀಯತೆಯ ಪ್ರತೀಕವಾಗಿರುವ ಕ್ರೈಸ್ತ ಧರ್ಮ ಕನ್ನಡ ಮಣ್ಣಿಗೆ ಕಾಲಿರಿಸಿ ೫೦೦ ವರ್ಷಗಳಿಗೂ ಮೇಲಾಯಿತು. ಆದರೆ ಶೋಷಿತ ಸಮುದಾಯಗಳನ್ನು ಶೋಷಣೆಯ ಸಂಕೋಲೆಗಳಿಂದ ವಿಮೋಚನೆಗೊಳಿಸಬೇಕಾಗಿದ್ದ ಕ್ರೈಸ್ತ ಧಾರ್ಮಿಕ ಮುಖಂಡರು, ಕ್ರೈಸ್ತ ಜನಾಂಗದಲ್ಲಿ ಬಹುಸಂಖ್ಯಾತರಾಗಿರುವ ದಲಿತ ಮತ್ತು ಹಿಂದುಳಿದ ಜಾತಿಗಳ ಜನರನ್ನು ಗುಲಾಮರನ್ನಾಗಿರಿಸಿಕೊಂಡಿರುವ ಚಾರಿತ್ರಿಕ ವ್ಯಂಗ್ಯವಾಗಿದೆ.

ಕ್ರಿಸ್ತನ ಸಮಾನತೆಯ ತತ್ವವನ್ನು ಅಂಗೀಕರಿಸಿ, ಈ ನಾಡಿನ ಅಸ್ಪೃಶ್ಯ ಮತ್ತಿತರ ತಳಸಮುದಾಯಗಳು ಹೊಸ ಬದುಕು ಮತ್ತು ಭರವಸೆಯನ್ನರಸಿ ಕ್ರೈಸ್ತರಾದರು. ಆದರೆ, ಆ ಭರವಸೆಯಿನ್ನೂ ಮರೀಚಿಕೆಯಾಗಿಯೇ ಉಳಿದಿದೆ. ಅವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನಗಳಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ. ದಕ್ಷಿಣ ಭಾರತದ ತಮಿಳುನಾಡು, ಆಂಧ್ರ ಪ್ರದೇಶ ಮತ್ತು ಕೇರಳ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಕ್ರೈಸ್ತರು ಎಲ್ಲಾ ರಂಗಗಳಲ್ಲೂ ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಶೋಚನೀಯ ಸ್ಥಿತಿಯಲ್ಲಿದ್ದಾರೆ. ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ತೀರಾ ಹಿಂದೆ ಬಿದ್ದಿದ್ದಾರೆ. ಇದಕ್ಕೆ ಕಾರಣ ಕೊಂಕಣಿ ಬಿಷಪ್‌ಗಳ ಹಿಡನ್ ಅಜೆಂಡಾ.

ಕರ್ನಾಟಕದ ಕರಾವಳಿ ಜಿಲ್ಲೆಗಳಿಗೆ ಸೇರಿದ ಕೊಂಕಣಿ ಮಾತನಾಡುವ ಗೌಡ ಸಾರಸ್ವತ ಬ್ರಾಹ್ಮಣ ಜಾತಿಯ ಕ್ಯಾಥೋಲಿಕ್ ಬಿಷಪ್‌ಗಳ ಹಿಡಿತ, ರಾಜ್ಯದ ದಲಿತ ಮತ್ತು ಹಿಂದುಳಿದ ಕ್ರೈಸ್ತ ಸಮುದಾಯಗಳ ಮೇಲೆ ಎಷ್ಟೊಂದು ಬಿಗಿಯಾಗಿದೆಯೆಂದರೆ, ರಾಜ್ಯದ ಒಟ್ಟು ೧೧ ಜನ ಬಿಷಪ್‌ಗಳಲ್ಲಿ ೯ ಮಂದಿ ಕೊಂಕಣಿ ಮೂಲದವರಾಗಿದ್ದಾರೆ. ಇನ್ನುಳಿದ ಇಬ್ಬರಲ್ಲಿ ಒಬ್ಬರು ಮಲೆಯಾಳಿ ಮೂಲದವರು, ಮತ್ತೊಬ್ಬರು ಮಾತ್ರ ರೆಡ್ಡಿ ಕ್ರೈಸ್ತ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

ಪುರೋಹಿತತ್ವ ವೈದಿಕರಿಗೆ, ಕೃಷಿ ಕೂಲಿ ಕೆಲಸ ಶೂದ್ರಾತಿಶೂದ್ರರಿಗೆ ಎಂಬ ಮನು ಕಟ್ಟಳೆಯ ಪ್ರಬಲ ಪ್ರತಿಪಾದಕರಾಗಿರುವ ಕೊಂಕಣಿ ಬಿಷಪ್‌ಗಳು,ಕೊಂಕಣಿಯೇತರರು ಬಿಷಪ್‌ಗಳಾಗದಂತೆ ವ್ಯವಸ್ಥಿತ ಷಡ್ಯಂತ್ರ ರೂಪಿಸಿಕೊಂಡು ಬಂದಿದ್ದಾರೆ. ಕರ್ನಾಟಕ ರೀಜನಲ್ ಬಿಷಪ್ಸ್ ಕಾನ್ಫರೆನ್ಸ್ (KRBC) ಎನ್ನುವ ವೇದಿಕೆಯು ಬಿಷಪ್ ಆಗಿ ನೇಮಕವಾಗುವ ಪ್ರತಿನಿಧಿಗಳ ಹೆಸರನ್ನು ಅಂತಿಮಗೊಳಿಸಿ, ಅನುಮೋದನೆಗಾಗಿ ವ್ಯಾಟಿಕನ್‌ಗೆ ಕಳುಹಿಸಿಕೊಡುವ ಸಂಪ್ರದಾಯವಿರುವುದರಿಂದ, ಈಗಾಗಲೇ KRBCಯಲ್ಲಿ ಮೆಜಾರಿಟಿ ಸಂಖ್ಯೆಯಲ್ಲಿರುವ ಕೊಂಕಣಿ ಕ್ರೈಸ್ತ ಬಿಷಪ್‌ಗಳು ತಮ್ಮ ಜಾತಿಗೆ ಸೇರಿದ ಪಾದ್ರಿಗಳ ಹೆಸರನ್ನೇ ಕಳುಸಿಕೊಡುತ್ತಾರೆ. ಕೊಂಕಣಿ ಬಿಷಪ್‌ಗಳ ಏಕಾಧಿಪತ್ಯ ಬಲವಾಗಿ ತಳವೂರಿರುವುದರಿಂದ ಇತರೆ ಸಮುದಾಯಗಳ ಪಾದ್ರಿಗಳು ಬಿಷಪ್ ಸ್ಥಾನದಿಂದ ವಂಚಿತರಾಗುತ್ತಿದ್ದಾರೆ.

ಅಧಿಕಾರವನ್ನು ಕಳೆದುಕೊಂಡ ಜನಾಂಗ, ತನ್ನ ಸಂಸ್ಕೃತಿ ಮತ್ತು ಬದುಕನ್ನೇ ಕಳೆದುಕೊಳ್ಳುತ್ತದೆ. ಕೊಂಕಣಿ ಬಿಷಪ್‌ಗಳು ನಿರಂತರವಾಗಿ ಅಧಿಕಾರದಲ್ಲಿರುವುದರಿಂದ ಕೊಂಕಣಿ ಕ್ರೈಸ್ತ ಜನಾಂಗವಿಂದು ಕ್ರೈಸ್ತರಲ್ಲೇ ಮುಂದುವರಿದ ಜನಾಂಗವಾಗಿದೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಬಲಿಷ್ಠಗೊಂಡಿದೆ. ರಾಜಕೀಯವಾಗಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ತನ್ನದೇ ಆದ ರಾಜಕೀಯ ಅಸ್ತಿತ್ವವನ್ನು ಹೊಂದಿದೆ.

ಬಿಷಪ್‌ಗಳು ತಮಗಿರುವ ಅಧಿಕಾರ ಮತ್ತು ಪ್ರಭಾವದಿಂದ ಕ್ರೈಸ್ತ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ಆರೋಗ್ಯ ಕೇಂದ್ರಗಳಲ್ಲಿನ ಆಯಕಟ್ಟಿನ ಜಾಗಗಳಿಗೆ ತಮ್ಮವರನ್ನು ಪ್ರತಿಷ್ಠಾಪಿಸಿ, ಅಲ್ಲಿನ ಸೇವೆ ಮತ್ತು ಸಂಪನ್ಮೂಲಗಳು ತಮ್ಮ ಸಮುದಾಯಕ್ಕೆ ಹರಿದು ಹೋಗುವಂತೆ ಮಾಡುತ್ತಾರೆ. ಆದುದರಿಂದ, ಬಿಷಪ್ ಎನ್ನುವುದು ಕೇವಲ ಧಾರ್ಮಿಕ ಅಂತಸ್ತಿನ ಸ್ಥಾನ ಮಾತ್ರವಲ್ಲ. ಅದೊಂದು Power centre ಕೂಡ ಆಗಿದೆ. ಈ Power centreನಿಂದ ಸತತವಾಗಿ ವಂಚನೆಗೊಳಗಾಗಿರುವುದರಿಂದಲೇ ರಾಜ್ಯದ ದಲಿತ-ಹಿಂದುಳಿದ ಕ್ರೈಸ್ತರು ತಮ್ಮ ದನಿಯನ್ನೇ ಕಳೆದುಕೊಂಡು ಮೂಕರಂತಾಗಿದ್ದಾರೆ.

ವಿಶೇಷ ಪತ್ರ-ಒಂದು

ಕ್ರಿಸ್ತನ ಸಮಾನತೆಯ ತತ್ವವನ್ನು ಅಂಗೀಕರಿಸಿ, ಈ ನಾಡಿನ ಅಸ್ಪೃಶ್ಯ ಮತ್ತಿತರ ತಳಸಮುದಾಯ ಗಳು ಹೊಸ ಬದುಕು ಮತ್ತು ಭರವಸೆಯನ್ನರಸಿ ಕ್ರೈಸ್ತರಾದರು. ಆದರೆ, ಆ ಭರವಸೆಯಿನ್ನೂ ಮರೀ ಚಿಕೆಯಾಗಿಯೇ ಉಳಿ ದಿದೆ. ಅವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನ ಗಳಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ. ದಕ್ಷಿಣ ಭಾರತದ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟ ಕದ ಕ್ರೈಸ್ತರು ಎಲ್ಲಾ ರಂಗಗಳಲ್ಲೂ ತಮ್ಮ ಐಡೆಂಟಿಟಿ ಮತ್ತು ಅಸ್ತಿತ್ವವನ್ನು ಕಳೆದು ಕೊಂಡು ಶೋಚನೀಯ ಸ್ಥಿತಿಯಲ್ಲಿದ್ದಾರೆ. ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ತೀರಾ ಹಿಂದೆ ಬಿದ್ದಿದ್ದಾರೆ. ಈ ಹಿಂದುಳಿದಿರುವಿಕೆಗೆ ಮೂಲ ಕಾರಣ ಕೊಂಕಣಿ ಬಿಷಪ್‌ಗಳ ಹಿಡನ್ ಅಜೆಂಡಾ ಮತ್ತು ಪಿತೂರಿ.

ಭಾರತದ ಧರ್ಮಾಧ್ಯಕ್ಷರ ಸಮ್ಮೇಳನ (Catholic Bishopis Conference of India) ರಾಷ್ಟ್ರದ ದಲಿತ, ಆದಿವಾಸಿ ಮತ್ತು ಹಿಂದುಳಿದ ಕ್ರೈಸ್ತರ ಸಮಗ್ರ ಅಧ್ಯಯನ ಮತ್ತು ಅಭಿವೃದ್ಧಿಗಾಗಿ -CVCI-SC/ST/IBC- Commission ಎನ್ನುವ ವಿಭಾಗವನ್ನು ಆರಂಭಿಸಿತು. ೧೯೮೮ರಲ್ಲಿ ಅಸ್ತಿತ್ವಕ್ಕೆ ಬಂದ ಈ ಕಮೀಷನ್ ಅಸ್ತಿತ್ವಕ್ಕೆ ಬರದ ದಕ್ಷಿಣ ಭಾರತದ ಅದು ಕರ್ನಾಟಕವೆಂದು ಬಿಡಿಸಿ ಹೇಳಬೇಕಾಗಿಲ್ಲ! ರಾಜ್ಯದಲ್ಲಿ ದಲಿತ-ಹಿಂದುಳಿದ ಕ್ರೈಸ್ತರಿಲ್ಲ, ಇಲ್ಲಿನ ಕ್ರೈಸ್ತರಲ್ಲಿ ಯಾವುದೇ ಭೇದಭಾವವಿಲ್ಲ. ಈ ಕಾರಣದಿಂದ ಯಾವುದೇ ವಿಶೇಷ ಕಮೀಷನ್‌ನ ಅಗತ್ಯ ಕರ್ನಾಟಕಕ್ಕಿಲ್ಲ. ಎನ್ನುವುದು ಕೊಂಕಣಿ ಧರ್ಮಾಧ್ಯಕ್ಷರ (ಬಿಷಪ್‌ಗಳ) ಸಮಜಾಯಿಸಿಯಾಗಿವೆ.

ಮಾನವ ಹಕ್ಕುಗಳ ಬಗ್ಗೆ, ಸಾಮಾಜಿಕ ನ್ಯಾಯದ ಬಗ್ಗೆ ಗಂಟೆಗಟ್ಟಲೆ ಭಾಷಣ ಮಾಡುವ ಟನ್‌ಗಟ್ಟಲೆ ಪ್ರಚಾರಗಿಟ್ಟಿಸುವ ಈ ಮನುವಾದಿ ಬಿಷಪ್‌ಗಳು ಸ್ವತಃ ತಾವೇ ಮಾನವಹಕ್ಕುಗಳನ್ನು ಉಲ್ಲಂಘಿಸುವವರಾಗಿದ್ದಾರೆ. ಮೆರಿಟ್‌ಗೆ ಆದ್ಯತೆ ಕೊಡುವ ನೆಪದಲ್ಲಿ ದಲಿತ-ಹಿಂದುಳಿದ ಸಮುದಾಯಗಳ ಮಕ್ಕಳಿಗೆ ವಿದ್ಯ-ಉದ್ಯೋಗವನ್ನು ನಿರಾಕರಿಸಿ, ಸಾಮಾಜಿಕ ನ್ಯಾಯದ ಗೋರಿ ಕಟ್ಟುವ ಮೀಸಲಾತಿ ವಿರೋಧಿಗಳಾಗಿದ್ದಾರೆ. ದಲಿತ ಕ್ರೈಸ್ತರು ಪರಿಶಿಷ್ಟ ಜಾತಿಯ ಮೀಸಲಾತಿ ಹಾಗೂ ಸಂವಿಧಾನಾತ್ಮಕ ರಕ್ಷಣೆಗಾಗಿ ಸರ್ಕಾರದ ವಿರುದ್ಧ ಬಡಿದಾಡುತ್ತಿದ್ದರೂ ಬೆಂಬಲ ಸೂಚಿಸದ ಕಲ್ಲೆದೆಯವರಾಗಿದ್ದಾರೆ.

ಯಾವುದೇ ಸಣ್ಣಪುಟ್ಟ ಕೆಲಸಕ್ಕೂ ದಮನಿತ ಸಮುದಾಯಗಳ ಕ್ರೈಸ್ತರು ಬಿಷಪ್‌ಗಳೊಂದಿಗೆ ಹಾಗೂ ಚರ್ಚ್ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಹೋರಾಡಬೇಕಾದ ಪರಿಸ್ಥಿತಿಯಿದೆ. ಇತ್ತೀಚೆಗೆ ತೆರವಾಗಿದ್ದ ಬಳ್ಳಾರಿ ಧರ್ಮಸಭೆಗೆ (Dcoces) ಕನ್ನಡ ಮೂಲದವರೊಬ್ಬರನ್ನು ಬಿಷಪ್ ಆಗಿ ನೇಮಿಸುವಂತೆ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ ಹಾಗೂ ಕನ್ನಡ ಕ್ರೈಸ್ತ ಧರ್ಮಗುರುಗಳು KRBC ಮುಖಂಡರಿಗೆ ಹಲವಾರು ಸಲ ಮನವಿ ಸಲ್ಲಿಸಿದ್ದವು. ಸಾಮಾಜಿಕ ನ್ಯಾಯದ ದೃಷ್ಟಿಯಿಂದ ದಲಿತ ಕ್ರೈಸ್ತ ಸಮುದಾಯಕ್ಕೆ ಬಳ್ಳಾರಿ ಅಥವಾ ಇನ್ಯಾವುದೇ ಧರ್ಮಕ್ಷೇತ್ರಕ್ಕೆ ದಲಿತ ಪಾದ್ರಿಯೊಬ್ಬರನ್ನು ಬಿಷಪ್ ಆಗಿ ನೇಮಿಸುವಂತೆ ಕರ್ನಾಟಕ ದಲಿತ ಕ್ರೈಸ್ತ ಒಕ್ಕೂಟ ಮನವಿ ಮಾಡಿತ್ತು. ಈ ಮನವಿಗೆ ಕಿಂಚತ್ತೂ ಬೆಲೆ ಕೊಡದೆ ಕೊಂಕಣಿ ಮೂಲದವರನ್ನು ಧರ್ಮಾಧ್ಯಕ್ಷರನ್ನಾಗಿ ಹೇರುವುದರ ಮೂಲಕ ವಂಚಿತ ಸಮುದಾಯಗಳ ಸಹನೆಯನ್ನು ಕೆಣಕಿದೆ. ಕ್ರಿಸ್ತನ ಮೌಲ್ಯಗಳಿಗೆ ಮೊಳೆ ಹೊಡೆದಿದೆ.

ದಲಿತ-ಹಿಂದುಳಿದ ಸಮುದಾಯಗಳ ಅವಕಾಶ ವಂಚಿತ ಕ್ರೈಸ್ತರು ತಮ್ಮ ಆಂತರಿಕ ಭಿನ್ನಾಭಿಪ್ರಾಯ ಬದಿಗಿರಿಸಿ, ಇತರೆ ಜನಪರ ಸಂಘಟನೆಗಳ ಬೆಂಬಲದೊಂದಿಗೆ ಹೋರಾಟ ಮಾಡುವುದರಿಂದ ಮಾತ್ರ ಕೊಂಕಣಿ ಧರ್ಮಾಧ್ಯಕ್ಷರ ಕಪಿಮುಷ್ಠಿಯಿಂದ ವಿಮೋಚನೆಗೊಳ್ಳಲು ಸಾಧ್ಯ.

ವೈ ಮರಿಸ್ವಾಮಿ

ಕೊಂಕಣಿ ಕ್ರೈಸ್ತ ಬಿಷಪ್‌ಗಳ

ಕಪಿಮುಷ್ಟಿಯಲ್ಲಿ ಶೋಷಿತ ಕ್ರೈಸ್ತರು

ತಾರಕಕ್ಕೇರಿದೆ ಬಲಪಂಥೀಯ ರಾಜಕಾರಣ

ತಾನೇ ಪ್ರಭುತ್ವವಾಗುತ್ತಿರುವ ಧರ್ಮ

ಮಾನ್ಯ ಸಂಪಾದಕರೇ,

ಇವತ್ತು ಇಂಡಿಯಾದಲ್ಲಿ ಬಲಪಂಥೀಯರ ರಾಜಕಾರಣ ತಾರಕಕ್ಕೇರಿದೆ. ಕೋಮುವಾದವನ್ನು ಬಳಸಿಕೊಂಡು ಪ್ರಭುತ್ವದ ಗದ್ದುಗೆ ಏರಲು ಹವಣಿಸುತ್ತಿರುವ ಸಂಘಪರಿವಾರದ ಉದ್ದೇಶ–ಹುನ್ನಾರಗಳನ್ನು ಅರ್ಥಮಾಡಿಕೊಳ್ಳಲು 'ಧರ್ಮ ಮತ್ತು ಪ್ರಭುತ್ವ'ಗಳ ನಡುವಿನ ಪೂರಕ ಸಂಬಂಧವನ್ನು, ಅದರ ಪರಿಣಾಮಗಳನ್ನು ವಿಶ್ಲೇಷಿಸುವುದು ಅಗತ್ಯವೆಂದು ನಾನು ನಂಬಿದ್ದೇನೆ.

ಧರ್ಮ ಮತ್ತು ಪ್ರಭುತ್ವಗಳು ಪರಸ್ಪರ ಪೂರಕವಾಗಿ ಕೆಲಸ ಮಾಡುತ್ತಾ ಬಂದಿರುವುದನ್ನು ನಾವು ಇತಿಹಾಸದುದ್ದಕ್ಕೂ ಕಾಣಬಹುದಾಗಿದೆ. ಯುರೋಪಿನ ಕ್ರಿಶ್ಚಿಯಾನಿಟಿ ಮತ್ತು ಇಸ್ಲಾಂ ಧರ್ಮಗಳು ಅಲ್ಲಿನ ಸ್ಥಳೀಯ ಪ್ರಭುತ್ವಗಳ ಮೇಲೆ ನೂರಾರು ವರ್ಷಗಳ ಕಾಲ ಹಿಡಿತ ಸಾಧಿಸಿದ್ದವು. ಪ್ರಪಂಚದ ಮಟ್ಟಿಗೆ ಇದು ಹಳೆಯದೆನಿಸಿದರೂ, ಸ್ವಾತಂತ್ರ್ಯ ನಂತರದ ಆಧುನಿಕ ಇಂಡಿಯಾದ ಈ ಪೀಳಿಗೆಗೆ ಧರ್ಮವೊಂದು ಪ್ರಭುತ್ವದ ಮೇಲೆ ಹಿಡಿತ ಸಾಧಿಸಲು ಹೊರಟ ರೀತಿ ಅಥವಾ ತಾನೇ ಪ್ರಭುತ್ವವಾಗುವ ಅದರ ಹವಣಿಕೆ ಮಾತ್ರ ಹೊಸದಾಗಿದೆ.

ಧರ್ಮವೊಂದು ಪ್ರಭುತ್ವದ ಮೇಲೆ ಹಿಡಿತ ಸಾಧಿಸಿ ತನ್ಮೂಲಕ ತನ್ನ ಪಟ್ಟಭದ್ರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತದೆ. ಪ್ರಭುತ್ವವು ಧರ್ಮದ ಗುಲಾಮನಾಗಿ ತನ್ನೆಲ್ಲ ಹುಳುಕುಗಳನ್ನು ಮುಚ್ಚಿಟ್ಟುಕೊಳ್ಳಲು ಪ್ರಯತ್ನಿಸುತ್ತದೆ. ಇದು ಧರ್ಮ ಮತ್ತು ಪ್ರಭುತ್ವಗಳ ಪರಸ್ಪರರ ಪೂರಕ ನೀತಿ. ಧರ್ಮವೊಂದು ಪ್ರಭುತ್ವದ ಮೇಲೆ ಹಿಡಿತ ಸಾಧಿಸುವುದೆಂದರೆ ಇಡೀ ಜನಸಮುದಾಯದ ಜೀವನದ ಮೇಲೆ ನಿಯಂತ್ರಣ ಸಾಧಿಸುವುದು ಎಂದಾಗುತ್ತದೆ. ಪ್ರಭುತ್ವವನ್ನು ನಿಯಂತ್ರಿಸುವ ಧರ್ಮ ಯಾವತ್ತೂ ಕ್ರಿಯಾಶೀಲತೆಯ ವಿರುದ್ಧವಾಗಿರುತ್ತದೆ. ತನ್ನನ್ನು ವಿರೋಧಿಸುವ, ತನ್ನ ಆಚರಣೆಗಳನ್ನು ಅನುಮಾನಿಸುವ ತನ್ನ ವಿಶ್ವಾಸಾರ್ಹತೆಯನ್ನು ವಿಮರ್ಶಿಸುವ ಜನತೆಯ ಹಕ್ಕುಗಳನ್ನು ಅದು ನಿರಾಕರಿಸುತ್ತದೆ. ಧರ್ಮವನ್ನು ವೈಚಾರಿಕ ನೆಲೆಗಟ್ಟಿನಲ್ಲಿ ವಿಶ್ಲೇಷಣೆಗೊಳಪಡಿಸುವ ಪ್ರತಿಯೊಬ್ಬನನ್ನೂ ಪ್ರಭುತ್ವದ ವಿರುದ್ಧ ಸೆಡ್ಡು ಹೊಡೆದು ನಿಂತ ವಿದ್ರೋಹಿಯಂತೆ ಚಿತ್ರಿಸುತ್ತದೆ. ಪ್ರಭುತ್ವದ ಅಧಿಕಾರ ಬಲವನ್ನು ಬಳಸಿ ಬಂಡಾಯದ ಧ್ವನಿಗಳನ್ನು ಹತ್ತಿಕ್ಕುತ್ತದೆ.

ಇದಕ್ಕೆ ತಾಜಾ ಉದಾಹರಣೆಗಳನ್ನು ಹೀಗೆ ಹೇಳಬಹುದು: ಬಾಬ್ರಿ ಮಸೀದಿ ವಿವಾದದಲ್ಲಿ ಮತ್ತು ಬಾಬಾಬುಡನಗಿರಿ ವಿವಾದದಲ್ಲಿ ಹಿಂದೂ ಮೂಲಭೂತವಾದಿಗಳನ್ನು ವಸ್ತುನಿಷ್ಠವಾಗಿ ಟೀಕಿಸಿದ ಪ್ರಗತಿಪರರಿಗೆ 'ದೇಶದ್ರೋಹಿಗಳು' ಎಂಬ ಹಣೆಪಟ್ಟಿ ಕಟ್ಟಲಾಯಿತು. ಕೋಮುವಾದಿಗಳ 'ರಹಸ್ಯ ಕಾರ್ಯಸೂಚಿ'ಯನ್ನು ಬಯಲಿಗೆಳೆಯುತ್ತಾ ಬಂದ 'ಕೋಮು ಸೌಹಾರ್ದ ವೇದಿಕೆ'ಯ ಗೆಳೆಯರನ್ನು ನಕ್ಸಲರ ಬೆಂಬಲಿಗರೆಂದು ಆರೋಪಿಸಿ ಅವರ ಮೇಲೆ ಅನೇಕ ಸುಳ್ಳು ಮೊಕದ್ದಮೆಗಳನ್ನು ಹೂಡಲಾಯಿತು. ಬಲಪಂಥೀಯರ ಬಗ್ಗೆ ಸಹಾನುಭೂತಿ ಹೊಂದಿದ ಮೇಲ್ವರ್ಗಗಳ ಹಿಡಿತದಲ್ಲಿರುವ ಮಾಧ್ಯಮಗಳ ಮೂಲಕ ಈ ನಾಡಿನ ಪ್ರಗತಿಪರ ಬರಹಗಾರರನ್ನು, ಜನಪರ ಹೋರಾಟಗಾರರನ್ನು ಖಳನಾಯಕರಂತೆ ತೋರಿಸಿ ಸಾರ್ವಜನಿಕವಾಗಿ ಅವಹೇಳನ ಮಾಡಲಾಯಿತು.

ಇಲ್ಲಿ ಇನ್ನೂ ಒಂದು ಅಪಾಯವಿದೆ: ಪ್ರಭುತ್ವದ ಮೇಲೆ ಹಿಡಿತ ಹೊಂದಲು ಅಥವಾ ತಾನೇ ಪ್ರಭುತ್ವವಾಗಿ ಬಿಡುವ ಹಾದಿಯಲ್ಲಿರುವ ಬಹುಸಂಖ್ಯಾತರ ಬಲಿಷ್ಠ ಧರ್ಮವೊಂದಕ್ಕೆ ಉಳಿದ ಧರ್ಮಗಳು ತೊಡರು ಬಳ್ಳಿಗಳಾಗುತ್ತವೆ. ಸಮಾಜದಲ್ಲಿ ಏಕರೂಪದ ಒಂದೇ ಧರ್ಮವಿದ್ದರೆ ಮಾತ್ರ ಅದು ಪ್ರಭುತ್ವವಾಗುವ ಹಾದಿ ಸುಗಮವಾಗಿರುತ್ತದೆ. ಆದ್ದರಿಂದ ಪ್ರಭುತ್ವದ ಮೇಲೆ ಹಿಡಿತ ಸಾಧಿಸಲು ಹೊರಟ ಬಹುಸಂಖ್ಯಾತರ ಧರ್ಮವೊಂದು ಅನ್ಯ–ಅಲ್ಪಸಂಖ್ಯಾತ ಧರ್ಮಗಳ ಬಗ್ಗೆ ಅಸಹನೆ ಹೊಂದಿರುತ್ತದೆ. ಹೀಗಾಗಿ ಅದು ದುರ್ಬಲವಾದ, ಅಲ್ಪಸಂಖ್ಯಾತ ಧರ್ಮಗಳನ್ನು ನಾಶಪಡಿಸುವ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತದೆ. ಬಹುಸಂಖ್ಯಾತರ ಧರ್ಮವೊಂದರ ಆಕ್ರಮಣಶೀಲತೆಗೆ ಕರಗಿ ಬಿಡುವ ಇತರೇ ಧರ್ಮಗಳು ಕ್ರಮೇಣ ಕಣ್ಮರೆಯಾಗುತ್ತಾ ಹೋಗುತ್ತವೆ. ಹಿಂದೂಧರ್ಮದ ಇಂತಹ ಆಕ್ರಮಣಕಾರಿ ನಡುವಳಿಕೆಯಿಂದಲೇ 'ಬೌದ್ಧ' ಧರ್ಮವು ತಾನು ಹುಟ್ಟಿದ ನೆಲದಲ್ಲಿಯೇ ಪರಕೀಯವಾಗಿ ವಿದೇಶದಲ್ಲಿ ತನ್ನನ್ನು ತಾನು ಜೀವಂತವಾಗಿರಿಸಿಕೊಳ್ಳುವ ಹಾಗೆ ಆದದ್ದು.

ಅದೇ ರೀತಿ ಪ್ರಭುತ್ವವಾಗಿ ಬಿಡುವ ಧರ್ಮವು ತಾನೇ ಒಂದು ಸಂಸ್ಕೃತಿಯೆಂದು ಘೋಷಿಸಿಕೊಳ್ಳುತ್ತದೆ. ಹಾಗೂ ಆ ನೆಲದ ಉಳಿದೆಲ್ಲ ಸಂಸ್ಕೃತಿ–ಉಪಸಂಸ್ಕೃತಿಗಳನ್ನು ನಾಶ ಮಾಡುತ್ತಾ ಹೋಗುತ್ತದೆ. ಇಂತಹ ಸನ್ನಿವೇಶದಲ್ಲಿ ಒಂದಾಗಿ ಬಿಡುವ ಧರ್ಮ ಮತ್ತು ಪ್ರಭುತ್ವ–'ಧರ್ಮ ಮತ್ತು ರಾಷ್ಟ್ರೀಯತೆ' ಹಾಗೂ 'ಧರ್ಮ ಮತ್ತು ಸಂಸ್ಕೃತಿ' ಒಂದೇ ಎಂದು ಸಾಧಿಸಿ ನಮ್ಮನ್ನು ನಂಬಿಸತೊಡಗುತ್ತವೆ. ಇದಕ್ಕೆ ಉದಾಹರಣೆಯೆಂದರೆ ಸಂಘಪರಿವಾರವು ಹಿಂದುತ್ವ ಮತ್ತು ಭಾರತೀಯತೆ ಒಂದೇ ಎಂಬ ವಾದವನ್ನು ನಮ್ಮ ಮುಂದಿಟ್ಟಿರುವುದು. ಭಾರತೀಯ ಸಂಸ್ಕೃತಿಯೆಂದರೆ ಅದು ಹಿಂದೂ ಸಂಸ್ಕೃತಿ ಮಾತ್ರ ಎಂಬ ವಿತಂಡವಾದವನ್ನದು ಮಾಡುತ್ತಿದೆ. ಹೀಗೆ ಬಲಪಂಥೀಯರು ಭಾರತೀಯರೆಲ್ಲರೂಹಿಂದೂಗಳಾಗಿರಬೇಕು ಮತ್ತು ಹಿಂದೂಗಳಾದವರು ಮಾತ್ರ ಭಾರತೀಯರಾಗಿರಬಲ್ಲರೆಂಬ ಹೊಸ ಸೂತ್ರದ ಮಂತ್ರಜಪಿಸತೊಡಗಿದ್ದಾರೆ.

ಆದರೆ ಭಾರತದಂತಹ ವಿಶಾಲ ರಾಷ್ಟ್ರದಲ್ಲಿ ಅನೇಕ ಸಂಸ್ಕೃತಿ–ಉಪ ಸಂಸ್ಕೃತಿಗಳು ಜೀವಂತವಾಗಿವೆ. ಇಂತಹ ಜೀವನ್ಮುಖಿ ಸಂಸ್ಕೃತಿಗಳನ್ನು ನಾಶಮಾಡಿ ವೈದಿಕಶಾಹಿ ಆಚರಣೆಗಳನ್ನೇ ಹಿಂದೂ ಸಂಸ್ಕೃತಿ ಎನ್ನುತ್ತಾ, ಇದೇ ಸಮಸ್ತ ಭಾರತೀಯರ ಸಂಸ್ಕೃತಿ ಎನ್ನುತ್ತಾ ನಮ್ಮನ್ನು ನಂಬಿಸಲು ಪ್ರಯತ್ನಿಸಲಾಗುತ್ತಿದೆ. ಹೀಗೆ ಹಿಂದೂ ಮೂಲಭೂತವಾದಿಗಳು ತಾವೇ ಸೃಷ್ಟಿಸಿದ ಬಿ.ಜೆ.ಪಿ. ಎಂಬ ಪಕ್ಷದ ಮೂಲಕ ಹಿಂದುತ್ವದ ಝುಂಡಾ–ಅಜೆಂಡಾವನ್ನು ಹಿಡಿದುಕೊಂಡು ದೆಹಲಿಯ ಅಧಿಕಾರ ಗದ್ದುಗೆಯನ್ನು ಹಿಡಿಯಲು ಪ್ರಯತ್ನಿಸುತ್ತಿದ್ದಾರೆ.

ಇನ್ನು ಧರ್ಮವೊಂದರ ನಿಯಂತ್ರಣಕ್ಕೆ ಒಳಪಟ್ಟು ಅದರ ವಿನಮ್ರ ಸೇವಕನಾಗಿ ಬಿಡುವ ಪ್ರಭುತ್ವವೆಂದೂ ಜಾತ್ಯಾತೀತವಾಗಿ ಉಳಿಯಲು ಸಾಧ್ಯವಿಲ್ಲ. ಮತ್ತು ಅಲ್ಲಿ ಅಲ್ಪಸಂಖ್ಯಾತರಿಗೆ, ಬಹುಮತೀಯರೊಳಗಿನ ಭಿನ್ನಮತೀಯರಿಗೆ ಯಾವ ಸ್ವಾತಂತ್ರ್ಯವೂ ಇರುವದಿಲ್ಲ. ಈ ದಿಸೆಯಲ್ಲಿಯೇ ಅದು ಮಠಮಾನ್ಯಗಳಿಗೆ ದತ್ತಿಯನ್ನು ನೀಡುತ್ತಾ, ಧಾರ್ಮಿಕ ಸಂಸ್ಥೆಗಳನ್ನು ಓಲೈಸತೊಡಗುತ್ತದೆ. ಮಠವೊಂದರ ಆಶ್ರಯದಲ್ಲಿ ನಡೆದ ಗೋರಕ್ಷಣಾ ಸಮ್ಮೇಳನಕ್ಕೆ ಸರಕಾರ ಕೋಟಿಗಟ್ಟಲೆ ಹಣವನ್ನು ದೇಣಿಗೆಯಾಗಿ ನೀಡಿದ್ದು ಧರ್ಮ ಮತ್ತು ಪ್ರಭುತ್ವಗಳ ದುರುದ್ದೇಶದಿಂದ.

ಹೀಗಾಗಿ ಧರ್ಮವೊಂದು ಪ್ರಭುತ್ವದ ಮೇಲೆ ಹಿಡಿತ ಸಾಧಿಸಿದರೆ ಮತ್ತು ಪ್ರಭುತ್ವವೊಂದು ಧರ್ಮವೊಂದರ ಅಡಿಯಾಳಾದಾಗ ಆಗಬಹುದಾದ ಅಪಾಯಗಳನ್ನು ಮನಗಂಡು, ನಾವಿಂದು ಧರ್ಮವನ್ನು ರಾಜಕೀಯದಿಂದ ದೂರವಿಟ್ಟು ಜೀವಪರ ರಾಜಕಾರಣ ಮಾಡಬೇಕಿದೆ. ಈ ದಿಸೆಯಲ್ಲಿ ನಾವು ಎಲ್ಲಾ ಧರ್ಮಗಳ ಮೂಲಭೂತವಾದಿಗಳ ಬಗ್ಗೆ ಸಮಾನ ಎಚ್ಚರ ವಹಿಸುವುದು ಅವಶ್ಯಕವಾಗಿದೆ.

ವಿಶೇಷ ಪತ್ರ–ಎರಡು

ಧರ್ಮವು ಪ್ರಭುತ್ವದ ಮೇಲೆ ಹಿಡಿತ ಸಾಧಿಸಿ ತನ್ಮೂಲಕ ತನ್ನ ಪಟ್ಟಭದ್ರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತದೆ. ಪ್ರಭುತ್ವವು ಧರ್ಮದ ಗುಲಾಮನಾಗಿ ತನ್ನೆಲ್ಲ ಹುಳುಕುಗಳನ್ನು ಮುಚ್ಚಿಟ್ಟುಕೊಳ್ಳಲು ಪ್ರಯತ್ನಿಸುತ್ತದೆ. ಇದು ಧರ್ಮ ಮತ್ತು ಪ್ರಭುತ್ವಗಳ ಪರಸ್ಪರರ ಪೂರಕ ನೀತಿ. ಧರ್ಮವೊಂದು ಪ್ರಭುತ್ವದ ಮೇಲೆ ಹಿಡಿತ ಸಾಧಿಸುವುದೆಂದರೆ ಇಡೀ ಜನಸಮುದಾಯದ ಜೀವನದ ಮೇಲೆ ನಿಯಂತ್ರಣ ಸಾಧಿಸುವುದು ಎಂದಾಗುತ್ತದೆ. ಪ್ರಭುತ್ವವನ್ನು ನಿಯಂತ್ರಿಸುವ ಧರ್ಮ ಯಾವತ್ತೂ ಕ್ರಿಯಾಶೀಲತೆಯ ವಿರುದ್ಧವಾಗಿರುತ್ತದೆ. ತನ್ನನ್ನು ವಿರೋಧಿಸುವ, ತನ್ನ ಆಚರಣೆಗಳನ್ನು ಅನುಮಾನಿಸುವ ಜನತೆಯ ಹಕ್ಕುಗಳನ್ನು ಅದು ನಿರಾಕರಿಸುತ್ತದೆ.

ಕು. ಸ. ಮಧುಸೂದನ

ಶಿಕ್ಷಣ ಮಾಧ್ಯಮ ತೀರ್ಪು:
ಕಾನೂನು ಬದ್ಧ ಕುಮ್ಮಕ್ಕು

ರಂಗನಾಥ
ಕಂಟನಕುಂಟೆ

ನಮ್ಮ ನಾಡಿನಲ್ಲಿ 'ಮಾತೃಭಾಷೆ'ಯೇ (ಪ್ರಾಥಮಿಕ) ಶಿಕ್ಷಣದ ಮಾಧ್ಯಮವಾಗಬೇಕು ಎಂಬುದು ಏಕೀಕರಣದಷ್ಟು ಹಳೆಯ ಬೇಡಿಕೆ. ಜನರ ಬಹುಕಾಲದ ಈ ಬೇಡಿಕೆಯ ವಿರುದ್ಧ ರಾಜ್ಯ 'ಉಚ್ಚ'ನ್ಯಾಯಾಲಯ ತೀರ್ಪಿತ್ತಿದೆ ಎನ್ನದೆ ಬೇರೆ ದಾರಿಯಿಲ್ಲ. ಇಂತಹ ತೀರ್ಪನ್ನು ನೀಡಿರುವುದು ಕನ್ನಡ ನಾಡಿನಲ್ಲಿ. ಆ ನಾಡಿನ ಭಾಷಿಕ ಸಮುದಾಯಕ್ಕೂ 'ನ್ಯಾಯ'ನೀಡಲು ಸ್ಥಾಪನೆಗೊಂಡಿರುವ ನ್ಯಾಯಾಲಯವೇ! ಮಾತೃಭಾಷೆಯನ್ನು ಅಥವಾ ಕನ್ನಡವನ್ನು ಸರ್ಕಾರಿ-ಅನುದಾನಿತ ಶಾಲೆಗಳಲ್ಲಿ ಕಲಿಸಬಹುದಾಗಿದೆ; ಖಾಸಗಿ ಶಾಲೆಗಳಲ್ಲಿ ಕಡ್ಡಾಯ ಮಾಡುವುದು ಸರಿಯಲ್ಲ. ಅದು ಆಯ್ಕೆಯ ಸ್ವಾತಂತ್ರ್ಯಕ್ಕೆ ದಕ್ಕೆ ತರುತ್ತದೆ. ತಮ್ಮದೇ ಹಣದಲ್ಲಿ ಶಾಲೆಗಳನ್ನು ನಡೆಸುವ ಸಂಸ್ಥೆಗಳಿಗೆ ಕನ್ನಡದಲ್ಲೇ ಕಲಿಸಬೇಕು ಎಂದು ಒತ್ತಾಯಿಸುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದೆ.

ಹೀಗೆ ಅಭಿಪ್ರಾಯಪಡುವುದರ ಹಿಂದಿನ ಪ್ರಭಾವಗಳೇನು? ಇಂತಹ ತೀರ್ಪಿತ್ತ ಮತ್ತು ಕನ್ನಡದ ವಿರುದ್ಧ ದಾವೆ ಹೂಡಿದ್ದ ಆ ಮನಸ್ಸುಗಳು ಎಂತಹವು? ಇಂತಹ ತೀರ್ಪುಗಳ ಅಂತಿಮ ಪರಿಣಾಮವೇನು? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ. ಇಂತಹ ಪ್ರಶ್ನೆಗಳು ನ್ಯಾಯಾಲಯಕ್ಕೆ ಮತ್ತು ದಾವೆದಾರರಿಗೆ ಅಪ್ರಸ್ತುತ ಎನ್ನಿಸುತ್ತವೆ. ಇಲ್ಲಿ ನ್ಯಾಯಾಲಯ ತನ್ನ ತೀರ್ಪನ್ನು ನೀಡುವ ಮೂಲಕ ತಾನು 'ನ್ಯಾಯದ ಪರ'ವೇ ಎಂದುಕೊಂಡಿರಬಹುದು. ಆದರೆ ಈ ನಾಡಿನ ಬಹುಸಂಖ್ಯಾತರ ಹಕ್ಕುಗಳು ದಮನಗೊಂಡಿವೆ. ಯಾವುದೇ ದೇಶದ ನ್ಯಾಯಾಲಯ ಅಲ್ಲಿನ ಪರಿಸರದ ಸಾಂಸ್ಕೃತಿಕ ಹಿನ್ನೆಲೆಯ ಬೆಳಕಿನಲ್ಲಿ ಕಾರ್ಯನಿರ್ವಹಿಸಬೇಕಿರುತ್ತದೆ. ಅದು ನಿಜವಾದ ಪ್ರಜಾತಂತ್ರ ವ್ಯವಸ್ಥೆಯ ಲಕ್ಷಣ. ಒಂದು ಸಮುದಾಯದ ಅನನ್ಯತೆಯ ಮತ್ತು ಅಲ್ಲಿನ ಸಾಂಸ್ಕೃತಿಕ ಮತ್ತು ಭಾಷಿಕ ಪರಿಸರದ ಹಿನ್ನೆಲೆಯಲ್ಲಿ ತೀರ್ಪು ನಿರ್ಣಯಿಸಬೇಕಿರುವುದು ಅದರ ಕರ್ತವ್ಯ. ಅಂತಹ ಹಿನ್ನೆಲೆಯಲ್ಲಿ ಕಾರ್ಯನಿರ್ವಹಿಸುವಷ್ಟು ಸಾಮರ್ಥ್ಯವಿಲ್ಲದಿದ್ದಲ್ಲಿ ಅಂತಹ ನ್ಯಾಯಾಲಯಕ್ಕೆ ಯಾವ ಅರ್ಥವೂ ಇರುವುದಿಲ್ಲ. ಹಾಗೆ ನಿರ್ಣಯಿಸಲಾಗದಿದ್ದರೆ ಅಂತಹ ನ್ಯಾಯಾಲಯಗಳಿಗಾದರೂ ಎಂತಹ ಗೌರವ ಇದ್ದೀತು? ಆ ನೆಲದ ಕಾನೂನಿನ ಅರ್ಥವಾದರೂ ಏನು?

ಮೇಲೆ ಹೇಳಿದಂತೆ ತಮ್ಮದೇ ಹಣದಲ್ಲಿ ಶಾಲೆಗಳನ್ನು ನಡೆಸುವ ಸಂಸ್ಥೆಗಳಿಗೆ ಕನ್ನಡದ ಮಾಧ್ಯಮದ ಮೂಲಕವೇ ಕಲಿಸಬೇಕು ಎಂದು ಒತ್ತಾಯಿಸುವುದು ಸರಿಯಲ್ಲ ಎನ್ನುವುದಾದರೆ, ಕನ್ನಡ ಅಥವಾ ಇಲ್ಲಿನ ಜನರ ಮಾತೃಭಾಷೆಯನ್ನು ಶಿಕ್ಷಣದ ಮಾಧ್ಯಮವಾಗಿಸಿ ಎಂದು ಒತ್ತಾಯಿಸದೇ ಅಮೆರಿಕದಲ್ಲಿ, ಇಂಗ್ಲೆಂಡಿನಲ್ಲಿ ಒತ್ತಾಯಿಸಲು ಸಾಧ್ಯವೇ? ಹಾಗೆ ಇಲ್ಲಿನ ಪ್ರಧಾನ ಅಥವಾ ಮಾತೃ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿಸಿ ಎಂದು ಒತ್ತಾಯಿಸುವುದು ಕೂಡ ಈ ನಾಡಿನ ಬಹುಸಂಖ್ಯಾತ ಜನಸಮುದಾಯದ ಪ್ರಜಾತಾಂತ್ರಿಕ ಹಕ್ಕು, ಅವರ ಸಾಮಾಜಿಕ ಘನತೆಗೆ ಕುಂದುಬಾರದಂತೆ ಅವರ ಹಕ್ಕು ಗಳನ್ನು ರಕ್ಷಿಸಿಕೊಳ್ಳಲು ಸಂವಿಧಾನವೇ ಕಲ್ಪಿಸಿರುವ ಅವಕಾಶ. ಅದನ್ನು ರಕ್ಷಿಸಬೇಕಾಗಿರುವುದು ನ್ಯಾಯಾಲಯದ ಕರ್ತವ್ಯ. ಇದು ನ್ಯಾಯಾಲಯಕ್ಕೆ ಯಾಕೆ ಅರ್ಥವಾಗುವುದಿಲ್ಲ? ಆದರೆ ಇಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಸ್ವಾರ್ಥ, ಅಹಂಕಾರ, ವರ್ಗಹಿತಾಸಕ್ತಿಗಳೇ ಹಕ್ಕುಗಳಾಗಿ ಕಂಡಿವೆ. ಬಹುಸಂಖ್ಯಾತ ಜನರ ಬದುಕು, ಅವರ ಸಂವಿಧಾನಾತ್ಮಕ ಹಕ್ಕುಗಳು, ಸಾಮಾಜಿಕ ಸಮಾನತೆ ಇವು ಯಾವುವು ಇಲ್ಲಿ ಪ್ರಧಾನ ವಲ್ಲ. ಆಯ್ಕೆಯ ಹಕ್ಕಿನ ಹೆಸರಿನಲ್ಲಿ, ಇಂಗ್ಲಿಶ್ ಶಿಕ್ಷಣದ ಮಾರಾಟ-ಲಾಭಕೋರತನದ ಹಿತಾಸಕ್ತಿಗಳೇ ಇಲ್ಲಿ ರಾರಾಜಿಸುತ್ತಿವೆ. ನ್ಯಾಯಕ್ಕೆ ಇಂತಹ ನ್ಯಾಯಯುತ ಸಂಗತಿಗಳೇ ಪ್ರಧಾನವಾಗದಿದ್ದರೆ ಅಂತಹ ನ್ಯಾಯಕ್ಕೆ ಅರ್ಥವಾದರೂ ಏನಿದೆ? ಉದ್ದಕ್ಕೂ ಬಹುಸಂಖ್ಯಾತ ಜನರ ಮೇಲೆ ಅಲ್ಪಸಂಖ್ಯಾತರು ದಬ್ಬಾಳಿಕೆ ಮಾಡುತ್ತಲೇ ಬರುತ್ತಿರುವುದರ ಕುರುಹಾಗಿ ಈ ಪ್ರಕರಣ ನಮ್ಮ ಮುಂದಿದೆ.

ಮತ್ತೊಂದು ಗಮನಿಸಬೇಕಾದ ಸಂಗತಿ ಎಂದರೆ, ಶಿಕ್ಷಣದ ಭಾಷಾ ಮಾಧ್ಯಮದ ಪ್ರಶ್ನೆಯು ಶಿಕ್ಷಣ ಸಂಸ್ಥೆಗಳು ಹೂಡುವ ಹಣದ ಕಾರಣವಾಗಿ, ಅವುಗಳು ಬಯಸಿದ ಯಾವುದೇ ಭಾಷೆಯಲ್ಲಿ

ನ್ಯಾಯಾಲಯ ತನ್ನ ತೀರ್ಪನ್ನು ನೀಡುವ ಮೂಲಕ ತಾನು 'ನ್ಯಾಯದ ಪರ'ವೇ ಎಂದುಕೊಂಡಿರಬಹುದು. ಆದರೆ ಈ ನಾಡಿನ ಬಹುಸಂಖ್ಯಾತರ ಹಕ್ಕುಗಳು ದಮನಗೊಂಡಿವೆ. ಯಾವುದೇ ದೇಶದ ನ್ಯಾಯಾಲಯ ಅಲ್ಲಿನ ಪರಿಸರದ ಸಾಂಸ್ಕೃತಿಕ ಹಿನ್ನೆಲೆಯ ಬೆಳಕಿನಲ್ಲಿ ಕಾರ್ಯನಿರ್ವಹಿಸಬೇಕಿರುತ್ತದೆ. ಅದು ನಿಜವಾದ ಪ್ರಜಾತಂತ್ರ ವ್ಯವಸ್ಥೆಯ ಲಕ್ಷಣ. ಒಂದು ಸಮುದಾಯದ ಅನನ್ಯತೆಯ ಮತ್ತು ಅಲ್ಲಿನ ಸಾಂಸ್ಕೃತಿಕ ಮತ್ತು ಭಾಷಿಕ ಪರಿಸರದ ಹಿನ್ನೆಲೆಯಲ್ಲಿ ತೀರ್ಪು ನಿರ್ಣಯಿಸಬೇಕಿರುವುದು ಅದರ ಕರ್ತವ್ಯ. ಅಂತಹ ಹಿನ್ನೆಲೆಯಲ್ಲಿ ಕಾರ್ಯ ನಿರ್ವಹಿಸುವಷ್ಟು ಸಾಮರ್ಥ್ಯವಿಲ್ಲದಿದ್ದಲ್ಲಿ ಅಂತಹ ನ್ಯಾಯಾಲಯಕ್ಕೆ ಯಾವ ಅರ್ಥವೂ ಇರುವುದಿಲ್ಲ. ಹಾಗೆ ನಿರ್ಣಯಿಸಲಾಗದಿದ್ದರೆ ಅಂತಹ ನ್ಯಾಯಾಲಯಗಳಿಗಾದರೂ ಎಂತಹ ಗೌರವ ಇದ್ದೀತು? ಆ ನೆಲದ ಕಾನೂನಿನ ಅರ್ಥವಾದರೂ ಏನು?

ಶಿಕ್ಷಣ ನೀಡಲು ಅವುಗಳಿಗೆ ಹಕ್ಕುಗಳು ದತ್ತವಾಗಿರುವುದಿಲ್ಲ. ವ್ಯಕ್ತಿ ಸ್ವಾತಂತ್ರ್ಯದಂತೆ ನಾಡಿನ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಹಲವು ವಿಚಾರಗಳಿರುತ್ತವೆ. ಅಂಥದ್ದರಲ್ಲಿ ಭಾಷೆಯೂ ಅದರ ಪ್ರಧಾನ ಸಂಗತಿಯಾಗಿರುತ್ತದೆ. ಹಾಗಾಗಿ ಖಾಸಗಿ ಶಾಲೆಗಳದು ಕೇವಲ ಅವುಗಳ ಸ್ವಾತಂತ್ರ್ಯದ ಹಕ್ಕಿನ ಪ್ರಶ್ನೆಯದಲ್ಲ. ಒಟ್ಟು ನಾಡಿನ ಸಾಂಸ್ಕೃತಿಕ ಅನನ್ಯತೆ ಮತ್ತು ಕಲಿಯುವ ಎಲ್ಲ ಮಕ್ಕಳ ಜ್ಞಾನದ, ಮನಸ್ಥಿತಿಯ ನಡಾವಳಿಗಳ ರೂಪಿಕೆಯ, ಸಾಮಾಜಿಕ ನ್ಯಾಯದ ಪ್ರಶ್ನೆಯಾಗಿ ಮುಖ್ಯವಾಗಿರುತ್ತದೆ. ಇವುಗಳ ಒಳಗೆ ಶಿಕ್ಷಣ ಸಂಸ್ಥೆಗಳ ಹಕ್ಕುಗಳು ನೆಲೆಸಿರುತ್ತವೆ. ಈ ಹಕ್ಕುಗಳಿಗೆ ಪೂರಕವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮ ಕಾರ್ಯವನ್ನು ನಿರ್ವಹಿಸಬೇಕಿರುತ್ತವೆ. ತಮ್ಮಿಷ್ಟದಂತೆ ಜನರ ಮತ್ತು ಬಹುಸಂಖ್ಯಾತರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ವರ್ತಿಸಲು ಬಾರದು. ನಾಡಿನ ಮೂಲಭೂತವಾದ ವಿಚಾರಗಳನ್ನು ಮೂಲೆಗುಂಪಾಗಿಸಿ ಕೆಲವರ ಸ್ವಾರ್ಥದ ಪ್ರಶ್ನೆಗಳನ್ನು ಮೇಲಾಗಿಸಲು ಸಾಧ್ಯವಿಲ್ಲ.

ನಮ್ಮ ನಾಡಿನಲ್ಲಿ ಶಿಕ್ಷಣದ ಮಾಧ್ಯಮದ ಪ್ರಶ್ನೆ ಎದುರಾದಾಗೆಲ್ಲ ಸಂವಿಧಾನವನ್ನು ಗುರಾಣಿಯಾಗಿ ಬಳಸಿಕೊಳ್ಳಲಾಗುತ್ತದೆ. ಭಾಷಿಕ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳ ಪ್ರಶ್ನೆಗಳ ಹಕ್ಕುಗಳನ್ನು ಮುಂದು ಮಾಡಲಾಗುತ್ತದೆ. ಹಾಗಾದರೆ ನಮ್ಮ ರಾಜ್ಯದಲ್ಲಿರುವ ಎಲ್ಲ ಇಂಗ್ಲಿಶ್ ಮಾಧ್ಯಮದ ಶಿಕ್ಷಣ ಸಂಸ್ಥೆಗಳು, "ಭಾಷಿಕ-ಧಾರ್ಮಿಕ ಅಲ್ಪಸಂಖ್ಯಾತರು" ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ನಡೆಸುತ್ತಿರುವ ಸಂಸ್ಥೆಗಳೇ ಆಗಿವೆಯೇ? ಈ ಪ್ರಶ್ನೆ ನಾವು ಸರಿಯಾಗಿ ಉತ್ತರ ಕಂಡುಕೊಳ್ಳಬೇಕಿದೆ. ನಮ್ಮಲ್ಲಿರುವ ಮೆಕಾಲೆ ಸಂತತಿಯ ಕೆಲವು ಪಟ್ಟ ಭದ್ರ ಹಿತಾಸಕ್ತಿಗಳು ಸಂವಿಧಾನದಲ್ಲಿ ಭಾಷಿಕ-ಧಾರ್ಮಿಕ ಅಲ್ಪಸಂಖ್ಯಾತರಿಗೆ, ಆಂಗ್ಲೋಇಂಡಿಯನ್ನರಿಗೆ ಕಲ್ಪಿಸಲಾಗಿರುವ ಅವಕಾಶ ಗಳನ್ನು ದುರ್ಬಳಕೆ ಮಾಡಿಕೊಂಡು ಕನ್ನಡದ ಮೇಲೆ ಸವಾರಿ ಮಾಡುತ್ತ ಅದನ್ನು ಮೂಲೆಗೆ ತಳ್ಳುವ ಸಂಚು ನಡೆಸುತ್ತಿದ್ದಾರೆ. ಆದರೆ ಇದು ನ್ಯಾಯಾಲಯದ ಗಮನಕ್ಕಂತೂ ಬಾರಲು ಸಾಧ್ಯವಿಲ್ಲ!

ಧಾರ್ಮಿಕ, ಭಾಷಿಕ ಅಲ್ಪಸಂಖ್ಯಾತ ಸಮುದಾಯಗಳ ಹಕ್ಕಿನ ನೆಪದಲ್ಲಿ ಕೆಲವು ಪಟ್ಟಭದ್ರರು, ಲಾಭದಾಹಿಗಳು, ಶಿಕ್ಷಣವನ್ನು ಇತರ ಸರಕುಗಳಂತೆ ಒಂದು ಸರಕನ್ನಾಗಿಸಿರುವ ವ್ಯಾಪಾರಿಗ್ಗಳು, ಇಂಗ್ಲಿಶ್ ಹೆಸರಿನಲ್ಲಿ ಜನರ ಹಣ ದೋಚಲು ಸಿದ್ಧವಾಗಿರುವ ಕೆಲವು ಜನವಿರೋಧಿ ಶಕ್ತಿಗಳು ಕನ್ನಡದ ವಿರುದ್ಧ ಯಾವಾಗಲೂ ಕತ್ತಿ ಮಸೆಯುತ್ತಿವೆ. ತಮ್ಮ ಸ್ವಾರ್ಥಕ್ಕಾಗಿ ಇಡೀ ನಾಡಿನ ಜನಸಮುದಾಯದ ಹಿತವನ್ನು ಬಲಿಗೊಡಲು ಈ ಶಕ್ತಿಗಳು ಹಿಂಜರಿಯವು. ಮೆಕಾಲೆಯ ಮುಂದುವರೆದ ಈ ಸಂತತಿ ನಿರಂತರವಾಗಿ ಕನ್ನಡದ ಮೇಲೆ ತನ್ನ ದಾಳಿಯನ್ನು ಮುಂದುವರೆಸಿದೆ. ಈ ದಾಳಿಯ ಪ್ರತಿಫಲವೇ ಇಂದಿನ ತೀರ್ಪು ಎನ್ನಬಹುದು. ಇಲ್ಲಿ ನ್ಯಾಯಾಲಯ ಮತ್ತು ದಾವೆದಾರರು ಇಂತಹ ಶಕ್ತಿಗಳ ಬಹಿರಂಗದ ಮುಖಗಳು ಮಾತ್ರ, ಈ ಶಕ್ತಿಗಳಿಗೆ ನ್ಯಾಯಕ್ಕಿಂತ ತಮ್ಮ ಸ್ವಾರ್ಥದ ಹಿತಾಸಕ್ತಿಗಳೇ ಪ್ರಧಾನ.

ಕೆಲವು ಮಹತ್ವದ, ಸಂಕೀರ್ಣ ಸಂದರ್ಭಗಳಲ್ಲಿ ರಾಜ್ಯದ ಸಾಂಸ್ಕೃತಿಕ, ಭಾಷೆಯ, ಜನತೆಯ ಪ್ರಶ್ನೆ ಬಂದಾಗ ಅಲ್ಲಿನ ಸಂಸ್ಕೃತಿಗೆ ಪೂರಕವಾಗಿ ಕಾರ್ಯ

> **ಇಂದು ಇಂಗ್ಲಿಶ್ ಜಗತ್ತಿನ ಬಹು ಮುಖ್ಯ ಸಂವಹನದ ಶಕ್ತಿಯಾಗಿ ಬೆಳೆದಿದೆ. ಅದನ್ನು ಎಲ್ಲರು ಕಲಿಯಲೇಬೇಕಿದೆ ಎಂಬ ಮಾತನ್ನು ಒಪ್ಪುತ್ತಲೇ ಅದು ಉಳ್ಳವರ ಭಾಷೆಯಾಗಿ, ಬಹು ಸಂಖ್ಯಾತರ ಜನರ ಮೇಲೆ ತನ್ನ ಯಾಜಮಾನ್ಯವನ್ನು ನಡೆಸುತ್ತಿದೆ.**

ನಿರ್ವಹಿಸುವಲ್ಲಿ ಅದಕ್ಕೆ ಇರುವ ಮೂಲಭೂತ ಸಮಸ್ಯೆ ಏನಿದೆ? ಎಂಬುದನ್ನು ಪ್ರಜ್ಞಾವಂತರು ಆಲೋಚಿಸಬೇಕಿದೆ. ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕಲಿಸಬಹುದಾಗಿದೆ ಎಂದು ಅಭಿಪ್ರಾಯಪಡುವ ಕೋರ್ಟಿಗೆ, ಒಂದು ತೀರ್ಪು ದೀರ್ಘಕಾಲದಲ್ಲಿ ಎಂತಹ ಪರಿಣಾಮವನ್ನು ಸಮಾಜದಲ್ಲಿ ಉಂಟು ಮಾಡಬಹುದು ಎಂಬುದನ್ನು ಯೋಚಿಸಲು ಸಾಧ್ಯವಿಲ್ಲವೇ? ಇಲ್ಲದೇ ಹೋದಲ್ಲಿ ಅದು ಕಾರ್ಯನಿರ್ವಹಿಸುವ ಪರಿಸರದ, ಜನರ ವಿರುದ್ಧವಾಗಿ ತೀರ್ಪು ನೀಡುವುದಾದರೆ ಅದನ್ನು ಜನತಾ ನ್ಯಾಯಾಲಯ ಎಂದು ಭಾವಿಸುವುದಾದರೂ ಹೇಗೆ? ನಮ್ಮ ರಾಜ್ಯದ ಹೈಕೋರ್ಟ್ ನೀಡಿರುವ ಈ ತೀರ್ಪಂತೂ ಈ ರಾಜ್ಯದ ಜನರ ಪರವಾಗಿಯಂತೂ ಇಲ್ಲ. ಬದಲಿಗೆ ಇತರೆ ಹಲವು ತೀರ್ಪುಗಳಂತೆ ಇದೂ ಕೂಡ ಉಳ್ಳವರ, ಲಾಭದಾಹಿಗಳ ಮತ್ತು ಮೇಲ್ವರ್ಗಗಳ ಒತ್ತಡಕ್ಕೆ ಮಣಿದಿರುವುದು ತಿಳಿಯುತ್ತದೆ.

ಇಂದು ಇಂಗ್ಲಿಶ್ ವ್ಯಾವಹಾರಿಕ ಲೋಕದ ಬಹು ಮುಖ್ಯ ಸಂವಹನದ ಶಕ್ತಿಯಾಗಿ ಬೆಳೆದಿದೆ. ಅದನ್ನು ಎಲ್ಲರೂ ಕಲಿಯಲೇಬೇಕಿದೆ ಎಂಬ ಮಾತನ್ನು ಒಪ್ಪುತ್ತಲೇ ಅದು ಉಳ್ಳವರ ಭಾಷೆಯಾಗಿ, ಬಹುಸಂಖ್ಯಾತರ ಜನರ ಮೇಲೆ ತನ್ನ ಯಾಜಮಾನ್ಯವನ್ನು ನಡೆಸುತ್ತಿದೆ. ಅಲ್ಲದೆ ಅಮೆರಿಕ, ಯುರೋಪುಗಳ ಸಾಮ್ರಾಜ್ಯಶಾಹಿಯ ಸಾಂಸ್ಕೃತಿಕ ರಾಜಕಾರಣಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಧಾನ ಶಕ್ತಿಯೂ ಆಗಿದೆ ಎನ್ನುವುದು ವಾಸ್ತವ ಸಂಗತಿ. ಆದರೆ ತಮ್ಮದೇ ಸ್ವಾರ್ಥದ ಹಿತವನ್ನೇ ಪ್ರಧಾನವಾಗಿಸಿಕೊಂಡಿರುವ ವರ್ಗಗಳಿಗೆ ಇದನ್ನು ಒಪ್ಪಲಾಗುವುದಿಲ್ಲ. ಮತ್ತೆ ಈ ವರ್ಗ ರೂಪಿಸಿರುವ ಅಭಿಪ್ರಾಯಗಳಿಂದ ತಮ್ಮ ವಿಚಾರಗಳನ್ನು ರೂಢಿಸಿಕೊಂಡಿರುವ ಜನರೂ ಇದನ್ನು ಒಪ್ಪಲು ತಯಾರಿಲ್ಲ. ಬದಲಿಗೆ ಇದು ತಲೆಬುಡವಿಲ್ಲದ ನಿಷ್ಪ್ರಯೋಜಕ ವಿಚಾರಗಳಾಗಿ ಕಾಣುತ್ತವೆ. ವಸಾಹತುಶಾಹಿಗಳ ಯೋಜಿತ ಪ್ರಯತ್ನದಿಂದ ಅಂದಿನಿಂದಲೂ ಮುಂದುವರೆದು ಬರುತ್ತಿರುವ ಅದರ ಯಾಜಮಾನ್ಯಕ್ಕೆ ಈಗಿನ ತೀರ್ಪು ಅಧಿಕೃತ ಮುದ್ರೆಯೊತ್ತಿದೆ. ಅಂತಹ ಯಾಜಮಾನ್ಯ ಮತ್ತಷ್ಟು ತೀವ್ರವಾಗುವ ಮತ್ತು ಹಲವಾರು ರೀತಿಯ ಅವಾಂತರಗಳನ್ನು ಸೃಷ್ಟಿಸಬಹುದು. ಈಗಾಗಲೇ ಇದು ತೀವ್ರವಾಗಿದ್ದು ಅದು ಭವಿಷ್ಯದಲ್ಲಿ ಮತ್ತಷ್ಟು ಸಂಕೀರ್ಣಗೊಳ್ಳಲಿದೆ.

ಮೊದಲನೆಯದಾಗಿ ನ್ಯಾಯಲಯದ ತೀರ್ಪಿನ ಪ್ರಕಾರವೇ ಸರ್ಕಾರಿ-ಅನುದಾನಿತ ಮತ್ತು ಖಾಸಗಿ ಶಾಲೆಗಳ ಮಾಧ್ಯಮದ ವಿಷಯದಲ್ಲಿ ತಾರತಮ್ಯತೆಯನ್ನು ಒಪ್ಪಿದಂತಾಗಿದೆ. ಈ ತಾರತಮ್ಯತೆ ಕೇವಲ ಆಯ್ಕೆ ಕಾರಣದಿಂದ ಸೃಷ್ಟಿಯಾದದ್ದಲ್ಲ. ಅದು ನಮ್ಮ ಸಾಮಾಜಿಕ ಅಸಮಾನತೆಯಿಂದ ಸೃಷ್ಟಿಯಾಗಿರುವಂತಹದ್ದು. ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು, ಕನ್ನಡ-ಇಂಗ್ಲಿಷ್ ಎಂಬ ವರ್ಗೀಕರಣಗಳಲ್ಲಿ ವ್ಯಾಪಕ ಅಸಮಾನತೆಯ ಬೇರುಗಳು ಬೆಳೆದು ನಿಂತಿವೆ. ಸರ್ಕಾರಿ ಶಾಲೆಗಳು, ಅಲ್ಲಿ ಓದುವವರು, ಕನ್ನಡ ಮಾಧ್ಯಮ ಶಾಲೆಗಳು, ಅಲ್ಲಿ ಕಲಿತ ವಿದ್ಯಾರ್ಥಿಗಳು ತೀವ್ರವಾದ ಅಸಮಾನತೆಗೆ, ಅವಮಾನಕ್ಕೆ, ಕೀಳರಿಮೆಗೆ ಗುರಿಯಾಗಿದ್ದಾರೆ. ಇಂತಹದ್ದರ ನಡುವೆ, ವಾಸ್ತವ ಪರಿಸ್ಥಿತಿಯ ಅರಿವಿಲ್ಲದೆ ನ್ಯಾಯಾಲಯ ತೀರ್ಪಿತ್ತಿದೆ. ಹಾಗಾಗಿ ಇಂತಹ ಅಸಮಾನತೆ ಸಹಜ; ಕಾನೂನು ಸಮ್ಮತವೇ ಎನ್ನುವಂತಾಗಿದೆ. ಭಾಷೆ ಮತ್ತು ಶಿಕ್ಷಣವನ್ನು ಆಧರಿಸಿ ನಮ್ಮ ಸಮಾಜದಲ್ಲಿ ಸೃಷ್ಟಿಯಾಗಿರುವ ದೊಡ್ಡ ಅಸಮಾನತೆಯನ್ನು ಕಾನೂನುಬದ್ಧವಾಗಿ ನಿವಾರಿಸಲು ನ್ಯಾಯಾಲಯಕ್ಕೆ ಸಾಧ್ಯವಿತ್ತು. ಇದ್ದ ಆ ಒಂದು ಅವಕಾಶವನ್ನು ನ್ಯಾಯಾಲಯ ಹಾಳುಗೆಡವಿದೆ. ಇಂತಹ ಮಹತ್ವದ ವಿಚಾರಗಳನ್ನು "ನಮ್ಮ ನ್ಯಾಯಾಲಯ"ಗಳೇ ಪರಿಗಣಿಸದೇ ಹೋದಾಗ ಮತ್ಯಾರು ಅದನ್ನು ಪರಿಗಣಿಸಲು ಸಾಧ್ಯ.

ಅಂತಿಮವಾಗಿ ಇಂತಹ ತೀರ್ಪುಗಳು ನಿರ್ಮಾಣ ಮಾಡುವ ಅಸಹನೀಯ ಪರಿಸರದ ಉದಾಹರಣೆಯನ್ನು ಇಲ್ಲಿ ಗಮನಿಸಬಹುದಾಗಿದೆ. ಇಲ್ಲಿ ಹೇಳಲಾಗುವ ಸಂಗತಿಯೂ ಈಗಾಗಲೇ ನಿರ್ಮಾಣವಾಗಿರುವ ಪರಿಸ್ಥಿತಿಯೇ. ಇನ್ನು ಭವಿಷ್ಯವೂ ಹೇಗಿರುತ್ತದೆಯೋ? ಇಂದು ಕೆಲವು ಇಂಗ್ಲಿಶ್ ಮಾಧ್ಯಮದ ಶಾಲೆ ಮತ್ತು ಕಾಲೇಜುಗಳಲ್ಲಿ (ಕನ್ನಡವನ್ನು ಬಿಟ್ಟು ಇತರೆ ವಿಷಯಗಳನ್ನು ಬೋಧಿಸುವಾಗ) ಇಂಗ್ಲಿಶ್ ಬಳಕೆಯನ್ನು ಬಿಟ್ಟು ಬೇರೆ ಯಾವ ಭಾಷೆಯನ್ನು ಬಳಸಿದರೂ ಅದನ್ನು ಒಪ್ಪಿಕೊಳ್ಳದ ಸ್ಥಿತಿ ನಿರ್ಮಾಣವಾಗಿದೆ. ಕೆಲವು ಶಿಕ್ಷಕರು ತಮ್ಮ ಅನುಕೂಲಕ್ಕಾಗಿಯೋ, ಕೆಲವರಿಗೆ ಕೆಲವು ಇಂಗ್ಲಿಶ್ ಪದಗಳು ನೆನಪಿಗೆ ಬಾರದೆಯೋ, ಕೆಲವು ಇಂಗ್ಲಿಶ್ ಪದಗಳಿಗೆ ಅರ್ಥ ತಿಳಿಯದಾದಾಗ ಕನ್ನಡ ಪದಗಳನ್ನು ಬಳಸಿದರೆ, ಕೆಲವು ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಪದಗಳಿಗೆ ಅರ್ಥ ತಿಳಿಯದಾದಾಗ ಅವುಗಳಿಗೆ ಕನ್ನಡದಲ್ಲಿ (ಕನ್ನಡದ ಅರ್ಥವನ್ನು) ವಿವರಿಸಿದಾಗ ಅದನ್ನು ಆಕ್ಷೇಪಿಸಲಾಗುತ್ತಿದೆ. ಇದನ್ನು ವಿದ್ಯಾರ್ಥಿಗಳು ಮತ್ತು ಆಡಳಿತ ಮಂಡಳಿಗಳೆರಡೂ ಮಾಡುತ್ತಿವೆ. ಕೆಲವು ಬಾರಿ ಶಿಕ್ಷಕರ ವಿರುದ್ಧ ಆಡಳಿತ ಮಂಡಳಿಗೆ ದೂರು ನೀಡಲಾಗುತ್ತಿದೆ. ಪ್ರಾಸಂಗಿಕವಾಗಿ ಕನ್ನಡ ಬಳಸುವ ಬೋಧಕರಿಗೇನೆ ಒಂದು ರೀತಿಯ ಕಿರಿಕಿರಿ ಉಂಟು ಮಾಡುತ್ತಿದೆ.

ಈ ಸಂಬಂಧವಾಗಿಯೇ ತಮ್ಮ ಉದ್ಯೋಗವನ್ನು ಕಳೆದುಕೊಂಡ ಉದಾಹರಣೆಗಳಿವೆ. ಹಾಗೆ ಕನ್ನಡವನ್ನು ಬಳಸಿದ ಶಿಕ್ಷಕರನ್ನು ಕೀಳಾಗಿ ಕಾಣುವ ವಿದ್ಯಾರ್ಥಿಗಳಿದ್ದಾರೆ. ಇದನ್ನು ಮಾಡುತ್ತಿರುವವರು ವಿದೇಶಿಯರಲ್ಲ. ಕನ್ನಡಿಗರೇ. ಹಾಗೆ ಬಳಸುವ ಶಿಕ್ಷಕರಿಗೆ ಕನ್ನಡ ಪದಗಳನ್ನು ಬಳಸದಂತೆ ತಾಕೀತು ಮಾಡಲಾಗುತ್ತಿದೆ. ಇದನ್ನು ಕಂಡ ಕೆಲವು ಶಿಕ್ಷಕರು ತಮ್ಮೊಳಗೇನೆ ಒಂದು ರೀತಿಯ ಸಂಕಟವನ್ನು ಅನುಭವಿಸುವಂತಾಗಿದೆ. ಇದು ಇಂದಿನ ಶಾಲೆ ಕಾಲೇಜುಗಳ ಕನ್ನಡದ ಪರಿಸ್ಥಿತಿ, ಹಾಗೆ ವರ್ತಿಸುವ ಇಂಗ್ಲಿಶ್ ವ್ಯಾಮೋಹಿಗಳ ಇಂಗ್ಲಿಶ್ ಭಾಷಾ ಸಾಮರ್ಥ್ಯವನ್ನು ಅರಿಯಲು ಅವರ ನಿತ್ಯದ ಇಂಗ್ಲಿಶ್ ಪದಗಳ ಬಳಕೆಯನ್ನು ಲೆಕ್ಕಿಸುವುದಾದರೆ ಒಂದು ಸಾವಿರ ಪದಗಳನ್ನು ದಾಟುವುದಿಲ್ಲ. ಅದಕ್ಕಿಂತ ಎಷ್ಟೋ ಸಾವಿರ ಪದ

(೧೯ನೇ ಪುಟಕ್ಕೆ)

ಒಡೆತನಕ್ಕೆ ಕೇಡಿಲ್ಲವಾಗಿ–೧

ಕೃಷಿ ಬಿಕ್ಕಟ್ಟನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ

ಶ್ರೀಶ ಉಡುಪ

ಆಲೂ ಹಾಕಿದ ಪಕ್ಕದ ಹೊಲದಲ್ಲಿ ಈರಯ್ಯ ಜೋಳ ಹಾಕಿದ್ದಾರೆ. ಬೇಸಾಯ ಮಾಡುತ್ತಿದ್ದ ಗಳಿಗೆಗೊಮ್ಮೆ ಆಲೂ ಹಾಕಿದ ಹೊಲದತ್ತ ಹೋಗಿ ನೆಲಕೆರೆದು ಬೀಜ ಕರಗಿ ಹೋಗಿರುವದನ್ನು ಕಂಡು, ಹತಾಶನಾಗಿ ಮರಳಿ ಬರುತ್ತಿರುವ ಅವನನ್ನು ಪತ್ನಿಯರು ಸಮಾಧಾನಮಾಡಿದ್ದಾರೆ. ಹೋಗಿದ್ದು ಹೋಯ್ತು ಬಿಡಿ ಎಂದೆ ಎನ್ನುತ್ತಾರೆ. ಈರಯ್ಯನ ಮೊದಲನೆ ಪತ್ನಿ. ಸಂಜೆ ಏಳು ಗಂಟೆಗೆ ಕೆಲಸ ಮುಗಿಸಿ ಮನೆಗೆ ಬಂದ ಈರಯ್ಯ ಮನೆಯಲ್ಲಿ ಕೂತು ದಡದಡನೆ ಎರಡು ಕಟ್ಟು ಬೀಡಿ ಎಳೆದು ಮುಗಿಸಿದ್ದಾನೆ. ಮುದ್ದೆ ಊಟ ಕೊಟ್ಟಾಗ ಹಸಿವಿಲ್ಲ ಎಂದು ತಟ್ಟೆಗೆ ಕೈ ತೊಳೆದು ಎದ್ದ ಈರಯ್ಯ ಎಂಟೂ ಮುಕ್ಕಾಲರ ಹೊತ್ತಿಗೆ ಮಲಗುವ ಕೋಣೆಯಲ್ಲಿ ನೇಣು ಹಾಕಿಕೊಂಡಿದ್ದ. ಕಳೆದ ನಾಲ್ಕೈದು ತಿಂಗಳಿಂದ ಎಣ್ಣೆ ಹಾಕುವದನ್ನು ಕೂಡ ಶುರುಮಾಡಿದ್ದ ಎನ್ನುತ್ತಾ ನಿಟ್ಟುಸಿರು ಬಿಡುತ್ತಾರೆ ಆಕೆ.

ಸಂಕಷ್ಟದ ಸನ್ನಿವೇಶಗಳಲ್ಲಿ ಪ್ರತಿಸ್ಪಂದನೆಯ ಮಾತೃಕೆಗಳನ್ನು ರೂಪಿಸುವ ಪ್ರತಿಭಾಪ್ರಜ್ಞೆ ವೈಯಕ್ತಿಕ ಸ್ಮೃತಿಗಳ ಜೊತೆ ರಾಜಕೀಯ ಸಮುದಾಯದ ಆಕೃತಿಗಳನ್ನು ಆಧರಿಸುತ್ತದೆ. ನೆಗೆಟಿವ್ ವೈಯಕ್ತಿಕ ಸ್ಮೃತಿಗಳನ್ನು ಕೂಡ ಸಾಂತ್ವನಗೊಳಿಸಿಕೊಂಡು ನಿರ್ವಹಿಸಬೇಕಾದ ಸಾಮುದಾಯಿಕ ಆಕೃತಿಗಳು ಸ್ವತಃ ತಾವೇ ಋಣಾತ್ಮಕ ಒತ್ತಡಗಳನ್ನು ಸೃಷ್ಟಿಸತೊಡಗಿದಾಗ ಅಂತಿಮವಾಗಿ ಪ್ರತಿಸ್ಪಂದನೆಯ ವಿಫಲ ಮಾತೃಕೆಗಳಷ್ಟೇ ರೂಪುಗೊಳ್ಳುತ್ತದೆ. ಅಂದರೆ ಆತ್ಯಂತಿಕವಾಗಿ ಈ ತೆರನಾದ ವಿಫಲಮಾತೃಕೆಗಳು ನಿರ್ದಿಷ್ಟ ಸಮುದಾಯ ಆಧರಿಸಿದ ಮಾದರಿಗಳ ವೈಫಲ್ಯಗಳೇ ಆಗಿರುತ್ತವೆ.

'ನೋಡಿ ಸ್ವಾಮಿ, ಆಲೂಗಡ್ಡೆ ಬೆಳೆಯೊದಂದ್ರೆ ಒಂದು ನಮೂನಿ ಇಸ್ಪಿಟಾಟ ಇದ್ದಂಗೆ' ಎನ್ನುತ್ತಾನೆ ಬೇಲೂರು ತಾಲೂಕಿನ ಹೆಬ್ಬಾಳುವಿನ ಒಬ್ಬ ಕೃಷಿಕ. ತಾಲೂಕು ಕೇಂದ್ರದಿಂದ ಐದು ಕಿಲೋಮೀಟರ್ ದೂರದಲ್ಲಿರುವ ಹೆಬ್ಬಾಳುವಿನಲ್ಲಿ ಈರಯ್ಯ ಎಂಬ ರೈತ ಜೂನ್ ಹದಿನೇಳರ ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದ. ಈ ಮೊದಲು ಕೂಡ ಹಾಸನ ಪ್ರಾಂತದಲ್ಲಿ ಆಲೂಗಡ್ಡೆ ಹಲವು ರೈತರ ಆತ್ಮಹತ್ಯೆಗೆ ಕಾರಣವಾಗಿತ್ತು ಎಂದು ಹೆಬ್ಬಾಳುವಿನ ದಾರಿಯಲ್ಲಿ ಹೋಗುತ್ತಾ ನೆನಪು ಮಾಡಿಕೊಂಡರು ಪ್ರೊ ವಿ.ಎಸ್. ಶ್ರಿಧರ್. ಈರಯ್ಯನ ಸಂಬಂಧಿ, ಮೊದಲು ಮಾತನಾಡಿದ ಕೃಷಿಕ ತನ್ನ ಮಾತು ಮುಂದುವರೆಸುತ್ತಾ ನಾಟಿ ಆಲೂ ಇಲ್ವೇ ಇಲ್ಲ ಸಾರ್, ಈಗೇನಿದ್ರೂ ಪಂಜಾಬ್, ಹರಿಯಾಣಗಳಿಂದ ಬರುವ ಜಲಂಧರ್, ಕೊಡ್ಬರ ಜ್ಯೋತಿ ಆಲೂ ಬೀಜಗಳಷ್ಟೇ ಸಿಗೋದು. ಐವತ್ತು ಕಿಲೋಮೀಟರ್ ದೂರದ ಹಾಸನದ ಎಪಿಎಂಸಿ ಯಾರ್ಡ್‌ನ ಮಂಡಿಯಿಂದ ತರಬೇಕು. ಸಾಲದ ಮೇಲೆ ಕೊಡೋದಿಲ್ಲ, ಕ್ಯಾಶ್ ಕೊಟ್ಟೇ ತರ್ಬೇಕು. ಮೊದ್ಲಾದ್ರೆ ಸಾಲದ ಮೇಲೆ ತಂದಾಗ ಆಲೂ ಬೀಜ ಕರಗಿ ಹೋದರೆ ಕೇಳ್ಬೋದಾಗಿತ್ತು. ಈಗ ಕ್ಯಾಶ್ ಕೊಟ್ಮೇಲೆ ವ್ಯವಹಾರ ಮುಗೀತು.' ಎನ್ನುತ್ತಾರೆ. ಇವರು ಕೃಷಿ ಇಲಾಖೆ ನಡೆಸುವ ಕೆಲವು ತರಬೇತಿಗಳಲ್ಲಿ ಪಾಲ್ಗೊಂಡವರು. ಈರಯ್ಯ ನಾಲಕ್ಕೆಕರೆ ಬಿತ್ತನೆ ಮಾಡಲಿಕ್ಕೆ ಇಪ್ಪತ್ಮೂರು ಮೂಟೆ ಆಲೂಬೀಜ ತಂದಿದ್ದ. ಒಂದು ಮೂಟೆಗೆ ಆರುನೂರು ರೂಪಾಯಿ. ಅದನ್ನು ತನ್ನ ಹೊಲದಲ್ಲಿ ಬಿತ್ತಿದ್ದಾನೆ. ಆಲೂ ತೊಂಬತ್ತು ದಿನಗಳ ಬೆಳೆ. ಬಿತ್ತಿದ ಹದಿನೈದು ದಿನಕ್ಕೆ ಮೇಲೆ ಬರುತ್ತದೆ. ಬೀಜದ ಜೊತೆಗೆ, ಇಪ್ಪತ್ತು ದಿನದ ಹೊತ್ತಿಗೆ ಮತ್ತು ನಲವತ್ತೈದು ದಿನಗಳ ಸಮಯಕ್ಕೆ ಗೊಬ್ಬರ ಹಾಕಬೇಕು. ಗೊಬ್ಬರ ಹಾಕೋದು ಲೇಟಾದ್ರೆ ಏನೂ ಕೈಗೆ ಬರೋದಿಲ್ಲ ಎಂದು ಈರಯ್ಯನ ತಮ್ಮ ಹೇಳುತ್ತಿರಬೇಕಾದರೆ ಹಾವೇರಿ ಗೋಲಿಬಾರ್ ನಂತರದಲ್ಲಿ ಹೊರಬಂದ ಕರ್ನಾಟಕ ಸರಕಾರದ ಗೃಹ ಸಚಿವರ ಮಾತು ನೆನಪಾಯಿತು: 'ರೈತರಿಗೇನು ಅರ್ಜೆಂಟ್? ಒಂದು ಹತ್ತು ದಿನ ಕಾಯಲಿ, ನಾವು ವ್ಯವಸ್ಥೆ ಮಾಡ್ತೇವೆ.'

ಆಲೂ ಹಾಕಿದ ಪಕ್ಕದ ಹೊಲದಲ್ಲಿ ಈರಯ್ಯ ಜೋಳ ಹಾಕಿದ್ದಾರೆ. ಬೇಸಾಯ ಮಾಡುತ್ತಿದ್ದ ಗಳಿಗೆಗೊಮ್ಮೆ ಆಲೂ ಹಾಕಿದ ಹೊಲದತ್ತ ಹೋಗಿ ನೆಲಕೆರೆದು ಬೀಜ ಕರಗಿ ಹೋಗಿರುವದನ್ನು ಕಂಡು, ಹತಾಶನಾಗಿ ಮರಳಿ ಬರುತ್ತಿರುವ ಅವನನ್ನು ಪತ್ನಿಯರು ಸಮಾಧಾನಮಾಡಿದ್ದಾರೆ. ಹೋಗಿದ್ದು ಹೋಯ್ತು ಬಿಡಿ ಎಂದೆ ಎನ್ನುತ್ತಾರೆ. ಈರಯ್ಯನ ಮೊದಲನೆ ಪತ್ನಿ. ಸಂಜೆ ಏಳು ಗಂಟೆಗೆ ಕೆಲಸ ಮುಗಿಸಿ ಮನೆಗೆ ಬಂದ ಈರಯ್ಯ ಮನೆಯಲ್ಲಿ ಕೂತು ದಡದಡನೆ ಎರಡು ಕಟ್ಟು ಬೀಡಿ ಎಳೆದು ಮುಗಿಸಿದ್ದಾನೆ. ಮುದ್ದೆ ಊಟ ಕೊಟ್ಟಾಗ ಹಸಿವಿಲ್ಲ ಎಂದು ತಟ್ಟೆಗೆ ಕೈತೊಳೆದು ಎದ್ದ ಈರಯ್ಯ ಎಂಟೂ ಮುಕ್ಕಾಲರ ಹೊತ್ತಿಗೆ ಮಲಗುವ ಕೋಣೆಯಲ್ಲಿ ನೇಣು ಹಾಕಿಕೊಂಡಿದ್ದ. ಕಳೆದ ನಾಲ್ಕೈದು ತಿಂಗಳಿಂದ ಎಣ್ಣೆ ಹಾಕುವದನ್ನು ಕೂಡ ಶುರುಮಾಡಿದ್ದ ಎನ್ನುತ್ತಾ ನಿಟ್ಟುಸಿರು ಬಿಡುತ್ತಾರೆ ಆಕೆ.

ಹೆಬ್ಬಾಳುವಿನಲ್ಲಿ ಕೃಷಿಪತ್ತಿನ ಸಹಕಾರಿ ಸೊಸೈಟಿ ಇದೆ. ಅಲ್ಲಿನ ಕಾರ್ಯದರ್ಶಿ ಹಾಗೂ ವ್ಯವಸ್ಥಾಪಕರು ವಿವರಿಸುವಾಗ ಕೃಷಿ ಸಾಲ ಹಾಗೂ ಸರಕಾರಿ ನೀತಿಗಳ ಇನ್ನೊಂದು ಮುಖ ತೆರೆದುಕೊಳ್ಳುತ್ತದೆ. ಸೊಸೈಟಿಯಿಂದ ಸುಮಾರು ಮುನ್ನೂರು ರೈತರು ಐವತ್ತು ಲಕ್ಷದಷ್ಟು ಸಾಲವನ್ನು ೨೦೦೭–೦೮ರ ಸಾಲಿನಲ್ಲಿ ಪಡೆದಿದ್ದರು. ಕೇಂದ್ರ ಸರಕಾರದ ಸಾಲಮನ್ನಾ ಯೋಜನೆಯಡಿ ೧೬ರೈತರ ೨,೮೦,೩೭೩ ರೂಪಾಯಿಗಳು ಮನ್ನಾಗೊಂಡಿದೆ. ಅಂದರೆ ಇಲ್ಲಿ ಕೇವಲ ೫.೩೩ ಶೇಕಡಾ ರೈತರಷ್ಟೇ ಸರಕಾರದ ಈ 'ಮಹತ್‌ಸಾಧನೆ'ಯ ಫಲಾನುಭವಿಗಳು. 'ಕಳೆದ ವರ್ಷ ರಾಜ್ಯ ಸರಕಾರ ತಂದ ಸಾಲ ಮನ್ನಾ ಯೋಜನೆಯ ಅಡಿಯಲ್ಲಿ ಯಾರು ಸುಸ್ತಿ ಇಟ್ಟಿಲ್ಲ, ಆ ರೈತರ ಸಾಲ ಮನ್ನಾ ಆಗಿತ್ತು. ಹಾಗಾಗಿ ಈ ವರ್ಷ ಹೆಚ್ಚಿನವರು ಕೈಸಾಲ ಮಾಡಿಯಾದ್ರೂ ದುಡ್ಡು ಕಟ್ಟಿ ಸಾಲ ರಿಸೀವ್ ಮಾಡಿಸಿಕೊಂಡಿದ್ರು, ಆದ್ರೆ ಕೇಂದ್ರ ಸರಕಾರದ ಸಾಲ ಮನ್ನಾ ಯೋಜನೆಯಡಿ ಯಾರೆಲ್ಲ ಸಾಲ ಬಾಕಿ ಇಟ್ಟಿದ್ರು ಅವರ ಸಾಲವನ್ನಷ್ಟೇ ಮನ್ನಾ ಮಾಡಿದ್ದಾರೆ' ಎನ್ನುತ್ತಾರೆ ಅವರು. ನಿಯತ್ತಾಗಿ ಸಾಲ ಪಾವತಿಸುತ್ತಿದ್ದ ರೈತರೆಲ್ಲಾ ಹತಾಶರಾಗಿದ್ದಾರೆ. ಪಹಣಿ ಪತ್ರದ ಆಧಾರದಲ್ಲಿ ಕಾರ್ ತಗೊಂಡವ್ರಿಗೆ ಕೂಡ ಸಾಲ ಮನ್ನಾ ಆಗಿದೆ ಸಾರ್ ಹಾಗಾಗಿ ನಾವ್ಯಾರು ಇನ್ನು ಸಾಲ ಕಟ್ಬೋದಿಲ್ಲ ಎಂದರು ಅಲ್ಲೇ ಬಂದು ಸೇರಿಕೊಂಡ ರೈತರು. ಈಗ ಬೇಸಾಯ ಅಂದರೆ ನಾಸಾಯ ನೀಸಾಯ ನಮ್ಮ ಮಕ್ಕಳ ಸಾಯ ಎಂಬಂತೆ ಆಗಿಬಿಟ್ಟಿದೆ ಎಂದು ಪ್ರಾಯವಾದ ರೈತನೊಬ್ಬ ಹೇಳಿದರೆ ಬಿ.ಎ. ಮಾಡಿಕೊಂಡು ಬಂದಿರುವ ಒಬ್ಬ ಯುವ ರೈತ ಸುಲಭದ ದರದಲ್ಲಿ ನೇಗಿಲುಗಳು, ಗೊಬ್ಬರ, ಬೀಜ, ವಿದ್ಯುತ್ ಹಾಗೂ ಬೆಳೆಗೆ ನಿಗದಿಪಡಿಸಿದ ಬೆಲೆ ಇಷ್ಟಿದ್ದರೆ ಸಾಕು, ಸಾಲಮನ್ನಾ ಬೇಕಾಗಿಲ್ಲ ರೈತ ಬೆಳಿದೇ ಬೆಳೀತಾನೆ ಎಂಬ ಆತ್ಮವಿಶ್ವಾಸದ ಮಾತುಗಳನ್ನಾಡುತ್ತಾನೆ.

ಬಾಣಾವರದಿಂದ ಅರಸೀಕೆರೆಯತ್ತ ಹೋಗುವ ಮಾರ್ಗದಲ್ಲಿ ಸಿಗುವ ಬೆಂಡೆಕೆರೆಯಿಂದ ಗರುಡನಗಿರಿಯತ್ತ ಐದಾರು ಕಿಲೋಮೀಟರ್ ಹೋದರೆ ಸಿಗುವುದು ಕುರುಬರಹಳ್ಳಿ. ಇಲ್ಲಿ ಭೈರೇಶ್ ಜೂನ್ ನಾಲ್ಕರಂದು ಆತ್ಮಹತ್ಯೆ ಮಾಡಿಕೊಂಡಿದ್ದ. ಆತ ವ್ಯವಸಾಯ ಮಾಡುತ್ತಿದ್ದ. ೩.೮ ಎಕರೆ ಜಮೀನು ತಾಯಿಯ ಹೆಸರಿನಲ್ಲಿದೆ. ಅಣ್ಣ ಬೆಂಗಳೂರಿನಲ್ಲಿ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಾನೆ. ಇನ್ನೂ ನಾಲ್ಕೆಕರೆ ಜಮೀನನ್ನು ಕೋರಿಗೆ ತೆಗೆದುಕೊಂಡು ಕಬ್ಬು ಬೆಳೆದಿದ್ದ ಭೈರೇಶ್ ಬೋರ್‌ವೆಲ್ ಕೊರೆಸಿ ನೀರಾವರಿ ವ್ಯವಸ್ಥೆ ಮಾಡಿಸಿದ್ದ. ಇದಕ್ಕಾಗಿ ಬ್ಯಾಂಕಿನಿಂದ ಸಾಲ ತೆಗೆದುಕೊಂಡಿದ್ದ. ಆತನ ಗೆಳೆಯನೊಬ್ಬ ಹೇಳುವಂತೆ ಇಲ್ಲಿ ಆಸುಪಾಸಿನಲ್ಲಿ ಯಾರೂ ಕಬ್ಬು ಬೆಳೆಯದಿದ್ದರೂ ಎಲ್ಲಿದಂಲೋ ಮಾಹಿತಿ ಪಡೆದು ಕಬ್ಬು ಬೆಳೆಸಿ ಶಿವಮೊಗ್ಗದ ಸಕ್ಕರೆ ಕಾರ್ಖಾನೆಯವರು ಬರುತ್ತಾರೆಂದು ಕಾದು ಕುಳಿತಿದ್ದ. ಕಾರ್ಖಾನೆಯ ಜೊತೆ ಯಾವುದೇ ಒಪ್ಪಂದ ಮಾಡಿಕೊಳ್ಳದ ಆತನ ಕಬ್ಬಿಗೆ ಆಲೆಮನೆಯಲ್ಲೂ ಸರಿಯಾದ ಬೆಲೆ ಸಿಗದೆ ಗದ್ದೆಯಲ್ಲೇ ಅದು ಒಣಗಿ ಹೋಗಿತ್ತು; ಯಾರೋ ಅದಕ್ಕೆ ಬೆಂಕಿ ಹಚ್ಚಿದ್ದರು. ಅಲ್ಲದೆ ಮೊದಲ ಮಗಳಿಗೆ ರಸ್ತೆ ಅವಘಡದಿಂದಾಗಿ ಮೆದುಳಿಗೆ ಏಟಾಗಿ ಮಾನಸಿಕ ಅಸ್ವಸ್ಥತೆ ಶುರುವಾದಾಗ ನಿಮ್ಹಾನ್ಸ್‌ನಲ್ಲಿ ಅದರ ಚಿಕಿತ್ಸೆ ಹಾಗೂ ಆಪರೇಶನ್‌ಗಾಗಿ ಸಾಕಷ್ಟು ಕೈಸಾಲ ಮಾಡಿಕೊಂಡಿದ್ದ. 'ಅವತ್ತು ಸಂಜೆ ಸಣ್ಣ ಮಗಳಿಗೆ ಸ್ಕೂಲ್ ಬ್ಯಾಗು–ಪುಸ್ತಕ ತರಲೆಂದು

ಅವನು ಅರಸೀಕೆರೆಗೆ ಹೋಗಿದ್ದ. ಹೋಗುವಾಗ ಚೆನ್ನಾಗಿಯೇ ಇದ್ದ. ಹೆಂಡತಿ ಮಕ್ಕಳು ತವರಿಗೆ ಹೋಗಿದ್ದರು. ವಾಪಾಸು ಬಂದವನೇ ಮನೆಗೆ ಹೋಗಿ ಬಾಗಿಲು ಹಾಕಿಕೊಂಡ. ನಮ್ಮ ಹಳ್ಳಿಯಲ್ಲಿ ಹೀಗೆ ಒಳಗಿದ್ದು ಬಾಗಿಲು ಹಾಕಿಕೊಳ್ಳುವುದು ಕಡಿಮೆ. ಸಂಶಯ ಬಂದು ಹುಡುಗನೊಬ್ಬನನ್ನು ಕಿಟಕಿಯಿಂದ ಒಳಕಳುಹಿಸಿ ಬಾಗಿಲು ತೆಗೆಸಿದಾಗ ಭೈರೇಶ್ ಅಡುಗೆ ಮನೆಯಲ್ಲಿ ನೇಣು ಹಾಕಿಕೊಂಡಿದ್ದ.' ಎನ್ನುತ್ತಾರೆ ಅಲ್ಲೇ, ಸಮೀಪ ಅಂಗಡಿ ಇಟ್ಟುಕೊಂಡಿರುವ ಒಬ್ಬ ಗ್ರಾಮವಾಸಿ. ಜೂನ್ ಇಪ್ಪತ್ತೆಂಟರವರೆಗೂ ಈ ಕುಟುಂಬಕ್ಕೆ ಯಾವುದೇ ಪರಿಹಾರ ಸಿಕ್ಕಿರಲಿಲ್ಲ. ಜಮೀನು ತಾಯಿಯ ಹೆಸರಿನಲ್ಲಿರುವುದರಿಂದ ಸರ್ಕಾರಿ ವ್ಯಾಖ್ಯೆಯ ಪ್ರಕಾರ ಭೈರೇಶ್ 'ರೈತ' ಅಲ್ಲ. ಇಂಥಲ್ಲಿ ಕಾನೂನುಗಳನ್ನು 'ಅಕ್ಷರಶಃ' ಪಾಲಿಸುವ ಬ್ಯೂರೋಕ್ರಸಿಯಲ್ಲಿ ಪರಿಹಾರ ಸಿಗುವ ಸಾಧ್ಯತೆಯೂ ಇಲ್ಲ....... ವಾಪಾಸು ಬರುವ ಹೊತ್ತಿಗೆ ಎಂಟನೇ ತರಗತಿಯ ಸ್ಕೂಲು ಪುಸ್ತಕಗಳು ಮನೆಯ ಜಗಲಿಯ ಮೇಲೆ ಬಿಡಿಸಿಕೊಂಡಿದ್ದವು.

ಅಂದರೆ ಇಲ್ಲಿರುವುದು ವ್ಯಾಖ್ಯೆಯ ಪ್ರಶ್ನೆ. ಹಾಗೆ ನೋಡಿದರೆ ಯಾವುದೇ ಸಮಸ್ಯೆಯ ಎಲ್ಲ ಸರ್ಕಾರೀ ಪರಿಹಾರಗಳೂ ತಾವೇ ಸಮಸ್ಯೆಯಾಗಲು ಶುರುವಾಗುವುದು ವ್ಯಾಖ್ಯೆಯಿಂದಲೇ. ಈ ಭೈರೇಶ್‌ನನ್ನಾಗಲೀ ಅಥವಾ ದಾವಣಗೆರೆಯ ಅಜ್ಜಪ್ಪನ್ನಾಗಲೀ ರೈತನಲ್ಲವೆಂದೇ ಇವು ವ್ಯಾಖ್ಯಾನಿಸಿವೆ. ಇನ್ನು ಹಲವೆಡೆ ಇಲ್ಲಿ ಕೂಡ ವಸಾಹತುಶಾಹಿ ಬಳುವಳಿಯನ್ನು ನಾವಿನ್ನು ಉಳಿಸಿಕೊಂಡು ಬಂದಿದ್ದೇವೆ. ಹಾಗೂ ವಾಸ್ತವಕ್ಕೆ ಇದೆಷ್ಟು ಅಸಂಗತವಾ ಗಿದೆ ಎಂದು ಇನ್ನೂ ಯೋಚಿಸಲು ಹೋಗಿಲ್ಲ. ಇಂಥವೇ ಕೆಲವು ವ್ಯಾಖ್ಯೆಗಳೆಂದರೆ: ಸಾಮಾನ್ಯ ಸಂಪನ್ಮೂಲಗಳ ವಿಸ್ತೃತ ಅಧ್ಯಯನ ನಡೆಸಿರುವ ಎಸ್.ಎಸ್. ಜೋಧಾ ಗುರುತಿಸಿರುವಂತೆ ವಸಾಹತುಶಾಹಿ ತತ್ವದ ಪ್ರಕಾರ ಬಂಜರು ಭೂಮಿಗೆ ಆದಾಯ ಉತ್ಪಾದಿಸುವ ಸಾಮರ್ಥ್ಯವಿಲ್ಲ. ಅದರಲ್ಲಿ ಯಾವುದೇ ಕೃಷಿ ನಡೆಯದೇ ಇದ್ದುದರಿಂದ <u>ಸರಕಾರಕ್ಕೆ ಆದಾಯ ಸಿಗದ ಭೂಮಿ ಬಂಜರು</u> ಈ ವ್ಯಾಖ್ಯೆ ಚಿತ್ತಗಾಂಗ್, ಡಾರ್ಜಿಲಿಂಗ್, ಜಲಪೈಗುರಿ, ಚೋಟಾನಾಗಪುರ್ ಹಾಗೂ ಅಸ್ಸಾಂನ ಅರಣ್ಯ, ಹೂಗ್ಲಿ ಮತ್ತಿತರ ನದಿ ಮುಖಜ ಭೂಮಿಯನ್ನು ಒಳಗೊಂಡಿತ್ತು. ೧೯೮೦ರಲ್ಲಿ ಬಂಜರು ಭೂಮಿ ಅಭಿವೃದ್ಧಿ ಮಂಡಳಿ ಸ್ಥಾಪನೆಯಾಯಿತು.

ಅಥವಾ ಅಂತಾರಾಷ್ಟ್ರೀಯ ಅರಣ್ಯಗಾರಿಕಾ ತಜ್ಞ ಬೆಥೆಲ್ ಉಷ್ಣವಲಯದ ಕರುಗಳ ಬಗ್ಗೆ ಹೇಳುವದನ್ನು ಗಮನಿಸಿ: 'ಕೈಗಾರಿಕೆ ವಸ್ತು ಪೂರೈಕೆಯ ದೃಷ್ಟಿಯಿಂದ ನೋಡಿದರೆ ಈ ಕಾಡುಗಳು ಮುಖ್ಯವಲ್ಲ. ಇವುಗಳಲ್ಲಿ ಏನನ್ನು ಲಾಭದಾಯಕವಾಗಿ ಮಾರಬಹುದು ಎಂಬುದು ಪ್ರಶ್ನೆ. ಇಂದಿನ ದೃಷ್ಟಿಕೋನದ ಪ್ರಕಾರ ಈ ಕಾಡುಗಳಲ್ಲಿನ ಬಹುಪಾಲು ಮರಗಳು ಕಳೆಗಿಳಿದ್ದಂತೆ.' ಈ ವ್ಯಾಖ್ಯೆಯ ಇನ್ನೊಂದು ಮುಖವನ್ನು ವಂದನಾಶಿವಶಿ ಕೊಡುತ್ತಾರೆ: ಗೋಧಿ ಜೊತೆ ಬೆಳೆಯುವ ಪುಷ್ಟಿಕರ ಹಸಿರೆಲೆ ತರಕಾರಿ ಬತುವಾ. ಗೋಧಿಯ ಕಳೆ ತೆಗೆಯುವ ಹೆಂಗಸರು ಇದರ ಮೂಲಕ ತಮ್ಮ ಕುಟುಂಬಕ್ಕೆ ಪುಷ್ಟಿಕರ ಆಹಾರ ಪೂರೈಸುತ್ತಾರೆ. ಆದರೆ ತೀವ್ರ ರಾಸಾಯನಿಕ ಗೊಬ್ಬರದ ಬಳಕೆಯಿಂದಾಗಿ ಬತುವಾವನ್ನು ಕೀಟನಾಶಕ ಬಳಸಿ ಕೊಲ್ಲಲಾಯಿತು. ಇದರಿಂದ ಆಹಾರ ಸರಪಳಿ ಒಡೆಯಿತು; ಜನ ಪುಕ್ಕಟೆ ಪೋಷಕಾಂಶದಿಂದ ವಂಚಿತರಾದರು.

ಯಾವುದೇ ವ್ಯವಸ್ಥೆಯಿರಲಿ, ಅದು ತನ್ನ ಹುಟ್ಟಿನೊಂದಿಗೇ ಪ್ರತ್ಯೇಕ ಜ್ಞಾನ–ಮೌಲ್ಯ ವ್ಯವಸ್ಥೆಗಳನ್ನು ಸೃಷ್ಟಿಸಿಕೊಂಡಿರುತ್ತದೆ. ಅಂದರೆ: ಯಾವುದೇ ವ್ಯವಸ್ಥೆಯು ಮೊದಲು ರೂಪುಗೊಳ್ಳುವುದು ಒಂದು ಪ್ರತಿ ವ್ಯವಸ್ಥೆಯಾಗಿ. ಅದು ತನ್ನ ಹಿತಾಸಕ್ತಿಯನ್ನು ಸಾರ್ವಜನಿಕ ಹಿತಾಸಕ್ತಿಯ ಪರಿಭಾಷೆಯಲ್ಲಿ ವಿವರಿಸುವ ಬೌದ್ಧಿಕ ಕಾರ್ಯಪಡೆಯನ್ನು ಸಿದ್ಧಗೊಳಿಸುತ್ತದೆ. ಜ್ಞಾನ ವ್ಯವಸ್ಥೆಯ ಮರುರಚನೆಯ ಪ್ರಯತ್ನಗಳು ಶುರುವಾಗುವುದು ಇಲ್ಲಿಂದ.

ಅಥವಾ ಉತ್ಪಾದಕತೆ–ಅನುತ್ಪಾದಕತೆಯ ನಿರ್ಧಾರ: ಸಾವಯವ ಕೃಷಿಯಲ್ಲಿ ಯಾಂತ್ರಿಕ ಬಲದ ಬದಲು ಮಾನವನನ್ನು ಹಾಗೂ ಪಶುಗಳನ್ನು ಬಳಸಿ ಉತ್ಪಾದಿಸಲಾಗುತ್ತದೆ. ಈ ಕೃಷಿ ಬಹುಪಾಲು ಅನುತ್ಪಾದಕ. ಇಲ್ಲಿ ಮನುಷ್ಯ ಅಥವಾ ಪ್ರಾಣಿಜನ್ಯ ಗೊಬ್ಬರ ಬಳಸುವರೇ ಹೊರತು ರಾಸಾಯನಿಕ ಗೊಬ್ಬರ ಇಲ್ಲವೇ ಕೀಟನಾಶಕಗಳ ಬಗ್ಗೆ ತಿಳಿದಿಲ್ಲ.... ಈ ಸ್ಥಿತಿ ಬಡತನದ್ದು ಳ ಈ ಚಿಂತನೆ ಧ್ರುವೀಕೃತ ದೃಷ್ಟಿಕೋನದ ಸ್ಪಷ್ಟ ತೀರ್ಮಾನದತ್ತ ಬೊಟ್ಟು ಮಾಡುತ್ತದೆ: ಪ್ರಕೃತಿ ಅನುತ್ಪಾದಕ. ಸ್ವಾಭಾವಿಕ ಮಾರುಕಟ್ಟೆಯನ್ನು ಆಧರಿಸಿದ ಸಾವಯವ ಕೃಷಿ ಬಡತನಕ್ಕೆ ಕಾರಣ. ಬುಡಕಟ್ಟು ಹಾಗೂ ರೈತಾಪಿ ಸಮಾಜಗಳು ಕೂಡಾ ಅನುತ್ಪಾದಕ. ನಿರಂತರ ಹರಿಯುವ ಸ್ವಚ್ಛ ನೀರಿರುವ ನದಿ ಒಂದು ಉತ್ಪಾದಕ ಸಂಪನ್ಮೂಲ ಅಲ್ಲ. ಅದು ಉತ್ಪಾದಕ ಸಂಪನ್ಮೂಲವಾಗಬೇಕಾಗಿದ್ದಲ್ಲಿ ಅದಕ್ಕೊಂದು ಅಣೆಕಟ್ಟು ಕಟ್ಟಬೇಕು. ತಮ್ಮ ಕುಟುಂಬ ಹಾಗೂ ಸಮಾಜದ ನೀರಿನ ಅಗತ್ಯಕ್ಕಾಗಿ ಈ ನೀರನ್ನು ಬಳಸುವ ಹೆಣ್ಣುಮಕ್ಕಳದ್ದು ಉತ್ಪಾದಕ ಕೆಲಸವಲ್ಲ. ಇದನ್ನು ಇಂಜನಿಯರನೊಬ್ಬ ಮಾಡಿದಲ್ಲಿ ಅದು ಉತ್ಪಾದಕ. ಸ್ವಾಭಾವಿಕ ಅರಣ್ಯ ಅನುತ್ಪಾದಕ. ಏಕತಳಿಯ ವಾಣಿಜ್ಯ ಕಾಡು ಉತ್ಪಾದಕ.

ಈ ಕ್ರಿಯಾಸರಣಿ ಪ್ರಕಾರ ಯಾವುದು ಲಾಭ ಹಾಗೂ ಬಂಡವಾಳವನ್ನು ಸೃಷ್ಟಿಸುವುದಿಲ್ಲವೋ ಅದು ಅನುತ್ಪಾದಕ. ಬಂಡವಾಳಶಾಹಿ ತಾರ್ಕಿಕ ಚೌಕಟ್ಟಿನಲ್ಲಿ ಇಂಥ ಪಾರಿಭಾಷಿಕ ಮರು ವ್ಯಾಖ್ಯೆಗಳು ಅನೂಚಾನಾಗಿ ನಡೆದುಬರುತ್ತವೆ. ನಮ್ಮ ಮೂಲ ಪ್ರಶ್ನೆಗೆ ಹಿಂತಿರುಗುವುದಾದರೆ: 'ರೈತ' ಎನ್ನುವದನ್ನು ವ್ಯಾಖ್ಯಾನಿಸುವುದು ಯಾರು ಮತ್ತು ಯಾವ ಮಾನದಂಡಗಳ ಆಧಾರದಲ್ಲಿ ಎನ್ನುವುದು ಪ್ರಶ್ನೆ. ಯಾವುದೇ ವ್ಯವಸ್ಥೆಯಿರಲಿ, ಅದು ತನ್ನ ಹುಟ್ಟಿನೊಂದಿಗೇ ಪ್ರತ್ಯೇಕ ಜ್ಞಾನ–ಮೌಲ್ಯ ವ್ಯವಸ್ಥೆಗಳನ್ನು ಸೃಷ್ಟಿಸಿಕೊಂಡಿರುತ್ತದೆ. ಅಂದರೆ: ಯಾವುದೇ ವ್ಯವಸ್ಥೆಯು ಮೊದಲು ರೂಪುಗೊಳ್ಳುವುದು ಒಂದು ಪ್ರತಿ ವ್ಯವಸ್ಥೆಯಾಗಿ. ಅದು ತನ್ನ ಹಿತಾಸಕ್ತಿಯನ್ನು ಸಾರ್ವಜನಿಕ ಹಿತಾಸಕ್ತಿಯ ಪರಿಭಾಷೆಯಲ್ಲಿ ವಿವರಿಸುವ ಬೌದ್ಧಿಕ ಕಾರ್ಯಪಡೆಯನ್ನು ಸಿದ್ಧಗೊಳಿಸುತ್ತದೆ. ಇದು ರೂಪಿಸುವ ಮೌಲ್ಯ ವ್ಯವಸ್ಥೆ ತಳ ಹಂತದಲ್ಲಿ ತನ್ನನ್ನು ವಿಸ್ತರಿಸಿಕೊಂಡು ವಾಡಿಕೆಯ ಗ್ರಹಿಕೆ ಅಥವಾ ಗ್ರಾಮ್ಷಿ ಹೇಳುವ ಕಾಮನ್ ಸೆನ್ಸ್ ಆಗಿ ಮಾರ್ಪಾಡಗೊಳ್ಳತೊಡಗುತ್ತದೆ. ಜ್ಞಾನ ವ್ಯವಸ್ಥೆಯ ಮರುರಚನೆಯ ಪ್ರಯತ್ನಗಳು ಶುರುವಾಗುವುದು ಇಲ್ಲಿಂದ. ಚಲಾವಣೆಗೆ ಬರುವ ಈ ವಿಚಾರಗಳು ಬಲದಿಂದ ಅವು ಸತ್ವಪೂರ್ಣ ಗ್ರಹಿಕೆ(ಗುಡ್‌ಸೆನ್ಸ್) ಗಳಾಗಿ ಬದಲಾಗುತ್ತವೆ. ಲೌಕಿಕ ಜೀವನದ ಜೀವಂತ ಅನುಭವಗಳಿಂದ ರೂಪ ತಳೆದಿರುವ ಇವು ಅಧಿಕಾರಸ್ಥ ಮೌಲ್ಯಗಳನ್ನು ಒಳಗೊಳ್ಳುವತ್ತ ನಡೆದು ಅಂತಿಮವಾಗಿ ಪ್ರತಿ ಯಜಮಾನಿಕೆಯನ್ನು ಸೃಷ್ಟಿಸುತ್ತವೆ. ಇಲ್ಲಿಗೆ ಪ್ರತ್ಯೇಕ ಜ್ಞಾನ ವ್ಯವಸ್ಥೆಯ ರಚನೆ ಪೂರ್ತಿಯಾಗಿರುತ್ತದೆ. ಇವೇ ಪಾರಿಭಾಷಿಕ ಮರು ವ್ಯಾಖ್ಯೆಗಳಲ್ಲಿ ತೊಡಗಿಸಿಕೊಳ್ಳುತ್ತವೆ.

ಈಗ ಮಾನದಂಡದ ಪ್ರಶ್ನೆ. ತಾಯಿಯ ಹೆಸರಿನಲ್ಲಿದ್ದ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿದ್ದ ಭೈರೇಶ್ ಹಾಗೂ ಮಲೆಬೆನ್ನೂರಿನ ಸಮೀಪದ ಕೋಮಾರನಹಳ್ಳಿಗೆ ಬಂದು ನಾಲ್ಕೆಕರೆ ಜಮೀನಿನಲ್ಲಿ ಗುತ್ತಿಗೆ ಆಧಾರದ ಮೇಲೆ ಕೃಷಿ ಮಾಡುತ್ತಿದ್ದ ಅಜ್ಜಪ್ಪ ಎರಡೂ ಸಂದರ್ಭಗಳಲ್ಲೂ ಪರಿಹಾರದ ವಿತರಣೆಗೆ ಕಾರಣ ಅವರು ರೈತರಲ್ಲ ಎಂಬುದು. ರೈತರಲ್ಲ ಎನ್ನುವ ನಿರ್ಧಾರಕ್ಕೆ ಕಾರಣ ಅವರ ಹೆಸರಿನಲ್ಲಿ ಜಮೀನಿಲ್ಲ ಎನ್ನುವುದು. ಅಂದರೆ ಜಮೀನಿನ ಒಡೆತನವೇ ಮುಖ್ಯ ಮಾನದಂಡವೆಂದಾಯಿತು. ಮಾರ್ಕ್ಸ್‌ವಾದಿ ನೆಲೆಯಲ್ಲಿ ವಿವರಿಸುವುದಾದರೆ ಇದು ಸಹಜ ನಿರ್ಧಾರವೇ ಆಗಿದೆ.

ಬಂಡವಾಳಶಾಹಿ ಸಮಾಜದಲ್ಲಿ ವ್ಯವಸಾಯ ಕೂಡ ಒಂದು ಕೈಗಾರಿಕೆ. ಇದು ಪೂರ್ಣವಾಗಿ ಬಂಡವಾಳದ ಪ್ರಾಬಲ್ಯಕ್ಕೆ ಒಳಪಟ್ಟಿರುತ್ತದೆ. ಚಾರಿತ್ರಿಕ ವಿಕಾಸದ ಕಾರಣಗಳಿಂದಾಗಿ ಭೂಮಿಯ ಒಡೆತನವೇ ಪೂರ್ವಾಪೇಕ್ಷಿತ ನಿರ್ಣಾಯಕ ಅಂಶವಾಗಿರುತ್ತದೆ.

(ಗೇಣಿಯ ಪ್ರಶ್ನೆ ಕೂಡ ಭೂಮಾಲೀಕತ್ವದ ಜೊತೆ ನಿಕಟವಾಗಿ ಸಂಬಂಧಿಸಿರುತ್ತದೆ ಹಾಗಾಗಿಯೇ ಕೃಷಿ ಭೂಮಿಯನ್ನು ಇತರ ಯಾವುದೇ ಆರ್ಥಿಕ ಚಟುವಟಿಕೆಗಳಿಗಾಗಿ ರೈತನೊಬ್ಬ ಮಾರಾಟ ಮಾಡಿದ ಮೇಲೆ ಆತನ ಒಡೆತನ ಎಲ್ಲಾ ರೀತಿಯಲ್ಲೂ ಕೊನೆಗೊಳ್ಳುತ್ತದೆ. ಆದರೆ ಇದಕ್ಕೆ ಭಿನ್ನ ರೀತಿಯ ಒಡೆತನದ ಕಲ್ಪನೆಯನ್ನು ಕೂಡ ಬಂಡವಾಳಶಾಹಿ ವ್ಯವಸ್ಥೆ ಹುಟ್ಟುಹಾಕಿದೆ. ಇಂಟಲೆಕ್ಚುಯಲ್ ಪ್ರಾಪರ್ಟಿ ಹಕ್ಕುಗಳನ್ನು , ಪೇಟೆಂಟ್ ಹಕ್ಕುಗಳನ್ನು ಗಮನಿಸಿ. ಅವು ಮಾಲೀಕತ್ವದ ಭಿನ್ನ ವ್ಯಾಖ್ಯೆಯನ್ನು ಪ್ರತಿಪಾದಿಸುತ್ತವೆ. ಅಂದರೆ ಒಬ್ಬರಾದರೂ ಒಬ್ಬ ವ್ಯಕ್ತಿ ಒಂದು ನಿರ್ದಿಷ್ಟ ಔಷಧಿಯ ಮೇಲೆ ಹಕ್ಕನ್ನು ಪಡೆದುಕೊಂಡರೆ ಆತ ಮಾರುಕಟ್ಟೆಗೆ ಬಿಡುಗಡೆ ಮಾಡಲು ಅದನ್ನು ಕೈಗಾರಿಕಾ ಕಂಪನಿಗೆ ಮಾರುವುದಲ್ಲದೇ ಮುಂದಿನ ದಿನಗಳಲ್ಲಿ ನಡೆಯುವ ವ್ಯವಹಾರಗಳ ಆದಾಯ ಹಾಗೂ ನಿವ್ವಳ ಲಾಭಗಳಲ್ಲಿ ಕೂಡ ಪಾಲು ಪಡೆಯಬಲ್ಲವನಾಗುತ್ತಾನೆ. ಅಂದರೆ ಮೂಲ ಒಡೆತನದ ಹಕ್ಕುಗಳು ಉಳಿದುಕೊಂಡಿರುತ್ತವೆ. ಈ ತರ್ಕ ರೈತನಿಗೆ ಅನ್ವಯವಾಗದು. ತನ್ನ ಹಕ್ಕಿನ ಭೂಮಿಯನ್ನು 'ಮಾರುಕಟ್ಟೆ ಬೆಲೆ'ಗೆ ಮಾರಿದ ಮೇಲೆ ಮುಂದಿನ ಆರ್ಥಿಕ ಚಟುವಟಿಕೆಗಳ ಆದಾಯ–ಲಾಭಗಳಲ್ಲಿ ಪಾಲು ಹೊಂದಿರುವಂತೆ ಒಡೆತನದ ವ್ಯವಸ್ಥೆಯನ್ನು ಯಾಕೆ ರೂಪಿಸಬಾರದು? ವ್ಯವಸ್ಥೆ ತನಗೆ ಬೇಕಾದ ದಾರಿಗಳನ್ನಷ್ಟೇ ತೆರೆಯುತ್ತದೆ.) □

ಉನ್ನತ ಶಿಕ್ಷಣ: ಪಠ್ಯಕ್ರಮದ ಸ್ವರೂಪ, ಸಮಸ್ಯೆಗಳು

ಡಾ. ಬಿ ಎಂ ಪುಟ್ಟಯ್ಯ

ಉನ್ನತ ಶಿಕ್ಷಣದಲ್ಲಿರುವ ಪಠ್ಯಕ್ರಮವು ಯಾವ ಸ್ವರೂಪ ತಾಳುತ್ತಿದೆ ಮತ್ತು ಅದರಲ್ಲಿ ಯಾವ ಸಮಸ್ಯೆಗಳಿವೆ ಎಂಬುದು ಆಸಕ್ತಿಯ ವಿಷಯ. ಉನ್ನತ ಶಿಕ್ಷಣವನ್ನು ಯಾರು ರೂಪಿಸುತ್ತಿದ್ದಾರೆ ಮತ್ತು ಅದು ಯಾರ ಹಿತಾಸಕ್ತಿಯನ್ನು ಪೂರೈಸುತ್ತಿದೆ ಎಂಬುದನ್ನು ಗಮನಿಸಬೇಕು. ಬ್ರಿಟೀಶರು ಇಂಡಿಯಾದಲ್ಲಿ ಉನ್ನತ ಶಿಕ್ಷಣಕ್ಕೆ ಅಡಿಪಾಯ ಹಾಕಿದವರು. ಅಂದು ವಸಾಹತುಶಾಹಿ ಆಡಳಿತಕ್ಕೆ ಗುಮಾಸ್ತರನ್ನು ನಿರ್ಮಾಣ ಮಾಡುವುದು ಉದ್ದೇಶವಾಗಿತ್ತು. ಅವರು ಈ ದೇಶದ ಸಂಪತ್ತನ್ನು ಕೊಳ್ಳೆಹೊಡೆದು ತಾವು ಲಾಭಗಳಿಸುವ ಭಾಗವಾಗಿಯೇ ಅದನ್ನು ರೂಪಿಸಿ ಜಾರಿಗೆ ತಂದರು. ಈಗ ಉನ್ನತ ಶಿಕ್ಷಣವನ್ನು ಬಹುರಾಷ್ಟ್ರೀಯ ಕಂಪನಿಗಳು ರೂಪಿಸುತ್ತಿವೆ. ಬಹುರಾಷ್ಟ್ರೀಯ ಕಂಪನಿಗಳ ಬಂಡವಾಳ ಮತ್ತು ಅವರ ಮಾರುಕಟ್ಟೆಯಲ್ಲಿ ಕೆಲಸ ಮಾಡುವಂತಹ ಕೆಲಸಗಾರರನ್ನು ಸೃಷ್ಟಿಮಾಡಲು ಉನ್ನತ ಶಿಕ್ಷಣವನ್ನು ಬಳಸಿಕೊಳ್ಳಲಾಗುತ್ತಿದೆ. ಉನ್ನತ ಶಿಕ್ಷಣದ ಎಲ್ಲ ಕೋರ್ಸುಗಳನ್ನೂ ಬಹುರಾಷ್ಟ್ರೀಯ ಕಂಪನಿಗಳ ಮಾರುಕಟ್ಟೆಯ ಲಾಭಕ್ಕೆ ತಕ್ಕಂತೆ ರೂಪಿಸಲಾಗಿದೆ. ವಿಜ್ಞಾನ, ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಾಣಿಜ್ಯ, ಮಾನವಿಕಗಳು ಇವೆಲ್ಲವನ್ನೂ ಮಾರುಕಟ್ಟೆಯ ಲಾಭಕ್ಕಾಗಿ ಕೆಲಸ ಮಾಡುವವರನ್ನು ನಿರ್ಮಾಣ ಮಾಡಲು ಬಳಸಿಕೊಳ್ಳಲಾಗುತ್ತಿದೆ. ಪರಿಣಾಮವಾಗಿ ಉನ್ನತ ಶಿಕ್ಷಣ ಪಡೆಯುವವರನ್ನು ಅವರ ಸಮಾಜ, ಸಮುದಾಯ, ಕುಟುಂಬ, ರಕ್ತಸಂಬಂಧಿಗಳು ಮತ್ತು ಊರು ಕೇರಿಗಳಿಂದ ನಯವಾಗಿ ಬೇರ್ಪಡಿಸಲಾಗಿದೆ. ಹೀಗೆ ಬೇರ್ಪಡಿಸಿ ಅವರ ಮೆದುಳಿಗೆ ಬಹುರಾಷ್ಟ್ರೀಯ ಕಂಪನಿಗಳ ಮಾರುಕಟ್ಟೆಗೆ ಲಾಭ ತರುವ ಪ್ರಜ್ಞೆಯನ್ನು ತುಂಬಲಾಗುತ್ತಿದೆ. ಇದರಿಂದ ತಮ್ಮ ಸಮುದಾಯ, ಊರು ಕೇರಿಗಳ ಬಗ್ಗೆ ಆಸಕ್ತಿ ಮತ್ತು ಕಾಳಜಿಯಿಲ್ಲದ ಯಾಂತ್ರಿಕ ಮಾನವರನ್ನು ಸೃಷ್ಟಿಮಾಡಲಾಗುತ್ತಿದೆ. ಮಧ್ಯಮ ಮತ್ತು ಮೇಲುಮಧ್ಯಮ ವರ್ಗದ ಮಕ್ಕಳು ಸಾಮಾನ್ಯವಾಗಿ ಇದೇ ಪರಿಸರದಲ್ಲಿದ್ದಾರೆ. ಶೈಕ್ಷಣಿಕವಾಗಿ ಬಹಳ ಮುಂದುವರಿಯಬೇಕು ಎಂಬ ಮುಗ್ಧತೆಯಲ್ಲಿ ಸಮಾಜದ ಸಕಲ ಸಂಕಟಗಳನ್ನು ಮರೆತು ಬಂಡವಾಳಶಾಹಿಗೆ ಲಾಭ ತರುವ ಕೆಲಸವೇ ಉನ್ನತ ಶಿಕ್ಷಣದಲ್ಲಿ ಮುಂದುವರಿದ ಹಂತ ಎಂಬ ಭ್ರಮೆಯನ್ನು ಹುಟ್ಟುಹಾಕಲಾಗಿದೆ. 'ನಮ್ಮ ಮಗ/ಮಗಳು ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ನೌಕರಿ ಮಾಡ್ತಾನೆ/ಳೆ. ತಿಂಗಳಿಗೆ ೬೦ ಸಾವಿರ ಸಂಬಳ' ಎಂದು ಕೆಲವರು ಅದು ಸಾಧನೆ, ಹೆಮ್ಮೆ ಎಂಬಂತೆ ಹೇಳುತ್ತಾರೆ. ಆದರೆ ಆ ಒಬ್ಬರ ತಿಂಗಳ ಸಂಬಳ ೬೦ ಸಾವಿರವು, ತಿಂಗಳಿಗೆ ೧೦ ಸಾವಿರಕ್ಕೆ ಕೆಲಸ ಮಾಡುವ ೬ ಜನರ ಉದ್ಯೋಗವನ್ನು, ಅಥವ ೫ ಸಾವಿರಕ್ಕೆ ಕೆಲಸ ಮಾಡುವ ೧೨ ಜನರ ಉದ್ಯೋಗವನ್ನು ಕಿತ್ತುಕೊಂಡಿದೆ ಎಂಬುದನ್ನೇ ಮರೆಮಾಚುತ್ತಿದೆ. ದೊಡ್ಡ ಸಂಬಳ ಪಡೆಯುವವರೆಲ್ಲ ದೊಡ್ಡ ನಿರುದ್ಯೋಗವನ್ನೇ ಸೃಷ್ಟಿಮಾಡಿದ್ದಾರೆ.

ಶೈಕ್ಷಣಿಕವಾಗಿ ಬಹಳ ಮುಂದುವರಿಯಬೇಕು ಎಂಬ ಮುಗ್ಧತೆಯಲ್ಲಿ ಸಮಾಜದ ಸಕಲ ಸಂಕಟಗಳನ್ನು ಮರೆತು ಬಂಡವಾಳಶಾಹಿಗೆ ಲಾಭ ತರುವ ಕೆಲಸವೇ ಉನ್ನತ ಶಿಕ್ಷಣದಲ್ಲಿ ಮುಂದುವರಿದ ಹಂತ ಎಂಬ ಭ್ರಮೆಯನ್ನು ಹುಟ್ಟುಹಾಕಲಾಗಿದೆ. 'ನಮ್ಮ ಮಗ/ಮಗಳು ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ನೌಕರಿ ಮಾಡ್ತಾನೆ/ಳೆ. ತಿಂಗಳಿಗೆ ೬೦ ಸಾವಿರ ಸಂಬಳ' ಎಂದು ಕೆಲವರು ಅದು ಸಾಧನೆ, ಹೆಮ್ಮೆ ಎಂಬಂತೆ ಹೇಳುತ್ತಾರೆ. ಆದರೆ ಆ ಒಬ್ಬರ ತಿಂಗಳ ಸಂಬಳ ೬೦ ಸಾವಿರವು, ತಿಂಗಳಿಗೆ ೧೦ ಸಾವಿರಕ್ಕೆ ಕೆಲಸ ಮಾಡುವ ೬ ಜನರ ಉದ್ಯೋಗವನ್ನು, ಅಥವ ೫ ಸಾವಿರಕ್ಕೆ ಕೆಲಸ ಮಾಡುವ ೧೨ ಜನರ ಉದ್ಯೋಗವನ್ನು ಕಿತ್ತುಕೊಂಡಿದೆ ಎಂಬುದನ್ನೇ ಮರೆಮಾಚುತ್ತಿದೆ. ದೊಡ್ಡ ಸಂಬಳ ಪಡೆಯುವವರೆಲ್ಲ ದೊಡ್ಡ ನಿರುದ್ಯೋಗವನ್ನೇ ಸೃಷ್ಟಿಮಾಡಿದ್ದಾರೆ.

ಉನ್ನತ ಶಿಕ್ಷಣದಲ್ಲಿ ಕಲೆ, ಸಾಹಿತ್ಯ ಮತ್ತು ಮಾನವಿಕಗಳಿಗೆ ಮಹತ್ವ ಕಡಿಮೆಯಾಗುತ್ತಿದೆ. ಅವುಗಳ ಜಾಗದಲ್ಲಿ ಐಟಿ, ಬಿಟಿ ಕೋರ್ಸುಗಳನ್ನು, ಹೋಟೆಲ್ ಮ್ಯಾನೇಜ್‌ಮೆಂಟ್, ಇನ್ಸುರೆನ್ಸ್ ಮುಂತಾದ ಕೋರ್ಸುಗಳನ್ನು ಜಾರಿಗೊಳಿಸಲಾಗಿದೆ. ಈ ಕೋರ್ಸುಗಳಲ್ಲಿ ಸಮಾಜವನ್ನು ಕುರಿತು, ಸಮಾಜದ ಹಸಿವು, ನೋವು, ಸಂಕಟ, ದಮನ, ದಬ್ಬಾಳಿಕೆ ಈ ಯಾವ ಅಂಶಗಳ ಪ್ರಸ್ತಾಪವೂ ಇರುವುದಿಲ್ಲ. ಅಂದರೆ ಒಂದು ತಲೆಮಾರಿನ ತಲೆಯನ್ನು ವಾಸ್ತವ ಸಮಾಜದಿಂದಲೇ ಒತ್ತಾಯಪೂರ್ವಕವಾಗಿ ಪ್ರತ್ಯೇಕಿಸಲಾಗಿದೆ. ಕೇವಲ ಅಂಕಿಅಂಶಗಳೊಂದಿಗೆ ಜಾದೂ ಮಾಡುವ, ಜಗತ್ತಿನ ವಾಣಿಜ್ಯ, ವ್ಯಾಪಾರ ಮತ್ತು ಸಂಪರ್ಕವನ್ನು ಕೇವಲ ಲ್ಯಾಪ್‌ಟಾಪಿನಲ್ಲಿ ನೋಡುವ ಪೀಳಿಗೆಯನ್ನು ನಿರ್ಮಿಸಲಾಗುತ್ತಿದೆ. ಉಳಿದಂತೆ ಕಲೆ, ಸಾಹಿತ್ಯ ಮತ್ತು ಮಾನವಿಕಗಳ ವಿಷಯಗಳಲ್ಲಿಯೂ ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಯನ್ನು ಪೂರೈಸುವ ದೃಷ್ಟಿಕೋನವೇ ಪ್ರಧಾನವಾಗಿ ಕೆಲಸ ಮಾಡುತ್ತಿದೆ.

ಉನ್ನತ ಶಿಕ್ಷಣದಲ್ಲಿ ಸೆಮಿಸ್ಟರ್ ಮತ್ತು ಟ್ರೈಮ್‌ಸ್ಟರ್‌ಗಳನ್ನು ಜಾರಿ ಮಾಡಲಾಗಿದೆ. ಪಠ್ಯಕ್ರಮ, ಬೋಧನೆ, ಪರೀಕ್ಷೆ, ಮೌಲ್ಯಮಾಪನ ಇವೆಲ್ಲವೂ ಕೇವಲ ವಿದ್ಯಾರ್ಥಿಗಳ ನೆನಪಿನ ಶಕ್ತಿಯನ್ನು ಮಾತ್ರ ಪರೀಕ್ಷೆ ಮಾಡುತ್ತಿವೆ. ಅವರ ಆಲೋಚನ ಶಕ್ತಿಯನ್ನು ಬೆಳೆಸುತ್ತಿಲ್ಲ. ಕೇವಲ ೩ ತಿಂಗಳಿಗೋ, ೬ ತಿಂಗಳಿಗೋ ಒಂದು ಪರೀಕ್ಷೆ ಬರೆಯಲು ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯಗಳೆಂಬ ಜೈಲಿನಲ್ಲಿ ಇಡಲಾಗಿದೆ. ಅವರನ್ನು ಹೊರಗಿನ ಸಂಪರ್ಕದಿಂದ ಪ್ರತ್ಯೇಕಿಸಲಾಗಿದೆ. ತರಗತಿಯ ಪಾಠಗಳು ಪ್ರೆಸ್‌ಮೀಟ್ ರೀತಿಯಲ್ಲಿ ಸಾಗುತ್ತಿವೆ. ಮೂಲತಃ ಐಟಿ, ಬಿಟಿ ಕೋರ್ಸುಗಳನ್ನು ಗಮನದಲ್ಲಿಟ್ಟುಕೊಂಡು ಜಾರಿಗೆ ತಂದ ಸೆಮ್ ಮತ್ತು ಟ್ರೈಮ್‌ಸ್ಟರ್‌ಗಳನ್ನು ಮಾನವಿಕಗಳಿಗೂ ವಿಸ್ತರಿಸಲಾಗಿದೆ. ಐಟಿ, ಬಿಟಿ ಕೋರ್ಸುಗಳಂತೆಯೇ ಇಲ್ಲಿಯೂ ಕೂಡ ಪಠ್ಯಕ್ರಮವನ್ನು ಕೇವಲ ಮಾಹಿತಿ ಮತ್ತು ಅಂಕಿಅಂಶಗಳಿಗೆ ಮಾತ್ರ ಸೀಮಿತ ಮಾಡಲಾಗಿದೆ. ಪರೀಕ್ಷೆ ಬರೆದು ಮರೆಯಲು ಮತ್ತು ಸಾಮಾಜಿಕ ಸಂಗತಿಗಳ ಬಗ್ಗೆ ಯಾವ ತಿಳುವಳಿಕೆಯೂ ಸಿಗದಂತೆ ಇವರನ್ನು ದೂರ ಮಾಡಲಾಗಿದೆ.

ಉನ್ನತ ಶಿಕ್ಷಣದ ಸಂಶೋಧನೆಗಳು ಮುಖ್ಯವಾಗಿ ಎರಡು ಹಿತಾಸಕ್ತಿಯಿಂದ ಕೂಡಿವೆ. ಒಂದು : ಸಮಾಜದ ವೈರುಧ್ಯಗಳನ್ನು ಪರಿಗಣಿಸದೆ ಅವು ಮಾರುಕಟ್ಟೆಗೆ ಅಂಕಿಅಂಶಗಳನ್ನು ಒದಗಿಸುತ್ತಿವೆ. ಉದಾಹರಣೆಗೆ, ಇಂಡಿಯಾಕ್ಕೆ ಬಹುರಾಷ್ಟ್ರೀಯ ಬಂಡವಾಳವನ್ನು ಮತ್ತಷ್ಟು ತರುವ ಸಲುವಾಗಿ ಆಳುವ ವರ್ಗ ಈ ದೇಶದಲ್ಲಿ ಬಡವರಿಗಿಂತ ಮಧ್ಯಮ ವರ್ಗದ ಗ್ರಾಹಕರು ಜಾಸ್ತಿ ಇದ್ದಾರೆ ಎಂದು ಘೋಷಿಸಬೇಕಾಗಿದೆ. ಅದಕ್ಕಾಗಿ ಬಿಪಿಎಲ್ ಕಾರ್ಡ್ ಕೊಡಬೇಕಾಗಿದ್ದ ಬಡವರಿಗೆ ಎಪಿಎಲ್ ಕಾರ್ಡುಗಳನ್ನು ಕೊಡಲಾಗಿದೆ. ಈ ಮೂಲಕ ಬಹುಸಂಖ್ಯಾತ ಬಡವರನ್ನು ಮುಚ್ಚಿಟ್ಟು ಅವರನ್ನೆಲ್ಲ ಅಂಕಿಅಂಶಗಳಲ್ಲೇ ಮಧ್ಯಮ ವರ್ಗದವರನ್ನಾಗಿ ಮಾಡಲಾಗಿದೆ. ಅದೇ ರೀತಿ ಅಕ್ಷರಸ್ಥರ ಪ್ರಮಾಣ, ಉದ್ಯೋಗಸ್ಥರ ಪ್ರಮಾಣ ಇತ್ಯಾದಿ ಅಂಶಗಳನ್ನು ಸತ್ಯದ ತಲೆ ಮೇಲೆ ಹೊಡೆದು ಹೇಳಲಾಗುತ್ತಿದೆ. ಇವೆಲ್ಲವೂ ಬಹುರಾಷ್ಟ್ರೀಯ ಕಂಪನಿಗಳ ಶೋಷಣೆಗೆ ಸೂಕ್ತ ಭೂಮಿಕೆಯನ್ನು ನಿರ್ಮಾಣ ಮಾಡಿವೆ. ಎರಡನೆಯದು : ಮಾನವಿಕಗಳಲ್ಲಿ ಆಳುವ ವರ್ಗದ ಹಿತ ಕಾಯುವ ದೃಷ್ಟಿಕೋನಗಳು ಮುಂಚೂಣಿಯಲ್ಲಿವೆ. ಆದ್ದರಿಂದಲೇ ಸಂಶೋಧನೆಗಳನ್ನು ರಿಸರ್ಚ್ ಎಂದು ಕರೆಯುತ್ತಿಲ್ಲ. ಬದಲಾಗಿ ಅವನ್ನೆಲ್ಲ ಪ್ರಾಜೆಕ್ಟ್ ಎಂದು ಕರೆಯಲಾಗುತ್ತಿದೆ. ಮಾನವಿಕಗಳಲ್ಲಿ ಸಾಮಾಜಿಕ ವಸ್ತುಸ್ಥಿತಿಯನ್ನು ಮುಚ್ಚಿಟ್ಟು ಆಳುವ ವರ್ಗದ ಹಿತ ಕಾಯುವ ವಿಧಾನಗಳೇ ಮುಂದಿವೆ. ಸಮುದಾಯ, ಮಹಿಳೆ, ದಲಿತ, ಕಾರ್ಮಿಕ ಇವರನ್ನು ಕುರಿತ ಅಧ್ಯಯನಗಳು ಸಬಲೀಕರಣ, ಏಳಿಗೆ, ಅಭಿವೃದ್ಧಿ, ಮುಖ್ಯವಾಹಿನಿ ಮುಂತಾದ ಪರಿಭಾಷೆಗಳಿಂದ ಆವರಿಸಿದ್ದು ಇವರೆಲ್ಲ ಬಹುರಾಷ್ಟ್ರೀಯ ಕಂಪನಿಗಳ ಶೋಷಣೆಗೆ ಗ್ರಾಹಕರಾಗುವುದನ್ನೇ ಸಬಲೀಕರಣ ಎಂದು ತೀರ್ಮಾನಿಸಲಾಗುತ್ತಿದೆ. ಹಬ್ಬ ಜಾತ್ರೆ, ಭಾಷೆ ಇತ್ಯಾದಿ ವಿಷಯಗಳು ಸಂಶೋಧನೆಗೆ ಆಕರ್ಷಕ ವಿಷಯಗಳಾಗುತ್ತಿವೆ. ಅಲ್ಲೆಲ್ಲ ಬಂಡವಾಳಶಾಹಿ ಹಿತಕಾಯುವ ವಿಧಾನಗಳನ್ನು ಮುಜುಗರವಿಲ್ಲದೆ ಬಳಸಲಾಗುತ್ತಿದೆ. ಈ ವಿಷಯಗಳ ಅಧ್ಯಯನವನ್ನು ಸರಕಾರೇತರ ಸಂಸ್ಥೆಗಳು ಅಂದರೆ

ಎನ್‌ಜಿಓಗಳ ಮೂಲಕ ಮಾಡಿಸಲಾಗುತ್ತಿದೆ. ಈ ಮೂಲಕ ಶಿಕ್ಷಣದ ಸಾರ್ವತ್ರಿಕರಣವನ್ನು ಗಾಳಿಗೆ ತೂರಿ ಅದರ ವ್ಯಾಪ್ತಿಯನ್ನು ಕಡಿಮೆ ಮಾಡಿ ಖಾಸಗಿಯವರ ಹಿತಾಸಕ್ತಿಯನ್ನು ಕಾಪಾಡಲಾಗುತ್ತಿದೆ. ಇವು ಸಾಮಾಜಿಕ ವಸ್ತುಸ್ಥಿತಿಯನ್ನು ತಿರುಚುವ ಅಂಕಿ ಅಂಶಗಳನ್ನು ಸೃಷ್ಟಿಮಾಡುತ್ತಿವೆ. ಉದಾಹರಣೆಗೆ : ಹೊಲೆ ಮಾದಿಗರನ್ನು ಕುರಿತ ಅಂಕಿ ಅಂಶದ ಸ್ವರೂಪ ಮತ್ತು ಮುಂದೆ ಅದರಿಂದ ಆಗಿರುವ ಪರಿಣಾಮಗಳನ್ನು ಯಾರಾದರೂ ಗಮನಿಸಬಹುದು. ಸಾಹಿತ್ಯ, ಸಂಸ್ಕೃತಿ ಕುರಿತ ವಿಚಾರಗಳಲ್ಲಿ ಕೋಮುವಾದಿಗಳಿಗೆ ಉತ್ತರ ಹೇಳುವ ಕೃತಕ ಹಠ ಎದ್ದುಕಾಣುತ್ತಿದೆ. ಪರಿಣಾಮವಾಗಿ ಹಬ್ಬ, ಜಾತ್ರೆ ಮುಂತಾದ ಆಚರಣೆಗಳಲ್ಲಿ ಭರ್ಜರಿ ಸಾಮರಸ್ಯ ಮತ್ತು ಸೌಹಾರ್ದತೆ ಇದೆ ಎಂಬ ಭ್ರಮೆಯನ್ನು ಹುಟ್ಟುಹಾಕಲಾಗುತ್ತಿದೆ. ಹಬ್ಬ, ಜಾತ್ರೆಗಳು ವರ್ಷದ ಕೆಲವೇ ದಿನಗಳಲ್ಲಿ ಮಾತ್ರ ನಡೆಯುವಂತಹವು. ಆ ದಿನಗಳನ್ನು ಮಾತ್ರ ಸಂಶೋಧನೆಗೆ ಪರಿಗಣಿಸುವ ವಿದ್ವಾಂಸರು ವರ್ಷದ ಉಳಿದ ದಿನಗಳನ್ನು ನಯವಾಗಿ ಮುಚ್ಚಿಡುತ್ತಿದ್ದಾರೆ. ಆ ದಿನಗಳಲ್ಲಿ ಯಾವ ಬಗೆಯ ಸೌಹಾರ್ದ ಮತ್ತು ಸಾಮರಸ್ಯ ಇದೆ ಎಂಬುದನ್ನು ದೈನಂದಿನ ಬದುಕಿನ ಕ್ರೌರ್ಯಗಳು ಸ್ಪಷ್ಟವಾಗಿ ಹೇಳುತ್ತಿವೆ. ಅದೂ ಸಾಲದಿದ್ದರೆ ಪೊಲೀಸು ಸ್ಟೇಶನ್ ದಾಖಲೆಗಳು ಎಂತಹ ಸಾಮರಸ್ಯ ಇದೆ ಎಂಬುದನ್ನು ಸಾರಿಸಾರಿ ಹೇಳುತ್ತಿವೆ.

ಉನ್ನತ ಶಿಕ್ಷಣದ ಪಠ್ಯಕ್ರಮವನ್ನು ಹೊರತುಪಡಿಸಿ, ಕೆಲವು ವಿಷಯಗಳ ಚರ್ಚೆ ಉನ್ನತ ಶಿಕ್ಷಣದ ದರ್ಜೆಯಲ್ಲೆ ನಡೆಯುತ್ತಿವೆ. ಉದಾಹರಣೆಗೆ ಬಜೆಟ್ ಕುರಿತ ಚರ್ಚೆ. ಇಲ್ಲೆಲ್ಲ ಆಳುವ ವರ್ಗದ ಪರವಾದ ಅಭಿಪ್ರಾಯ ಮತ್ತು ಆಲೋಚನೆಯನ್ನು ಬಲವಾಗಿ ಸಮರ್ಥಿಸಲಾಗುತ್ತಿದೆ. ಈ ಸಲದ ಕೇಂದ್ರದ ಬಜೆಟನ್ನು ರೈತರ ಸಾಲ ಮನ್ನಾದ ಬಜೆಟ್ ಎಂದು ರೈತರು ನಂಬುವಂತೆ ಮಾಡಲಾಗಿದೆ. ಆ ಮೂಲಕ ೨೫ ಸಾವಿರಕ್ಕೂ ಹೆಚ್ಚು ರೈತರನ್ನು ಬಲಾತ್ಕಾರವಾಗಿ ಬಲಿಕೊಟ್ಟ ಅಪರಾಧವನ್ನು ಸರಕಾರ ಮುಚ್ಚಿಡುವ ಕೆಲಸವನ್ನು ನಯವಾಗಿ ಮಾಡಿಮುಗಿಸಿದೆ. ೬೦ ಸಾವಿರ ಕೋಟಿ ಸಾಲ ಮನ್ನಾ ಮಾಡಿ ಯಾವ ರೈತರನ್ನು ಉದ್ದಾರ ಮಾಡುತ್ತಾರೊ ಗೊತ್ತಿಲ್ಲ. ಆದರೆ ಆ ರೈತರನ್ನೆಲ್ಲ ಬಹುರಾಷ್ಟ್ರೀಯ ಕಂಪನಿಗಳ ಮಾರುಕಟ್ಟೆಯ ಕಪಿಮುಷ್ಟಿಯಿಂದ ಬಿಡುಗಡೆ ಮಾಡುತ್ತಾರಾ ಎಂಬುದು ಮುಖ್ಯ ವಿಚಾರ.

ಉನ್ನತ ಶಿಕ್ಷಣವನ್ನು ಸಂಪೂರ್ಣ ಖಾಸಗೀಕರಣ ಮಾಡಿರುವುದರಿಂದ ಅದರ ಪಠ್ಯಕ್ರಮವೂ ಕೂಡ ಖಾಸಗಿ ಕಂಪನಿಗಳ ಸೊತ್ತಾಗಿದೆ. ಖಾಸಗೀಕರಣದ ದಾಳಿ ಹಾಗೇ ಇರಲಿ; ಉನ್ನತ ಶಿಕ್ಷಣದ ಪಠ್ಯಕ್ರಮ ರಿಪೇರಿಯಾಗಲಿ ಎಂದರೆ ಆಗುವುದಿಲ್ಲ. ಖಾಸಗೀಕರಣದ ವಿರೋಧಿ ಚಳವಳಿ ಮಾತ್ರವೇ ಉನ್ನತ ಶಿಕ್ಷಣದ ಪಠ್ಯಕ್ರಮವನ್ನು ರಿಪೇರಿ ಮಾಡುತ್ತದೆ. □

ಉನ್ನತ ಶಿಕ್ಷಣದ ಪಠ್ಯಕ್ರಮವನ್ನು ಹೊರತುಪಡಿಸಿ, ಕೆಲವು ವಿಷಯಗಳ ಚರ್ಚೆ ಉನ್ನತ ಶಿಕ್ಷಣದ ದರ್ಜೆಯಲ್ಲೆ ನಡೆಯುತ್ತಿವೆ. ಉದಾಹರಣೆಗೆ ಬಜೆಟ್ ಕುರಿತ ಚರ್ಚೆ. ಇಲ್ಲೆಲ್ಲ ಆಳುವ ವರ್ಗದ ಪರವಾದ ಅಭಿಪ್ರಾಯ ಮತ್ತು ಆಲೋಚನೆಯನ್ನು ಬಲವಾಗಿ ಸಮರ್ಥಿಸಲಾಗುತ್ತಿದೆ.

ಕಾನೂನು ಬದ್ಧ ಕುಮ್ಮಕ್ಕು

(೧೫ನೇ ಪುಟದಿಂದ)

ಗಳನ್ನು ಕನ್ನಡ ಮಾತನಾಡುವ ವ್ಯಕ್ತಿ ನಿತ್ಯ ಬಳಸುತ್ತಿರುತ್ತಾನೆ.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ವಿದೇಶಿ ಭಾಷೆಯೊಂದನ್ನು, ಒತ್ತಡ ಪೂರ್ವಕವಾಗಿ ಹೇರಲಾದ ಭಾಷೆಯನ್ನು ಒಪ್ಪಿಕೊಳ್ಳುವ ಮನಸ್ಸುಗಳು ತಮ್ಮದೇ ನೆಲದ, ತಮ್ಮದೇ ಮನೆಯಲ್ಲಿ ಮಾತನಾಡುವ ಭಾಷೆಯನ್ನು ಒಪ್ಪಿಕೊಳ್ಳದ ಅಸಹನೀಯ ಮನಸ್ಥಿತಿಯೊಂದು ಬೆಳೆದು ನಿಂತಿದೆ. ಇದು ಕನ್ನಡವನ್ನು ಉಸಿರಾಡಲೂ ಕೂಡ ಬಿಡದೇ ಅದನ್ನು ಹೊಸಕಿ ಹಾಕುವ ಹುನ್ನಾರ ಅಂತಹ ಮನಸ್ಥಿತಿಯ ಹಿಂದಿದೆ. ಇಂಗ್ಲಿಶ್ ಗೊತ್ತಿಲ್ಲದಿರುವುದೇ ಒಂದು ಅಂಗವಿಕಲತೆ ಎಂಬಂತಾಗಿದೆ. ತಮ್ಮದೇ ಭಾಷೆಯನ್ನು ಶಿಕ್ಷಣದ ಪರಿಸರದಲ್ಲಿ ಬಳಸಲು ಕೀಳರಿಮೆ ಪಟ್ಟುಕೊಳ್ಳುವ, ಒಂದು ವೇಳೆ ಮಾತನಾಡಿದರೆ ಅಂತಹವರನ್ನು ಕೀಳಾಗಿ ಕಾಣುವ ಸ್ಥಿತಿ ಬೆಂಗಳೂರಿನಂತಹ ನಗರದಲ್ಲಿ ವ್ಯಾಪಕವಾಗಿದೆ. ಇಂತಹ ಮನಸ್ಥಿತಿಗೆ ಇಂದಿನ ನ್ಯಾಯಾಲಯದ ತೀರ್ಪು ಮತ್ತಷ್ಟು ಕಾಣಿಕೆಯನ್ನು ನೀಡುತ್ತದೆಯೇ ಹೊರತು, ಇಂತಹ ಕ್ರೂರಪದ್ಧತಿಯನ್ನು ನಿಯಂತ್ರಿಸಲು ಅಲ್ಲ. ಕೇವಲ ತರಗತಿಗಳಲ್ಲಿ ಮಾತ್ರವಲ್ಲ. ಇಡೀ ಶಿಕ್ಷಣ ಸಂಸ್ಥೆಯ ಪರಿಸರದ ಯಾವ ಹಂತದಲ್ಲಿಯೂ ಕನ್ನಡಕ್ಕೆ ಅವಕಾಶ ನೀಡದಂತೆ ಮಾಡಲಾಗುತ್ತಿದೆ. ಹಾಗೆ ಮಾಡುವುದೇ ಶ್ರೇಷ್ಠತೆಯ, ಅಂತಹ ಸಂಸ್ಥೆಯೇ ಶ್ರೇಷ್ಠ ಸಂಸ್ಥೆಯಾಗಿ ಕಾಣುವಂತಹ ಸ್ಥಿತಿ ಇದೆ. ಎಲ್ಲ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಇರುವಂತಹ ಪರಿಸ್ಥಿತಿ ಇದು.

ಸಾರಾಂಶದಲ್ಲಿ ಈಗಿನ ನ್ಯಾಯಾಲಯದ ತೀರ್ಪು ಕೆಲವರ ಹಕ್ಕಿನ ನೆಪದಲ್ಲಿ ಮತ್ತಷ್ಟು ಅಸಮಾನತೆಯನ್ನೇ ದೃಢೀಕರಿಸಿದೆ. ಕನ್ನಡ=ಸರ್ಕಾರ=ಬಡವ=ಹಕ್ಕುಗಳಿಲ್ಲದವರು; ಇಂಗ್ಲಿಶ್=ಖಾಸಗಿ=ಶ್ರೀಮಂತರು=ಹಕ್ಕುಳ್ಳವರು=ಸ್ವತಂತ್ರರು ಎನ್ನುವಂತಹ ಸಮೀಕರಣ ಇನ್ನಷ್ಟು ಪ್ರಬಲವಾಗಲಿದೆ. ಅಲ್ಲದೇ ಈಗಾಗಲೇ ಇಡೀ ಶಿಕ್ಷಣವನ್ನು ಇಂಗ್ಲಿಶ್ ಮಾಧ್ಯಮದಲ್ಲಿ ನಡೆಸಿರುವ ವಿದ್ಯಾರ್ಥಿಗಳ ಕನ್ನಡ ಪರಿಸ್ಥಿತಿಯನ್ನು ಗಮನಿಸಬೇಕು. ಅವರ ಮಾತೃಭಾಷೆ ಕನ್ನಡವಾಗಿದ್ದರೂ, ಮನೆಯಲ್ಲಿ ಕೆಲವು ವೇಳೆ ಕನ್ನಡದಲ್ಲಿ ಮಾತನಾಡಿದರೂ ಅವರ ಕನ್ನಡ ಇತರರಿಗಿಂತ ದುರ್ಬಲವಾಗಿದೆ. ಅವರಿಗೆ ಕೆಲವು ಸರಳ ವಿಚಾರಗಳನ್ನು ಕನ್ನಡದಲ್ಲಿ ಮಾತನಾಡಲಾಗದ ಸ್ಥಿತಿಯಲ್ಲಿದ್ದಾರೆ. ತಮ್ಮೊಳಗಿನ ವಿಚಾರವನ್ನು ಕನ್ನಡದಲ್ಲಿ ವ್ಯಕ್ತಗೊಳಿಸಲಾರದಷ್ಟು ಅಸಮರ್ಥತೆ ಅವರನ್ನು ಕಾಡುತ್ತದೆ. ಅವರ ಪದಸಂಪತ್ತು ತೀರ ಕಡಿಮೆಯದಾಗಿರುತ್ತದೆ. ಆದರೆ ಅವರಿಗೆ ಅಂತಹ ಕೀಳರಿಮೆ ಕಾಡುವುದಿಲ್ಲ. ಅದನ್ನೇ ತಮ್ಮ ಘನತೆ ಎಂದು ಬೀಗುತ್ತಾರೆ.

ಮಾತೃಭಾಷೆಯಲ್ಲದ ಬೇರೊಂದು ಭಾಷೆಯ ಮೂಲಕ ಶಿಕ್ಷಣವನ್ನು ನೀಡುತ್ತಾ ಹೋದಂತೆ ನಿಧಾನವಾಗಿ ತನ್ನ ಭಾಷೆಯಲ್ಲಿ ವಿಚಾರವನ್ನು, ಜ್ಞಾನವನ್ನು ಉತ್ಪಾದಿಸಲಾಗದ ದುರ್ಬಲ ಸ್ಥಿತಿಗೆ ಅಕ್ಷರಸ್ಥ ವರ್ಗ ತಲುಪುತ್ತದೆ. ಅಂದರೆ ಆ ಸಮುದಾಯದ ವಿದ್ಯಾವಂತ ವರ್ಗ ತನ್ನ ಭಾಷೆಯಲ್ಲಿ ಜ್ಞಾನವನ್ನು ಉತ್ಪಾದಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತ ಹೋಗುತ್ತದೆ. ಅನ್ಯಭಾಷೆಯಲ್ಲಿ ಸೃಷ್ಟಿಸುತ್ತ ಅದನ್ನು ಬೆಳೆಸುತ್ತ ಪರಾವಲಂಬಿಯಾಗಿಯೇ ಬದುಕಬೇಕಾಗುತ್ತದೆ. ಮತ್ತೆ ನಿಧಾನವಾಗಿ ಸಮುದಾಯದ ಭಾಷಿಕರ ಸಂಖ್ಯೆಯೂ ಕ್ಷೀಣಿಸುತ್ತಾ ಹೋಗಬಹುದು. ಸಮುದಾಯದ ಮುಖ್ಯವರ್ಗವೊಂದು ಸಾಂಸ್ಕೃತಿಕವಾಗಿ ತಮ್ಮನ್ನು ಬದಲಾಯಿಸಿಕೊಳ್ಳುತ್ತಾ ಹೋಗಬಹುದು. ಶಿಕ್ಷಣದ ಮಾಧ್ಯಮ ಎನ್ನುವುದು ಯಾವುದೇ ಸಮುದಾಯದ ಸಾಂಸ್ಕೃತಿಕ ಬದುಕಿನಲ್ಲಿ ಪ್ರಧಾನವಾದುದು. ಅದು ಒಂದು ಜನಾಂಗದ ನಾಡಿಮಿಡಿತವನ್ನೇ ಬದಲಾಯಿಸಬಲ್ಲಷ್ಟು ಶಕ್ತವಾದುದು.

ಹಾಗಾಗಿ ಶಿಕ್ಷಣವನ್ನು ಅನ್ಯಭಾಷೆಯ ಮೂಲಕ ಪಡೆದುಕೊಳ್ಳುವುದು ಭಾಷಿಕ ಅಸ್ಮಿತೆಯನ್ನು ಪಲ್ಲಟಗೊಳಿಸುವಂತಹ ಪ್ರಯತ್ನಗಳಿಗೂ ನಾಂದಿಯಾಗುತ್ತದೆ. ನ್ಯಾಯಾಲಯದ ಇಂತಹ ತೀರ್ಪುಗಳು ದೀರ್ಘಕಾಲದಲ್ಲಿ ಸಮುದಾಯದ ಜನಭಾಷೆಗಳನ್ನು ಕೊಲ್ಲುವ ಪ್ರಯತ್ನಗಳಿಗೂ ನೆರವಾಗುತ್ತಿರುತ್ತವೆ ಎಂಬುದು ಗಮನಾರ್ಹ ಸಂಗತಿ. ಪ್ರಜ್ಞಾವಂತ ನಾಗರಿಕ ಸಮಾಜ ಈ ಬಗೆಗೆ ಗಂಭೀರವಾಗಿ ಆಲೋಚಿಸಿ ತೀರ್ಮಾನ ಕೈಗೊಳ್ಳಬೇಕಿದೆ. ನಮ್ಮ ರಾಜಕೀಯ ವ್ಯವಸ್ಥೆ ಯಾವ ಕಡೆ ಹೆಚ್ಚು ಬಲವಿರುತ್ತದೆಯೋ ಆ ಕಡೆಗೆ ಹೆಚ್ಚು ವಾಲುತ್ತದೆ. ಅದು ಪ್ರಬಲವಾದ ಶೋಷಕ ಮತ್ತು ಸ್ವಾರ್ಥಪರ ವರ್ಗಗಳಿಗೆ ಸದಾ ಮಣಿಯುತ್ತಿರುತ್ತದೆ. ಈವರೆಗೂ ಅದನ್ನೇ ಮಾಡಿಕೊಂಡು ಬಂದಿದೆ. ಹಾಗಿಲ್ಲದೇ ಇದ್ದರೆ ಸ್ವಾತಂತ್ರ್ಯ ಬಂದ ಅರವತ್ತು ವರ್ಷದ ಬಳಿಕವೂ ಶಿಕ್ಷಣಮಾಧ್ಯಮದ ಪ್ರಶ್ನೆಯನ್ನು ಬಗೆಹರಿಸದಷ್ಟು ಅಸಾಧ್ಯವಾಗಿರಲಿಲ್ಲ. ಇದನ್ನು ಗಮನಿಸಿ ಹೇಳುವುದಾದರೆ ಪ್ರಭುತ್ವ ತನಗೆ ತಾನೇ ಈ ಸಮಸ್ಯೆಯನ್ನು ಯಾವತ್ತೂ ಬಗೆಹರಿಸಲಾರದು.

ಇದನ್ನು ಅರಿತು ಜನಸಮುದಾಯವನ್ನು ಜಾಗೃತಗೊಳಿಸುತ್ತ ಪ್ರಬಲವಾದ ರಾಜಕೀಯ ಹೋರಾಟವನ್ನು ರೂಪಿಸಬೇಕಾದ ಹೊಣೆ ಇದೆ. ನಮ್ಮ ದುರಂತವೆಂದರೆ ಜನರನ್ನು ಹಿಂಸಿಸುವ, ದೌರ್ಜನ್ಯ ಎಸಗುವ ಜನರು ಐಕ್ಯವಾಗಿದ್ದಾರೆ. "ಜನಪರ' ಎಂದು ಮಾತನಾಡುವ ಜನರು ಛಿದ್ರವಾಗಿದ್ದು ದುರ್ಬಲರಾಗಿದ್ದಾರೆ. ಇದರ ಪ್ರಯೋಜನವನ್ನು ಆಳುವ ವರ್ಗಗಳು, ಪ್ರಭುತ್ವ ಪಡೆದುಕೊಳ್ಳುತ್ತಿವೆ. ಭಾಷೆಯ ಪ್ರಶ್ನೆ ಇಂದು ಕೇವಲ ಭಾಷೆಯ ಪ್ರಶ್ನೆಯಾಗಿ ಉಳಿಯದೆ ನಮ್ಮ ಉತ್ಪಾದನೆಯ ವ್ಯವಸ್ಥೆಯ ಜೊತೆಗೆ ಹೆಣೆದುಕೊಂಡಿದೆ. ಅದರ ಅಗತ್ಯದ ಭಾಗವಾಗಿಯೂ ಇಂಗ್ಲಿಶ್ ಬೆಳೆಯುತ್ತಿದೆ. ವರ್ಗ ಅಸಮಾನತೆಯ ರಾಜಕೀಯ ಆರ್ಥಿಕ ಸಂಗತಿಗಳ ಒಳಗೂ ಅದು ತನ್ನ ಬಾಹುಗಳನ್ನು ಚಾಚಿನಿಂತಿದೆ. ಹಾಗಾಗಿ ಈ ಸಮಸ್ಯೆಯಿಂದ ಬಿಡುಗಡೆಗೊಳ್ಳಬೇಕಾದರೆ ಈ ಎಲ್ಲವನ್ನು ಅರಿತುಕೊಳ್ಳುವ ಸಾಮರ್ಥ್ಯವುಳ್ಳ ಪ್ರಜ್ಞಾವಂತರು, ಜನಪರ ಕಾಳಜಿ ಉಳ್ಳ ಜನರು ಕ್ರಿಯಾಶೀಲರಾಗಿ ತಮ್ಮ ಚಾರಿತ್ರಿಕವಾದ ಜವಾಬ್ದಾರಿಯನ್ನು ನಿರ್ವಹಿಸಲೇಬೇಕಿದೆ. □

ಸಮಾಜವಾದಿ ಆಂದೋಲನದ ಪುನರುಜ್ಜೀವನ

ಏಕೆ? ಮತ್ತು ಹೇಗೆ

ಡಿ.ಎಸ್ ನಾಗಭೂಷಣ

ಜಾಗತೀಕರಣದ ಈ ದಿನಗಳಲ್ಲಿ ಸಮಾಜವಾದದ ಬಗ್ಗೆ ಮಾತಾಡುವುದೇ ಕೆಲವರಿಗೆ ತಮಾಷೆಯಾಗಿ ಕಾಣುವುದು. ಏಕೆಂದರೆ ಸಮಾಜವಾದದ ಸಾವಿನಲ್ಲೇ ಜಾಗತೀಕರಣ ಚಿಗುರೊಡೆದಿರುವುದು ಎಂದು ಇವರು ನಂಬಿದ್ದಾರೆ. ಅರ್ಥಾತ್, ಕಳೆದ ಶತಮಾನದ ಮಹಾ ರಾಜಕೀಯ ಪ್ರಯೋಗವಾದ ಸಮಾಜವಾದ, ಈಗ ತನ್ನೆಲ್ಲ ವಿಶ್ವಾಸಾರ್ಹತೆ ಕಳೆದುಕೊಂಡು ಜಾಗತೀಕರಣಕ್ಕೆ ದಾರಿ ಮಾಡಿಕೊಟ್ಟಿದೆ ಎಂಬುದು ಇವರವಾದ. ಇವರ ಪ್ರಕಾರ ಜಾಗತೀಕರಣವೆಂಬುದು ಮತ್ತೇನೂ ಆಗಿರದೆ, ಯಾವ ಬಂಡವಾಳಶಾಹಿ ವ್ಯವಸ್ಥೆಯ ಶೋಷಣೆಯ ಮೂಲಗಳನ್ನು ಗುರುತಿಸಿ ಅದಕ್ಕೆ ಪರಿಹಾರ ರೂಪವಾಗಿ ಮೂಡಿನಿಂತಿತೋ, ಆ ಸಮಾಜವಾದದ ವಿರುದ್ಧ ಬಂಡವಾಳಶಾಹಿಯೂ ಸಾಧಿಸಿರುವ ಆತ್ಯಂತಿಕ ವಿಜಯವೇ ಆಗಿದೆ. ಇದು ಒಂದು ರೀತಿಯಲ್ಲಿ ನಿಜವೂ ಹೌದು. ಏಕೆಂದರೆ ಕಳೆದ ಶತಮಾನದ ಮಧ್ಯ ಭಾಗದಲ್ಲಿ ಹೊಸ ನೈತಿಕತೆಯ ಮಾತ್ರವಲ್ಲ, ಹೊಸ ಮಾನವತೆಯ ಪ್ರತೀಕವಾಗಿ ಜಗತ್ತಿನ ಎಲ್ಲ ಭಾಗಗಳ ಚಿಂತಕರ ರಾಜಕೀಯ ಆಕರ್ಷಣೆಯಾಗಿದ್ದ ಸಮಾಜವಾದ; ಆ ಶತಮಾನದ ಕೊನೆಯ ಹೊತ್ತಿಗೆ ಚಲಾವಣೆ ಕಳೆದುಕೊಂಡ ನಾಣ್ಯದಂತೆ ಇತಿಹಾಸದ ಜೇಬು ಸೇರುವ ಸ್ಥಿತಿ ತಲುಪಿದ್ದನ್ನೂ ಕಣ್ಣಾರೆ ಕಂಡವರು, ಇನ್ನೇನು ಭಾವಿಸಿಯಾರು?

ಆದರೆ ಈ ಸತ್ಯಕ್ಕೆ ಇನ್ನೊಂದು ಮುಖವೂ ಇದೆ. ಜಗತ್ತಿನ ಇತಿಹಾಸದುದ್ದಕ್ಕೂ ಅನೇಕ ರೀತಿಯ ಐತಿಹಾಸಿಕ ಕಾರಣಗಳಿಂದಾಗಿ ಪ್ರಬಲರಾದವರ ಮತ್ತು ದುರ್ಬಲರಾದವರ ನಡುವೆ ಘರ್ಷಣೆ ನಡೆದೇ ಇದೆ. ಈ ನಿರಂತರ ಘರ್ಷಣೆಯ ಒಂದು ಭಾಗವಾಗಿ ಕಳೆದ ಶತಮಾನದ ರಾಜಕೀಯ ಇತಿಹಾಸ ನೋಡಿದಾಗ, ಯಾರಾದರೂ ಅಂತಿಮವಾಗಿ ಗೆದ್ದಿದ್ದಾರೆ ಎಂದು ಹೇಳುವುದು ಇತಿಹಾಸದ ದೃಷ್ಟಿಯಿಂದ ಕಷ್ಟವಾಗುತ್ತದೆ. ಏಕೆಂದರೆ ಕಳೆದ ಶತಮಾನದ ಯಾವ ಸಮಾಜವಾದೀ ಚಿಂತನೆಯ ಒಂದು ಭಾಗವಾಗಿ ಮಾರ್ಕ್ಸವಾದ ಮೂಡಿಬಂತೋ ಆ ಮಾರ್ಕ್ಸವಾದ, ಈ ನಿರಂತರ ಘರ್ಷಣೆಗೆ ಕಾರಣವಾದ ಐತಿಹಾಸಿಕ ಶಕ್ತಿಗಳ ಮರ್ಮವನ್ನು ತಾನು ಅರಿತಿದ್ದೇನೆಂದು ಘೋಷಿಸಿಕೊಂಡು; ಅದರ ಶಾಶ್ವತ ನಿವಾರಣೆಯ 'ವೈಜ್ಞಾನಿಕ' ಮದ್ದನ್ನೂ 'ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ' ರೂಪದಲ್ಲಿ ಪ್ರಚಾರಮಾಡಿ ಹುಟ್ಟಿಸಿದ ನಂಬಿಕೆಯ ಹಿನ್ನೆಲೆಯಲ್ಲಿ ಮಾತ್ರ, ಇವೊತ್ತಿನ ಸೋಲು-ಗೆಲುವುಗಳ ಮಾತುಗಳು ಅರ್ಥ ಪಡೆಯುತ್ತವೆ. ಸಮಾಜವಾದವನ್ನು ಅಥವಾ ಮಾರ್ಕ್ಸವಾದವನ್ನು ಜಗತ್ತಿನ ಇತಿಹಾಸದುದ್ದಕ್ಕೂ ಪಟ್ಟಭದ್ರರ ಹಾಗೂ ವಂಚಿತರ ನಡುವೆ ಪದೇ ಪದೇ ನಡೆಯುತ್ತ ಬಂದಿರುವ ಘರ್ಷಣೆಯ ಇತ್ತೀಚಿನ ರಾಜಕೀಯ ಚಿಂತನಾ ರೂಪಗಳೇ ಹೊರತು ಸಮಾಜವಾದ ಪ್ರತಿನಿಧಿಸುವ ಮನುಷ್ಯನ ಸಮಾನತೆಯ ಆಶ್ರಯದಲ್ಲಿ ಎಂಬುದು ಸ್ಪಷ್ಟವಾಗುತ್ತದೆ. ಜಾಗತೀಕರಣ ಎಂದರೆ- ಹಳೆಯ ಮಾರ್ಕ್ಸವಾದಿಗಳೂ ತಮ್ಮ ಸಿದ್ಧಾಂತದ (ಕುರುಡು) ನಂಬಿಕೆಯ ಆಧಾರದ ಮೇಲೆ ಹೇಳುತ್ತಿದ್ದಂತೆ-'ಇತಿಹಾಸದ ಅಂತ್ಯ' ಎಂದು ಇಂದಿನ ಜಾಗತೀಕರಣವಾದಿಗಳೂ ಹೇಳುತ್ತಿದ್ದಾರೆ. ಅವರಿಗೆ ಇತಿಹಾಸ ನಿರ್ಮಾಣವಾಗುವುದು ಮನುಷ್ಯನ ಅದಮ್ಯ ಚೇತನ ಶಕ್ತಿಯಿಂದಲೇ ಹೊರತು ಮಾರುಕಟ್ಟೆಯ ಜಡ ಶಕ್ತಿಗಳಿಂದಲ್ಲ ಎಂಬ ಆಧ್ಯಾತ್ಮಿಕ ಸತ್ಯದ ಅರಿವಿಲ್ಲದಿರುವುದೇ ಕಾರಣವಾಗಿದೆ. ಮಾರುಕಟ್ಟೆಗೆ ಅಥವಾ ಅದು ಸೃಷ್ಟಿಸುವ ಭೌತಿಕ ದಾಹಕ್ಕೆ ಒಂದು ಮಿತಿಯಿದೆ- ಒಂದು ಸ್ಥಗಿತತೆಯ, ಒಂದು ಕೊಳೆಯುವಿಕೆಯ ಬಿಂದು ಇದೆ. ಆ ಸ್ಥಿತಿ ಮುಟ್ಟಿದೊಡನೆ ಮನುಷ್ಯ ಚೇತನ , ಮಾರುಕಟ್ಟೆ ಶಕ್ತಿಗಳು ಹೊಟ್ಟೆಯಿಂದಲೇ ಒಡೆದೆದ್ದು ನಿಲ್ಲುತ್ತದೆ.

ಈ ಒಡೆದೆದ್ದು ನಿಲ್ಲುವುದು ಎಂಬುದು ಭವಿಷ್ಯದ ಮಾತಲ್ಲ. ಇಂದೇ ಅದು ಒಡೆದೆದ್ದು ಬರುತ್ತಿದೆ... ಮಾರುಕಟ್ಟೆಯ ಗಜಿಬಿಜಿ ಗಲಾಟೆಯಲ್ಲಿ ಅದರ ಬಿರಿಯುವಿಕೆಯ ಸದ್ದು ಕೇಳಿಸುತ್ತಿಲ್ಲವಷ್ಟೇ! 'ಒಂದೇ ಜಗತ್ತು' ಎನ್ನುವ ಜಾಗತೀಕರಣದ ವಿರುದ್ಧ ಹಳೆಯ ಸಮಾಜವಾದಿಗಳ, ಮಾರ್ಕ್ಸವಾದಿಗಳ ಹುಮ್ಮು ಒಂದು ಕಡೆ ಇದ್ದರೆ, 'ಇನ್ನೊಂದು ಜಗತ್ತು ಸಾಧ್ಯ' ಎಂಬ ಪರ್ಯಾಯ ಕಲ್ಪನೆಯೊಂದನ್ನು ಮಂಡಿಸುತ್ತಿರುವ ಹೊಸ ಮುಖದ ಚಿಂತಕರ ಘೋಷಣೆ ಇನ್ನೊಂದೆಡೆ ಗಂಭೀರ ಚರ್ಚೆಗೆ ಒಳಗಾಗಿದೆ. ಸಮಾಜವಾದ ತನ್ನ ಆರಂಭಿಕ ದಿನಗಳಲ್ಲಿ ಬಡ-ಶ್ರೀಮಂತ ದೇಶಗಳೆಂಬ ಭೇದ ಭಾವಗಳಿಲ್ಲದೆ ಹೇಗೆ ಎಲ್ಲ ಜನರ ಗಮನ-ಆಸಕ್ತಿಗಳನ್ನು ಸೆಳೆದಿತ್ತೋ (ಐವತ್ತು-ಅರವತ್ತರ ದಶಕದಲ್ಲಿ ಅಮೇರಿಕಾದಲ್ಲೂ ಒಂದು ಸಮಾಜವಾದಿ ಪಕ್ಷ ಕ್ರಿಯಾಶೀಲವಾಗಿತ್ತು!) ಈ 'ಇನ್ನೊಂದು ಜಗತ್ತು ಸಾಧ್ಯ' ರೂಪದ ಹೊಸ ಸಮಾಜವಾದ ಜಗತ್ತಿನ ಎಲ್ಲ ದೇಶಗಳ- ಜಿ-೮ ದೇಶಗಳೂ ಸೇರಿದಂತೆ -ಗಮನ-ಆಸಕ್ತಿ ಸೆಳೆದಿದೆ. ಇದು ಕಳೆದ ಶತಮಾನದ ಸಮಾಜವಾದವೂ ಸೇರಿದಂತೆ ಎಲ್ಲ ಎಡಪಂಥೀಯ ರಾಜಕೀಯ ಪ್ರಯೋಗಗಳ ಅನುಭವ-ಪಾಠಗಳ ಆಧಾರದ ಮೇಲೆ ತನ್ನ ತಾತ್ವಿಕತೆಯನ್ನು ಕಟ್ಟಿಕೊಳ್ಳುವ ಪ್ರಯತ್ನದಲ್ಲಿದೆ. ನಾನು ಇದನ್ನು ಪ್ರಸ್ತಾಪಿಸುತ್ತಿರುವುದು, ಇದೇ ಹೊಸ ಶತಮಾನದ ಸಮಾಜವಾದ ಎಂದು ಸೂಚಿಸಲಿಲ್ಲ. ಜಾಗತೀಕರಣವೆಂಬುದು ಇತಿಹಾಸದ ಅಂತಿಮ ಘಟ್ಟವಲ್ಲ. ಇತಿಹಾಸದ ಶಕ್ತಿಗಳು ಇನ್ನೂ ಜೀವಂತವಿದ್ದು, ಹೊಸ(ರಾಜಕೀಯ) ಸತ್ಯದ ಅನ್ವೇಷಣೆಯಲ್ಲಿ ತೊಡಗಿದೆ ಎಂದು ಸೂಚಿಸಲು. ಇದು ನಾವು ನಂಬಿದ್ದ ಸಮಾಜವಾದ ಸೋತಿದೆಯೋ ಎಂದು ಕೇಳಿಕೊಂಡು, ಸೂಕ್ತ ಉತ್ತರ ಕಂಡುಕೊಳ್ಳಲು ಆತ್ಮವಿಶ್ವಾಸವನ್ನು ಒದಗಿಸುತ್ತದೆ.

ಜಗತ್ತಿನ ಮಾತು ಒತ್ತಟ್ಟಿಗಿರಲಿ, ಭಾರತದಲ್ಲಿ ಸಮಾಜವಾದ ಸೋತಿದೆ ಎನ್ನುವವರಿಗೆ ಕಳೆದ ೫೦ ವರ್ಷಗಳಲ್ಲಿ ಭಾರತದಲ್ಲಿ ಆಗಿರುವ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತ್ಯಂತರಗಳ ನೆಲೆಗಳ ಪರಿಚಯವೇ ಇಲ್ಲ ಎಂದು ಹೇಳಬೇಕಾಗುತ್ತದೆ. ಇತಿಹಾಸದ ಸಮಾಜವಾದಿ ಅರಿವಿನಿಂದಾಗಿಯೇ ಶಿಕ್ಷಣ, ಸಾರ್ವಜನಿಕ ಉದ್ಯೋಗ ಹಾಗೂ ರಾಜಕೀಯ ಅಧಿಕಾರಕ್ಕೆ 'ತೆರೆದುಕೊಂಡ' ಸಮಾನ ಅವಕಾಶಗಳು- ಇದನ್ನು ಮುಕ್ತ ಸ್ಪರ್ಧೆಯ ಜೊತೆಗೆ ಗೊಂದಲ ಮಾಡಿಕೊಳ್ಳಬಾರದು-ಎಷ್ಟು ವಂಚಿತ ಜನವರ್ಗಗಳನ್ನು ಜಾಗೃತಗೊಳಿಸಿಲ್ಲ? ಎಂತೆಂತಹ ಸಾಮಾಜಿಕ-ಆರ್ಥಿಕ-ರಾಜಕೀಯ ಅಂತರ್ಚಲನೆಗಳಿಗೆ ಹಾಗೂ ಸಂಚಲನಗಳಿಗೆ ಕಾರಣವಾಗಿಲ್ಲ ? ದುರಾದೃಷ್ಟದ ಸಂಗತಿ ಎಂದರೆ, ಭಾರತದ ಸಮಾಜವಾದಿ ಚಳವಳಿ, ಆಗಿರುವುದರ ಅರಿವೇ ಇಲ್ಲದೇ; ಆಗದಿರುವುದರ ಬಗ್ಗೆಯೇ ಕೂಗಾಡುತ್ತಾ ತನ್ನ ಸ್ಥಿಮಿತವನ್ನು ಕಳೆದುಕೊಂಡಿತು. ಹಾಗೆ ನೋಡಿದರೆ ಭಾರತದ ಸಮಾಜವಾದಿ ಚಳವಳಿ ಎಂದರೆ ಅಧಿಕೃತ ಸಮಾಜವಾದಿ ಪಕ್ಷಗಳ ನಿಲುವು-ಧೋರಣೆ-ಸಾಧನೆಗಳು ಮಾತ್ರವಾಗಿರದೆ, ಸರಿಸುಮಾರು ಎಲ್ಲ ರಾಜಕೀಯ ಪಕ್ಷಗಳ ನೀತಿ ವಿಕಾಸದ ಪರಿಣಾಮಗಳೂ ಸೇರಿದ ಒಂದು ರಾಜಕೀಯ ವಿದ್ಯಮಾನ ಎಂದೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಂದು ಬಿಜೆಪಿಯಂತಹ ಬಲಪಂಥೀಯ ಸಂಪ್ರದಾಯವಾದಿ

ಜಗತ್ತಿನ ಇತಿಹಾಸದುದ್ದಕ್ಕೂ ಅನೇಕ ರೀತಿಯ ಐತಿಹಾಸಿಕ ಕಾರಣಗಳಿಂದಾಗಿ ಪ್ರಬಲರಾದವರ ಮತ್ತು ದುರ್ಬಲರಾದವರ ನಡುವೆ ಘರ್ಷಣೆ ನಡೆದೇ ಇದೆ. ಈ ನಿರಂತರ ಘರ್ಷಣೆಯ ಒಂದು ಭಾಗವಾಗಿ ಕಳೆದ ಶತಮಾನದ ರಾಜಕೀಯ ಇತಿಹಾಸ ನೋಡಿದಾಗ, ಯಾರಾದರೂ ಅಂತಿಮವಾಗಿ ಗೆದ್ದಿದ್ದಾರೆ ಎಂದು ಹೇಳುವುದು ಇತಿಹಾಸದ ದೃಷ್ಟಿಯಿಂದ ಕಷ್ಟವಾಗುತ್ತದೆ. ಏಕೆಂದರೆ ಕಳೆದ ಶತಮಾನದ ಯಾವ ಸಮಾಜವಾದೀ ಚಿಂತನೆಯ ಭಾಗವಾಗಿ ಮಾರ್ಕ್ಸವಾದ ಮೂಡಿಬಂತೋ ಆ ಮಾರ್ಕ್ಸವಾದ, ಈ ನಿರಂತರ ಘರ್ಷಣೆಗೆ ಕಾರಣವಾದ ಐತಿಹಾಸಿಕ ಶಕ್ತಿಗಳ ಮರ್ಮವನ್ನು ತಾನು ಅರಿತಿದ್ದೇನೆಂದು ಘೋಷಿಸಿಕೊಂಡು; ಅದರ ಶಾಶ್ವತ ನಿವಾರಣೆಯ 'ವೈಜ್ಞಾನಿಕ' ಮದ್ದನ್ನೂ 'ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ' ರೂಪದಲ್ಲಿ ಪ್ರಚಾರಮಾಡಿ ಹುಟ್ಟಿಸಿದ ನಂಬಿಕೆಯ ಹಿನ್ನೆಲೆಯಲ್ಲಿ ಮಾತ್ರ, ಇವೊತ್ತಿನ ಸೋಲು-ಗೆಲುವುಗಳ ಮಾತುಗಳು ಅರ್ಥ ಪಡೆಯುತ್ತವೆ.

ಪಕ್ಷವೂ ಮಂಡಲ್ ಆಯೋಗದ ಶಿಫಾರಸ್ಸುಗಳನ್ನೂ, ಪಂಚಾಯತ್‌ರಾಜ್ ಕಾಯಿದೆಯ ಬಲವರ್ಧನೆಯನ್ನೂ ಬೆಂಬಲಿಸುವ ರಾಜಕೀಯ ಅನಿವಾರ್ಯತೆ ಉಂಟಾಗಿರುವುದೇ, ಕಳೆದ ಐವತ್ತು ವರ್ಷಗಳ ಭಾರತದ ಸಮಾಜವಾದಿ ಚಳವಳಿಯ ಯಶಸ್ಸು ಎಂದು ಏಕೆ ನಾವು ಭಾವಿಸಬಾರದು ? ಈ ಯಶಸ್ಸನ್ನು ಅರ್ಥಮಾಡಿಕೊಂಡಾಗಲೋ ಅಥವಾ ಅರ್ಥಮಾಡಿಕೊಳ್ಳುವ ನೆಲೆಗಳಲ್ಲೇ, ಸಮಾಜವಾದಿ ಚಳವಳಿಯ ವೈಫಲ್ಯಗಳ ನೆಲೆಗಳೂ ನಮ್ಮ ಅರಿವಿಗೆ ಬರತೊಡಗುವುದು.

ಸಮಾಜವಾದಿ ಪಕ್ಷ (ಸದ್ಯದ ಮುಲಾಯಂಸಿಂಗ್–ಬಂಗಾರಪ್ಪನವರ ಪಕ್ಷವಲ್ಲ) ಎಂದೂ ಕೇಂದ್ರದಲ್ಲಿಯಾಗಲೀ, ಯಾವುದೇ ರಾಜ್ಯದಲ್ಲಿಯಾಗಲ್ಲೀ ಏಕಾಂಗಿಯಾಗಿ ಯಾವುದೇ ಅವಧಿಯ ಆಡಳಿತ ನಡೆಸಿದ ಸಂದರ್ಭವಿಲ್ಲವಾದ್ದರಿಂದ ನಾವಿಂದು ಸಮಾಜವಾದಿ ಚಳವಳಿಯ ಪರಿಣಾಮಗಳ ಬಗ್ಗೆ ಮಾತಾಡುವಾಗಲೆಲ್ಲ ಅದರ ಅಪ್ರತ್ಯಕ್ಷ ಪರಿಣಾಮಗಳ ಬಗ್ಗೆಯೇ ಮಾತಾಡುತ್ತಿರುತ್ತೇವೆ ಎಂಬುದೂ ನೆನಪಿರಬೇಕು. ಅಂದರೆ ಸಮಾಜವಾದಿ ಪಕ್ಷಗಳ (ಏಕೆಂದರೆ ಭಾರತದ ಸಮಾಜವಾದದ ಚರಿತ್ರೆ ಎಂದರೆ ವಿಭಜನೆ ಹಾಗೂ ವಿಲೀನಗಳ ಚರಿತ್ರೆಯೇ ಆಗಿದೆ!) ಹೊರಗಿನ ಒತ್ತಡ ಹಾಗೂ ಆಡಳಿತ ಪಕ್ಷದೊಳಗಿನ ಸಮಾಜವಾದಿ ಒಲವುಳ್ಳ ಶಕ್ತಿಗಳ ಒಳಗಿನ ಒತ್ತಡಗಳೂ ಸೇರಿ ಭಾರತದ ಸಮಾಜವಾದಿ ರಾಜಕಾರಣವನ್ನು ಕಟ್ಟಿವೆ ಎಂಬುದನ್ನು ಗಮನಿಸಿಯೇ ನಾವು ಭಾರತದ ಸಮಾಜವಾದಿ ಚಳವಳಿಯ ಮೌಲ್ಯಮಾಪನ ಮಾಡಬೇಕು. ಏಕೆಂದರೆ, ಸಮಾಜವಾದಿ ಚಳವಳಿಯ ಈ ಯಶಸ್ಸಿನ ನೆಲೆಯಲ್ಲಿಯೇ ಅದರ ವೈಫಲ್ಯಗಳ ಸುಳಿವುಗಳೂ ನಮಗೆ ದೊರೆಯುವುದು.

ಹೀಗಾಗಿ ಮೊದಲ ಪ್ರಶ್ನೆ : ಭಾರತದಲ್ಲಿ ಸಮಾಜವಾದಿ ಚಳವಳಿ ಏಕೆ ಸುಸ್ಥಿರವಾಗಿ ಬೆಳೆಯಲಾಗಲಿಲ್ಲ? ಏಕೆ ಒಡೆಯುತ್ತ, ಕೂಡುತ್ತ, ಚದುರುತ್ತ: ತನ್ನ ತತ್ವವನ್ನೂ, ಅದರ ಪರಿಣಾಮ ಶೀಲತೆಯನ್ನೂ ಕಳೆದುಕೊಳ್ಳುತ್ತಾ ಹೋಯಿತು? ಅನೇಕ ಶಕ್ತಿಗಳ 'ಆಡೊಂಬಲ'ವಾಗಿದ್ದ ಕಾಂಗ್ರೆಸ್ಸಿನ ಗರ್ಭದಲ್ಲಿ ಜನಿಸಿದ ಭಾರತೀಯ ಸಮಾಜವಾದಿ ಚಳವಳಿ ಬಹಳಕಾಲ ತನ್ನ ಸ್ವಂತ ಅಸ್ತಿತ್ವವನ್ನೂ, ಅಸ್ಮಿತೆಯನ್ನೂ ಸ್ಥಾಪಿಸಿಕೊಳ್ಳಲಾಗದೆ ಕಾಂಗ್ರೆಸ್ ಎಂಬ ಮಹಾಸಮಾಜದ 'ವಂಚಿತ'ರ ಗುಂಪಿನಂತೆಯೇ ಬೆಳೆದು, ಆ ಕಹಿ ಮನೋಭಾವದೊಂದಿಗೇ ಕಾಂಗ್ರೆಸ್ಸಿನಿಂದ ಹೊರಬಂತು. ಬಂದನಂತರ ಅಲ್ಲಿಂದ ಹೊತ್ತುಕೊಂಡು ಬಂದಿದ್ದ ಅನೇಕ ವೈಯಕ್ತಿಕ ಹಾಗೂ ತಾತ್ವಿಕ ಸಂದಿಗ್ಧಗಳನ್ನೂ ತಮ್ಮದೇ ಸ್ವತಂತ್ರ ರಾಜಕಾರಣದ ಸ್ಥಾಪನೆಯ ಕುಲುಮೆಯಲ್ಲಿ ಕರಗಿಸಿಕೊಳ್ಳುವ ಮುನ್ನವೇ ಭಾರಿ ಚುನಾವಣಾ ಸೋಲನ್ನು ಅನುಭವಿಸಿ, ಆ ಹತಾಶೆ–ಗೊಂದಲದಲ್ಲಿ ಪಕ್ಷದ ಮೊದಲ ವಿಭಜನೆಯಾದದ್ದು.ಉದಾಹರಣೆಗೆ ನೆಹರೂ ಕುರಿತ ಲೋಹಿಯಾ ಹಾಗೂ ಜೆ.ಪಿ.ಯವರ ವೈಯಕ್ತಿಕ ನಿಲುವುಗಳು ರಾಜಕೀಯ ಸ್ವರೂಪ ಪಡೆದು, ಸಮಾಜವಾದಿ ಚಳವಳಿಯಲ್ಲಿ ಅನೇಕ ಅನಾಹುತಗಳಿಗೆ ಕಾರಣವಾಯಿತು. ಹಾಗೇ ಕಾಂಗೆಸ್ಸಿನೊಳಗೇ ಹುಟ್ಟಿಕೊಂಡ ಸಮಾಜವಾದಿ ಬೀಜಗುಂಪು ರೂಪಿಸಿಕೊಂಡ ಮೂಲತಃ ಮಾರ್ಕ್ಸವಾದಿ ತಾತ್ವಿಕ ವಿನ್ಯಾಸದೊಳಕ್ಕೆ ಗಾಂಧಿಯನ್ನು ಅನುಸಂಧಾನಿಸುವ ಪ್ರಯತ್ನ ಅನೇಕ ಅಸಾಧ್ಯ ತಾತ್ವಿಕ ರೂಪಕಗಳನ್ನು ಹುಟ್ಟುಹಾಕಿ, ಸಂಘಟನೆಯನ್ನು ಅಸಾಧ್ಯಗೊಳಿಸಿತು.



ಸಮಾಜವಾದಿ ಕಾರ್ಯಕರ್ತನ ಒಂದು ಕಣ್ಣಲ್ಲಿ ಅನ್ಯಾಯದ ವಿರುದ್ಧ ಕ್ರೋಧದ ಕಣ್ಣೀರು ಮತ್ತು ಇನ್ನೊಂದು ಕಣ್ಣಲ್ಲಿ ಅನ್ಯಾಯಕ್ಕೊಳಗಾದವರ ಬಗೆಗಿನ ಕರುಣೆಯ ಕಣ್ಣೀರು ಇರಬೇಕೆಂಬ ಲೋಹಿಯಾರ ಪ್ರಸಿದ್ಧ ಘೋಷವಾಕ್ಯ, ವೈಯಕ್ತಿಕ ನೆಲೆಯಲ್ಲಿ ಸಾಕ್ಷಾತ್ಕಾರವಾಗ ಬೇಕಾದ ಹೋರಾಟ ತತ್ವ, ಸಾಮಾಜಿಕ ನೆಲೆಯಲ್ಲಿ ಅದನ್ನು ರೂಢಿಸಲು, ಕಷ್ಟ ಸಾಧ್ಯವಾದ ನಿರಂತರ ತರಬೇತಿ ಕಾರ್ಯಕ್ರಮಗಳು ಅಗತ್ಯ. ಆದರೆ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಸಂಘಟಿಸುವ ತಾಕತ್ತನ್ನೇ ಗಳಿಸಿಕೊಳ್ಳದ ಲೋಹಿಯಾ ಸಮಾಜವಾದಿ ಚಳವಳಿ, ಬರೀ ಕಾಂಗ್ರೆಸ್ ವಿರೋಧಿ ಕ್ರೋಧದ ಬೆಂಕಿಯಾಗಿ ಉರಿದು ಆರಿಹೋಗಿದ್ದು ಸಹಜವೇ ಆಗಿದೆ. ನಗರ ಪ್ರದೇಶಗಳ ಕಾರ್ಯಕರ್ತರ ಬೌದ್ಧಿಕಪ್ರಜ್ಞೆ ಹಾಗೂ ಗ್ರಾಮಾಂತರ ಪ್ರದೇಶದ ಕಾರ್ಯಕರ್ತರ ನಡುವಣ ವಾಸ್ತವ ಪ್ರಜ್ಞೆಗಳ ನಡುವೆ ಪಕ್ಷ ಕಳೆದುಹೋದ ಸಾಧ್ಯತೆಯನ್ನು ನಾವು ಅಲ್ಲ ಗಳೆಯುವಂತಿಲ್ಲ.

ಸಮಾಜವಾದಿ ಕಾರ್ಯಕರ್ತನ ಒಂದು ಕಣ್ಣಲ್ಲಿ ಅನ್ಯಾಯದ ವಿರುದ್ಧ ಕ್ರೋಧದ ಕಣ್ಣೀರು ಮತ್ತು ಇನ್ನೊಂದು ಕಣ್ಣಲ್ಲಿ ಅನ್ಯಾಯಕ್ಕೊಳಗಾದವರ ಬಗೆಗಿನ ಕರುಣೆಯ ಕಣ್ಣೀರು ಇರಬೇಕೆಂಬ ಲೋಹಿಯಾರ ಪ್ರಸಿದ್ಧ ಘೋಷವಾಕ್ಯ, ವೈಯಕ್ತಿಕ ನೆಲೆಯಲ್ಲಿ ಸಾಕ್ಷಾತ್ಕಾರವಾಗಬೇಕಾದ ಹೋರಾಟ ತತ್ವ, ಸಾಮಾಜಿಕ ನೆಲೆಯಲ್ಲಿ ಅದನ್ನು ರೂಢಿಸಲು, ಕಷ್ಟ ಸಾಧ್ಯವಾದ ನಿರಂತರ ತರಬೇತಿ ಕಾರ್ಯಕ್ರಮಗಳು ಅಗತ್ಯ. ಆದರೆ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಸಂಘಟಿಸುವ ತಾಕತ್ತನ್ನೇ ಗಳಿಸಿಕೊಳ್ಳದ ಲೋಹಿಯಾ ಸಮಾಜವಾದಿ ಚಳವಳಿ, ಬರೀ ಕಾಂಗ್ರೆಸ್ ವಿರೋಧಿ ಕ್ರೋಧದ ಬೆಂಕಿಯಾಗಿ ಉರಿದು ಆರಿಹೋಗಿದ್ದು ಸಹಜವೇ ಆಗಿದೆ. ನಗರ ಪ್ರದೇಶಗಳ ಕಾರ್ಯಕರ್ತರ ಬೌದ್ಧಿಕಪ್ರಜ್ಞೆ ಹಾಗೂ ಗ್ರಾಮಾಂತರ ಪ್ರದೇಶದ ಕಾರ್ಯಕರ್ತರ ನಡುವಣ ವಾಸ್ತವ ಪ್ರಜ್ಞೆಗಳ ನಡುವೆ ಪಕ್ಷ ಕಳೆದುಹೋದ ಸಾಧ್ಯತೆಯನ್ನು ನಾವು ಅಲ್ಲಗಳೆಯುವಂತಿಲ್ಲ.

ಕಾಗೋಡು ಹಾಗೂ ಸೊಂಡೂರು ಭೂ ಸತ್ಯಾಗ್ರಹಗಳನ್ನು ಸಮಾಜವಾದಿ ಹೋರಾಟಗಳೆಂದು ಕರೆಯಲಾಗುವುದಾದರೂ, ಈ ಹೋರಾಟಗಳನ್ನು ನಿಜವಾಗಿ ಆರಂಭಿಸಿದ್ದು ಸ್ಥಳೀಯ ರೈತ ಸಂಘಗಳು ಎಂಬುದನ್ನು ನಾವು ಮರೆಯಬಾರದು. ಅವು ತಮ್ಮ ಹೋರಾಟಗಳನ್ನು ತಾರ್ಕಿಕ ಅಂತ್ಯಗಳಿಗೆ ಒಯ್ಯಲಾಗದೆ, ಆಗ ಪ್ರಭುತ್ವ ವಿರೋಧಿ ಪಕ್ಷವಾಗಿ ಪ್ರಸಿದ್ಧವಾಗಿದ್ದ ಸಮಾಜವಾದಿ ಪಕ್ಷಕ್ಕೆ ನೇತೃತ್ವ ವಹಿಸಿಕೊಟ್ಟವಷ್ಟೇ. ಆದರೆ ದತ್ತಾಗಿ ಬಂದ ಈ ಹೋರಾಟಗಳ ಮೂಲಕ ಪಕ್ಷ, ಸಮಾಜವಾದಿ ಚಳವಳಿಯನ್ನು ಬೆಳೆಸಲು ವ್ಯವಸ್ಥಿತ ಪ್ರಯತ್ನಗಳನ್ನು ಮಾಡಿದ ಸೂಚನೆಗಳೇನೂ ನಮಗೆ ಸಿಗುವುದಿಲ್ಲ. ಒಂದು ಕಾಲದಲ್ಲಿ ಕರ್ನಾಟಕದಲ್ಲಿ ಸಮಾಜವಾದಿ ಚಳವಳಿಯ ತವರು ಎನಿಸಿದ್ದ ಶಿವಮೊಗ್ಗ ಜಿಲ್ಲೆ ಇಂದು ಈ ಹಿಂದೆ ಇಲ್ಲಿ ಹೆಸರೇ ಇರದಿದ್ದ ಸಂಘ ಪರಿವಾರದ ಭದ್ರಕೋಟೆ ಯಾಗಿರುವುದನ್ನು ವಿವರಿಸುವುದಾದರೂ ಹೇಗೆ? ಈ ಜಿಲ್ಲೆಯ ಇಬ್ಬರು ಪ್ರಮುಖ ಸಮಾಜವಾದಿ ನಾಯಕರು, ಸಮಾಜವಾದಿ ಪಕ್ಷ ವಿಭಜನೆಯಾಗುವ ಬಹು ಮುನ್ನವೇ ಬೇರೆ ಪಕ್ಷಗಳಲ್ಲಿ ತಮ್ಮ 'ಸೌಖ್ಯ'ವನ್ನು ಕಂಡು ಕೊಂಡಿದ್ದಾದರೂ ಏಕೆ? ಸೊಂಡೂರು ಭೂ ಸತ್ಯಾಗ್ರಹದ ನೇತೃತ್ವವನ್ನು ರೈತ ಸಂಘದಿಂದ ಪಡೆದ ಸಮಾಜವಾದಿ ಪಕ್ಷ, ರೈತರಿಗೆ ಭೂಮಿ ಹಂಚಿಕೆಯಾಗುವ ವಿಧಿ ವಿಧಾನಗಳು ಆರಂಭವಾಗುವ ಹೊತ್ತಿಗೆ ಅಲ್ಲಿಂದ ಕಾಲ್ಕಿತ್ತಿತ್ತು.(ಚಳವಳಿ ನಡೆದಿದ್ದೂ ಬೆಂಗಳೂರು–ಶಿವಮೊಗ್ಗಗಳಿಂದ ಬಂದಿದ್ದ ಕಾರ್ಯಕರ್ತರ ಬಲದೊಡನೆ!) ಎಂದರೆ ಏನು ಹೇಳುವುದು? ಸದಾ ವಿರೋಧಾನಂದಿಗಳಾಗಿದ್ದ ಸಮಾಜವಾದಿಗಳು ಗುದ್ದಲಿ, ವೋಟು, ಸೆರೆಮನೆ(ರಚನಾತ್ಮಕ ಕೆಲಸ, ಚುನಾವಣಾ ರಾಜಕೀಯ ಪ್ರತಿಭಟನೆ) ತಮ್ಮ ಪಕ್ಷದ ತ್ರಿರೂಪಿ ಕಾರ್ಯಕ್ರಮವೆಂದು ಹೇಳಿಕೊಂಡರೂ, ಪ್ರತಿಭಟನೆಗೆ ಪೂರಕವಾಗಿ ರಚನಾತ್ಮಕ ಕೆಲಸಗಳಲ್ಲಿ ಆಸಕ್ತಿಯನ್ನೇ ವಹಿಸದೇ ಅಂತಿಮವಾಗಿ ವೋಟುಗಳಿಂದಲೂ ವಂಚಿತರಾದರು.

ಸಿದ್ಧಾಂತ ಏನೇ ಇದ್ದರೂ, ಕಾಂಗ್ರೆಸ್‌ನೊಡನೆಯ ದಾಯಾದಿ ಮತ್ಸರವನ್ನು ತನ್ನ ಅಸ್ತಿತ್ವಕ್ಕೆ ಆಧಾರ ಮಾಡಿಕೊಂಡಂತೆ ಬೆಳೆದ ಸಮಾಜವಾದಿ ಚಳವಳಿ, ಕೊನೆಗೆ ತಾನುಳಿಯಲು 'ಕಾಂಗ್ರೆಸ್ಸೇತರವಾದ'ವನ್ನೂ ಸೃಷ್ಟಿಸಿಕೊಳ್ಳಬೇಕಾಯಿತು.ಸಮಾಜವಾದಿ ಚಳವಳಿಯ ಇತಿಹಾಸದ ಅಧ್ಯಯನದ ದೃಷ್ಟಿಯಿಂದ ವಿಶೇಷವಾಗಿ ಗಮನಿಸಬೇಕು. ಹಾಗೇ, ಲೋಹಿಯಾ ಬದುಕಿದ್ದಾಗಲೇ ಈ ಕಾಂಗ್ರೆಸ್ಸೇತರವಾದದ ಮೊದಲ ಬಲಿ ಅವರ ಕಣ್ಣೆದುರಲ್ಲೇ ಬಿಹಾರದಲ್ಲಿನ ಸಂಯುಕ್ತ ಸಮಾಜವಾದಿ ಪಕ್ಷದ ನೇತೃತ್ವದ ಸಮ್ಮಿಶ್ರ

[illegible] ಸದಸ್ಯ ರಾಜ್ಯದ ಮುಖ್ಯಮಂತ್ರಿ ಆಗುವ ಆಸೆಯಿಂದ ಪಕ್ಷದ ನೀತಿ ಸಂಹಿತೆಯನ್ನೇ ಉಲಂಘಿಸಿ, ...ಧಾನ ಪರಿಷತ್ ಸದಸ್ಯನಾಗಲು ಹವಣಿಸುವ ಮೂಲಕ ಅಂತಿಮವಾಗಿ ಪಕ್ಷವನ್ನು ಒಡೆದು ಸರ್ಕಾರದ ಪತನಕ್ಕೆ ಕಾರಣನಾದ. ಅಷ್ಟು ಸುಲಭವಾಗಿ ಶಿಥಿಲಗೊಳಿಸಿತ್ತು ಸಮಾಜವಾದದ ನೈತಿಕತೆಯನ್ನು , ಈ ಕಾಂಗ್ರೆಸ್ಸೇತರವಾದವೆಂಬ ಪಕ್ಷ ಉಳಿಸಿಕೊಳ್ಳುವ ಹತಾಶ ಯತ್ನ! ಇನ್ನು ಕಾಂಗ್ರೆಸ್ಸೇತರವಾದವನ್ನು ತಾತ್ವಿಕವಾಗಿ ವಿರೋಧಿಸಿದ ಸಮಾಜವಾದಿಗಳ ಒಂದು ಗುಂಪು (ಕೆಲವರ ಹೊರತಾಗಿ) ಅನತಿಕಾಲದಲ್ಲೇ ಕಾಂಗ್ರೆಸ್ಸಿನಲ್ಲಿ ವಿಲೀನವಾದದ್ದು ಸಮಾಜವಾದಿ ಚಳವಳಿಯ ಇನ್ನೊಂದು ವಿಪರ್ಯಾಸ!

ಇನ್ನು ಇದಾದ ಹತ್ತು ವರ್ಷಗಳ ನಂತರ ಮಾಜಿ ಸಮಾಜವಾದಿ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಜನತೆಯೆ ಕಟ್ಟಿದ್ದೆಂದು ಹೇಳಬಹುದಾದ ಜನತಾ ಪಕ್ಷ ಗಾಂಧಿ ಸಮಾಜವಾದದ ದೀಕ್ಷೆ ಪಡೆದೂ, ಮೂರೇ ವರ್ಷಗಳಲ್ಲಿ ವಿಘಟನೆಗೊಂಡು, ಭಾರತದ ರಾಜಕಾರಣದ ಅತಿದೊಡ್ಡ ಛಿದ್ರೀಕರಣಕ್ಕೆ ಮತ್ತು ಅದಕ್ಕಿಂತ ಮುಖ್ಯವಾಗಿ ಕೋಮುವಾದಿ ರಾಜಕಾರಣದ ಬಲವರ್ಧನೆಗೆ ಕಾರಣವಾಯಿತು. ಇದು, ನಾನು ನನ್ನ ಇನ್ನೊಂದು ಲೇಖನದಲ್ಲಿ ಹೇಳಿದಂತೆ, ಕೆಲವು ಸಮಾಜವಾದಿಗಳಲ್ಲಿ ಹೊಸ 'ಎಚ್ಚರ' ಮೂಡಿಸಿ; ಕಾಂಗ್ರೆಸ್ಸೇತರವಾದವನ್ನು ಅರ್ಥಕ್ಕೆ ಕೈ ಬಿಟ್ಟು ಕಾಂಗ್ರೆಸ್ಸವಾದವನ್ನು ಪ್ರತಿಪಾದಿಸಲು ಪ್ರೇರೆಪಿಸಿತು! ಮುಖ್ಯವಾಗಿ ಲೋಹಿಯಾರ ಆಪ್ತ ಶಿಷ್ಯರಾದ ಮತ್ತು ಸಮಾಜವಾದಿ ಆಂದೋಲನದ ಕಾಂಗ್ರೆಸ್ ವಿರೋಧಿ ಹೋರಾಟಗಳಲ್ಲಿ ಅವರಿಗೆ ಬೆಂಬಲವಾಗಿ ನಿಂತಿದ್ದ ಮಧುಲಿಮೆ ಅವರೇ, ಬಲಪಂಥೀಯ ಕೋಮುವಾದಿ ರಾಜಕಾರಣದೆದುರು ಕಾಂಗ್ರೆಸ್ಸನ್ನು ಬೆಳೆಸುವ ಅಗತ್ಯ ಮತ್ತು ಮಹತ್ವದ ಮಾತುಗಳನ್ನಾಡಲಾರಂಭಿಸಿದರು... ಆ ಮೂಲಕ ಅವರು ಸಮಾಜವಾದಿ ಸಂಘಟನೆಯ ಆತ್ಯಂತಿಕ ವೈಫಲ್ಯವನ್ನೂ ಒಪ್ಪಿಕೊಳ್ಳಲಾರಂಭಿಸಿದರು. ಸಮಾಜವಾದಿ ಆಂದೋಲನದ ಸರಿಸುಮಾರು ಆರಂಭದಿಂದಲೂ ಇದ್ದ ಮತ್ತು ಸಮಾಜವಾದಿ ಚಳವಳಿಯ ಇತಿಹಾಸವನ್ನು ಒಬ್ಬ ಸಾಕ್ಷಿದಾರನಾಗಿಯೂ ಬರೆದಿರುವ ಲಿಮೆಯೆ, ತಮ್ಮ ಬದುಕಿನ ಕೊನೇ ದಿನಗಳಲ್ಲಿ ಸಮಾಜವಾದಿ ಪಕ್ಷದ ಅನಿವಾರ್ಯ ಅಂತ್ಯವನ್ನೂ ಮನಗಂಡಿದ್ದರು... ಆದರೆ ಹಾಗೆ ಮನಗಾಣದ ಎರಡನೇ ಸಾಲಿನ ನಾಯಕರು ತಮ್ಮ ರಾಜಕೀಯ ಅನುಕೂಲಗಳಿಗೆ ತಕ್ಕಂತೆ ವಿವಿಧ ಪಕ್ಷಗಳಲ್ಲಿ ಹಂಚಿಹೋದರು. ನಂತರದ ಗೊಂದಲಗಳಲ್ಲಿ ಜಾತಿ ಬಲಗಳಿದ್ದ ಕೆಲವು ನಾಯಕರು-ಉದಾ : ಲಾಲೂ ಮತ್ತು ಮುಲಾಯಂರಂತಹವರು-ತಮ್ಮದೇ ಪ್ರಾದೇಶಿಕ ಪಕ್ಷಗಳನ್ನು ಕಟ್ಟಿಕೊಂಡರು. ಈ ಪಕ್ಷಗಳಲ್ಲಿನ ಗೌಡಿಕೆಯನ್ನು ಸಹಿಸಲಾರದೆ ಕೆಲವರು ಪಕ್ಷ ಬಿಟ್ಟು ಇನ್ನೆಲ್ಲಿಗೂ ಹೋಗಲಾರದ ಸ್ಥಿತಿ ತಲುಪಿ, ಬಿಜೆಪಿ ಮೈತ್ರಿಕೂಟ ಸೇರಿದರು! ಹೀಗೆ ಭಾರತದಲ್ಲಿ ಸಮಾಜವಾದಿ ಆಂದೋಲನ ಭಾರತದ ಸರ್ವ ಪಕ್ಷಗಳಿಗೂ ತನ್ನ ಕೊಡುಗೆಯನ್ನು ನೀಡಿದೆ.. ಭಾರತದ ಸಮಾಜವಾದವೆಂದರೆ, ಹಾಕಿಕೊಂಡವರ ತಲೆಯ ಆಕಾರ ಕಾಂಗ್ರೆಸ್ ಟೊಪ್ಪಿಗೆ ಇದ್ದಂತೆ ಎಂದು ಈ ಆಂದೋಲನದ ಇತಿಹಾಸ ಬರೆದಿರುವ ಹ್ಯಾರಿಸ್ ವೊಫರ್ಡ್ ಎಂಬ ರಾಜಕೀಯ ಟೀಕಾಕಾರನ ಮಾತುಗಳನ್ನು ನಿಜಗೊಳಿಸಿದೆ.

ಭಾರತದ ಸಮಾಜವಾದಿ ಆಂದೋಲನವನ್ನು ಹತ್ತಿರದಿಂದ ಮತ್ತು ವಸ್ತು ನಿಷ್ಠವಾಗಿ ಅಭ್ಯಾಸ ಮಾಡಿದವರಿಗೆ

ಭಾರತದ ಸಮಾಜ ವಾದಿ ಚಳವಳಿ ಎಂದರೆ ಅಧಿಕೃತ ಸಮಾಜವಾದಿ ಪಕ್ಷಗಳ ನಿಲುವು-ಧೋರಣೆ-ಸಾಧನೆಗಳು ಮಾತ್ರವಾಗಿರದೆ, ಸರಿಸುಮಾರು ಎಲ್ಲ ರಾಜ ಕೀಯ ಪಕ್ಷಗಳ ನೀತಿ ವಿಕಾಸದ ಪರಿಣಾಮಗಳೂ ಸೇರಿದ ಒಂದು ರಾಜಕೀಯ ವಿದ್ಯಮಾನ ಎಂದೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಇದೇನೂ ಅಸಹಜ ವೆನಿಸುವುದಿಲ್ಲ. ಸಮಾಜವಾದಿ ಪಕ್ಷವೆಂಬುದೇ ಈ ಹಿಂದೆ ಸೂಚಿಸಿದಂತೆ ಮೂಲತಃ ಕಾಂಗ್ರೆಸ್ಸ ಪಕ್ಷದ ಉಪ ಪಕ್ಷವಾಗಿ ಆರಂಭವಾದದ್ದು. ಸ್ವಾತಂತ್ರ್ಯಪೂರ್ವ ಕಾಂಗ್ರೆಸ್ಸಿನೊಳಗೇ ಎದ್ದ ಯುವ ಜನರ ತಾತ್ವಿಕ ಬಂಡಾಯದ ಫಲವದು. ಅದು ಕೂಡಾ ಬಹಳ ಕಾಲ ಒಂದು ತಾತ್ವಿಕ ಸ್ಪಷ್ಟತೆ ಪಡೆದುಕೊಂಡಿರಲಿಲ್ಲ. ಆಗ ಇನ್ನೂ ಹಸಿ ಹಸಿ ನೆನಪಾಗಿದ್ದ ರಷ್ಯಾದ ಕ್ರಾಂತಿಯ ಸ್ಫೂರ್ತಿಯಿಂದಾಗಿ ಮೂಲತಃ ಮಾರ್ಕ್ಸವಾದಿಗಳಾಗಿದ್ದ ಇವರು, ಕಾರ್ಯಾಚರಣೆಯಲ್ಲಿ ಅಂದಿನ ಭಾರತದ ಕಮ್ಯೂನಿಷ್ಟ ಪಕ್ಷದ ವರಸೆಗಳನ್ನೊಪ್ಪದೆ ಕಾಂಗ್ರೆಸ್‌ನೊಳಗೇ ತಮ್ಮ ಕ್ರಾಂತಿಕಾರಿ ವಿಚಾರಗಳನ್ನು ಬಿತ್ತಲಾರಂಭಿಸಿದವರು ಇವರ ನಾಯಕ ಜಯಪ್ರಕಾಶ ನಾರಾಯಣ. ಗಾಂಧೀಜಿಯ ಕಾಲು ಮುಟ್ಟಿ ನಮಸ್ಕರಿಸುವಷ್ಟು ಗಾಂಧಿ ವ್ಯಕ್ತಿತ್ವದ ಬಗ್ಗೆ ಗೌರವವುಳ್ಳವರಾಗಿದ್ದ ಇವರು ಗಾಂಧೀಜಿಯ ರಾಜಕೀಯ ವಿಚಾರಧಾರೆಯ ಕಟ್ಟಾ ವಿರೋಧಿಯೂ ಆಗಿದ್ದರು! ಒಮ್ಮೆ ಕಮ್ಯೂನಿಷ್ಟರು ಜೆಪಿಯವರ ಈ ದ್ವಂದ್ವ ವ್ಯಕ್ತಿತ್ವದ ಉಪಯೋಗ ಪಡೆದು ಅವರ ಉಪ ಪಕ್ಷದ ಒಳಹೊಕ್ಕು ಮಾಡಿದ ಅವಾಂತರ ಗೊತ್ತಾದ ನಂತರವಷ್ಟೇ, ಈ ಉಪ ಪಕ್ಷ ಮಾರ್ಕ್ಸವಾದ ಎಲ್ಲ ನೈತಿಕತೆಯನ್ನು ಮೀರಿನಿಂತಿದ್ದು ಎಂದು ಮನಗಂಡು, ಗಾಂಧಿವಾದದ ಕಡೆ ಸಹಾನುಭೂತಿ ಪರವಾದ ನಿಲುವು ತಳೆಯಲು ಸಾಧ್ಯವಾದದ್ದು. ಆ ಸಂದರ್ಭದಲ್ಲಿಯೇ ಜರ್ಮನಿಯಲ್ಲಿನ ತಮ್ಮ ಸಂಶೋಧನಾ ಅಧ್ಯಯನದ ಸಂದರ್ಭದಲ್ಲಿ ಫ್ಯಾಸಿಸ್ಟರು ಮತ್ತು ಕಮ್ಯೂನಿಷ್ಟರು- ಈ ಇಬ್ಬರ 'ಅನೈತಿಕ' ವರಸೆಗಳನ್ನು ಕಂಡಿದ್ದ ಡಾ. ರಾಮ ಮನೋಹರ ಲೋಹಿಯಾ, ಈ ಉಪಪಕ್ಷಕ್ಕೆ ತಾವು ಜರ್ಮನ್ ಸಮಾಜವಾದಿ ಅರ್ಥಶಾಸ್ತ್ರಜ್ಞರಾದ ಷೂಮೇಕಲ್ ಮತ್ತು ಜೆಂಬಾರ್ಟ್ ಅವರಿಂದ ಕಲಿತಿದ್ದ ಮಧ್ಯಮ ಮಾರ್ಗದ ಸಮಾಜವಾದದ ಸೈದ್ಧಾಂತಿಕ ನೆಲೆ ಒದಗಿಸುವ ಪ್ರಯತ್ನ ಮಾಡಿದ್ದು. ಇದಕ್ಕೆ ಪೂರಕವಾಗಿ ಒದಗಿಬಂದದ್ದು ಆಗಿನ್ನೂ ಜೀವಂತ ಪ್ರಯೋಗದಲ್ಲಿದ್ದ ಗಾಂಧಿವಾದ.

ಹೀಗೆ ಭಾರತೀಯ ಸಮಾಜವಾದವೆಂಬುದು ಮಾರ್ಕ್ಸ್‌ವಾದ, ಐರೋಪ್ಯ ಸಮಾಜವಾದ ಮತ್ತು ಗಾಂಧಿವಾದಗಳೆಂಬ ಮೂರು ರಾಜಕೀಯ ವಿಚಾರಧಾರೆಗಳ ಮಿಶ್ರಣವಾಗಿ ಒಂದು ಪಕ್ಷವನ್ನು ಕಟ್ಟತೊಡಗಿತ್ತು. ಕಾಂಗ್ರೆಸ್‌ನೊಳಗಿನ ಈ 'ಕಾಂಗ್ರೆಸ್ ಸೋಷಲಿಸ್ಟ' ಎಂಬ ಈ ಉಪ ಪಕ್ಷಕ್ಕೆ ವಲ್ಲಭಭಾಯಿ ಪಟೇಲರ ನೇತೃತ್ವದ ಬಲಪಂಥೀಯ ಗುಂಪು ಕಾಂಗ್ರೆಸ್ ಪಕ್ಷದ ಅಂಗರಚನೆಗೆ ಒಂದು ತಿದ್ದುಪಡಿ ತಂದು, ಪಕ್ಷದೊಳಗೊಂದು ಉಪ ಪಕ್ಷವಿರಲು ಸಾಧ್ಯವಿಲ್ಲದಂತೆ ಮಾಡಿ ತನ್ನ ಮಾತೃಪಕ್ಷದಿಂದ ಹೊರ ಹೋಗುವುದು ಅನಿವಾರ್ಯವೆನಿಸಿದಾಗಲೂ ಅದು ರಾಜಕೀಯ ಪಕ್ಷವೊಂದರ ಯಾವ ಸ್ಪಷ್ಟ ಲಕ್ಷಣಗಳನ್ನು ಹೊಂದಿರಲಿಲ್ಲ! ಬಹಳಕಾಲ ಉಪಪಕ್ಷವಾಗಿ ಕೆಲಸ ಮಾಡಿದ್ದುದರಿಂದ ಸಡಿಲ ಸಂಘಟನೆಯನ್ನಷ್ಟೇ ಹೊಂದಿದ್ದ ಈ ಪಕ್ಷ, ಒಂದು ಸ್ಪಷ್ಟ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿಲ್ಲ. ಈ ಎರಡೂ ಕಾರಣಗಳಿಂದಾಗಿ ೧೯೫೨ರ ಮೊದಲ ಮಹಾಚುನಾವಣೆಯಲ್ಲಿ ಹೀನಾಯವಾಗಿ ಸೋತ ನಂತರ ಆತ್ಮ ಪರಿವೀಕ್ಷಣೆಗಾಗಿ ಪಂಚಮಢಿ ಎಂಬಲ್ಲಿ ಸಮಾವೇಶಗೊಂಡಾಗಲೇ ಈ ಪಕ್ಷ ತನ್ನ ಈ ಎರಡೂ ದೌರ್ಬಲ್ಯಗಳ ಬಗ್ಗೆ ಗಂಭೀರವಾಗಿ ಚಿಂತಿಸಿದ್ದು! ಹಿರಿಯ ನಾಯಕ ಆಚಾರ್ಯ ನರೇಂದ್ರದೇವ ಅವರ ಅನುಪಸ್ಥಿತಿಯಲ್ಲಿ ಈ ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಡಾ. ರಾಮ ಮನೋಹರ ಲೋಹಿಯಾ ಪ್ರಸ್ತುತ ಪಡಿಸಿದ 'ಸಮಾಜವಾದ ತಾತ್ವಿಕ ಅಡಿಗಲ್ಲುಗಳು'(doctrinal foundation of socialism) ಎಂಬ ಭಾಷಣವೇ ಭಾರತದ ಸಮಾಜವಾದಿ ಆಂದೋಲನಕ್ಕೆ ತನ್ನದೆನ್ನುವ ಒಂದು ಸ್ಪಷ್ಟ ವೈಚಾರಿಕ ಆಕೃತಿಯನ್ನು ನೀಡಿದ್ದು. ಆದರೆ ಬಹುಬೇಗ ದಾಯಾದಿ ಮತ್ಸರದಲ್ಲೆಂಬಂತೆ ತನ್ನ ಕಾಂಗ್ರೆಸ್ ವಿರೋಧಿ ರಾಜಕಾರಣದಲ್ಲೇ ಮೈಮರೆತ ಸಮಾಜವಾದಿ ಆಂದೋಲನ- ವಿಶೇಷವಾಗಿ ಲೋಹಿಯಾಧಾರೆ- ಇದರ ರಚನಾತ್ಮಕ ಅಂಶಗಳ ಕಡೆ ಗಮನಕೊಟ್ಟಿದ್ದು, ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಹೋರಾಟದಲ್ಲಿ ಆಯಾಸಗೊಂಡಾಗ ಹೋಗಿ ತಾತ್ವಿಕ ವಿವೇಚನೆಯಲ್ಲಿ ತೊಡಗಲು ಸ್ವತಃ ಲೋಹಿಯಾ ಪ್ರತಿಪಾದಿಸಿದ್ದ 'ಸಮಾಜವಾದಿ ಆಶ್ರಯ'ಗಳ ಕಲ್ಪನೆ ಬರೀ ಕಲ್ಪನೆಯಾಗಷ್ಟೇ ಉಳಿಯಿತು. ಹಾಗಾಗಿ ಈ ಸಮಾಜವಾದಿಗಳು ತಮ್ಮ ಈ 'ಹೋರಾಟ' ಗಳಿಂದಾಗಿ ಸೇರಿದ್ದು ಆಶ್ರಮಗಳನ್ನಲ್ಲ : ಸೆರೆಮನೆಗಳನ್ನಷ್ಟೇ- ಅದೂ ಇನ್ನಾವ ಪಕ್ಷದ ಹೋರಾಟಗಾರರೂ ಸೇರದಷ್ಟು ಭಾರಿ ಮತ್ತು ಅವಧಿಗಳವರೆಗೆ! ಹಾಗೆ ನೋಡಿದರೆ, ಇಂತಹ ಹೋರಾಟಗಳಲ್ಲಿ ಹೀಗೆ ಆಯಾಸಗೊಂಡವರಲ್ಲಿ ಕೆಲವರು ಪಕ್ಷವನ್ನೇ ಬಿಟ್ಟು ಹೋದರೆ, ಇನ್ನು ಕೆಲವರು ಪಕ್ಷ ರಾಜಕಾರಣವನ್ನೇ ತೊರೆದು ಹೋದರು.. ಹಾಗೆ ಪಕ್ಷ ರಾಜಕಾರಣವನ್ನು ತೊರೆದ ಮುಖ್ಯ ನಾಯಕರಲ್ಲೊಬ್ಬರಾದ ಜಯಪ್ರಕಾಶರು ಬಿಹಾರದ ಸೆಖೋದೇವೊರಾ ಎಂಬಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದರು. ಆದರದು ಸರ್ವೋದಯದ ಆಶ್ರಮವಾಗಿತ್ತು. ಅದು ಸರ್ವೋದಯ ಚಳವಳಿಯಂತೆಯೇ ಕ್ರಮೇಣ ಹಾಳು ಬಿದ್ದಿತೆಂಬುದು ಬೇರೆ ಮಾತು!

ಲೋಹಿಯಾ ಅವರೇನೋ ತಮ್ಮ ಹೋರಾಟದೊಂದಿಗೆ ತಾತ್ವಿಕ ಅನ್ವೇಷಣೆಗಳಲ್ಲೂ ತೊಡಗಿಕೊಂಡರು. ಇದರಿಂದಾಗಿ ರಾಷ್ಟ್ರಾದ್ಯಂತ ಅನೇಕ ಲೇಖಕರು-ಕಲಾವಿದರು-ಬುದ್ಧಿಜೀವಿಗಳು ಅದರೆಡೆಗೆ ಆಕರ್ಷಿತರಾದರು. ಅವರ 'ಇತಿಹಾಸ ಚಕ್ರ', 'ಮಾರ್ಕ್ಸ್,ಗಾಂಧಿ ಮತ್ತು ಸಮಾಜವಾದ' ಮತ್ತು 'ರಾಜಕೀಯದ ಮಧ್ಯೆ ಬಿಡುವು' ಇಂತಹ ತಾತ್ವಿಕ ಅನ್ವೇಷಣೆಯ ವಿವಿಧ ಸ್ತರಗಳ ಪ್ರಯತ್ನಗಳು. ಆದರೆ ಈ ವಿಷಯದಲ್ಲಿ ಲೋಹಿಯಾರದ್ದು 'ಏಕವ್ಯಕ್ತಿ ಪ್ರದರ್ಶನ'ವಾಯಿತೇ ಹೊರತು, ಸಮಾಜವಾದಿ ಪಕ್ಷವೆಂಬುದು ಕಾಂಗ್ರೆಸ್ಸಿಗೆ ಒಂದು ರಾಜಕೀಯ ಪರ್ಯಾಯ ಒದಗಿಸುವ ಜನರ ಆಂದೋಲನವಾಗಿ ಬೆಳೆಯಲಾರದಾಯಿತು. ಬದಲಿಗೆ ಅದೊಂದು 'ಪ್ರತಿಭಟನೆ'ಯ ಹೆಸರಿನ ಕೈ ಬೆರಳೆಣಿಕೆಯ 'ಗಲಭೆಕೋರ' ಪಕ್ಷವೆಂದೇ ಜನರ ಕಣ್ಣಲ್ಲಿ ದಾಖಲಾಗುತ್ತಾ ಹೋಯಿತು. ಇದರಿಂದಾಗಿ ಪಕ್ಷ

ತನ್ನ ಜನಪರ ತಾತ್ವಿಕತೆಯ್ಮ ಹೊರತಾಗಿಯೂ, ಆಯ್ಕೆಯಾದ ಅದರ ಕೆಲವೇ ಶಾಸಕರ ಜನಪರ ಶಾಸನಸಭಾ 'ಪ್ರದರ್ಶನ'ಗಳ ಹೊರತಾಗಿಯೂ, ಸೋಲಿನ ಮೇಲೆ ಸೋಲನ್ನು ಅನುಭವಿಸುತ್ತಾ ಹೊಯಿತು. ಇದರ ಪರಿಣಾಮವಾಗಿ ಪಕ್ಷ, ರಾಷ್ಟ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಪದೇ ಪದೇ ಹೋಳಾಗತೊಡಗಿತು. ಈ ಮಧ್ಯೆ ಕಾಂಗ್ರೆಸ್ ಪಕ್ಷ ಪದೇ ಪದೇ ತನ್ನ ಸಮಾಜವಾದಿ ನೀತಿ ಬದ್ಧತೆಯನ್ನು ಪುನರುಚ್ಚರಿಸುತ್ತಿದ್ದುದರಿಂದಲೂ, ಕಾಂಗ್ರೆಸ್ಸಿನ ಕಡೆ ವಲಸೆ ನಡೆದೇ ಇತ್ತು. ೧೯೫೦ರಲ್ಲಿ ಉತ್ತರಪ್ರದೇಶದ ಬುಲಂದ್‌ಷಹರ್ ಎಂಬಲ್ಲಿ ಸಮಾಜವಾದಿ ಕಾರ್ಯಕರ್ತರು ಮತ್ತು ರೈತರು ಸೇರಿ 'ಲೋಹಿಯಾ ಸಾಗರ' ಎಂಬ ಕಿರು ಜಲಾಶಯವೊಂದನ್ನು ನಿರ್ಮಿಸಿದ್ದರ ಹೊರತಾಗಿ ಸಮಾಜವಾದಿಗಳು 'ರಚನಾತ್ಮಕ' ಎನ್ನಬಹುದಾದ ಯಾವ ಚಟುವಟಿಕೆಯನ್ನು ಮಾಡಿದಂತೆ ತೋರುವುದಿಲ್ಲ. ಕೊನೇ ಪಕ್ಷ ತನ್ನ ಸಂಘಟನೆಗಾಗಿ ಒಂದು ಕೇಂದ್ರ ಕಾರ್ಯಾಲಯದ ಕಟ್ಟಡವೊಂದನ್ನೂ ಅದು ಕಟ್ಟಿಕೊಳ್ಳಲಾಗಲಿಲ್ಲ. ಹಾಗಾಗಿಯೇ ಶುದ್ಧ ಅಲೆಮಾರಿಗಳ ಪಕ್ಷದಂತಿದ್ದ ಸಮಾಜವಾದಿ ಪಕ್ಷ ಇಂದು ಭಾರತದ ರಾಜಕಾರಣದಿಂದಾಗಿಯೇ ಕಾಣೆಯಾಗಿದೆ.ಹಾಗಾಗಬಾರದೆಂದು ತಮ್ಮ ಬದುಕಿನ ಕೊನೇ ದಿನಗಳಲ್ಲಿ, ನಾನು ಈ ಹಿಂದೆಯೇ ತಿಳಿಸಿದಂತೆ, ಅದರ ಇಬ್ಬರು ಮುಖ್ಯ ನಾಯಕರಾದ ಲೋಹಿಯಾ ಮತ್ತು ಜಯಪ್ರಕಾಶರು ಹತ್ತು ವರ್ಷಗಳ ಅವಧಿಯಲ್ಲಿ ೧೯೬೭ ಮತ್ತು ೧೯೭೭ರಲ್ಲಿ – ಕಾಂಗ್ರೆಸ್ಸೇತರವಾದದ ಎರಡು ದೊಡ್ಡ ರಾಜಕೀಯ ತಂತ್ರಗಳನ್ನು ರೂಪಿಸಿದವರಾದರೂ!

ಇಷ್ಟಾದರೂ ಸಮಾಜವಾದದ ಸೆಳೆತ ಭಾರತೀಯ ಸಮಾಜದಲ್ಲಿ ಕಡಿಮೆಯಾದಂತಿಲ್ಲ. ಜಾಗತೀಕರಣ, ಒಂದು ಜನವರ್ಗವನ್ನು ಬಲಿ ತೆಗೆದುಕೊಂಡೇ ಇನ್ನೊಂದು ಜನವರ್ಗದ ಅಪಾರ ಸಿರಿವಂತಿಕೆಗೆ ಕಾರಣವಾಗುತ್ತಿರುವ (ಇದನ್ನೇ ನವವಸಾಹತುಶಾಹಿ ಎನ್ನುವುದು) ಕ್ರಮೇಣ ಸ್ಪಷ್ಟವಾಗುತ್ತಿದ್ದಂತೆ, ಸಮಾಜವಾದದ ಬಗ್ಗೆ ಜನರಲ್ಲಿ ಮತ್ತೆ ಕುತೂಹಲ ಹುಟ್ಟುತ್ತಿದೆ. ಆದರೆ ಈ ಸೆಳೆತ ಮತ್ತು ಕುತೂಹಲಗಳನ್ನೂ ಅರ್ಥ ಪೂರ್ಣಗೊಳಿಸುವಂತಹ ಒಂದು ಸಂಘಟನೆಯಲ್ಲಿಯೇ ಇಂದು ಇಲ್ಲದಾಗಿದೆ. ಹಾಗೆ ನೋಡಿದರೆ ಸಮಾಜವಾದದ ಪುನರುಜ್ಜೀವನಕ್ಕೆ ಇಂದು ಹೊಸ ಅವಕಾಶವೊಂದು ತಾನಾಗಿ ರೂಪುಗೊಂಡಿದೆ. ಕಾಂಗ್ರೆಸ್ ಪೂರ್ವಾಶ್ರಮದ ನೆನಪುಗಳ ಭಾರಗಳಿಂದ ಮುಕ್ತರಾದ ಹೊಸ ತಲೆಮಾರಿನ ಸಮಾಜವಾದಿಗಳು, ಸಮಾಜವಾದವನ್ನು ಇಂದಿನ ಅಗತ್ಯಗಳಿಗೆ ತಕ್ಕಂತೆ ಪುನರ್‌ರೂಪಿಸಬಹುದಾಗಿದೆ. ಅದರ ತಂತ್ರಜ್ಞಾನ, ಆಡಳಿತ, ಜಾತಿ, ಭಾಷೆ ಇನ್ನಿತರ ನೀತಿಗಳನ್ನು ಹೊಸ ಸಂದರ್ಭಕ್ಕೆ ತಕ್ಕಂತೆ ಪುನರ್ ನಿರೂಪಿಸುವ 'ಸ್ವಾತಂತ್ರ್ಯ' ಅವರಿಗಿದೆ. ಮುಖ್ಯವಾಗಿ ಸಮಾಜವಾದ ಪ್ರತಿಪಾದಿಸಿದ ಸರಳ ಸಭ್ಯ ಜೀವನ ಮಟ್ಟದ ಮಧ್ಯಮ ಮಾರ್ಗವನ್ನು ಅದು ಇಂದಿನ ಹೊಸ ಆರ್ಥಿಕ ಸಂದರ್ಭದಲ್ಲಿ ವ್ಯವಹಾರಿಕವೆನಿಸುವ ರೀತಿಯಲ್ಲಿ ನಿರ್ದಿಷ್ಟಕರಿಸಬೇಕಿದೆ. ಲೋಹಿಯಾ ಅವರು ಅರವತ್ತರ ದಶಕದ ಆರ್ಥಿಕತೆಯ ಹಿನ್ನೆಲೆಯಲ್ಲಿ, ಅಸಮಾನತೆಯ ಅಂತರ ಹತ್ತುಪಟ್ಟಿಗಿಂತ ಹೆಚ್ಚಿರಬಾರದು ಎನ್ನುವ ಗರಿಷ್ಠ ಸಾಧ್ಯ ಸಮಾನತೆಯ ಸೂತ್ರದ ಆಧಾರದ ಮೇಲೆ ಸರಳ ಸಭ್ಯ ಜೀವನ ಮಟ್ಟವನ್ನು ನಿರ್ದಿಷ್ಟೀಕರಿಸಿದ್ದರು. ಆದರೆ ಅದು ಕೂಡಾ ಬಹಳ ಜನರಿಗೆ ಅಂದು ವ್ಯವಹಾರಿಕ ಅನ್ನಿಸಲಿಲ್ಲ. ಏಕೆಂದರೆ ಅದು ಸಾಮಾನ್ಯ ಮನುಷ್ಯನೊಬ್ಬನ ಸುಖದ ಇಚ್ಛೆಯ ಎಲ್ಲೆಗಳನ್ನು ಗುರುತಿಸಿರಲಿಲ್ಲ ಮತ್ತು ಆ ಇಚ್ಛೆಯನ್ನು ನಿಯಂತ್ರಿಸಬಲ್ಲ ರಾಜಕೀಯ ಶಕ್ತಿಯನ್ನು ಸಮಾಜವಾದ ಸಂಘಟನೆಗಳಸಿಕೊಂಡಿರಲಿಲ್ಲ.

ಈಗಲಾದರೋ ಸಮಾನತೆಯ ಅಂತರ ಸಾವಿರ ಪಟ್ಟನ್ನು ಮೀರಿ ಹೋಗಿದೆ! ಲೋಹಿಯಾ ಕಾಲದಲ್ಲಿ ಕೆಲವರಲ್ಲಾದರೂ ಇನ್ನು ವಿಶ್ವಾಸ ಉಳಿಸಿಕೊಂಡಿದ್ದ ಗಾಂಧಿವಾದ ಸರಳ ಜೀವನದ ಆದರ್ಶ ಇಂದು ಅಪ್ರಸ್ತುತವೆನಿಸಿಕೊಂಡಿದೆ. ಮಾಹಿತಿ ತಂತ್ರಜ್ಞಾನದ ಸ್ಫೋಟ ಹಲವಾರು ನೆಲೆಗಳಲ್ಲಿ ಕೆಲಸ ಮಾಡುತ್ತಾ, ಸಮಾಜದ ಲೌಕಿಕ

ಸಮಾಜವಾದದ ಸೆಳೆತ ಭಾರತೀಯ ಸಮಾಜದಲ್ಲಿ ಕಡಿಮೆಯಾದಂತಿಲ್ಲ. ಜಾಗತೀಕರಣ, ಒಂದು ಜನವರ್ಗವನ್ನು ಬಲಿ ತೆಗೆದುಕೊಂಡೇ ಇನ್ನೊಂದು ಜನವರ್ಗದ ಅಪಾರ ಸಿರಿವಂತಿಕೆಗೆ ಕಾರಣವಾಗುತ್ತಿರುವ ನವವಸಾಹತುಶಾಹಿ ಕ್ರಮೇಣ ಸ್ಪಷ್ಟವಾಗುತ್ತಿದ್ದಂತೆ, ಸಮಾಜವಾದದ ಬಗ್ಗೆ ಜನರಲ್ಲಿ ಮತ್ತೆ ಕುತೂಹಲ ಹುಟ್ಟುತ್ತಿದೆ. ಆದರೆ ಈ ಸೆಳೆತ ಮತ್ತು ಕುತೂಹಲಗಳನ್ನೂ ಅರ್ಥಪೂರ್ಣಗೊಳಿಸುವಂತಹ ಒಂದು ಸಂಘಟನೆಯೇ ಇಂದು ಇಲ್ಲದಾಗಿದೆ. ಹಾಗೆ ನೋಡಿದರೆ ಸಮಾಜವಾದದ ಪುನರುಜ್ಜೀವನಕ್ಕೆ ಇಂದು ಹೊಸ ಅವಕಾಶವೊಂದು ತಾನಾಗಿ ರೂಪುಗೊಂಡಿದೆ.

ಶಾಂತವೇರಿ ಗೋಪಾಲಗೌಡ

ನಿರೀಕ್ಷೆಗಳ ಮಟ್ಟವನ್ನೂ ಹಲವು ಪಟ್ಟು ಹೆಚ್ಚಿಸಿದೆ. ಇನ್ನು ಸಾಮಾಜಿಕ ನ್ಯಾಯದ ಆಂದೋಲನವೂ ಈ ವರ್ಷಗಳಲ್ಲಿ ಚೈತನ್ಯ ಶಾಲಿಯಾಗಿ ಬೆಳೆದು, ಇದರಿಂದಾಗಿ ಪರಿಶಿಷ್ಟರೂ ಸೇರಿದಂತೆ ಸಮಾಜದ ಶೂದ್ರ ಜಾತಿಗಳು ಗಣನೀಯ ಸಾಮಾಜಿಕ ಚೈತನ್ಯವನ್ನು ಪಡೆದುಕೊಂಡು; ರಾಜಕಾರಣದಲ್ಲಿ ಸಾಕಷ್ಟು ಆಕ್ರಮಣಕಾರಿ ಪಾತ್ರವನ್ನೇ ವಹಿಸುತ್ತಿವೆ. ಇಂತಹ ಹೊಸ ಸಾಮಾಜಿಕ ಆರ್ಥಿಕ ಸಂಕೀರ್ಣತೆಗಳಲ್ಲಿ ಸಮಾಜವಾದ ತನ್ನ ಹೊಸ ದಿಗಂತಗಳನ್ನು ಕಂಡುಕೊಳ್ಳಬೇಕಿದೆ. ಹಾಗೆ ಕಂಡುಕೊಂಡ ಹೊಸ ಎಲ್ಲೆಗಳಲ್ಲೇ ಸಮಾಜವಾದಿಗಳೆನಿಸಿಕೊಂಡವರು ತಮ್ಮ ಜೀವನ ಶೈಲಿಯನ್ನು ರೂಢಿಸಿಕೊಂಡು, ಅದರ ಚೆಲುವನ್ನೇ ಒಂದು ಹೊಸ ಮೌಲ್ಯವೆಂಬಂತೆ ಪ್ರಚುರ ಪಡಿಸಿದಂತಹ ಸಾಂಸ್ಕೃತಿಕ ಆಂದೋಲನವನ್ನಾಗಿ, ಹೊಸ ಸಮಾಜವಾದಿ ಆಂದೋಲನವನ್ನು ಕಟ್ಟಬೇಕಾಗಿದೆ. ಮುಖ್ಯವಾಗಿ ಕುಟುಂಬವೊಂದರ ಆಸ್ತಿ ಮತ್ತು ಆದಾಯ ಮಿತಿಗಳ ನಿರ್ಧಾರಗಳೊಂದಿಗೆ ಈ ಕೆಲಸ ಆರಂಭವಾಗಬೇಕಿದೆ. ಅದರ ಆಧಾರದ ಮೇಲೆ ಸಾಮಾಜಿಕ ನ್ಯಾಯ ಮೀಮಾಂಸೆಯನ್ನು ಪುನಾರಚಿಸಬೇಕಿದೆ. ಈ ಮೀಮಾಂಸೆ ಮುಖ್ಯವಾಗಿ ಜಾಗತೀಕರಣ ಸೃಷ್ಟಿಸಿರುವ 'ಸುಖ'ದ ಕಲ್ಪನೆಯ ನಿಜತ್ವವನ್ನು ಶೋಧಿಸಬಲ್ಲ ಪಾರಮಾರ್ಥಿಕತೆಯನ್ನು ಮೈಗೂಡಿಸಿಕೊಳ್ಳಬೇಕಿದೆ. ಇಲ್ಲದೇ ಹೋದಲ್ಲಿ, ಜಾತಿ, ಭಾಷೆ, ಆಡಳಿತ ಮತ್ತು ತಂತ್ರಜ್ಞಾನಗಳನ್ನು ಕುರಿತ ನಮ್ಮ ಹಳೆಯ ನೀತಿಗಳನ್ನು ಪುನರ್ ವಿಮರ್ಶಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಈ ವಿಷಯಗಳನ್ನು ಕುರಿತಂತೆ, ಸಮಾಜವಾದ ಹಿನ್ನೆಲೆಗೆ ಸರಿದ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಡೆದಿರುವ ಎಲ್ಲ ಚರ್ಚೆಗಳನ್ನೂ ಸಹಾನುಭೂತಿಯಿಂದ ಪರಿಶೀಲಿಸಿ, ಸಮಾಜವಾದವನ್ನು ಹೊಸಕಾಲದ ಮಧ್ಯಮ ಮಾರ್ಗವನ್ನಾಗಿ ಹೇಗೆ ಜನರ ಕಣ್ಣಲ್ಲಿ ವ್ಯವಹಾರಿಕವೂ ಹೌದೆನ್ನುವ ರೀತಿಯಲ್ಲಿ ಪ್ರಸ್ತುತ ಪಡಿಸಬಹುದು ಎಂಬುದರ ರೂಪುರೇಷೆಗಳನ್ನು ಸಿದ್ಧ ಪಡಿಸಬೇಕಿದೆ. ಅದು ಮುಖ್ಯವಾಗಿ, ಮುಕ್ತ ಮಾರುಕಟ್ಟೆಯ ಆರ್ಥಿಕತೆ ಸೃಷ್ಟಿಸುತ್ತಿರುವ ಆಸ್ಫೋಟನಕಾರಿ ಅಸಮಾನತೆಯ, ಅಪರಾಧಿಗಳ, ಅಶ್ಲೀಲತೆಯ ಹಾಗೂ ಅವನತಿಯ ಸಮಾಜಕ್ಕೆ ಒಂದು ನೈತಿಕ ಪರ್ಯಾಯವಾಗಿರುವಂತೆ ನೋಡಿಕೊಳ್ಳಬೇಕಿದೆ. ಉದಾಹರಣೆಗೆ, ಇಂದಿನ ಆರ್ಥಿಕತೆಯಲ್ಲಿ ತಿಂಗಳಿಗೆ ಪ್ರತಿ ಕುಟುಂಬಕ್ಕೂ ಹತ್ತು ಸಾವಿರ ರೂಪಾಯಿಗಳ ಆದಾಯವಿಲ್ಲದೆ, ಯಾರಾದರೂ \ಒಂದು ಲಕ್ಷಕ್ಕಿಂತ ಹೆಚ್ಚಿನ ಆದಾಯಗಳಿಸುವುದು ಮತ್ತು ಅಂತಹ ವ್ಯವಸ್ಥೆ ಇರುವುದು ಅನೈತಿಕ ಎಂಬ ಸಾಂಸ್ಕೃತಿಕ ಎಚ್ಚರವನ್ನು ಪ್ರಚೋದಿಸುವ ರೀತಿಯಲ್ಲಿ ಈ ಆಂದೋಲನವನ್ನು ಆರಂಭಿಸಬೇಕಿದೆ. ನೇರವಾಗಿ ಹೇಳುವುದಾದರೆ, ಹೊಸ ಸಮಾಜವಾದವೆಂಬುದು ರೂಪುಗೊಳ್ಳುವುದಾದರೆ, ಅದೊಂದು ಹೊಸ ನೈತಿಕ ಆಂದೋಲನವಾಗಿಯೇ ಆರಂಭವಾಗಬೇಕಿದೆ.

ಇದಕ್ಕೆ ಸದ್ಯಕ್ಕೆ ಪಕ್ಷದ ಅಗತ್ಯವಿಲ್ಲ. ಮೊದಲು ಈ ಎಲ್ಲ ವಿಷಯಗಳ ಬಗ್ಗೆ ಚರ್ಚಿಸಲು, ಸಹಮತ ಮೂಡಿಸಲು ಒಂದು ಅಧ್ಯಯನದ ವೇದಿಕೆಯ ಅಗತ್ಯವಿದೆ. ಸಮಾಜವಾದವನ್ನು ಗಾಂಧಿವಾದದ ಹೆಸರಲ್ಲಾಗಲಿ, ಸರ್ವೋದಯದ ಹೆಸರಲ್ಲಾಗಲಿ, ಹೊಸ ಸಮಾಜವಾದದ ಹೆಸರಲ್ಲಾಗಲಿ ಪುನರುಜ್ಜೀವನಗೊಳಿಸ ಬಯಸುವವರು, ಮೊದಲು ಇಂತಹ ವೇದಿಕೆಯೊಂದರ ಅನಿವಾರ್ಯತೆಯನ್ನು ಮನಗಂಡು, ಅದನ್ನು ರೂಪಿಸುವ ಕಡೆ ಪ್ರಯತ್ನಗಳನ್ನು ಆರಂಭಿಸಬೇಕಿದೆ. □

ಬೆಳವನ ಹಕ್ಕಿ ಮತ್ತು ಸಂತ

ಮಂಜು ಕವಿದ ಮಣ್ಣ ಪರ್ವತವನೇರಿ ಬಂದಿದೇನೆ
ವಿಶ್ವಾಸದಿಂದ ಮುಳ್ಳು ಬೇಲಿಗಳ ದಾಟಿ
ನಿನ್ನ ಉರಿಚಮ್ಮಾಳಿಗೆಯ ಗುದ್ದುಗೆಗೆ...

ಗಿರಿಯ ಪದತಲದಲ್ಲಿ ಬೀಸುವ ಪರಿಮಳದ ಮಾರುತ
ನನ್ನೊಳಗಿನ ನಾರುವ ಹುಣ್ಣನ್ನು ಮಾಯಿಸಿದೆ ತಣ್ಣಗೆ
ಹೂ-ಹಣ್ಣು ಸುರಿಸುವ ಗಿಡ-ಮರ-ಬಳ್ಳಿಗೆ
ಬಂಡೆಗಳ ತೋಯಿಸಿ ನೆಲಕ್ಕಿಳಿವ ಜಲಪಾತಕ್ಕೆ
ನೊಂದವರಿಗಾಗಿ ಹಾಡುವ ಹಕ್ಕಿಗೊರಗಳಿಗೆ
ದಂಡೆತ್ತಿ ಬರುವ ಕಾಫಿರರ ಖಡ್ಗಗಳು ಮಣಿಯಲೆಂದು
ಬಾಬಾ... ದುವಾ ಕರೋ.

ಹಗಲಿನಲ್ಲೂ ರಾತ್ರಿಯ ನೆರಳಿದೆ
ಕಣ್ಣುರೆಪ್ಪೆಗಳ್ ಮೇಲೆ ನಿಂತ ಸಾವಿನ ದೂತರು
ಕಡಿದು ಹಾಕಿದ್ದಾರೆ
ನಿನ್ನೆಡೆಗೆ ಬರುವ ಎಲ್ಲ ದಾರಿಗಳನ್ನು
ಹಾಡು ಹಗಲಿನಲ್ಲೆ ಕಣ್ಣು ಹಿಂಗಿ
ಸೈತಾನರ್ ಸೆರೆಯಾಳಾದ ಧರ್ಮದ ವಾರಸುದಾರರ
ತೇವದ ಒಳಗಣ್ಣು ತೆರೆಯುವಂತೆ
ಬಾಬಾ... ದುವಾ ಕರೋ.

ಮಾತು ಹೊರಬರದೆ ಕುದಿವ ಎದೆಬಡಿತ
ಕತ್ತಲೆಯ ಪೊರೆಹರಿದು ಮತ್ತೆ ಬೆಳಗಾಗುವುದೆಂದು
ಬೆಳವನ ಹಕ್ಕಿ ಹಾಡುತ್ತಿದೆ ಸಂತನ ಜೊತೆಯಲ್ಲಿ
ರಾತ್ರಿಯಿಡೀ ಮೌನವಾಗಿದ್ದ ಚಂದಿರನ ಹೊಳಪು
ನನ್ನ ಮೂಲೆಗೂಸಿನ ಕಂಗಳ ಬೆಳಕು
ಎಂದೂ ಬತ್ತದಂತೆ
ಬಾಬಾ... ದುವಾ ಕರೋ.

ಹೊಳೆಯುವ ಕಾಡು ಹರಿಯುವ ಹೊಳೆ
ಹಸುರು ಮಖಮಲ್ಲು ಹೊದ್ದ ಗಿರಿಗಳ ಹಣೆಗೆ
ಬೆಸೆದ ಹೃದಯಗಳ ಮೇಲೆ
ನಿನ್ನ ಪ್ರೇಮದ ಮೊಹರು ಒತ್ತಿರುವೆ
ಗಾಳಿ ನಿಟ್ಟುಸಿರಿಗೆ ಸಿಲುಕಿ
ನನ್ನ ಎದೆಗೂಡಲ್ಲಿ ಕರುಣೆಯ ಹಣತೆ ನಂದದಂತೆ
ಬಾಬಾ... ದುವಾ ಕರೋ.

ಡಾ. ಜೆ.ವಿ. ಆನಂದಮೂರ್ತಿ



ಕಾವ್ಯ

ಓಟಿನ ಶಕ್ತಿ*

ಬಹುಜನರ ಓಟಿಗೆ ಬಂತು ಶಕ್ತಿ
ರಟ್ಟೆಗೆ ಬರುವುದು ಎಂದೊ?

ನನ್ನ ಮಗಳು ಹತ್ತನೆ ಇಯತ್ತೆಯನ್ನು
ಮೊದಲ ಪರೀಕ್ಷೆಯಲ್ಲಿಯೇ ಪಾಸು ಮಾಡಿದಳು
ನನ್ನ ದಣಿಯ ಮಗ
ಮೂರನೆಯ ಸಲವೂ ಕಟ್ಟ ಫೇಲಾದ

ಇಷ್ಟೇ ಸಾಕಾಯ್ತು ನನ್ನ ಮನೆಗೆ ನುಗ್ಗಿದವನೆ ಅಂವ
ದರದರನೇ ನನ್ನ ಮಗಳ ಹೊರಗೆಳೆದ
ದುಪ್ಪಟವನ್ನು ಕಿತ್ತ
ಹೆತ್ತವರ ಎದುರೇ ಎಳೆಮೊಲೆಗಳ ಚಿಮುಕಿದ

ಎಷ್ಟೆ ಕೊಬ್ಬು ಚಿನಾಲಿ ನಿಂಗೆ
ಒಂದೇ ಏಟ್ಗೆ ಪಾಸು ಮಾಡಿಬಿಟ್ಟೆ
ನಿಮ್ಮ ಜಾತಿಯವಳು ಮುಖ್ಯಮಂತ್ರಿ ಆಗವ್ಳೆ ಅಂತ
ಕೊಬ್ಬಿದೀರಿ ನೀವು ಅಂದ

ನನ್ನ ಹೆಂಡತಿ ಸೀರೆ ನೆರಿಗೆಯನ್ನು ಬಿಗಿ ಹಿಡಿದು
ಯೊಪ್ಪೋ ಅವಳನ್ನ ಬಿಡ್ರಿ
ಇನ್ನೂ ಹರೇದುಡ್ಗಿ ಏನೂ ತಿಳಿದೇ
ತಪ್ಮಾಡವ್ಳೆ ಅಂತ ಗೋಗರಿತಿದ್ಲು

ಇತ್ತ ಬಡವರ ಮನೆಯ ಕಪ್ಪುಬಿಳಿಪು ಟಿವಿಯಲ್ಲಿ
ಚೂಡಿದಾರ್ ಹೆಂಗಸೊಬ್ಬಳು
ಈಗ ನನ್ನ ರಾಜ್ಯದಲ್ಲಿ
ಕಾನೂನು ಸುವ್ಯವಸ್ಥೆ ಹೇಗಿದೆ ನೋಡಿ ಎನ್ನುತ್ತಿದ್ದಳು

ಆಕೆಯ ಶರೀರದ ಹತ್ತಂಗುಲದಾಚೆ
ಅಂಟಿಕೊಂಡ ಮಿಲಿಟರಿ ಪಡೆ ಯೋಧರು
ನಾಲ್ಕೂ ದಿಕ್ಕುಗಳತ್ತ ಏಕೆ ೪೭ ಬಂದೂಕು
ತೋರಿಸುತ್ತಾ ಬೆಂಗಾವಲಾಗಿದ್ದರು

○ ಡಾ. ಮೂಡ್ನಾಕೂಡು ಚಿನ್ನಸ್ವಾಮಿ

* ಸತ್ಯ ಘಟನೆಯೊಂದನ್ನು ಆಧರಿಸಿ

ಯಾವುದೇ ಬಜೆಟ್ಟಿನಲ್ಲಿ ಪ್ರತಿಯೊಂದು ಬಾಬತ್ತುಗಳಿಗೂ ನೀಡುವ ಹಣ ಹೋದ ವರ್ಷಕ್ಕಿಂತ ಸ್ವಲ್ಪ ಮಟ್ಟಿಗೆ ಹೆಚ್ಚಿಗಿರುತ್ತದೆ. ಅದು ಪ್ರತಿ ವರ್ಷ ಏರು ಗತಿಯಲ್ಲಿರುವ ಬೆಲೆ ಏರಿಕೆಗೆ ತಕ್ಕಂತೆ ಇರುತ್ತದೆ. ಆದ್ದರಿಂದಲೇ ಹಣಕಾಸು ಪರಿಭಾಷೆಯಲ್ಲಿ ನಿಜವಾದ ಹೆಚ್ಚಳವನ್ನು ಅರ್ಥ ಮಾಡಿಕೊಳ್ಳಲು ಒಂದು ಸ್ಟಾಂಡರ್ಡ್ ವರ್ಷವನ್ನು ನಿಗದಿ ಮಾಡಿ ಅದರ ಮಾನದಂಡಗಳಲ್ಲಿ ಹೆಚ್ಚಳವನ್ನು ಅಳೆಯಲಾಗುತ್ತದೆ. ಅಲ್ಲದೆ ಇಂದು ಹಣದುಬ್ಬರವು ಶೇ.೧೨ನ್ನು ಮುಟ್ಟುತ್ತಿರುವಾಗ ಕಳೆದ ವರ್ಷ ೧೦೦ ರೂ. ಗೆ ಸಿಗುತ್ತಿದ್ದ ಸರಕಿಗೆ ಇಂದು ನಾವು ೧೧೨ ರೂ. ಕೊಡಬೇಕು ಅದರರ್ಥ. ಅಂದರೆ ಕಳೆದ ವರ್ಷ ೧೦೦ರೂ ಹಣ ಒದಗಿಸಿದ ಬಾಬತ್ತಿಗೆ ಈ ವರ್ಷ ೧೧೨ ರೂ. ನೀಡಿದ್ದರೆ ಅದನ್ನು ೧೨ ರೂ. ಹೆಚ್ಚಳ ಎಂದು ಕರೆಯಲಾಗುವುದಿಲ್ಲ. ಬದಲಿಗೆ ನಿಜವಾದ ಅರ್ಥದಲ್ಲಿ ಹೋದ ವರ್ಷದಷ್ಟೆ ಹಣವನ್ನು ನೀಡಲಾಗಿದೆ ಎಂದರ್ಥ.

-ಬಜೆಟ್ ವಿಶ್ಲೇಷಣೆಯ ಮುಂದುವರೆದ ಭಾಗ

ಶಿವ ಸುಂದರ್

ಸುಳ್ಳು ಭರವಸೆಗಳ, ವಿಶ್ವ ಬ್ಯಾಂಕ್ ನಿರ್ದೇಶನದ ಬಿಜೆಪಿ ಬಜೆಟ್

೨

(ಕಳೆದ ಸಂಚಿಕೆಯಿಂದ ಮುಂದುವರೆದುದು)

ಶ್ರೀಮಂತ ವರ್ಗ ತನ್ನ ಆದಾಯದ ಬಹುಭಾಗವನ್ನು ಉಳಿತಾಯ ಮಾಡುವುದರಿಂದ ಮತ್ತು ಅದನ್ನು ಹೂಡಿಕೆ ಮಾಡುವುದರಿಂದ ಹಾಗೂ ಹೂಡಿಕಾ ವೆಚ್ಚಕ್ಕೆ ರಿಯಾಯತಿಗಳು ಸಿಗುವುದರಿಂದ ತೆರಿಗೆ ಸಂಪನ್ಮೂಲದಲ್ಲಿ ಶ್ರೀಮಂತ ವರ್ಗದ ಪಾಲು ಕಡಿಮೆಯಾಗುತ್ತಲೇ ಹೋಗಿ ಬಡ ಮಧ್ಯಮ ವರ್ಗದವರ ಪಾಲು ಹೆಚ್ಚುತ್ತಾ ಹೋಗುತ್ತದೆ.

ರಾಜ್ಯದ ಸ್ವಂತ ತೆರಿಗೆಗಳಲ್ಲಿ ಮಾರಾಟ ತೆರಿಗೆಗಳ ಪಾಲು ಶೇ.೬೫ರಷ್ಟು.ಈ ಬಾಬತ್ತಿನಲ್ಲಿ ಎಲ್ಲಾ ಜನರು ಸಹ ಒಂದಲ್ಲ ಒಂದು ಸರಕು ಅಥವಾ ಸೇವೆಗಳನ್ನು ಕೊಳ್ಳಲೇ ಬೇಕಿರುವುದರಿಂದ ಕೊಂಡ ಪ್ರತಿಯೊಂದು ಸರಕು ಮತ್ತು ಸೇವೆಗಳಿಗೂ ತೆರಿಗೆ ಪಾವತಿಸುತ್ತಾರೆ. ನಂತರದ ಪಾಲು ರಾಜ್ಯ ಅಬಕಾರಿ ತೆರಿಗೆಯದ್ದು. ಇದನ್ನು ಮದ್ಯಪಾನ ಉತ್ಪಾದನೆ ಮಾಡುವ,ಮಾರಾಟ ಮಾಡುವ ಮತ್ತು ಕುಡಿಯುವ ಜನ ಪಾವತಿಸುತ್ತಾರೆ. ಆದರೆ ಉತ್ಪಾದಕರು ಮತ್ತು ಮಾರಾಟಗಾರರು ತಮ್ಮ ತೆರಿಗೆ ಹೊಣೆಗಾರಿಕೆಯನ್ನೆಲ್ಲಾ ಗ್ರಾಹಕರಿಗೆ ವರ್ಗಾಯಿಸುವುದರಿಂದ ಅಂತಿಮವಾಗಿ ಅದನ್ನೂ ಸಹ ಜನರೇ ಪಾವತಿಸುತ್ತಾರೆ. ಮೂರನೆಯದಾಗಿ ಮುದ್ರಾಂಕ ಮತ್ತು ನೊಂದಣಿ ತೆರಿಗೆ.ಇದನ್ನು ಆಸ್ತಿ ವ್ಯವಹಾರಗಳಲ್ಲಿ ತೊಡಗಿರುವ ಜನ ಪಾವತಿಸುತ್ತಾರೆ. ಮತ್ತು ಮೋಟಾರು ವಾಹನ ತೆರಿಗೆ.

MTFP ನೀತಿಯಂತೆ ಸರ್ಕಾರವು ಈಗಾಗಲೇ ವ್ಯಾಟ್ ತೆರಿಗೆ ಪದ್ಧತಿಯನ್ನು ಅನುಸರಿಸಿದೆ. ಅದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮತ್ತು ಒಂದೆಡೆ ತೆರಿಗೆ ಪಾವತಿ ಮತ್ತು ದರವನ್ನು ಸರಳೀಕರಿಸುತ್ತಲೇ ತೆರಿಗೆ ಬಲೆಯನ್ನು ಇನ್ನಷ್ಟು ಸರಕು ಸೇವೆಗಳಿಗೆ ವಿಸ್ತರಿಸುವುದನ್ನು ಈ ನೀತಿಯು ಕಡ್ಡಾಯ ಮಾಡುತ್ತದೆ. (MTFP-2005-09, p 23). ಅದೇ ರೀತಿ MTFP –೨೦೦೮-೧೨ ರಲ್ಲಿ ರಾಜ್ಯ ಅಬ್ಕಾರಿ ತೆರಿಗೆಯ ಸುಧಾರಣೆಯ ಬಗ್ಗೆ ನೀಡಿರುವ ಸಲಹೆ ಯೆಂದರೆ:

“ಸಾರಾಯಿ ನಿಷೇಧ ಮಾಡಿದರೂ ಮದ್ಯದ ಮಾರಾಟ ಹೆಚ್ಚು ನೀಡಿರುವುದರಿಂದ ರಾಜ್ಯ ಅಬಕಾರಿ ಆರ್ಥಿಕ ವರ್ಷ ೨೦೦೭–೦೮ರಲ್ಲಿ ದೇಸಿ ಸಾರಾಯಿಯ ಮೇಲೆ ನಿಷೇಧ ಹೇರುವ ಮೂಲಕ ರಾಜ್ಯದ ಅಬಕಾರಿ ಕಾರ್ಯನೀತಿಯಲ್ಲಿ ಮುಖ್ಯವಾದ ಬದಲಾವಣೆಗಳನ್ನು ತರಲಾಯಿತು. ಸಾರಾಯಿ ತೆರಿಗೆಯಿಂದ ಬರುವ ಬಾಡಿಗೆಯನ್ನು ಬಿಡುವುದರಿಂದ ೨೦೦೦ ಕೋಟಿಗಳಷ್ಟು ಗಮನಾರ್ಹವಾದ ರಾಜಸ್ವ ನಷ್ಟ ಉಂಟಾಗಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಐಎಂಎಲ್‌ನ ಬಳಕೆಯು ಹೆಚ್ಚಿದ್ದರಿಂದ ರಾಜಸ್ವದ ಅಂತರವನ್ನು ಬಹಳಷ್ಟು ತುಂಬಲಾಗಿದೆ ಮತ್ತು ರಾಜ್ಯದ ಅಬಕಾರಿಯಿಂದ ೨೦೦೮-೦೯ರ ಸಾಲಿಗೆ ಸಂಗ್ರಹವಾಗುವ ಪರಿಷ್ಕೃತ ಅಂದಾಜು, ಬಜೆಟ್ ಅಂದಾಜಗಿಂತ ಸುಮಾರು ೧೫೦೦ ಕೋಟಿ ರೂ.ಗಳಿಗಿಂತ ಹೆಚ್ಚಾಗಬಹುದೆಂದು ನಿರೀಕ್ಷಿಸಲಾಗಿದೆ. ಬಳಕೆಯ ಮಟ್ಟ ಹೆಚ್ಚಾಗಿದ್ದರೂ ನೆರೆ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡಿಗೆ ಹೋಲಿಸಿದರೆ ಸಾರಾಯಿಯ ಮೇಲಿನ ಒಟ್ಟಾರೆ ತೆರಿಗೆ ಸಂಗ್ರಹಣೆಯಿಂದ ಬರುವ ಆದಾಯವು ೨೦೦೦ ಕೋಟಿ ರೂ.ಗಳಿಂದ ೫೦೦೦ ಕೋಟಿ ರೂ.ಗಳಷ್ಟು ಕಡಿಮೆ ಇದೆ. ಅಬಕಾರಿ ಸುಂಕ ಮತ್ತು ಮಾರಾಟ ತೆರಿಗೆ ಎರಡೂ ಸೇರಿದಂತೆ ಮದ್ಯದ ಮೇಲಿನ ತೆರಿಗೆಯ ಒಟ್ಟಾರೆ ಕಡಿಮೆ ದರಗಳು ಒಟ್ಟು ಸಂಗ್ರಹಣೆಯಲ್ಲಿ ಕಡಿಮೆ ಯಾಗಲು ಒಂದು ಕಾರಣವಾಗಿದೆ. ಆದಾಗ್ಯೂ ಸುಂಕ/ತೆರಿಗೆಗಳ ಹೆಚ್ಚಿನ ದರಗಳು, ತೆರಿಗೆಯನ್ನು ತಪ್ಪಿಸಿಕೊಳ್ಳಲು ಹಾಗೂ ಅಕ್ರಮ ಭಟ್ಟಿ ಇಳಿಸುವುದಕ್ಕೆ ಉತ್ತೇಜಕವಾಗಬಹುದೆಂಬುದನ್ನು ಗಮನದಲ್ಲಿಟ್ಟುಕೊಳ್ಳುವುದು ಮುಖ್ಯವಾದುದು. ಇನ್ನೊಂದೆಡೆಗೆ ಕಡಿಮೆ ದರಗಳು, ಚಿಲ್ಲರೆ ಮಾರಾಟ ಹಂತದಲ್ಲಿ ಸಾಕಷ್ಟು ಸ್ಪರ್ಧೆ ಇಲ್ಲದಿರುವುದರಿಂದಾಗಿ ಹೆಚ್ಚು ದರಗಳನ್ನು ವಿಧಿಸಿ ಅವಾಸ್ತವಿಕ ಲಾಭಗಳಿಸಲು ಚಿಲ್ಲರೆ ಮಾರಾಟಗಾರರಿಗೆ ಅನುದ್ದೇಶಿತ ಅವಕಾಶವನ್ನು ಒದಗಿಸಬಹುದಾಗಿದೆ. ಮಧ್ಯಮಾವಧಿ ವಿತ್ತೀಯ ಯೋಜನಾ ಅವಧಿಗಾಗಿ, ಅಬಕಾರಿ ಸುಂಕ, ರಾಜಸ್ವಗಳ ಸಂಪನ್ಮೂಲಗಳಿಂದ ರಾಜಸ್ವವನ್ನು ಹೆಚ್ಚಿಸಲು ಸಾಕಷ್ಟು



ಸಾಧ್ಯತೆಗಳಿರುವುದನ್ನು ಗಮನದಲ್ಲಿಟ್ಟುಕೊಂಡು ೧.೦೭೫ರಷ್ಟು ಚೇತರಿಕೆಯಾಗುವಂತೆ ಅಬ್ಕಾರಿ ಶುಲ್ಕದ ರಾಜಸ್ವದಲ್ಲಿ ಹೆಚ್ಚಳವಾಗಬೇಕೆಂದು ಯೋಜಿಸಲಾಗಿದೆ."

ಯಡಿಯೂರಪ್ಪನವರ ಬಜೆಟ್ಟು ಈ ನೀತಿಗೆ ತಕ್ಕನಾಗಿ ಅಬ್ಕಾರಿ ತೆರಿಗೆ ದರವನ್ನು ಹೆಚ್ಚಿಸುವ ಮತ್ತು ಅದರ ಬಳಕೆಯನ್ನು ವ್ಯಾಪಕಗೊಳಿಸಿ ತೆರಿಗೆಯನ್ನು ಹೆಚ್ಚಿಸುವ ಉದ್ದೇಶದಿಂದ ೧೦೦೦ಕ್ಕೂ ಹೆಚ್ಚು ಮದ್ಯ ಮಳಿಗೆಗಳನ್ನು ಮತ್ತು ೫೦೦ಕೂ ಹೆಚ್ಚು ಬಾರ್ ಮತ್ತು ರೆಸ್ಟೋರೆಂಟುಗಳಿಗೂ ಅವಕಾಶ ಮಾಡಿಕೊಟ್ಟಿದೆ. ಅಂದರೆ ಜನರಿಗೆ ಹೆಚ್ಚಿಗೆ ಕುಡಿಸುವ ಮೂಲಕ ಹೆಚ್ಚು ೨೩೦೦ ಕೋಟಿಗೂ ಹೆಚ್ಚು ಆದಾಯವನ್ನು ಹೆಚ್ಚಿಸಿಕೊಳ್ಳುವ ನೀತಿಯನ್ನು ಅನುಸರಿಸಿದೆ. ಅದೇ ರೀತಿ ಮೋಟಾರು ವಾಹನ ತೆರಿಗೆ ಬಾಬತ್ತಿನಲ್ಲೂ ಹೆಚ್ಚಿನ ಆದಾಯವನ್ನು ಪಡೆದುಕೊಳ್ಳುವ ನೀತಿಯನ್ನು ಅನುಸರಿಸುವಂತೆ ಇದು ಕಡ್ಡಾಯ ಮಾಡುತ್ತದೆ.

ಅದಕ್ಕೆ ತಕ್ಕ ಹಾಗೆ ಯಡಿಯೂರಪ್ಪನವರ ಬಜೆಟ್ಟು ಮಾರಾಟ ತೆರಿಗೆಯಿಂದ ಅಧಿಕವಾಗಿ ೪೪೭೫ ಕೋಟಿಗಳನ್ನು ಸಂಗ್ರಹಿಸುವ ಮತ್ತು ಅಬ್ಕಾರಿಯಿಂದ ೨೩೨೬ ಕೋಟಿಗಳನ್ನು ಸಂಗಹಿಸುವ ಮತ್ತು ಮೋಟಾರು ವಾಹನ ತೆರಿಗೆಯಿಂದ ೫೩೮ ಕೋಟಿ ರೂ.ಗಳನ್ನು ಅಧಿಕ ವಾಗಿ ಸಂಗ್ರಹಿಸುವ ಯೋಜನೆಯನ್ನು ಹೊಂದಿದೆ. ಅಂದರೆ ಜನರಿಂದ ಇನ್ನೂ ೭೩೯ ಕೋಟಿ ರೂ. ಅಧಿಕವಾಗಿ ಸಂಗ್ರಹಿಸುವ ಉದ್ದೇಶ ಬಿಜೆಪಿ ಸರ್ಕಾರದ್ದು.

> **ಯಡಿಯೂರಪ್ಪನವರ ಬಜೆಟ್ಟು ತನ್ನ ನೀತಿಗೆ ತಕ್ಕನಾಗಿ ಅಬ್ಕಾರಿ ತೆರಿಗೆ ದರವನ್ನು ಹೆಚ್ಚಿಸುವ ಮತ್ತು ಅದರ ಬಳಕೆಯನ್ನು ವ್ಯಾಪಕಗೊಳಿಸಿ ತೆರಿಗೆಯನ್ನು ಹೆಚ್ಚಿಸುವ ಉದ್ದೇಶದಿಂದ ೧೦೦೦ಕ್ಕೂ ಹೆಚ್ಚು ಮದ್ಯ ಮಳಿಗೆಗಳನ್ನು ಮತ್ತು ೫೦೦ಕೂ ಹೆಚ್ಚು ಬಾರ್ ಮತ್ತು ರೆಸ್ಟೋರೆಂಟುಗಳಿಗೂ ಅವಕಾಶ ಮಾಡಿಕೊಟ್ಟಿದೆ. ಅಂದರೆ ಜನರಿಗೆ ಹೆಚ್ಚಿಗೆ ಕುಡಿಸುವ ಮೂಲಕ ಹೆಚ್ಚು ೨೩೦೦ ಕೋಟಿಗೂ ಹೆಚ್ಚು ಆದಾಯವನ್ನು ಹೆಚ್ಚಿಸಿಕೊಳ್ಳುವ ನೀತಿಯನ್ನು ಅನುಸರಿಸಿದೆ. ಅದೇ ರೀತಿ ಮೋಟಾರು ವಾಹನ ತೆರಿಗೆಯಯ ಬಾಬತ್ತಿನಲ್ಲೂ ಹೆಚ್ಚಿನ ಆದಾಯವನ್ನು ಪಡೆದುಕೊಳ್ಳುವ ನೀತಿಯನ್ನು ಅನುಸರಿಸುವಂತೆ ಇದು ಕಡ್ಡಾಯ ಮಾಡುತ್ತದೆ.**

ಸಾಲ ಮತ್ತು ಉತ್ಪ್ರೇಕ್ಷಿತ ಅಂದಾಜುಗಳ ಬಜೆಟ್ಟು:

ಈ ಮೇಲಿನ ತೆರಿಗೆ ಸಂಗ್ರಹಣವನ್ನೂ ಒಳಗೊಂಡಂತೆ ಯಡಿಯೂರಪ್ಪನವರು ೫೫,೨೭೩ ಕೋಟಿ ರೂಪಾಯಿಗಳ ಅಯವ್ಯಯ ಪತ್ರವನ್ನು ಮಂಡಿಸಿದ್ದಾರೆ. ಹೋದ ವರ್ಷ ಅದು ೪೭,೬೪೯.೪೨ ಕೋಟಿ ರೂ.ಗಳಷ್ಟಾಗಿತ್ತು. ಅಂದರೆ ಹೋದ ವರ್ಷಕ್ಕಿಂತ ಈ ಬಾರಿ ೯೦೦೦ ಕೋಟಿ ರೂಪಾಯಿಗಳಷ್ಟು ಅಧಿಕ ಬಜೆಟ್ಟನ್ನು ಮಂಡಿಸಿದ್ದಾರೆ. ಅದರಲ್ಲಿ ಎಲ್ಲಾ ಬಗೆಯ ಮಾರಾಟ ತೆರಿಗೆಯಿಂದ ೩೧,೮೭೫ ಕೋಟಿ ಸಂಗ್ರಹ ನಿರೀಕ್ಷಿಸಲಾಗಿದೆ. ಇದು ಹೋದ ವರ್ಷಕ್ಕಿಂತ ೫೧೮೪ ಕೋಟಿ ರೂಪಾಯಿಗಳಷ್ಟು ಹೆಚ್ಚು.ಮತ್ತು ಕೇಂದ್ರದ ತೆರಿಗೆಯಲ್ಲಿ ಕರ್ನಾಟಕದ ಪಾಲಿನಿಂದ ೭೯೮೨ ಕೋಟಿ ರೂಪಾಯಿಗಳನ್ನು, ಕೇಂದ್ರದ ಅನುದಾನದಿಂದ ೫೪೫೦ ಕೋಟಿ ರೂಪಾಯಿಗಳನ್ನು ಮತ್ತು ತೆರಿಗೆಯೇತರ ಆದಾಯ ಮೂಲಗಳಿಂದ ೧೯೩೧ ಕೋಟಿ ರೂಪೊಯಿಗಳಷ್ಟು ನಿರೀಕ್ಷೆ ಇಟ್ಟು ಕೊಳ್ಳಲಾಗಿದೆ. ಇವೆಲ್ಲವೂ ಒಟ್ಟು ಸೇರಿ ರೆವಿನ್ಯೂ ಆದಾಯದ ಪಟ್ಟಿಯಲ್ಲಿ ೪೭,೨೪೦ ಕೋಟಿ ರೂಪಾಯಿಗಳಾಗುತ್ತದೆ. ಇದರಲ್ಲಿ ಕೇಂದ್ರದ ತೆರಿಗೆಯಲ್ಲಿ ಕರ್ನಾಟಕದ ಪಾಲಿನ ಬಗ್ಗೆ ಮತ್ತು ಮಾರಾಟ ತೆರಿಗೆ ಹೆಚ್ಚಳದ ಬಗ್ಗೆ **ಹಿಂದಿನ ವರ್ಷಕ್ಕಿಂತ ೬೪೮೪ ಕೋಟ ಸಂಗ್ರಹ ವಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.**

ಇದಲ್ಲದೆ ಕ್ಯಾಪಿಟಲ್ ಅಕೌಂಟಿನಲ್ಲಿ ಕೇಂದ್ರ ಸರ್ಕಾರದಿಂದ ಪಡೆಯುವ ಸಾಲದಿಂದ ೧೫೭೧ ಕೋಟಿ ರೂಪಾಯಿಗಳು, ಮುಕ್ತ ಮಾರುಕಟ್ಟೆಯಿಂದ ಪಡೆಯುವ ಸಾಲ ೩೯೯ ಕೋಟಿ ರೂಪಾಯಿಗಳು, ಮತ್ತು ಜೀವ ವಿಮಾ ನಿಗಮ, ಆರ್‌ಬಿಐ, ಜಿಐಸಿ ಅಂತಹ ಸರ್ಕಾರಿ ಹಣಕಾಸು ಸಂಸ್ಥೆಗಳಿಂದ ೨೦೪೮ ಕೋಟಿ ರೂ. ಸಾಲವನ್ನು ಸಂಗ್ರಹಿಸಬೇಕೆಂದು ನಿರೀಕ್ಷಿಸಲಾಗಿದೆ. **ಅಂದರೆ ಒಟ್ಟಾರೆಯಾಗಿ ೫೫,೨೭೩ ಕೋಟಿ ಬಜೆಟ್ಟಿನಲ್ಲಿ ೭೦೦೦ ಕೋಟಿ ರೂ.ಗಳಷ್ಟನ್ನು ಸಾಲದ ಮೂಲಗಳಿಂದ ಎತ್ತಲಾಗುತ್ತದೆ. ಅಂದರೆ ಆದಾಯದ ಶೇ.೧೨ರಷ್ಟು!** ಸಾಲ ಎಂದರೆ ಅದಕ್ಕೆ ತೆರುವ ಬಡ್ಡಿಯೂ ವೆಚ್ಚದ ಭಾಗವಾಗಬೇಕಲ್ಲವೆ. ಅದರ ಬಾಬತ್ತನ್ನೇ ಮುಖ್ಯಮಂತ್ರಿಗಳು ಲೆಕ್ಕ ಇಟ್ಟಿಲ್ಲ!

ಅಧಿಕ ತೆರಿಗೆ ಸಂಗ್ರಹಣದ ನಿರೀಕ್ಷೆ ಮತ್ತು ಸಾಲ ಇವೆರಡನ್ನು ಒಟ್ಟು ಸೇರಿಸಿದರೆ ೧೩೦೦೦ ಕೋಟಿ ರೂಪಾಯಿಗಳಾಗುತ್ತವೆ. ಇದು ಪ್ರಸ್ತಾಪಿತ ಬಜೆಟ್ಟಿನ ಶೇ. ೨೫ರಷ್ಟಾಗುತ್ತದೆ. ಇಷ್ಟು ದೊಡ್ಡ ಮೊತ್ತದ ಹಣ ಸಂಗ್ರಹಣೆ ಭವಿಷ್ಯದಲ್ಲಿ ಆಗಬಹುದು ಎನ್ನುವ ಸಾಧ್ಯತೆಯನ್ನೇ ಇಟ್ಟುಕೊಂಡು ಯಡಿಯೂರಪ್ಪನವರು ಉದ್ದುದ್ದ ಭರವಸೆಗಳ ಗಾಳಿಪಟವನ್ನು ಜನರೆದುರು ಹಾರಿಸಿದ್ದಾರೆ!

ಇದರ ಪರಿಣಾಮವೇನು ಎಂದು ಅರ್ಥ ಮಾಡಿಕೊಳ್ಳಬೇಕೆಂದರೆ ಈ ಬಾರಿ ಯಡಿಯೂರಪ್ಪನವರು ಘೋಷಿಸಿರುವ ವೆಚ್ಚದ ಪಟ್ಟಿಯನ್ನು ವಿಶ್ಲೇಷಿಸಬೇಕು. ಯಾವುದೇ ಬಜೆಟ್ಟಿನಲ್ಲಿ ಪ್ರತಿಯೊಂದು ಬಾಬತ್ತುಗಳಿಗೂ ನೀಡುವ ಹಣ ಹೋದ ವರ್ಷಕ್ಕಿಂತ ಸ್ವಲ್ಪ ಮಟ್ಟಿಗೆ ಹೆಚ್ಚಿಗಿರುತ್ತದೆ. ಅದು ಪ್ರತಿ ವರ್ಷ ಏರುಗತಿಯಲ್ಲಿರುವ ಬೆಲೆ ಏರಿಕೆಗೆ ತಕ್ಕಂತೆ ಇರುತ್ತದೆ. ಆದ್ದರಿಂದಲೇ ಹಣಕಾಸು ಪರಿಭಾಷೆಯಲ್ಲಿ ನಿಜವಾದ ಹೆಚ್ಚಳವನ್ನು ಅರ್ಥ ಮಾಡಿಕೊಳ್ಳಲು ಒಂದು ಸ್ಟಾಂಡರ್ಡ್ ವರ್ಷವನ್ನು ನಿಗದಿ ಮಾಡಿ ಅದರ ಮಾನದಂಡಗಳಲ್ಲಿ ಹೆಚ್ಚಳವನ್ನು ಅಳೆಯಲಾಗುತ್ತದೆ. ಅಲ್ಲದೆ ಇಂದು ಹಣದುಬ್ಬರವು ಶೇ.೧೨ನ್ನು ಮುಟ್ಟುತ್ತಿರುವಾಗ ಕಳೆದ ವರ್ಷ ೧೦೦ ರೂ. ಗೆ ಸಿಗುತ್ತಿದ್ದ ಸರಕಿಗೆ ಇಂದು ನಾವು ೧೧೨ ರೂ. ಕೊಡಬೇಕು ಅದರರ್ಥ. ಅಂದರೆ ಕಳೆದ ವರ್ಷ ೧೦೦ರೂ. ಹಣ ಒದಗಿಸಿದ ಬಾಬತ್ತಿಗೆ ಈ ವರ್ಷ ೧೧೨ ರೂ ನೀಡಿದ್ದರೆ ಅದನ್ನು ೧೨ ರೂ. ಹೆಚ್ಚಳ ಎಂದು ಕರೆಯಲಾಗುವುದಿಲ್ಲ.ಬದಲಿಗೆ ನಿಜವಾದ ಅರ್ಥದಲ್ಲಿ ಹೋದ ವರ್ಷದಷ್ಟೆ ಹಣವನ್ನು ನೀಡಲಾಗಿದೆ ಎಂದರ್ಥ. ಸಾಮಾನ್ಯವಾಗಿ ಬಜೆಟ್ಟಿನ ವಿಶ್ಲೇಷಣೆ ಮಾಡುವಾಗ ಸರ್ಕಾರಗಳು ಈ ವಾಸ್ತವ ಅಂಶವನ್ನು ಮರೆಮಾಚಿ ಹೆಚ್ಚಳವನ್ನಷ್ಟೇ ತೋರಿಸುತ್ತವೆ. ಉದಾಹರಣೆಗೆ ಈ ಬಾರಿ ಯಡಿಯೂರಪ್ಪನವರ ಬಜೆಟ್ಟಿನಲ್ಲಿ ಒಟ್ಟಾರೆ ಸಾಮಾಜಿಕ ಸೇವೆಗಳ ಬಾಬತ್ತಿಗೆ ೧೭೧೩೮ ಕೋಟಿ ರೂ.ಗಳನ್ನು ಎತ್ತಿಡಲಾಗಿದೆ. ಇದು ಹೋದ ವರ್ಷಕ್ಕಿಂತ ೩೫೦೦ ಕೋಟಿ ರೂ.ಹೆಚ್ಚೆಂದು ಸರ್ಕಾರ ಹೇಳುತ್ತಿದೆ. ಆದರೆ ವಾಸ್ತವವಾಗಿ ಶೇ.೧೨ರ ಹಣದುಬ್ಬರವನ್ನು ಲೆಕ್ಕ ಹಿಡಿದರೆ ಕಳೆದ ವರ್ಷದ ಬಜೆಟ್ಟಿಗಿಂತ ೧೭೦೦ ಕೋಟಿ ರೂಗಳು ಮಾತ್ರ!. ಅದೇ ರೀತಿ ಆರ್ಥಿಕ ಸೇವೆಗಳಿಗೆ ಈ ವರ್ಷ ೧೧,೮೧೬ ಕೋಟಿ ರೂ.ಗಳನ್ನು ಎತ್ತಿಡಲಾಗಿದೆ. ಇದು ಹೋದ ವರ್ಷಕ್ಕಿಂತ ೫೦೦ ಕೋಟಿ ರೂಗಳಷ್ಟು ಜಾಸ್ತಿ. ಆದರೆ ಶೇ.೧೨ರ ಹಣದುಬ್ಬರ ದರದಲ್ಲಿ ವಾಸ್ತವವಾಗಿ ಇದು ಕಳೆದ ವರ್ಷಕ್ಕಿಂತ ೫೦೦ ಕೋಟಿ ಜಾಸ್ತಿಯಲ್ಲ, ಬದಲಿಗೆ ೭೦೦ ಕೋಟಿ ರೂಗಳಷ್ಟು ಕಡಿಮೆ. ಅದೇ ರೀತಿ ಗ್ರಾಮೀಣಾಭಿವೃದ್ಧಿಗೆ ಕಳೆದ ವರ್ಷ ೩೦೬೪ ಕೋಟಿ ರೂ.ಗಳನ್ನು ಎತ್ತಿಟ್ಟಿದ್ದರೆ ಈ ಬಾರಿ ೩೩೫೯ ಕೋಟಿ ರೂಗಳನ್ನು ಎತ್ತಿಡಲಾಗಿದೆ ಎಂದು ಘೋಷಿಸಿಕೊಳ್ಳಲಾಗಿದೆ. ಅಂದರೆ ಕಳೆದ ವರ್ಷಕ್ಕಿಂತ ಕೇವಲ ೨೯೫ ಕೋಟಿ ಹೆಚ್ಚಳ. ಇದು ಕಳೆದ ವರ್ಷದ ದರಗಳಿಗೆ ಹೋಲಿಸಿದರೆ ೧೦೦ ಕೋಟಿ ಕಡಿಮೆಯೇ ಹೊರತು ಹೆಚ್ಚಳವಲ್ಲ.ಹೀಗಾಗಿ ಕೃಷಿ,ಸಮಾಜ ಕಲ್ಯಾಣ,ಕುಡಿಯುವ ನೀರು ಇನ್ನಿತ್ಯಾದಿ ಬಾಬತ್ತುಗಳಿಗೆ ಯಡಿಯೂರಪ್ಪನವರು ನೀಡಿರುವ ಹಣ ವಾಸ್ತವ ದರದಲ್ಲಿ ತೋರಿಕೆಗಿಂತ ಕಡಿಮೆ ಅಥವಾ ಹೋದ ವರ್ಷಕ್ಕಿಂತ ಕಡಿಮೆಯೇ ಆಗಿದೆ. ಅಂದರೆ ಯಡಿಯೂರಪ್ಪನವರು ಬೇರೆ ಬೇರೆ ಬಾಬತ್ತುಗಳಿಗೆ ನೀಡಿರುವ ಹೆಚ್ಚಳದ ಭರವಸೆ ಹುಸಿಯೇ ಹೊರತು ನಿಜವಲ್ಲ.

ಇದಲ್ಲದೆ ಈ ಸಾಲಿನಲ್ಲಿ ಬಿಜೆಪಿ ಸರ್ಕಾರ ೫೦ ಲಕ್ಷ ಸಣ್ಣ ರೈತರಿಗೆ ಒಂದು ಸಾವಿರ ಅನುದಾನ, ಹಾಲು ಉತ್ಪಾದಕರಿಗೆ ಎರಡು ರೂ. ಸಹಾಯ ಧನ, ೯೦೦೦೦ ಗ್ರಾಮ ಪಂಚಾಯತಿ ಸದಸ್ಯರಿಗೆ ಸಂಭಾವನೆ, ಸೈಕಲ್, ಶೇ.೩ರ ಬಡ್ಡಿ ದರ, ಮೆಟ್ರೊ ಯೋಜನೆಗೆ ೭೦೦ಕೋಟಿ ಸಹಾಯ ಧನ, ಹೀಗೆ ಒಟ್ಟಾರೆಯಾಗಿ ೭೦೦೦ ಕೋಟಿ ರೂ.ಗಳ ಹೊಸ ಯೋಜನೆಗಳನ್ನು ಪ್ರಕಟಿಸಿವೆ. ಆದರೆ ಈಗಾಗಲೇ ನೋಡಿದಂತೆ ೫೫೦೦೦ ಕೋಟಿ ಬಜೆಟ್ಟಿನಲ್ಲಿ ೧೩,೦೦೦ ಕೋಟಿಯಷ್ಟು ಅಧಿಕ ಹಣ ಸಂಗ್ರಹಣೆಯಾಗಬಹುದೆಂಬ ಉತ್ಪ್ರೇಕ್ಷಿತ ಅಂದಾಜಿದೆ. (ಅದರಲ್ಲಿ ಒಂದಷ್ಟು ಸಂಗ್ರಹಣವಾಗುವ ಸಾಧ್ಯತೆ ಇರುವುದು ಜನರ ಮೇಲೆ ಹೇರುವ ತೆರಿಗೆ ಮತ್ತು ಕುಡಿತ ಜಾಸ್ತಿ ಮಾಡಲು ನೀಡುವ ಉತ್ತೇಜನದಿಂದ ಮಾತ್ರ!). ಹೀಗಾಗಿಯೇ ಬಿಜೆಪಿ ಪರ ಇರುವ ಪತ್ರಿಕೆಗಳನ್ನು ಒಳ ಗೊಂಡಂತೆ ಎಲ್ಲಾ ಪತ್ರಿಕೆಗಳು ಸಹ ಈ ಯೋಜನೆಗಳಿಗೆ ಹಣ ಎಲ್ಲಿಂದ ಬರುತ್ತದೆ ಎಂದು ತಮ್ಮ ಸಂಪಾದಕೀಯದಲ್ಲಿ ಪ್ರಶ್ನಿಸಿವೆ. ಇದಕ್ಕೆ ಯಡಿಯೂರಪ್ಪನವ್ರು ಯಾವುದೇ ಸಮಾಧಾನಕರ ಉತ್ತರ ಕೊಟ್ಟಿಲ್ಲ. ಕೊಡಲು ಸಾಧ್ಯವಿಲ್ಲ. ಇದರ ಫಲಿತಾಂಶವೇನು? ಹಲವಾರು ಯೋಜನೆಗಳು ಜಾರಿಯಾಗುವುದಿಲ್ಲ. ಉಚಿತ ವಿದ್ಯುತ್, ಕೃಷಿ ಹೂಡಿಕೆಯಂತ ಬಾಬತ್ತುಗಳಲ್ಲಿ ಪ್ರಾರಂಭದ ವೀರಾವೇಶದ ಉತ್ಸಾಹ ಕಡಿಮೆಯಾಗುತ್ತಾ ಕ್ರಮೇಣ ಅವನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳುವ ಮಾನದಂಡಗಳು ಸೇರಿಕೊಳ್ಳುತ್ತಾ ಹೋಗುತ್ತವೆ.

ವಾಸ್ತವವಾಗಿ ಬಿಜೆಪಿಯ ಈ "ಸ್ವತಂತ್ರ" ಬಜೆಟ್ಟಿನ

ವಿಶ್ಲೇಷಣೆ ಮತ್ತು ಅದರಲ್ಲಿ ಅಡಗಿರುವ ಸಕ್ಕರೆ ಲೇಪಿತ ಮೋಸದ ತಂತ್ರಗಳನ್ನು ಬಯಲು ಮಾಡುವ ಅಗತ್ಯ ಉಂಟಾಗುವುದು ಇಲ್ಲಿಯೇ ಆಗಿದೆ. ಈ ಬಜೆಟ್ಟನ್ನು ಒಳ ಗೊಂಡಂತೆ ೨೦೦೨ರ ನಂತರ ಎಲ್ಲಾ ಬಜೆಟ್ಟುಗಳನ್ನು ಈಗಾಗಲೇ ವಿಶ್ವಬ್ಯಾಂಕು ಹೇಗೆ ಎಂಟು ವರ್ಷಗಳಷ್ಟು ಮುಂಚಿತವಾಗಿಯೇ ತೀರ್ಮಾನ ಮಾಡಿವೆ ಎಂಬುದನ್ನು ಪ್ರಾರಂಭದಲ್ಲಿಯೇ ನೋಡಿದ್ದೇವೆ. ಹಾಗಿದ್ದರೂ ತಮ್ಮ ಪಕ್ಷ ಇತರ ಪಕ್ಷಗಳಿಗಿಂತ ಭಿನ್ನ, ಯಡಿಯೂರಪ್ಪನವರ ರೈತಪರ ಬಡವರ ಪರ ಎಂದು ಬಿಂಬಿಸಲು ಬಿಜೆಪಿ ಪಕ್ಷ ಹಲವಾರು ಪೊಳ್ಳು ಘೋಷಣೆಗಳನ್ನು ನೀಡಿದ್ದು ಮಾತ್ರ ವಲ್ಲದೆ ಬಜೆಟ್ಟನ್ನು ಸಹ ಜನರಿಗೆ ಮೋಸ ಮಾಡಲು ಬಳ ಸಿಕೊಂಡಿದೆ. ಗಾಜಿನ ಮನೆಯಲ್ಲಿ ಕೂತಿರುವ ಕಾಂಗ್ರೆಸ್ ಮತ್ತಿತರ ವಿರೋಧ ಪಕ್ಷಗಳು ಯಡಿಯೂರಪ್ಪನವರ ಬಜೆ ಟ್ಟನ್ನು ಚುನಾವಣಾ ಮತ್ತು ಅಗ್ಗದ ಜನಪ್ರಿಯತೆಯ ಬಜೆಟ್ಟು ಎಂದು ಮಾತ್ರ ಟೀಕಿಸಿ ನಿಜಕ್ಕೂ ಈ ವರ್ಷ ಯಡಿಯೂರಪ್ಪನವರು ಘೋಷಿಸಿರುವ ನೀತಿಗಳನ್ನು ಅನುಷ್ಠಾನಕ್ಕೆ ತಂದು ಬಿಡುವರೇನೋ ಎಂಬ ಆಶೆಯನ್ನು ಬಿತ್ತುತ್ತಿದ್ದಾರೆ. ಇದು ವಿಪರ್ಯಾಸವಾದರೂ ವಿಶ್ವಬ್ಯಾಂಕ್ ನಿರ್ದೇಶಿತ ಜನವಿರೋಧಿ ನವ ಉದಾರೀಕರಣ ನೀತಿ ಯನ್ನು ಅನುಸರಿಸುವಲ್ಲಿ ಆಳುವ ವರ್ಗಗಳಲ್ಲಿ ಇರುವ ಸರ್ವಸಮ್ಮತಿಯನ್ನೇ ಇದು ಸೂಚಿಸುತ್ತಿದೆ.

ಹೀಗಾಗಿ ಪ್ರತಿ ಕ್ಷೇತ್ರದಲ್ಲೂ ಯಡಿಯೂರಪ್ಪನವರ ಬಜೆಟ್ಟು ಸಿಹಿ ಮಾತುಗಳಿಂದ ಹೇಗೆ ವಂಚಿಸಿದೆ ಎಂದು ಈಗ ಗಮನಿಸೋಣ!

ಕೃಷಿ ಕ್ಷೇತ್ರದ ಭರವಸೆಗಳು:
ಮಳೆ ತರದ ಬರಿಮೋಡಗಳು!:

ಹಸಿರು ಶಾಲನ್ನು ಹೊದ್ದು ಪ್ರಮಾಣ ವಚನ ಸ್ವೀಕ ರಿಸಿದ ಯಡಿಯೂರಪ್ಪನವರು ತಾವು ಮಂಡಿಸಿದ ಬಜೆಟ್ ಪ್ರತಿಗೂ ಹಸಿರು ಹೊದಿಕೆಯನ್ನು ಹೊದಿಸಿದ್ದಾರೆ. ಆದರೆ ಈ ಶಾಲು ಮತ್ತು ಹೊದಿಕೆಯ ಅಂತರಾಳದಲ್ಲಿ ನಿಜಕ್ಕೂ ರೈತನಿದ್ದನೇ ಎಂಬುದನ್ನು ಬಜೆಟ್ಟಿನಲ್ಲಿ ಕೃಷಿ ಕ್ಷೇತ್ರಕ್ಕೆ ನೀಡಿ ರುವ ಭರವಸೆಗಳನ್ನು ಅಧ್ಯಯನ ಮಾಡುವುದರಿಂದ ಗೊತ್ತಾಗುತ್ತದೆ. ತಮ್ಮ ಬಜೆಟ್ ಭಾಷಣದಲ್ಲಿ ಕೃಷಿ ಹೂಡಿ ಕೆಯ ಬಗ್ಗೆ ಹೀಗೆ ಹೇಳಿದ್ದಾರೆ:

"೨೬. ರಾಜ್ಯದ ೨೦೦೮-೦೯ನೇ ಸಾಲಿನ ಪರಿ ಷ್ಕೃತ ಆಯವ್ಯಯದಲ್ಲಿ ಕೃಷಿಗೆ ಸಂಬಂಧಿಸಿದ ಕಾರ್ಯಕ್ರಮ ಗಳಿಗಾಗಿ ಒಟ್ಟಾರೆ ೧೯೭೪ ಕೋಟಿ ರೂ. ಗಳ ಅನುದಾನ ವನ್ನು ಒದಗಿಸಲಾಗಿದೆ. ಈ ಅನುದಾನವು ೨೦೦೭-೦೮ನೇ ಸಾಲಿನಲ್ಲಿ ಒದಗಿಸಲಾಗಿದ್ದ ಅನುದಾನಕ್ಕಿಂತ ಶೇ. ೭೪ ರಷ್ಟು ಹೆಚ್ಚಿಗೆ ಇರುತ್ತದೆ. ಇದರಲ್ಲಿ ಕೃಷಿ ಹಾಗೂ ತೋಟಗಾರಿಕೆಗೆ ೧೬೬೦೩ ಕೋಟಿ ರೂ. ಗಳನ್ನು, ಪಶು ಸಂಗೋಪನೆ, ಮೀನುಗಾರಿಕೆ ಮತ್ತು ಹೈನುಗಾರಿಕೆ ಅಭಿವೃದ್ಧಿಗೆ ೩೯೯ ಕೋಟಿ ರೂ. ಗಳನ್ನು ಮತ್ತು ರೇಷ್ಮೆ ಚಟುವಟಿಕೆಗಳಿಗೆ ೫೨ ಕೋಟಿ ರೂ.ಗಳನ್ನು ನೀಡಿದ್ದು ಇದು ಕೃಷಿ ವಲಯದ ಉತ್ಪಾದಕತೆ ಹೆಚ್ಚಿಸಲು ನೆರವಾಗಲಿದೆ.

೨೭. ಇದಲ್ಲದೆ ನೀರಾವರಿ ಸೌಲಭ್ಯಗಳಿಗಾಗಿ ರೈತರು ಬಳಸುವ ವಿದ್ಯುತ್ ಸಹಾಯಾನುಧನವಾಗಿ ೨೦೫೦ ಕೋಟಿ ರೂ. ಗಳನ್ನು ಹಾಗೂ ಒಣಬೇಸಾಯವನ್ನು ಅವ ಲಂಬಿಸಿರುವ ರೈತರಿಗೆ ನೀಡಲಿರುವ ಸಹಾಯಾನುಧನವಾದ ೫೦೦ ಕೋಟಿ ರೂ.ಗಳನ್ನು ಒದಗಿಸಲಾಗಿದೆ. ನೀರಾವರಿಗೆ ಯೋಜನೆಯಲ್ಲಿ ಒದಗಿಸಿರುವ ೩೪೬೮ ಕೋಟಿ ರೂ. ಗಳನ್ನು ಸೇರಿಸಿದಲ್ಲಿ, ಕೃಷಿ ಸಂಬಂಧಿತ ಅಭಿವೃದ್ಧಿ ಕಾರ್ಯ ಕ್ರಮಗಳಿಗಾಗಿ ಮೀಸಲಾದ ಅನುದಾನವು ಸುಮಾರು ೮೦೦೦ ಕೋಟಿ ರೂ. ಆಗುತ್ತದೆ..."

ಕೃಷಿಗೆ ನೀಡಲಾಗಿದೆ ಎಂದು ಹೇಳಲಾಗುತ್ತಿರುವ ಈ ೮೦೦೦ ಕೋಟಿ ರೂ.ಗಳಲ್ಲಿ ರೈತರಿಗೆ ದಕ್ಕುವುದೆಷ್ಟು ಎಂಬುದನ್ನು ನಂತರ ವಿಶ್ಲೇಷಿಸೋಣ. ಅದಕ್ಕೆ ಮುಂಚೆ ಬಜೆಟ್ಟನ್ನು ವಿಶ್ಲೇಷಿಸುವಾಗ ಸಾಮಾನ್ಯವಾಗಿ ಬಿತ್ತಲಾಗುವ ಮತ್ತೊಂದು ಭ್ರಮೆಯನ್ನು ಕಳೆದುಕೊಳ್ಳಬೇಕಿದೆ. ಸಾಮಾ ನ್ಯವಾಗಿ ನಗರ ಪ್ರದೇಶದ ಅಭಿವೃದ್ಧಿ ಎಂಬ ಬಾಬತ್ತಿನಲ್ಲಿ ಹೆಚ್ಚು ಹಣ ಹೂಡಿಕೆಯಾಗಿದ್ದರೆ ಅದು ನಗರ ಕೇಂದ್ರಿತ ಬಜೆಟ್ಟೆಂದೂ, ಕೃಷಿ ಕ್ಷೇತ್ರಕ್ಕೆ ಹೆಚ್ಚು ಹಣ ನೀಡಲಾಗಿದ್ದರೆ ರೈತಪರ ಬಜೆಟ್ಟೆಂದೂ, ಶಿಕ್ಷಣಕ್ಕೆ ಹೆಚ್ಚು ಹಣನೀಡಿದ್ದರೆ ಅದು ವಿದ್ಯಾರ್ಥಿ ಪರ ಬಜೆಟ್ಟೆಂದೂ ವ್ಯಾಖ್ಯಾನಿಸುವುದು ಒಂದು ಪರಂಪರೆಯಾಗಿಬಿಟ್ಟಿದೆ. ಆದರೆ ಈ ಬಗೆಯ ವಿಶ್ಲೇಷಣೆ ಬಜೆಟ್ಟಿನ ಹಿಂದಿನ ಮತ್ತು ಅದು ಉತ್ತೇಜಿಸುವ ಹಿತಾಸಕ್ತಿಗಳೂ ಏನು ಎಂಬುದನ್ನು ಬಯಲುಗೊಳಿಸು ವುದಿಲ್ಲ.

ಅದನ್ನು ತಿಳಿದುಕೊಳ್ಳಲು ಯಾವ ಕ್ಷೇತ್ರದಲ್ಲಿ ಯಾವ ರೀತಿಯ ಮತ್ತು ಯಾವ ವರ್ಗಗಳ ಅಭಿವೃದ್ಧಿ ಯನ್ನು ಪ್ರೋತ್ಸಾಹಿಸುವ ನೀತಿಯನ್ನು ಜಾರಿಗೊಳಿಸಲಾ ಗಿದೆ ಎಂಬ ನೀತಿಗಳ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಹಣ ಕಾಸು ನೀಡಿಕೆಯ ವಿಶ್ಲೇಷಣೆಯಾದರೆ ಬಜೆಟ್ಟಿನ ನಿಜ ವಾದ ಉದ್ದೇಶ ಅನಾವರಣಗೊಳ್ಳುತ್ತದೆ. ಕೃಷಿಗೆ ಇಂದು ಯಡಿಯೂರಪ್ಪನವರ ಸರ್ಕಾರ ನೀಡಿರುವ ಯಾವ ರೀತಿಯ ಅಭಿವೃದ್ಧಿಗೆ ಮತ್ತು ಯಾವ ವರ್ಗಗಳ ಅಭಿವೃ ದ್ಧಿಗೆ ಪೂರಕವಾಗುತ್ತದೆ? ಬಿಜೆಪಿ ಸರ್ಕಾರ ಕೃಷಿ ನೀತಿ ಯೇನು? ಬಿಜೆಪಿ ಸರ್ಕಾರ ಶೇ.೩ರ ದರದಲ್ಲಿ ರೈತರಿಗೆ ಸಾಲ ನೀಡುವ ಯೋಜನೆ ಪ್ರಕಟ ಮಾಡಿದ ಮಾತ್ರಕ್ಕೆ ಅದು ಸಣ್ಣ ರೈತರ ಪರವಾದ ನೀತಿ ಎನ್ನಲಾದೀತೆ? (ಇದೂ ಕೂಡ ಎಷ್ಟು ನಿಜ ಎಂದು ನಂತರದಲ್ಲಿ ಗಮನಿ ಸೋಣ!).ಏಕೆಂದರೆ ಕೇಂದ್ರದ ಯು.ಪಿ.ಎ.ಸರ್ಕಾರ ೬೦. ೦೦೦ ಕೋಟಿ ರೂ.ಗಳಷ್ಟು ರೈತರ ಸಾಲವನ್ನು ಮನ್ನಾ ಮಾಡಿದೆ. ಅದರರ್ಥ ಯು.ಪಿ.ಎ.ಸರ್ಕಾರ ಸಣ್ಣ ಮತ್ತು ಅತಿ ಸಣ್ಣ ರೈತರ ಪರ ನೀತಿಯನ್ನು ಹೂಡಲಾಗಿದೆ ಎನ್ನ ಬಹುದೇ? ವಾಸ್ತವವಾಗಿ ಯು.ಪಿ.ಎ. ಸರ್ಕಾರ ಹೊರ ತಂದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ರೈತರಿಗೆ ನ್ಯೂ ಡೀಲ್ ಒದಗಿಸಲಾಗುವುದು ಎಂದಿತ್ತು. ಅದರ ಪ್ರಕಾರ ದೇಶದ ಕೃಷಿ ಅಭಿವೃದ್ಧಿ ದರ ೮೦ರ ದಶಕದಲ್ಲಿ ಶೇ.೫ರ ಷ್ಟಿದ್ದದ್ದು ಈಗ ಶೇ.೨ಕ್ಕೆ ಕುಸಿದಿದೆ. ಅದನ್ನು ಹೆಚ್ಚಿಸ ಬೇಕೆಂದರೆ ಕೃಷಿಯಲ್ಲಿ ಖಾಸಗಿ ಬಂಡವಾಳ ಹೂಡಿಕೆಗೆ ಪೂರಕವಾದ ವಾತಾವರಣ ಸೃಷ್ಟಿಸಬೇಕು ಮತ್ತು ಉತ್ತೇಜಿ ಸಬೇಕು. ಅದಕ್ಕಾಗಿ ಸಣ್ಣ ಮತ್ತು ಅತಿ ಸಣ್ಣ ರೈತರು ಕೃಷಿ ಬಿಟ್ಟು ಹೊರಬರಬೇಕು. ಮತ್ತು ಅದರ ಬದಲಿಗೆ ಕೃಷಿ ಯಲ್ಲಿ ದೊಡ್ಡ ಖಾಸಗಿ ಬಂಡವಾಳ ಹೂಡಿಕೆಗೆ ಪೂರಕ ವಾದ ಕಾಂಟ್ರಾಕ್ಟ್ ಫಾರ್ಮಿಂಗ್, ಕಾರ್ಪೋರೇಟ್ ಫಾರ್ಮಿಂಗ್ ನೀತಿಯನ್ನು ಜಾರಿಗೊಳಿಸಬೇಕು ಎಂಬುದೇ ಅದರ ಕೃಷಿ ನೀತಿಯಾಗಿತ್ತು. ಮೇಲ್ನೋಟಕ್ಕೆ ಸ್ಪಷ್ಟವಾಗು ವಂತೆ ಯುಪಿಎ ಸರ್ಕಾರದ ಕೃಷಿ ನೀತಿ ಸಣ್ಣ ಮತ್ತು ಅತಿ ಸಣ್ಣ ರೈತರ ಹಿತಾಸಕ್ತಿಗೆ ವಿರುದ್ಧವಾದದ್ದು ಮತ್ತು ದೊಡ್ಡ ರೈತರ ಮತ್ತು ಕೃಷಿ ಕಂಪನಿಗಳ ಹಿತಾಸಕ್ತಿಯನ್ನು ಕಾಯು ವಂತದ್ದು. ಹೀಗಾಗಿ ಯುಪಿಎ ಸರ್ಕಾರ ಗ್ರಾಮೀಣಾಭಿ ವೃದ್ಧಿಗೆ, ನೀರಾವರಿಗೆ ಹೆಚ್ಚು ಹಣ ನೀಡಿದ ಮಾತ್ರಕ್ಕೆ, ರೈತರ ಸಾಲ ಮನ್ನಾ (ಅದು ಸಹ ಮಧ್ಯಮ ಮತ್ತು ದೊಡ್ಡ ರೈತರದ್ದೇ ವಿನಃ ಸಣ್ಣ ಅತಿ ಸಣ್ಣ ರೈತರದ್ದಲ್ಲ!) ಅದು ರೈತಪರ ಸರ್ಕಾರವಾಗುವುದಿಲ್ಲ.

ಹೀಗಾಗಿ ಬಿಜೆಪಿ ಸರ್ಕಾರ ಶೇ.೩ರ ಬಡ್ಡಿ ಸಾಲ, ಮತ್ತು ಹೆಚ್ಚು ಹಣ ಕೊಟ್ಟಮಾತ್ರಕ್ಕೆ ಅದು ರೈತ ಪರವಾ ಗುವುದಿಲ್ಲ. ಮುಖ್ಯವಾಗಿ ಬಿಜೆಪಿ ಸರ್ಕಾರದ ಕೃಷಿ ನೀತಿ ಯೇನು ಎಂಬುದನ್ನು ಗಮನಿಸಬೇಕು. ಆದರೆ ಈವರೆಗೆ ಬಿಜೆಪಿ ಪಕ್ಷದ ಕರ್ನಾಟಕ ಘಟಕ ತನ್ನ ಕೃಷಿ ನೀತಿಯೇ ನೆಂದು ಘೋಷಿಸಿಲ್ಲ. ಆದರೆ ಕೇಂದ್ರದಲ್ಲಿ ಬಿಜೆಪಿ ನೇತೃ ತ್ವದ ಎನ್.ಡಿ.ಎ ಸರ್ಕಾರ ಅಧಿಕಾರದಲ್ಲಿದ್ದಾಗ ಅದು ಸ್ಪಷ್ಟ ವಾದ ಕೃಷಿ ನೀತಿಯನ್ನು ಜಾರಿಗೆ ತಂದಿತ್ತು. ೧೯೫೦ರ ನಂತರದಲ್ಲಿ ಬಿಜೆಪಿಯೇ ಎರಡನೇ ರಾಷ್ಟ್ರೀಯ ಕೃಷಿ ನೀತಿಯನ್ನು ಜಾರಿಗೆ ತಂದದ್ದು. ಹೀಗಾಗಿ ಕರ್ನಾಟಕದ ಬಿಜೆಪಿ ಸರ್ಕಾರವೂ ಸಹ ಅದೇ ನೀತಿಯನ್ನು ಅನುಸರಿ ಸುವುದರಲ್ಲಿ ಸಂಶಯವಿಲ್ಲ. ಹಾಗಾದಲ್ಲಿ ಈ ನೀತಿಯ ಸಾರಾಂಶವೇನು? ವಾಸ್ತವವಾಗಿ ಎರಡನೇ ಹಸಿರು ಕ್ರಾಂತಿ ಯ ಹೆಸರಿನಲ್ಲಿ ಕಾಂಟ್ರಾಕ್ಟ್ ಫಾರ್ಮಿಂಗ್ ಮತ್ತು ಕಾರ್ಪೊ ರೇಟ್ ಫಾರ್ಮಿಂಗ್,ವಿಶೇಷ ಆರ್ಥಿಕ ವಲಯ, ವಿಶೇಷ ಕೃಷಿ ವಲಯ ಈ ನೀತಿಗಳನ್ನು ಮೊದಲಿಗೆ ಜಾರಿಗೆ ತಂದದ್ದೇ ಕೇಂದ್ರದ ಎನ್.ಡಿ.ಎ ಸರ್ಕಾರ! ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿಯಲ್ಲಿ ಭವಿಷ್ಯವಿಲ್ಲ. ಹೀಗಾಗಿ ಅವರನ್ನು ಕೃಷಿಯಿಂದ ಹೊರತರುವ ನೀತಿಯನ್ನು ಅನು ಸರಿಸಬೇಕು ಎಂದು ಹಲವಾರು ಯೋಜನೆಗಳನ್ನು ಜಾರಿಗೆ ತಂದದ್ದೂ ಸಹ ಎನ್.ಡಿ.ಎ ಸರ್ಕಾರವೇ. ಅದ ಕ್ಕಾಗಿ ಕೇಂದ್ರೀಯ ಕೃಷಿ ಮಿಷನ್ ಒಂದನ್ನು ಜಾರಿಗೆ ತಂದದ್ದೂ ಸಹ ವಾಜಪೇಯಿ ಸರ್ಕಾರವೇ. ಹಾಗೆ

ಬಿಜೆಪಿ ಸರ್ಕಾರ ೫೦ ಲಕ್ಷ ಸಣ್ಣ ರೈತರಿಗೆ ಒಂದು ಸಾವಿರ ಅನುದಾನ, ಹಾಲು ಉತ್ಪಾದಕರಿಗೆ ಎರಡು ರೂ. ಸಹಾಯ ಧನ, ೯೦೦೦೦ ಗ್ರಾಮ ಪಂಚಾಯತಿ ಸದಸ್ಯರಿಗೆ ಸಂಭಾವನೆ, ಸೈಕಲ್, ಶೇ.೩ರ ಬಡ್ಡಿ ದರ, ಮೆಟ್ರೊ ಯೋಜನೆಗೆ ೭೦೦ ಕೋಟಿ ಸಹಾಯ ಧನ, ಹೀಗೆ ಒಟ್ಟಾರೆ ಯಾಗಿ ೭೦೦೦ ಕೋಟಿ ರೂ.ಗಳ ಹೊಸ ಯೋಜನೆಗಳನ್ನು ಪ್ರಕಟಿಸಿವೆ. ಆದರೆ ಈಗಾಗಲೇ ನೋಡಿದಂತೆ ೫೫೦೦೦ ಕೋಟಿ ಬಜೆಟ್ಟಿನಲ್ಲಿ ೧೩,೦೦೦ ಕೋಟಿಯಷ್ಟು ಅಧಿಕ ಹಣ ಸಂಗ್ರಹಣೆಯಾಗ ಬಹುದೆಂಬ ಉತ್ಪ್ರೇಕ್ಷಿತ ಅಂದಾಜಿದೆ. ಹೀಗಾಗಿಯೇ ಬಿಜೆಪಿ ಪರ ಇರುವ ಪತ್ರಿಕೆಗಳನ್ನು ಒಳಗೊಂಡಂತೆ ಎಲ್ಲಾ ಪತ್ರಿಕೆಗಳು ಸಹ ಈ ಯೋಜನೆ ಗಳಿಗೆ ಹಣ ಎಲ್ಲಿಂದ ಬರುತ್ತದೆ ಎಂದು ತಮ್ಮ ಸಂಪಾದಕೀಯದಲ್ಲಿ ಪ್ರಶ್ನಿಸಿವೆ.

ನೋಡಿದಲ್ಲಿ ಅಮೇರಿಕ ಮೂಲದ ಮೆಕೆನ್ಜಿ ಸಂಸ್ಥೆ ಭಾರತದ ಕೃಷಿಯಲ್ಲಿ ತರಬೇಕಾದ ಬದಲಾವಣೆಗಳ ಬಗ್ಗೆ ನೀಡಿದ ವರದಿಯೇ ಎನ್.ಡಿ.ಎ ಸರ್ಕಾರದ ಕೃಷಿ ನೀತಿಗೂ ಮತ್ತು ಆ ನಂತರದ ಯುಪಿಎ ಸರ್ಕಾರದ ಕೃಷಿ ನೀತಿಗೂ ಮೂಲ ಆಕರ.ಹೀಗಾಗಿಯೇ ವಾಸ್ತವವಾಗಿ ಕಾಂಗ್ರೆಸ್ ಸರ್ಕಾರದ ಕೃಷಿ ನೀತಿಗೂ ಮತ್ತು ಬಿಜೆಪಿಸರ್ಕಾರದ ಕೃಷಿ ನೀತಿಗೂ ಯಾವುದೇ ವ್ಯತ್ಯಾಸವಿಲ್ಲ. ಸಾರಾಂಶದಲ್ಲಿ ಅವು ಕೃಷಿಯಿಂದ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಹೊರಗಟ್ಟಿ ಭಾರತದ ಕೃಷಿಯನ್ನು ಅಂತರಾಷ್ಟ್ರೀಯ ಮಾರುಕಟ್ಟೆಯ ಮತ್ತು ಬಂಡವಾಳದ ಅಗತ್ಯಕ್ಕೆ ತಕ್ಕಂತೆ ಪುನರ್ ರಚಿಸುವ ನೀತಿಯನ್ನೇ ಹೊಂದಿವೆ.

ರಾಜ್ಯ ಬಜೆಟ್ಟಿನಲ್ಲಿ ಯಡಿಯೂರಪ್ಪನವರು ರಾಜ್ಯ ಕೃಷಿ ಮಿಷನ್ ಒಂದನ್ನು ಸ್ಥಾಪಿಸುವ ಪ್ರಸ್ತಾಪ ಮಾಡಿದ್ದಾರೆ. ಮತ್ತು ತಮಗೆ ವಾಜಪೇಯಿ ಹಾಗೂ ಗುಜರಾತ್ ಮೋದಿ ಮಾದರಿ ಆಡಳಿತವೇ ಮಾದರಿಯೆಂದು ಹೇಳಿದ್ದಾರೆ. ಅಲ್ಲದೆ ೨೦೦೨ರಿಂದ ವಿತ್ತೀಯ ಶಾಸನವನ್ನು ಅನುಸರಿಸುತ್ತಾ ಬಂದಿರುವ ನೀತಿಯನ್ನು ಮುಂದುವರೆಸುವುದಾಗಿ ಹೇಳಿದ್ದಾರೆ.ಹೀಗಾಗಿ ಸಮ್ಮಿಶ್ರ ಸರ್ಕಾರದಲ್ಲಿ ಯಡಿಯೂರಪ್ಪನವರು ಹಣಕಾಸು ಮಂತ್ರಿಯಾಗಿದ್ದಾಗಲೂ ಅನುಸರಿಸಿದ್ದು ಇದೇ ನೀತಿಯೇ ಆಗಿತ್ತು. ಹೀಗಾಗಿ ಬಿಜೆಪಿ ಸರ್ಕಾರವು ಇನ್ನೂ ಯಾವುದೇ ಸ್ವತಂತ್ರ ಕೃಷಿ ನೀತಿಯನ್ನು ಘೋಷಿಸದೇ ಇದ್ದರೂ ಸಾರಾಂಶದಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಎನ್‌ಡಿಎ ಸರ್ಕಾರ ಅನುಸರಿಸಿದ ಮತ್ತು ಗುಜರಾತ್ ಮೋದಿ ಸರ್ಕಾರದ ನೀತಿಯ ನಕಲನ್ನೇ ಮಾಡುವುದರಲ್ಲಿ ಸಂಶಯವಿಲ್ಲ.

ಹೀಗಾಗಿ ಮೂಲಭೂತವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಕೃಷಿಯಿಂದ ಹೊರಗಟ್ಟುವ ನೀತಿ ಯಡಿಯಲ್ಲಿ ಶೇ.೩ರ ಬಡ್ಡಿದರದ ಸಾಲಕ್ಕೆ. ಗೊಬ್ಬರದ ಗುಂಡಿಗೆ ಕೊಡುವ ಎರಡು ಸಾವಿರ ರೂಪಾಯಿ ಮತ್ತು ಗೊಬ್ಬರಕೊಳ್ಳಲು ಕೊಡುವ ಒಂದು ಸಾವಿರ ರುಪಾಯಿಗೆ ಯಾವ ರೈತಪರ ಅರ್ಥ ಇರಲು ಸಾಧ್ಯ?

ಇನ್ನು ಯಡಿಯೂರಪ್ಪನವರು ಘೋಷಿಸಿಕೊಳ್ಳುತ್ತಿರುವಂತೆ ಕೃಷಿ ವಲಯಕ್ಕೆ ನೀಡಿರುವ ೮೦೦೦ ಕೋಟಿ ರೂ.ಹಣದ ನಿಜವಾದ ಹೂರಣವೇನು? ಮೊದಲನೆಯದಾಗಿ ನೀರಾವರಿಗೆಂದು ನೀಡಲಾಗಿರುವ ೩೩೪೯ ಕೋಟಿ ರೂಪಾಯಿಗಳು. ಇವೆಲ್ಲವೂ ನೀರಾವರಿ ಸೌಲಭ್ಯದ ವಿಸ್ತರಣೆಗೆ ಹೋಗುತ್ತದೆಯೇ? ಖಂಡಿತಾ ಇಲ್ಲ. ವಾಸ್ತವವಾಗಿ ನೀರಾವರಿಗೆ ಹೋದ ವರ್ಷ ಶೇ.೧೭.೬೯ ರಷ್ಟು ಹಣವನ್ನು ನೀಡಲಾಗಿದ್ದರೆ ಈ ವರ್ಷ ಅದರ ಪ್ರಮಾಣ ಶೇ.೧೩ಕ್ಕಿಳಿದಿದೆ.ಇದರಲ್ಲಿ ೨೦೦೦ ಕೋಟಿ ರೂ.ಕಾಂಟ್ರಾಕ್ಟರ್‌ಗಳ ಹಳೆಯ ಬಾಕಿಯನ್ನು ತೀರಿಸಲೇ ವ್ಯಯವಾಗುತ್ತದೆ. ಹೀಗಾಗಿ ಅಳಿದುಳಿಯುವ ಹಣ ಈಗಾಗಲೇ ಮುಗಿಯುವ ಹಂತ ತಲುಪಿರುವ ಕಾವೇರಿ ಮತ್ತು ಕೃಷ್ಣ ಕಣಿವೆಯ ಯೋಜನೆಗಳನ್ನು ಪೂರೈಸಲೂ ಸಾಕಾಗುವುದಿಲ್ಲ. ಹೀಗಾಗಿ ಕೃಷ್ಣ ಮತ್ತು ಕಾವೇರಿ ಕೊಳ್ಳದ ಬಚಾವತ್ ಬಿ ಯೋಜನೆಯನ್ನೂ ಸಹ ನಾವು ಸಂಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇನ್ನು ಕಳಸಾ ಬಂಡೂರಿ ಇನ್ನಿತ್ಯಾದಿ ಹೊಸ ೨೫ ಯೋಜನೆಗಳಿಗೆ ಬೇಕಾಗುವ ೬೦೦೦-೮೦೦೦೦ ಕೋಟಿ ಗಳಷ್ಟು ಹಣದ ಮಾತೂ ಬಜೆಟ್ಟಿನಲ್ಲಿಲ್ಲ.

ಇದಲ್ಲದೆ ಗೊಬ್ಬರ ಮತ್ತು ಬೀಜ ಕೊಳ್ಳಲು ರೈತರಿಗೆ ನೀಡಲಾಗುವ ೧೦೦೦ರೂ. ವಿಷಯ. ರೈತರಿಗೆ ಸರಿಯಾದ ಸಮಯಕ್ಕೆ ಸರಿಯಾದ ಗೊಬ್ಬರ ಮತ್ತು ಬೀಜ ವಿತರಣೆ ವ್ಯವಸ್ಥೆ ಬೇಕಾಗಿದೆಯೇ ವಿನಃ ಸರ್ಕಾರದ ಸಹಾಯ ಧನವಲ್ಲ. ಅದೂ ಅಲ್ಲದೆ ಸರ್ಕಾರ ಅದನ್ನು ರೈತರ ಬ್ಯಾಂಕು ಖಾತೆಗಳ ಮೂಲಕ ವಿತರಿಸುತ್ತದಂತೆ. ಅದಕ್ಕಾಗಿ ಬ್ಯಾಂಕು ಖಾತೆ ಶುರು ಮಾಡಲು ಒಂದು ಸಾವಿರ ವೆಚ್ಚ ಮಾಡಬೇಕಾಗಿ ಬರುತ್ತದಷ್ಟೆ. ವಿತರಣೆಯಲ್ಲಿ ತಮ್ಮ ವೈಫಲ್ಯವನ್ನು ಮುಚ್ಚಿ ಹಾಕಿಕೊಳ್ಳಲು ಈ ಯೋಜನೆಯ ಪ್ರಚಾರ ಸಹಾಯಕ್ಕೆ ಬರಬಹುದೇ ವಿನಃ ರೈತರಿಗಂತೂ ಆ ಹಣ ತಲುಪುವುದು ಕನಸಿನ ಮಾತು. ಸಾವಯವ ಕೃಷಿಯಲ್ಲಿ ತೊಡಗಿಕೊಳ್ಳುವ ರೈತರಿಗೆ ಗೊಬ್ಬರ ಗುಂಡಿಗೆ ೨೦೦೦ ರೂ. ಸಹಾಯಧನದ ಯೋಜನೆಯೂ ಸಹ ರೈತರ ಅಸಹಾಯಕ ಪರಿಸ್ಥಿತಿಯ ವಿಡಂಬನೆಯೇ ಆಗಿದೆ. ಏಕೆಂದರೆ ಸಾವಯವ ಕೃಷಿ ಉತ್ತಮವಾದದ್ದೇ ಆದರೂ ಅದೂ ಈಗಲೂ ದುಬಾರಿಯೇ ಆಗಿದೆ. ಮತ್ತದು ಸಣ್ಣ ರೈತನೊಬ್ಬ ಸಂಪೂರ್ಣವಾಗಿ ತನ್ನ ಕುಟುಂಬ ಪೋಷಣೆಯನ್ನು ಅದನ್ನು ಆಧರಿಸಿ ಮಾಡಿಕೊಳ್ಳಲಾಗದಂತ ಪರಿಸ್ಥಿತಿಯನ್ನು ಹಸಿರು ಕ್ರಾಂತಿ ಬೇಸಾಯ ಮತ್ತು ಸರ್ಕಾರದ ವ್ಯವಸ್ಥೆಗಳು ಸೃಷ್ಟಿಸಿವೆ. ಹೀಗಾಗಿ ಈಗಾಗಲೇ ಸಾವಯವ ಕೃಷಿಯಲ್ಲಿ ತೊಡಗಿರುವ ದೊಡ್ಡ ರೈತರಿಗೆ ಇದರ ಲಾಭ ದೊರೆಯುತ್ತದೆಯೇ ವಿನಃ ಸಣ್ಣ ರೈತರಿಗೆ ಇದರಿಂದ ಏನೂ ಲಾಭವಿಲ್ಲ.

ಚುನಾವಣೆಗೆ ಮುನ್ನ ೧೦ ಅಶ್ವಶಕ್ತಿಯ ವರೆಗಿನ ಎಲ್ಲಾ ಪಂಪ್ ಸೆಟ್ಟುಗಳಿಗೂ ಉಚಿತ ವಿದ್ಯುತ್ ಸರಬರಾಜು ಮಾಡುವುದಾಗಿ ಹೇಳುತ್ತಿದ್ದ ಬಿಜೆಪಿ ಅಧಿಕಾರ ಹಿಡಿದೊಡನೆ ಬೇರೆ ರಾಗ ಹಾಡಲು ಪ್ರಾರಂಭಿಸಿತ್ತು. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ನಡೆಸಿದ ಮೊದಲ ಪತ್ರಿಕಾ ಗೋಷ್ಟಿಯಲ್ಲೇ ಯಡಿಯೂರಪ್ಪನವರು ಎಲ್ಲರಿಗೂ ಉಚಿತ ವಿದ್ಯುತ್ ಕೊಡಲು ಸಾಧ್ಯವಿಲ್ಲ ಎಂದು ಘೋಷಿಸಿಬಿಟ್ಟರು. ನಂತರ ಅಂತಿಮವಾಗಿ ಬಜೆಟ್ಟಿಗೆ ಎರಡು ದಿನಗಳಿರುವಾಗ ಉಚಿತ ವಿದ್ಯುತ್ ಕೊಡುತ್ತೇವೆ ಎಂದು ಹೇಳಲು ಪ್ರಾರಂಭಿಸಿದರು.

ಇದಲ್ಲದೆ ಗ್ರಾಮೀಣ ಅಭಿವೃದ್ಧಿಗೆ ಸರ್ಕಾರ ಈ ಬಾರಿ ನೀಡಿರುವ ಹಣ ವಾಸ್ತವ ದರದಲ್ಲಿ ಹೋದ ವರ್ಷಕ್ಕಿಂತ ಎಷ್ಟು ಕಡಿಮೆ ಎಂಬುದನ್ನು ಈಗಾಗಲೇ ವಿಶ್ಲೇಷಿಸಿದ್ದೇವೆ. ಹೀಗಾಗಿ ರೈತನ ಹೆಸರಲ್ಲಿ ಸರ್ಕಾರ ನೀಡಿರುವ ೮೦೦೦ ಕೋಟಿ ಕೇವಲ ಪ್ರಚಾರಕ್ಕೆ ವಿನಃ ಸಂಕಷ್ಟದಲ್ಲಿರುವ ರೈತನಿಗೆ ಇದರಿಂದ ಏನೂ ಸಹಾಯವಿಲ್ಲ.

ಇದಲ್ಲದೆ ರೈತನ ಹೆಸರಲ್ಲಿ ಯಡಿಯೂರಪ್ಪ ಮತ್ತು ಬಿಜೆಪಿ ಸರ್ಕಾರ ಕೊಚ್ಚಿಕೊಳ್ಳುತ್ತಿರುವ ಮತ್ತೊಂದು ಹೆಗ್ಗಳಿಕೆ ೧೫ ಲಕ್ಷ ರೈತರಿಗೆ ಉಚಿತ ವಿದ್ಯುತ್ತಿನ ಸಹಾಯ. ವಾಸ್ತವವಾಗಿ ಇದು ಬಿಜೆಪಿ ಸರ್ಕಾರ ಜನರಿಗೆ ಮಾಡುತ್ತಿರುವ ಮಹಾ ಮೋಸವಾಗಿದ್ದು ಅದನ್ನು ಕೂಲಂಕಷವಾಗಿ ವಿಶ್ಲೇಷಿಸುವ ಅಗತ್ಯವಿದೆ.

"ಉಚಿತ ವಿದ್ಯುತ್" : ಭರವಸೆ ಉಚಿತ, ದ್ರೋಹ ಖಚಿತ:

ಬಿಜೆಪಿ ಪಕ್ಷ ಚುನಾವಣೆಗೆ ಮುನ್ನ ಮತ್ತು ಅಧಿಕಾರಕ್ಕೆ ಬಂದ ನಂತರ ನೀಡಿದ ಪ್ರಧಾನ ಭರವಸೆಗಳಲ್ಲಿ ರೈತರು ಬಳಸುವ ಹತ್ತು ಅಶ್ವಶಕ್ತಿಯವರೆಗಿನ ಎಲ್ಲಾ ಕೃಷಿ ಪಂಪ್ ಸೆಟ್ಟುಗಳಿಗೂ ಉಚಿತ ವಿದ್ಯುತ್ತನ್ನು ನೀಡುವುದಾಗಿ ಹೇಳಿದ್ದು ಅತಿ ಮುಖ್ಯವಾದದ್ದು. ಮತ್ತು ಈ ಬಜೆಟ್ಟಿನಲ್ಲಿ ಜನರಿಗೆ ಮಾಡಿದ ಅತಿ ದೊಡ್ಡ ದ್ರೋಹಗಳಲ್ಲಿ ಸಹಾ ಅತಿ ಮುಖ್ಯವಾದದ್ದು.

ಚುನಾವಣೆಗೆ ಮುನ್ನ ೧೦ ಅಶ್ವಶಕ್ತಿಯವರೆಗಿನ ಎಲ್ಲಾ ಪಂಪ್ ಸೆಟ್ಟುಗಳಿಗೂ ಉಚಿತ ವಿದ್ಯುತ್ ಸರಬರಾಜು ಮಾಡುವುದಾಗಿ ಹೇಳುತ್ತಿದ್ದ ಬಿಜೆಪಿ ಪಕ್ಷ ಅಧಿಕಾರ ಹಿಡಿದೊಡನೆ ಬೇರೆ ರಾಗ ಹಾಡಲು ಪ್ರಾರಂಭಿಸಿತ್ತು. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ನಡೆಸಿದ ಮೊದಲ ಪತ್ರಿಕಾಗೋಷ್ಟಿಯಲ್ಲೇ ಯಡಿಯೂರಪ್ಪನವರು ಎಲ್ಲರಿಗೂ ಉಚಿತ ವಿದ್ಯುತ್ ಕೊಡಲು ಸಾಧ್ಯವಿಲ್ಲ ಎಂದು ಘೋಷಿಸಿಬಿಟ್ಟರು. ನಂತರ ಇಂಧನ ಮಂತ್ರಿ ಈಶ್ವರಪ್ಪನವರೂ ಸಹ ಮುಂದಿನ ವರ್ಷದಲ್ಲಾದರೂ ಉಚಿತ ವಿದ್ಯುತ್ ಕೊಡಲು ಮುಖ್ಯಮಂತ್ರಿಗೆ ಮನವಿ ಮಾಡುತ್ತೇವೆ ಎಂದರು. ನಂತರ ಅವರೂ ಎಲ್ಲರಿಗೂ ಉಚಿತ ವಿದ್ಯುತ್ ಸಾಧ್ಯವಿಲ್ಲ ಎಂದು ರಾಗ ಹಾಡಲು ಪ್ರಾರಂಭಿಸಿದರು. ಅಂತಿಮವಾಗಿ ಬಜೆಟ್ಟಿಗೆ ಎರಡು ದಿನಗಳಿರುವಾಗ ಉಚಿತ ವಿದ್ಯುತ್ ಕೊಡುತ್ತೇವೆ ಎಂದು ಖಚಿತವಾಗಿ ಹೇಳಲು ಪ್ರಾರಂಭಿಸಿದರು. ಈಗ ಅಂತಿಮವಾಗಿ ಉಚಿತ ವಿದ್ಯುತ್ ಕೊಡುವುದರ ಬಗ್ಗೆ ಸರ್ಕಾರ ಬಜೆಟ್ಟಿನಲ್ಲಿ ಹೀಗೆ ಘೋಷಿಸಿದೆ:

"ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಒದಗಿಸಲಾಗುತ್ತಿದ್ದು, ೧೫ ಲಕ್ಷ ರೈತರು ಇದರ ಅನುಕೂಲ ಪಡೆಯಲಿದ್ದಾರೆ. ವಿದ್ಯುತ್ ಸರಬರಾಜು ನಿಗಮಗಳ ವೆಚ್ಚದಲ್ಲಿ ಪ್ರತಿ ಪಂಪ್‌ಸೆಟ್‌ಗೂ ಮೀಟರ್ ಅಳವಡಿಸಲು ನಿರ್ಧರಿಸಲಾಗಿದ್ದು, ಇದರಿಂದ ರೈತರು ಬಳಕೆ ಮಾಡುತ್ತಿರುವ ಒಟ್ಟಾರೆ ವಿದ್ಯುಚ್ಛಕ್ತಿಯ ಪ್ರಮಾಣವನ್ನು ತಿಳಿಯಲು ಸಾಧ್ಯವಾಗುತ್ತದೆ. ಈ ಸಂಬಂಧ ಸರ್ಕಾರವು ಈಗಾಗಲೇ ವಿದ್ಯುತ್ ಸಂಸ್ಥೆಗಳಿಗೆ ನೀಡುತ್ತಿರುವ ೧೫೫೦ ಕೋಟಿ ರೂ.ಗಳಲ್ಲದೆ ಹೆಚ್ಚುವರಿಯಾಗಿ ಪ್ರತಿವರ್ಷ ೭೫೦ ಕೋಟಿ ರೂ.ಗಳ ಹೆಚ್ಚುವರಿ ಸಹಾಯ ಧನವನ್ನು ನೀಡಬೇಕಾಗಿದೆ, ಈ ವರ್ಷ ಉಳಿದ ಎಂಟು ತಿಂಗಳಿಗೆ ಈ ಹೆಚ್ಚುವರಿ ಸಹಾಯಧನದ ಮೊತ್ತವು ೫೦೦ ಕೋಟಿ ರೂ. ಆಗುವುದೆಂದು ಅಂದಾಜಿಸಲಾಗಿದೆ." (ಬಜೆಟ್ಟಿನ ೨೭ ನೇ ಅಂಶ)

ಮರುದಿನದ ದಿನಪತ್ರಿಕೆಗಳ ಮುಖಪುಟದ ತುಂಬಾ "ಮಾತು ಉಳಿಸಿಕೊಂಡ ಮುಖ್ಯಮಂತ್ರಿ", "ರೈತಪರ ಬಜೆಟ್" ಇನ್ನಿತ್ಯಾದಿ ಶೀರ್ಷಿಕೆಗಳಲ್ಲಿ ಕಿಂಚಿತ್ತೂ ವಿಶ್ಲೇಷಣೆ ಮಾಡದೆ ಯಡಿಯೂರಪ್ಪನವರಿಗೆ ಅನಾಮತ್ತು ರೈತಪರ ಬಿರುದನ್ನು ದಯಪಾಲಿಸಿಬಿಟ್ಟವು.

ಆದರೆ ಆವರೆಗೆ ಉಚಿತ ವಿದ್ಯುತ್ ನೀಡಲು ೮೭೫ ಕೋಟಿ ರೂ. ಬೇಕು ಎನ್ನುತ್ತಿದ್ದ ಸರ್ಕಾರ ಮರುದಿನವೆ ಉಚಿತ ವಿದ್ಯುತ್ ನೀಡಲು ೮೭೫ ಕೋಟಿ ಬೇಕಾಗಿಲ್ಲ. ಬದಲಿಗೆ ೭೫೦ ಕೋಟಿ ಸಾಕು ಎನ್ನಲು ಪ್ರಾರಂಭಿಸಿದ್ದಾರೆ. ಅಷ್ಟು ಮಾತ್ರವಲ್ಲ. ೧೦ ಆಶ್ವಶಕ್ತಿ ಬಳಸುವ ಕೃಷಿ ಪಂಪ್‌ಸೆಟ್‌ಗಳು ರಾಜ್ಯದಲ್ಲಿ ೧೭.೨೧ ಲಕ್ಷದಷ್ಟಿವೆ. ಅದ

[illegible] ಸರ್ಕಾರ ಕೊಡುತ್ತೇವೆ ಎಂದು ಹೇಳುತ್ತಿರುವುದು ಕೇವಲ ೧೫ ಲಕ್ಷ ಪಂಪ್‌ಸೆಟ್ ಗಳು ಮಾತ್ರ. ಇದಲ್ಲದೆ ಬಜೆಟ್ ಮರುದಿನದಿಂದ ಇಂಧನ ಮಂತ್ರಿಗಳು ವರಮಾನ ತೆರಿಗೆ ಪಾವತಿ ಮಾಡುವ ರೈತರು ೧೦ ಅಶ್ವಶಕ್ತಿ ಪಂಪ್ ಸೆಟ್ ಬಳಸುತ್ತಿದ್ದರೂ ಅವರಿಗೆ ಉಚಿತ ವಿದ್ಯುತ್ ನೀಡಲಾಗುವುದಿಲ್ಲವೆಂದು ಘೋಷಿಸಿದ್ದಾರೆ. ಆದರೆ ವಾಸ್ತವವಾಗಿ ಕೃಷಿ ಆದಾಯಕ್ಕೆ ವರಮಾನ ತೆರಿಗೆಯೇ ಇಲ್ಲ. ಇನ್ನೂ ವರಮಾನ ತೆರಿಗೆ ಕಟ್ಟುವಷ್ಟು ಕೃಷಿಯೇತರ ಆದಾಯ ಪಡೆಯುವವರು ಅತಿ ಕಡಿಮೆ. ಹೀಗಿದ್ದರೂ ಅದನ್ನು ಉಚಿತ ವಿದ್ಯುತ್ ನಿರಾಕರಿಸಲು ಒಂದು ಮಾನದಂಡವನ್ನಾಗಿ ಸರ್ಕಾರ ಹೇಳುತ್ತಿದೆಯೆಂದರೆ ಬರಲಿರುವ ದಿನಗಳಲ್ಲಿ ಉಚಿತ ವಿದ್ಯುತ್ತಿನಿಂದ ಹೊರಗುಳಿಯುವವರ ಮಾನದಂಡ ಹೆಚ್ಚಾಗುತ್ತಾ ಹೋಗುತ್ತದೆಂದೇ ಅರ್ಥ. ಹೀಗಾಗಿ ೧೭.೨೧ ಲಕ್ಷ ಪಂಪ್‌ಸೆಟ್ ಬಳಕೆದಾರರಲ್ಲಿ ಏಕಾಏಕಿ ೨.೨೧ ಲಕ್ಷ ರೈತರನ್ನು ವಿವರಣೆಯೇ ಇಲ್ಲದೆ ಈ ಯೋಜನೆಯಿಂದ ಹೊರಗಿಡಲಾಗಿದೆ.

ಅಷ್ಟು ಮಾತ್ರವಲ್ಲ. ಈವರೆಗೆ ಉಚಿತ ೮೭೫ ಕೋಟಿ ಹಣ ಬೇಕು ಎನ್ನುತ್ತಿದ್ದವರು ಏಕಾಏಕಿ ಅದನ್ನು ೭೫೦ ಕೋಟಿಗೆ ಇಳಿಸಿದ್ದಾರೆ. ಅಂದರೆ ೧೨೫ ಕೋಟಿ ರೂ. ಹಣ ಕಡಿತಗ್ಗೊಳಿಸುವ ಮೂಲಕ ಇನ್ನೂ ೨.೧೪ ಲಕ್ಷದಷ್ಟು ರೈತರನ್ನು ಹೊರಗಿಡಲಾಗಿದೆ. ಅಂದರೆ ಉಚಿತ ವಿದ್ಯುತ್ ಕೊಡಲಿರುವುದು ೧೫ ಲಕ್ಷ ಪಂಪ್ ಸೆಟ್ಟುಗಳಿಗಲ್ಲ. ಬದಲಿಗೆ ೧೨.೮೬ ಲಕ್ಷದಷ್ಟು ರೈತರಿಗೆ ಮಾತ್ರ ಎಂದಾಯಿತು.

ಇದಲ್ಲದೆ ಈವರೆಗೆ ಭಾಗ್ಯಜ್ಯೋತಿ ಯೋಜನೆಗೆ ಮತ್ತು ಕೃಷಿ ಪಂಪ್ ಸೆಟ್ಟುಗಳಿಗೆ ರಿಯಾಯತಿ ವಿದ್ಯುತ್ ನೀಡಲು ಸರ್ಕಾರವು ೧೮೦೦ ಕೋಟಿ ರೂ.ಗಳನ್ನು ನೀಡುತ್ತಿತ್ತು. ಉಚಿತ ವಿದ್ಯುತ್ ಯೋಜನೆಗೆ ಈ ೧೮೦೦ ಕೋಟಿಯೂ ಸೇರಿದಂತೆ ಹೆಚ್ಚುವರಿಯಾಗಿ ೮೭೫ ಕೋಟಿ ರೂಗಳು ಬೇಕಾಗುತ್ತಿತ್ತು. ಆದರೆ ಬಜೆಟ್ ಘೋಷಣೆಯಲ್ಲಿ ಸ್ಪಷ್ಟ ಪಡಿಸಿರುವಂತೆ ***"ಈಗಾಗಲೇ ಸರ್ಕಾರವು ವಿದ್ಯುತ್ ಸಂಸ್ಥೆಗಳಿಗೆ ನೀಡುತಿರುವ ಸಹಾಯ ಧನವಾದ ೧೫೫೦ ಕೋಟಿ.."*** ಎಂದು ಈಗಾಗಲೇ ಕೊಡುತ್ತಿದ್ದ ಸಹಾಯ ಧನವನ್ನು ೧೮೦೦ ಕೋಟಿಯಿಂದ ೧೫೫೦ ಕೋಟಿಗೆ ಇಳಿಸಿದೆ. ಅಂದರೆ ೨೫೦ ಕೋಟಿಯನ್ನು ಕಡಿಮೆ ಮಾಡಲಾಗಿದೆ. ಅಂದರೆ ಈಗ ವಿದ್ಯುತ್ ಸಬ್ಸಿಡಿ ಕ್ಷೇತ್ರಕ್ಕೆ ಒದಗಿಸಲಾಗಿರುವ ೨೦೫೦ ಕೋಟಿಯಲ್ಲಿ ಒಂದೋ ಉಚಿತ ವಿದ್ಯುತ್ತಿನ ಫಲಾನುಭವಿಗಳ ೨೫೦ ಕೋಟಿ ರೂಗಳಷ್ಟು ಫಲಾನುಭವಿಗಳ ಸಂಖ್ಯೆಯಾದರೂ ಕಡಿಮೆಯಾಗಬೇಕು. ಅಥವಾ ಈಗಾಗಲೇ ರಿಯಾಯತಿ ದರದಲ್ಲಿ ಕೃಷಿ ವಿದ್ಯುತ್ ಪಡೆ ಯುತ್ತಿದ್ದವರ ಅಥವಾ ಬಾಗ್ಯಜ್ಯೋತಿ ಫಲಾನುಭವಿಗಳ ಸಂಖ್ಯೆಯಾದರೂ ಕಡಿಮೆಯಾಗಬೇಕು. ಈ ನಿಟ್ಟಿನಲ್ಲಿ ಉಚಿತ ವಿದ್ಯುತ್ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಅನುದಾನ ೨೫೦ ಕೋಟಿ ರೂ.ಗಳಷ್ಟು ಕಡಿಮೆಯಾಗುತ್ತದೆಂದರೆ ೪.೨೮ ಲಕ್ಷದಷ್ಟು ರೈತರು ಈ ಯೋಜನೆಯಿಂದ ಹೊರಗುಳಿಯುತ್ತಾರೆ. ಅಂದರೆ ಒಟ್ಟಾರೆಯಾಗಿ ಈ ಯೋಜನೆಯಿಂದ ಹೊರಗುಳಿಯುವವರ ಸಂಖ್ಯೆ ೬.೪೨ ಲಕ್ಷದಷ್ಟು ರೈತರು ಎಂದಾಯ್ತು. ಅಂದರೆ ಉಚಿತ ವಿದ್ಯುತ್ತಿನ ಫಲಾನುಭವಿಗಳ ಸಂಖ್ಯೆ ೧೫ ಲಕ್ಷವಲ್ಲ. ೮.೫೮ ಲಕ್ಷ ವೆಂದಾಯ್ತು.

ಇದಲ್ಲದೆ ಅಂಕೆ ಸಂಖ್ಯೆಗಳ ಗಾರುಡಿಯಲ್ಲಿ ಸರ್ಕಾರ ತಣ್ಣಗೆ ನಡೆಸಿರುವ ಮತ್ತೊಂದು ಮೋಸ ಜನತೆಯ ಗಮನಕ್ಕೆ ಬಾರದೆ ಹೋಗಿದೆ. ಬಜೆಟ್ ಘೋಷಣೆಯಲ್ಲಿ ***"ವಿದ್ಯುತ್ ಸರಬರಾಜು ನಿಗಮಗಳ ವೆಚ್ಚದಲ್ಲಿ ಪ್ರತಿ ಪಂಪ್‌ಸೆಟ್‌ಗೂ ಮೀಟರ್ ಅಳವಡಿಸಲು ನಿರ್ಧರಿಸಲಾಗಿದೆ"*** ಎಂದೂ ಸಹ ಸೇರಿಸಲಾಗಿದೆ. ಇಲ್ಲಿ ಎರಡು ಮುಖ್ಯ ಪ್ರಶ್ನೆಗಳಿವೆ. ಮೊದಲನೆಯದಾಗಿ ಪ್ರತಿ ಪಂಪ್‌ಸೆಟ್ಟಿಗೂ ಮೀಟರ್ ಅನ್ನು ಏಕೆ ಅಳವಡಿಸಲಾಗುತ್ತಿದೆ? ಮತ್ತು ಅಷ್ಟು ಪಂಪ್‌ಸೆಟ್ಟುಗಳಿಗೆ ಮೀಟರ್ ಅಳವಡಿಸಲು ಕನಿಷ್ಟ ೮೭೫ ಕೋಟಿ ರೂಪಾಯಿಗಳು ಬೇಕು. ಆ ವೆಚ್ಚವನ್ನು ವಿದ್ಯುತ್ ಸರಬರಾಜು ನಿಗಮಗಳೇ ಹೊರುತ್ತವೆ ಎಂದು ಬಜೆಟ್ಟಿನಲ್ಲಿ ಹೇಳಲಾಗಿದ್ದರೂ ವಿದ್ಯುತ್ ವಿತರಣಾ ಸಂಸ್ಥೆಗಳು ಈಗ ಎದುರಿಸುತ್ತಿರುವ ಆರ್ಥಿಕ ಪರಿಸ್ಥಿಯಲ್ಲಿ ಅದನ್ನು ಹೊರಲು ಸಾಧ್ಯವೆ?

ಮೊದಲನೆಯದಾಗಿ ಪ್ರತಿ ಪಂಪ್‌ಸೆಟ್ಟುಗಳಿಗೂ ಮೀಟರ್ ಅನ್ನು ಏಕೆ ಅಳವಡಿಸಲಾಗುತ್ತಿದೆ? ಇಂಧನ ಮಂತ್ರಿ ಈಶ್ವರಪ್ಪ ಮತ್ತು ಮುಖ್ಯಮಂತ್ರಿ ಯಡಿಯೂರಪ್ಪನವರ ಪ್ರಕಾರ ಅದು ಒಟ್ಟಾರೆಯಾಗಿ ಕೃಷಿ ಕ್ಷೇತ್ರಕ್ಕೆ ಎಷ್ಟು ವಿದ್ಯುತ್ ಬೇಕು ಎಂದು ತಿಳಿಯಲು ಮಾತ್ರ. ಈಶ್ವರಪ್ಪನವರು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಅದನ್ನು ಬಿಲ್ ಹಾಕಲು ಬಳಸುವುದಾದರೆ ನಾವೆಲ್ಲರೂ ಒಟ್ಟು ಸೇರಿ ಮೀಟರ್ ತೆಗೆಯಲು ಹೋರಾಟ ಮಾಡೋಣ ಎಂದು ಸದನದಲ್ಲಿ ಕರೆ ನೀಡಿಬಿಟ್ಟಿದ್ದಾರೆ. ಆದರೆ ವಾಸ್ತವವೆಂದರೆ ವಿದ್ಯುತ್ ಕ್ಷೇತ್ರದಲ್ಲಿ ತರಲಾಗುತ್ತಿರುವ ಎಲ್ಲಾ ಬದಲಾವಣೆಗಳು ಸಹ ಉದಾರೀಕರಣ ಮತ್ತು ಜಾಗತೀಕರಣ ನೀತಿಗಳು ಮತ್ತು ವಿಶ್ವಬ್ಯಾಂಕ್ ಆದೇಶದನ್ವಯ ೧೯೯೯ರಲ್ಲಿ ಪ್ರಾರಂಭವಾದ ಕರ್ನಾಟಕ ವಿದ್ಯುತ್ ಕ್ಷೇತ್ರ ಸುಧಾರಣೆ ಕಾಯಿದೆಯ ಪರಿಣಾಮವಾಗಿದ್ದು ಅದರ ಧ್ಯೇಯವೇ ಈ ರೀತಿ ಇದೆ:

Hence, the Karnataka Electricity Reform Act, (KERC) has been enacted in 1999. Thesalient features of the Act are:

(1) Constitution of Electricity Regulation Commission.

(2) Corporatisation of the erstwhile Electricity Board and formation of several distribution companies,

(3) Privatisation of distribution companies; and

(4) Augmentation of generation through Independent Power Producers(IPPs).

(ಕರ್ನಾಟಕ ವಿದ್ಯುತ್ ಸುಧಾರಣಾ ಕಾಯಿದೆ-೧೯೯೯)

ಈ ಕಾಯಿದೆಯು ಸ್ಪಷ್ಟ ಪಡಿಸುವಂತೆ ವಿದ್ಯುತ್ ವಿತರಣೆಯನ್ನು ಖಾಸಗೀಕರಿಸುವುದು ಅದರ ಪ್ರಧಾನ ಉದ್ದೇಶ ಇದನ್ನು ಅನುಸರಿಸಿ ೨೦೦೧ರಲ್ಲಿ ಹೊರಡಿಸಲಾದ ಕರ್ನಾಟಕ ರಾಜ್ಯ ಸರ್ಕಾರದ ಆದೇಶವು ಎಲ್ಲಾ ಬಳಕೆದಾರರಿಗೂ ಮೀಟರ್ ಅಳವಡಿಕೆ ಕಡ್ಡಾಯ ಮಾಡುತ್ತದೆ:

GOVERNMENT ORDER NO.DE 15 PSR 2001 DATED 18.4.2001

In the circumstances explained in the Preamble, Government is pleased to approve the following:

1. Detailed Operational Plan of KPTCL for metering of its unmetered consumer insta llations appended to this Order is approved subject to the following conditions:

i. KPTCL shall also make necessary arrangements for meter reading and billing of IP sets, as per the KERC Tariff Order-2000 dated 18.12.2000 duly taking into account the subsidy granted by the

Government of Karnataka by its Notification dated 2.2.2001/23.3.2001.

ಮೇಲಿನ ಆದೇಶವು ಸ್ಪಷ್ಟ ಪಡಿಸುವಂತೆ ಸರ್ಕಾರವು ಕೆ.ಪಿ.ಟಿ.ಸಿ.ಎಲ್‌ಗೆ ಎಲ್ಲಾ ನೀರಾವರಿ ಪಂಪ್ ಸೆಟ್ಟುಗಳಿಗೆ ಮೀಟರ್ ಹಾಕಲು ಕಡ್ಡಾಯ ಮಾಡಿರುವುದೇ ನಂತರದ ದಿನಗಳಲ್ಲಿ ಬಳಕೆಗೆ ತಕ್ಕಂತೆ ಬಿಲ್ ಹಾಕಲು. ಏಕೆಂದರೆ ಆಗ ಮಾತ್ರ ವಿದ್ಯುತ್ ವಿತರಣೆಯನ್ನು ಯಶಸ್ವಿಯಾಗಿ ಖಾಸಗೀಕರಿಸಲು ಸಾಧ್ಯ. ಹೀಗಾಗಿ ಪಂಪ್ ಸೆಟ್ಟುಗಳಿಗೆ ಮೀಟರ್ ಹಾಕುತ್ತಿರುವುದೇ ನಂತರ ವಿತರಣೆಯನ್ನು ಖಾಸಗೀಕರಿಸಿ ಬಳಕೆಗೆ ತಕ್ಕಂತೆ ಬಿಲ್ ವಸೂಲಿ ಮಾಡುವುದಕ್ಕೆ ಎಂಬುದರಲ್ಲಿ ಸಂಶಯವಿಲ್ಲ.

ಇನ್ನು ಎರಡನೆಯ ಪ್ರಶ್ನೆ. ಈ ಮೀಟರ್ ಹಾಕಲು ಹಣ ಎಲ್ಲಿಂದ ಬರುತ್ತದೆ. ಇದಕ್ಕೆ ೮೭೫ ಕೋಟಿ ರೂಪಾಯಿಗಳು ತಗಲುತ್ತದೆ ಎಂದೂ ಅದನ್ನು ವಿದ್ಯುತ್ ವಿತರಣಾ ಕಂಪನಿಗಳೆ ವಹಿಸಿಕೊಳ್ಳುತ್ತವೆ ಎಂದೂ ಹೇಳಲಾಗಿದೆ. ಆದರೆ ಇಂದು ಈ ವಿತರಣಾ ಕಂಪನಿಗಳು ಇರುವ ಪರಿಸ್ಥಿತಿಯಲ್ಲಿ ಈ ಹೆಚ್ಚುವರಿ ಹಣವನ್ನು ಹೊರಲು ಸಾಧ್ಯವೇ? ಒಂದು ಅಂದಾಜಿನ ಪ್ರಕಾರ ಎಲ್ಲಾ ಐದು ವಿತರಣಾ ಕಂಪನಿಗಳಿಗೆ ಗೃಹ ಬಳಕೆದಾರರು, ನೀರು ಸರಬರಾಜು, ಬೀದಿ ದೀಪ, ನೀರಾವರಿ ಪಂಪ್ ಸೆಟ್ಟುಗಳ ಬಾಕಿ ಮೊತ್ತವೂ ಸೇರಿ ಒಟ್ಟು ೫೦೨೬ ಕೋಟಿ ರೂಪಾಯಿ ಬಾಕಿ ಇದೆ. ಇದಲ್ಲದೆ ರಿಯಾಯತಿ ದರದಲ್ಲಿ ವಿದ್ಯುತ್ ಸರಬರಾಜು ಮಾಡಲು ಸರ್ಕಾರ ನೀಡಬೇಕಿರುವ ಸಹಾಯ ಧನದ ಬಾಕಿ, ಗ್ರಾಮ ಪಂಚಾಯತಿಗಳಿಂದ ಬರಬೇಕಾದ ಬಾಕಿ ಎಲ್ಲಾ ಸೇರಿ ಸರ್ಕಾರದಿಂದ ೪೦೭೯ ಕೋಟಿ ರೂ. ಬಾಕಿ ಉಳಿಸಿಕೊಳ್ಳಲಾಗಿದೆ. ಹೀಗಾಗಿ ಈ ಕಂಪನಿಗಳು ಒಟ್ಟು ೧೦೦೦೦ ಕೋಟಿ ರೂ. ಕೊರತೆಯನ್ನು ಎದುರಿಸುತ್ತಿವೆ. ಇದರ ಜೊತೆಗೆ ಈಗ ಮೀಟರ್ ಹಾಕಲು ಬೇಕಾದ ೮೭೫ ಕೋಟಿ ರೂ. ಹಣ ಎಲ್ಲಿಂದ ತರುತ್ತವೆ. ಇದಕ್ಕೆ ಆ ಕಂಪನಿಗಳಿಗೆ ದಾರಿ ಎರಡೇ ಒಂದು ವಿದ್ಯುತ್ ದರವನ್ನು ಏರಿಸುವುದು ಅಥವಾ ಸರ್ಕಾರದಿಂದ ಇನ್ನೂ ಹೆಚ್ಚಿನ ಸಹಾಯ ಧನವನ್ನು ಕೋರುವುದು. ಕರ್ನಾಟಕ ವಿದ್ಯುತ್ ಪ್ರಾಧಿಕಾರದ ನಿಯಮಾವಳಿಯ ಪ್ರಕಾರ ಸರ್ಕಾರವು ವಿಶೇಷವಾಗಿ ಕೆಲವು ಗುಂಪುಗಳಿಗೆ ಕಡಿಮೆ ದರವನ್ನು ಘೋಷಿಸಿದರೆ ಅಥವಾ ಆಬಗೆಯ ಹೆಚ್ಚುವರಿಯಾಗಿ ವಿದ್ಯುತ್ ಕಂಪನಿಗಳ ಮೇಲೆ ಹೊರೆ ಬೀಳುವ ಕಾರ್ಯಕ್ರಮಗಳನ್ನು ಘೋಷಿಸಿದರೆ ಅದರ ಹೊರೆಯನ್ನು ಸರ್ಕಾರವೇ ಹೊರಬೇಕು. ಹೀಗಾಗಿ ಹೇಗೆ ನೋಡಿದರೂ ಅದನ್ನು ಮೀಟರೀಕರಣದ ಹೊರೆಯನ್ನು ಸರ್ಕಾರವೇ ಹೊರಬೇಕಾಗು

ತ್ತದೆ. ಏಕೆಂದರೆ ಅದಿಲ್ಲದೆ ಸರ್ಕಾರ ಮಹತ್ವಾಕಾಂಕ್ಷಿ ಯೋಜನೆಯಾದ ಖಾಸಗೀಕರಣ ಆಗುವುದೇ ಇಲ್ಲ. ಆದರೆ ಇದಕ್ಕಾಗಿ ಬಜೆಟ್ಟಿನಲ್ಲಿ ಯಾವುದೇ ವಿಶೇಷವಾದ ಮೊತ್ತವನ್ನು ಎತ್ತಿಟ್ಟಿಲ್ಲವಾದ್ದರಿಂದ ಈಗ ನೀಡಲಾಗಿರುವ ೨೦೫೦ ಕೋಟಿ ಹಣದಲ್ಲೇ ಮೀಟರೀಕರಣವೂ ನಡೆಯಬೇಕಿದೆ. ಅಂದರೆ ೨೦೫೦ ಕೋಟಿಯಲ್ಲಿ ೮೭೫ ಕೋಟಿ ಮಿಟರೀಕರಣಕ್ಕೆ ಹೋದಲ್ಲಿ ಉಳಿಯುವ ಹಣ ಕೇವಲ ೧೧೭೫ ಕೋಟಿ ರೂ.ಗಳು ಮಾತ್ರ. ಅಂದರೆ ಸಾರಾಂಶದಲ್ಲಿ ಉಚಿತ ವಿದ್ಯುತ್ತಿಗೆ ಯಾವುದೇ ಹಣ ಉಳಿಯುವುದಿಲ್ಲ! ಇದು ಸರ್ಕಾರದ ಉಚಿತ ವಿದ್ಯುತ್ ಯೋಜನೆಯ ಹಿಂದಿರುವ ಖಚಿತ ಮೋಸ. ಉಚಿತ ಭರವಸೆ,ಖಚಿತ ಮೋಸ!

ಆದರೆ ಇವೆಲ್ಲಾ ಏಕೆ ಹೀಗೆ ನಡೆಯುತ್ತಿದೆ? ೧೯೯೯ರ ವಿದ್ಯುತ್ ಸುಧಾರಣಾ ಕಾಯಿದೆಯ ಪ್ರಕಾರ ೨೦೦೪ರ ವೇಳೆಗೆ ವಿದ್ಯುತ್ ಕ್ಷೇತ್ರಕ್ಕೆ ನೀಡಲಾಗುತ್ತಿದ್ದ ಸಹಾಯ ಧನವು ರದ್ದಾಗಬೇಕಿತ್ತು. ಹೀಗಾಗಿ ೨೦೦೪ರ ವೇಳೆಗೆ ಮೀಟರಿಂಗ್ ಪ್ರಕ್ರಿಯೆ ಮುಗಿಯಬೇಕಿತ್ತು. ಆದರೆ ಹಾಗಾಗದಿದ್ದರಿಂದ ನಂತರದ ೨೦೦೫-೦೯ರ MTFP ಮತ್ತು ೨೦೦೮-೧೨ರ MTFP ಯಲ್ಲಿ ಹೇಗೆ ಕ್ರಮೇಣ ವಿದ್ಯುತ್ ಸಬ್ಸಿಡಿಯನ್ನು ಕಡಿಮೆಮಾಡಬೇಕೆಂದು ಮಾರ್ಗಸೂಚಿಯನ್ನು ಹಾಕಿ ಕೊಡಲಾಗಿದೆ. ಅದರ ಪ್ರಕಾರ ೨೦೦೮-೦೯ರ ಸಾಲಿಗೆ ಈ ಸಹಾಯ ಧನವನ್ನು ೨೦೬೦ ಕೋಟಿಗೂ(ಬಜೆಟ್ಟಿನಲ್ಲಿ ೨೦೫೦ ಕೋಟಿ ನೀಡಲಾಗಿದೆ!) ೨೦೦೯-೧೦ರ ಸಾಲಿಗೆ ೧೯೫೭ ಕೋಟಿ, ೨೦೧೦-೧೧ರ ಸಾಲಿಗೆ ೧೮೫೯ ಕೋಟಿ ಮತ್ತು ೨೦೧೧-೧೨ರ ಸಾಲಿಗೆ ೧೭೬೬ ಕೋಟಿ ರೂ.ಗಳಿಗೆ ಇಳಿಸಬೇಕೆಂದು ಆದೇಶಿಸಲಾಗಿದೆ. ಅಂದರೆ ರಾಜ್ಯ ಅಂತರಿಕ ಉತ್ಪನ್ನದ ಶೇ.೦.೯೧ರಷ್ಟಿರುವ ವಿದ್ಯುತ್ ಸಬ್ಸಿಡಿಯನ್ನು ೨೦೧೨ ರ ವೇಳೆಗೆ ಶೇ.೦.೫೫ಕ್ಕೆ ಇಳಿಸಬೇಕು ಮತ್ತು ನಂತರದ ಅವಧಿಯಲ್ಲಿ ಶೂನ್ಯಕ್ಕೆ ಇಳಿಸಬೇಕೆಂಬುದೇ ಆದೇಶವಾಗಿದೆ. ಇರುವ ಸಬ್ಸಿಡಿಯನ್ನು ಕಡಿಮೆ ಮಾಡುವ ನೀತಿಯನ್ನು ಅನುಸರಿಸಿತ್ತಿರುವ ಸರ್ಕಾರ ಮತ್ತು ಎಲ್ಲಾ ಬಳಕೆದಾರರು ವಿಶೇಷವಾಗಿ ಬಡ ಮಧ್ಯಮ ವರ್ಗದವರು ತಾವು ಬಳಸುವ ಸರಕು ಮತ್ತು ಸೇವೆಗಳಿಗೆ ತಗಲುವ ವೆಚ್ಚವನ್ನು ತಾವೇ ಹೊರಬೇಕೆಂಬ ನಿಯಮವನ್ನು ಅನ್ನುಸರಿಸುತ್ತಿರುವ ಸರ್ಕಾರ ಹೊಸ ಸಬ್ಸಿಡಿಯನ್ನು ಮತ್ತು ಉಚಿತ ವಿದ್ಯುತ್ತನ್ನು ಕೊಡಲು ಸಾಧ್ಯವೇ?

ಎರಡು ರುಪಾಯಿ ಕೆಜಿ ಅಕ್ಕಿ ಏಕೆ ಕೊಡಲಿಲ್ಲ?:

ಬಿಜೆಪಿ ಸರ್ಕಾರ ಚುನಾವಣೆಗೆ ಮುನ್ನ ನೀಡಿದ ಪ್ರಮುಖ ಭರವಸೆ ಎರಡು ರೂಪಾಯಿ ಕೆಜಿ ಅಕ್ಕಿ. ಮತ್ತು ಬಡತನ ರೇಖೆಗಿಂತ ಕೆಳಗಿರುವವರ ಕಡು ಬಡವರ ಆದಾಯ ಮಿತಿಯನ್ನು ೧೨೦೦೦ ರೂ. ಗಳಿಂದ ೩೦,೦೦೦ಕ್ಕೇರಿಸುವುದು ಮತ್ತು ಬಡವರೆಂದು ಪರಿಗಣಿಸುವರ ಆದಾಯ ಮಿತಿಯನ್ನು ೩೦,೦೦೦ದಿಂದ ೬೦,೦೦೦ ಕ್ಕೇರಿಸುವುದು. ಕಡುಬಡವರಿಗೆ ಕೆಜಿಗೆ ೨ರೂನಂತೆ ಅಕ್ಕಿ ಒದಗಿಸುವುದು. ಮತ್ತು ಬಡವರಿಗೆ ೩.೫೦ ರೂ. ನಂತೆ ಅಕ್ಕಿ ಒದಗಿಸುವುದು. ಇದು ಬಿಜೆಪಿಯ ಭರವಸೆಯಾಗಿತ್ತು. ಇದರ ಬಗ್ಗೆ ಬಜೆಟ್ ಭಾಷಣದಲ್ಲಿ ಕಿಂಚಿತ್ತೂ ಪ್ರಸ್ತಾಪವೇ ಇಲ್ಲವಾಗಿರುವುದು ಏಕೆ? ಬಜೆಟ್ ಮರು ದಿನ ಈ ಬಗ್ಗೆ ಪ್ರಶ್ನಿಸಿದಾಗ ಮುಖ್ಯಮಂತ್ರಿಗಳು "ನಾವು ಎರಡು ರೂ. ಕೆಜಿ ಅಕ್ಕಿ ಕೊಡಬೇಕು ಎಂದು ಕೊಂಡಾಗ ಅಕ್ಕಿಯ ಬೆಲೆ ಕೆಜಿಗೆ ೧೨ ರೂ ಇತ್ತು. ಈಗ ಅದರ ಬೆಲೆ ೨೦ರೂ. ಗಳಿಗೇರಿದೆ. ಹೀಗಾಗಿ ಕೊಡಲು ಸಾಧ್ಯವಿಲ್ಲ. ಬದಲಿಗೆ ಕಡು ಬಡವರು ಒಂದು ಹಸುವನ್ನು ಕೊಂಡು ಹಾಲು ಮಾರಿದರೆ ತಮ್ಮ ಅಕ್ಕಿಯನ್ನು ತಾವೇ ಕೊಳ್ಳಬಹುದು" ಎಂದು ಉಡಾಫೆ ಉತ್ತರ ನೀಡಿದ್ದಾರೆ.(ವಿಜಯ ಕರ್ನಾಟಕ, ಜುಲೈ ೧೮).

> **ಬಿಜೆಪಿ ಸರ್ಕಾರ ಚುನಾವಣೆಗೆ ಮುನ್ನ ನೀಡಿದ ಪ್ರಮುಖ ಭರವಸೆ ಎರಡು ರೂಪಾಯಿ ಕೆಜಿ ಅಕ್ಕಿ. ಮತ್ತು ಬಡತನ ರೇಖೆಗಿಂತ ಕೆಳಗಿರುವವರ ಕಡು ಬಡವರ ಆದಾಯ ಮಿತಿಯನ್ನು ೧೨೦೦೦ ರೂ ಗಳಿಂದ ೩೦,೦೦೦ಕ್ಕೇರಿಸುವುದು ಮತ್ತು ಬಡವರೆಂದು ಪರಿಗಣಿಸುವರ ಆದಾಯ ಮಿತಿಯನ್ನು ೩೦,೦೦೦ದಿಂದ ೬೦,೦೦೦ಕ್ಕೇರಿಸುವುದು, ಕಡುಬಡವರಿಗೆ ಕೆಜಿಗೆ ೨ರೂನಂತೆ ಅಕ್ಕಿ ಒದಗಿಸುವುದು, ಮತ್ತು ಬಡವರಿಗೆ ೩.೫೦ ರೂ ನಂತೆ ಅಕ್ಕಿ ಒದಗಿಸುವುದು. ಇದು ಬಿಜೆಪಿಯ ಭರವಸೆಯಾಗಿತ್ತು. ಇದರ ಬಗ್ಗೆ ಬಜೆಟ್ ಭಾಷಣದಲ್ಲಿ ಕಿಂಚಿತ್ತೂ ಪ್ರಸ್ತಾಪವೇ ಇಲ್ಲವಾಗಿರುವುದು ಏಕೆ? ಬಜೆಟ್ ಮರು ದಿನ ಈ ಬಗ್ಗೆ ಪ್ರಶ್ನಿಸಿದಾಗ ಮುಖ್ಯಮಂತ್ರಿಗಳು ಉಡಾಫೆ ಉತ್ತರ ನೀಡಿದ್ದಾರೆ**

ಅದೇನೇ ಇರಲಿ ಕಡುಬಡವರ ಮಿತಿಯನ್ನು ಏರಿಸಿ ರಿಯಾಯತಿ ದರದಲ್ಲಿ ಅಕ್ಕಿ ಕೊಡಲು ಆಗದಿರಲು ಕಾರಣವನ್ನು ಪರೋಕ್ಷವಾಗಿ ಅಲ್ಲಿ ಸೂಚಿಸಲಾಗಿದೆ. ಅಕ್ಕಿಯ ಬೆಲೆ ಇಪ್ಪತ್ತು ರುಪಾಯಿಯಲ್ಲ ಹನ್ನೆರಡೆ ರೂಪಾಯಿಗಳಿದ್ದರೂ ಮೊದಲಿನಂತೆ ರಿಯಾಯತಿ ದರದಲ್ಲಿ ಅಕ್ಕಿಯನ್ನು ಕೊಡಲು ಸಾಧ್ಯವಿರಲಿಲ್ಲ ಎಂಬುದೇ ಸತ್ಯ. ಈಗ ಬಡವರ ಅಕ್ಕಿಯ ಬಾಬತ್ತಿಗೆ ಸರ್ಕಾರ ಪ್ರತಿ ವರ್ಷ ೬೦೦ ಕೋಟಿ ರೂ.ಗಳನ್ನು ಕೊಡುತ್ತಿದೆ. ಆದರೆ ವಿಶ್ವಬ್ಯಾಂಕು ಆದೇಶ ಸ್ಪಷ್ಟ ಪಡಿಸುವಂತೆ ಈ ಸಬ್ಸಿಡಿ ೬೦೦ ಕೋಟಿಯಿಂದ ನಿಧಾನವಾಗಿ ಕಡಿಮೆಯಾಗುತ್ತಾ ಹೋಗಬೇಕು. ಅಂದರೆ ೨೦೦೧-೦೫ರ MTFP ಯಲ್ಲಿ ಸ್ಪಷ್ಟವಾಗಿ ನಿರ್ದೇಶನ ನೀಡಿರುವಂತೆ ಅಕ್ಕಿಗೆ ಕೊಡುತ್ತಿರುವ ಸಬ್ಸಿಡಿ ಕಡಿಮೆಯಾಗುತ್ತಾ ಹೋಗಿ ಅಂತಿಮವಾಗಿ ಶೂನ್ಯವಾಗಬೇಕು. ಆದ್ದರಿಂದಲೇ ೧೯೯೭ ರಲ್ಲೇ ಆಹಾರ ಸಬ್ಸಿಡಿಯನ್ನು ಕೇವಲ ಕಡುಬಡವರಿಗೆ ಮಾತ್ರ ಸೀಮಿತಗೊಳಿಸಬೇಕೆಂಬ ನೀತಿ ಜಾರಿಯಾಯಿತು. ಅದನ್ನು ೨೦೦೧ರ ನಂತರ ಇನ್ನೂ ಆಕ್ರಮಣಕಾರಿಯಾಗಿ ಕಡಿತವನ್ನು ಮುಂದುವರೆಸಿತು. MTFP ಯುಗ ಪ್ರಾರಂಭವಾದ ನಂತರ ಆಹಾರ, ವಸತಿ, ಸಾರಿಗೆ ಮತ್ತು ಕೈಗಾರಿಕೆಗಳ ಬಾಬತ್ತುಗಳಿಗೆ ಒಟ್ಟಾಗಿ ಕೊಡುತ್ತಿರುವ ಸಬ್ಸಿಡಿ ೨೦೦೭-೦೮ರ ಸಾಲಿನಲ್ಲಿ ೨೫೧೭ ಕೋಟಿ ರೂ ಇತ್ತು. ಅದನ್ನು ೨೦೦೮-೦೯ರ ಸಾಲಿಗೆ ೧೨೨೭ ಕೋಟಿಗೂ, ೨೦೦೯-೧೦ರ ಸಾಲಿನಲ್ಲಿ ೧೧೧೦ ಕೋಟಿಗೂ,೨೦೧೧-೧೨ರಸಾಲಿನಲ್ಲಿ ೧೧೦೮ ಕೋಟಿಗೂ ಇಳಿಸಬೇಕೆಂದು ತಾಕೀತು ಮಾಡಿದೆ. ಅಂದರೆ ಈ ಬಾಬತ್ತಿನಲ್ಲಿ ರಾಜ್ಯ ಅಂತರಿಕ ಉತ್ಪನ್ನದ ಶೇ.೧.೧೪ ರಷ್ಟಿರುವ ಸಬ್ಸಿಡಿಯನ್ನು ೨೦೧೨ರ ವೇಳೆಗೆ ೦.೩೦ಗೆ ಇಳಿಸಬೇಕು.ಅಂದರೆ ಬಿಜೆಪಿ ಸರ್ಕಾರ ಮೊದಲಿದ್ದ ಸಂಖ್ಯೆಗಿಂತ ಶೇ.೬೦ರಷ್ಟು ಇಳಿಸಬೇಕಿದೆ. ಹೀಗಾಗಿ ಆ ಮಿತಿಯನ್ನು ಜಾಸ್ತಿ ಮಾಡುವ ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸುವ ಸಾಧ್ಯತೆಯೇ ಇರಲಿಲ್ಲ. ಹೀಗಾಗಿ ಬಿಜೆಪಿ ಓಟನ್ನು ಪಡೆಯಲು ಜನರಿಗೆ ಸುಳ್ಳು ಹೇಳಿ ವಂಚಿಸಿದೆ ಎಂಬುದನ್ನೇ ಈ ಬಜೆಟ್ ಮತ್ತೊಮ್ಮೆ ಸಾಬೀತು ಮಾಡಿದೆ.

ಇವೆರಡು ಕೇವಲ ಮೂರು ಕ್ಷೇತ್ರಗಳ ಉದಾಹರಣೆಗಳಷ್ಟೆ. ಇದರಲ್ಲಿ ಸರ್ಕಾರದ ಒತ್ತು ಏನೆಂದು ಸ್ಪಷ್ಟವಾಗುತ್ತದೆ. ಬದಲಿಗೆ ಸರ್ಕಾರವು ಮೆಟ್ರೊ, ವಿಮಾನ ನಿಲ್ದಾಣ, ಫ್ಲೈ ಓವರ್, ಇನ್ನಿತ್ಯಾದಿ ಉದ್ಯಮಪತಿಗಳ ಅಗತ್ಯವನ್ನು ಹೈ ಪ್ರಿಯಾರಿಟಿ ಡೆವಲಪ್‌ಮೆಂಟ್ ಏರಿಯಾ ಎಂದು ನಿಗದಿಗೊಳಿಸಿಕೊಂಡಿದೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಖಾಸಗಿ ಮತ್ತು ವಿದೇಶಿ ಖಾಸಗಿ ಸಹಭಾಗಿತ್ವದ ಹೆಚ್ಚಳವನ್ನು ಮಾಡುತ್ತಿರುವುದನ್ನು ನೋಡಿದ್ದೇವೆ. ಬೆಂಗಳೂರಿನ ಅಭಿವೃದ್ಧಿಗೆಂದು ನೀಡಲಾಗಿರುವ ೧೮೦೦ ಕೋಟಿ ಹಣದಲ್ಲೂ ೭೦೦ ಕೋಟಿ ಮೆಟ್ರೊ ಯೋಜನೆಗೆ ಮತ್ತು ೪೦೦ ಕೋಟಿ ಫ್ಲೈ ಓವರ್ ಗಳಿಗೆ ಆಗಿದೆಯೇ ವಿನಃ ಬೆಂಗಳೂರಿನ ಬಡ ಮಧ್ಯಮ ವರ್ಗದವರ ಸೌಕರ್ಯಗಳಿಗಲ್ಲ. ಅದಕ್ಕೆ ಬೇಕಾಗಿರುವ ಹಣವನ್ನು ಈ ಮೊದಲು ಚರ್ಚಿಸಿದ ತೆರಿಗೆ ಮತ್ತು ತೆರಿಗೆಯೇತರ ಮಾರ್ಗಗಳಿಂದಲೂ ಮತ್ತು ಬಡ ಮಧ್ಯಮ ವರ್ಗದದವರಿಗೆ ಕೊಡುತ್ತಿದ್ದ ರಿಯಾಯತಿಯನ್ನು ಕಡಿತ ಮಾಡುವುದರಿಂದಲೂ ರೂಢಿಸಿಕೊಳ್ಳುತ್ತಿದೆ.

ಅಂದರೆ ಬಡ ಮಧ್ಯಮ ವರ್ಗದವರಿಂದ ಹಣವನ್ನು ಸುಲಿದು ಉದ್ಯಮಪತಿಗಳಿಗೆ ಅಗತ್ಯವಾದ ಸೌಕರ್ಯವನ್ನು ಒದಗಿಸುತ್ತಿದೆ. ಸಂಪನ್ಮೂಲವನ್ನು ಬಡವರಿಂದ ಶ್ರೀಮಂತರೆಡೆಗೆ ಹರಿಯುವಂತೆಮಾಡುವ ಮತ್ತು ದೇಶದ ಮೇಲೆ ವಿದೇಶಿ ಬಂಡವಾಳದ ಹಿಡಿತವನ್ನು ಹೆಚ್ಚಿಸುವ ಜನದ್ರೋಹಿ ಮತು ದೇಶದ್ರೋಹಿ ಆರ್ಥಿಕ ನೀತಿಯನ್ನೇ ಅನುಸರಿಸುತ್ತಿದೆ. ಈ ಬಜೆಟ್ಟು ಅದಕ್ಕೆ ಒಂದು ನಿದರ್ಶನವಷ್ಟೆ. ಹೀಗಾಗಿ ಬಿಜೆಪಿಯೂ ಸಹ ಇಂತಹ ಜನವಿರೋಧಿ, ರೈತ ವಿರೋಧಿ, ನೀತಿಗಳನ್ನು ದೊಡ್ಡ ಉದ್ಯಮಪತಿಗಳ ಪರವಾದ ನೀತಿಯನ್ನು ಪ್ರಾರಂಭಿಸಿದ ಕಾಂಗ್ರೆಸ್ ಪಕ್ಷ ಅಥವಾ ಇನ್ನಾವುದೇ ಪಕ್ಷಕ್ಕಿಂತಲೂ ಯಾವುದೇ ರೀತಿಯಲ್ಲೂ ಭಿನ್ನವಲ್ಲವೆಂಬುದನ್ನು ರುಜುವಾತು ಪಡಿಸಿಕೊಂಡಿದೆ.

ದುರಂತವೆಂದರೆ ಈ ಬಗೆಯ ಜನವಿರೋಧಿ ನೀತಿಗಳನ್ನು ಅನುಸರಿಸುವುದರಲ್ಲಿ ನಮ್ಮನ್ನಾಳುತ್ತಿರುವ ಯಾವ ರಾಜಕೀಯ ಪಕ್ಷಗಳಲ್ಲೂ ಯಾವುದೇ ರೀತಿಯ ವ್ಯತ್ಯಾಸಗಳಿಲ್ಲ. ನಾವು ಆಯ್ಕೆ ಮಾಡಿದ ಸರ್ಕಾರಗಳೇ ವಿದೇಶಿ ಮತ್ತು ಖಾಸಗಿ ಬಂಡವಾಳದ ಪರವಾಗಿ ಬಡ ಮಧ್ಯಮ ವರ್ಗದವರ ಮೇಲೆ ಯುದ್ಧ ಸಾರಿದೆ. ಹೀಗಾಗಿ ಜನರಿಗೆ ಸರ್ಕಾರಗಳು ಸ್ನೇಹಿತರಾಗಿ ಉಳಿದಿಲ್ಲ. ಬದಲಿಗೆ ತಮ್ಮಂತೆ ಶೋಷಿತರಾಗಿರುವ ಇತರ ಎಲ್ಲಾ ಶೋಷಿತ ವರ್ಗಗಳ ಜೊತೆಗೂಡಿ ಹೋರಾಡಿ ತಮ್ಮ ಹಕ್ಕುಗಳನ್ನು ಆಕ್ರಮಣಶೀಲ ಬಂಡವಾಳದಿಂದ ಕಾಪಾಡಿಕೊಳ್ಳಬೇಕಾಗಿದೆ. ಇದು ದುರಂತ. ಆದರೆ ಇದೇ ವಾಸ್ತವ. □

ಪ್ರಸವದ ನೋವಿನಲ್ಲಿ ನೇಪಾಳ; ಪ್ರತಿಗಾಮಿ ಮುಷ್ಟಿಯಲ್ಲಿ ಕರ್ನಾಟಕ

೨

ಕರ್ನಾಟಕದ ಪ್ರಗತಿಪರ ಚಳುವಳಿಗಳ ಸಂಘರ್ಷ ಮತ್ತು ವೈಫಲ್ಯದ ಕಥೆ

ಸಮಾಜದಲ್ಲಿನ ಚಿಕ್ಕ/ದೊಡ್ಡ ಬದಲಾವಣೆಗಾಗಿ ನಾನಾ ಸಂಘ ಸಂಸ್ಥೆಗಳಡಿ ಹಲವಾರು ಹೋರಾಟಗಳು ಈ ಕಾಲಾವಧಿಯಲ್ಲಿ ನಡೆದಿದ್ದರೂ ಕರ್ನಾಟಕದ ರಾಜಕಾರಣದ ಮೇಲೆ ಪ್ರಭಾವ ಬೀರಿದ ೬ ರೀತಿಯ ಚಳುವಳಿಗಳನ್ನು ಮುಖ್ಯವಾಗಿ ಗುರುತಿಸಬಹುದು. ಲೋಹಿಯಾ ಚಳುವಳಿ, ಏಕೀಕರಣ ಚಳುವಳಿ, ಕಮ್ಯುನಿಸ್ಟ್ ಚಳುವಳಿ, ದಲಿತ ಚಳುವಳಿ, ರೈತ ಚಳುವಳಿ ಮತ್ತು ನಕ್ಸಲೈಟ್ ಚಳುವಳಿ. ಈ ಎಲ್ಲಾ ಚಳುವಳಿಗಳೂ ತಮ್ಮದೇ ರೀತಿಯಲ್ಲಿ ಕರ್ನಾಟಕದ ಮುನ್ನಡೆಗೆ ತಮ್ಮ ಕೊಡುಗೆಯನ್ನು ನೀಡಿವೆ. ಆಯಾಕಾಲಘಟ್ಟದಲ್ಲಿ ಜನರನ್ನು ವೀರೋಚಿತ ಹೋರಾಟಗಳಲ್ಲಿ ತೊಡಗಿಸಿವೆ. ಆದರೆ ಮೂಲಭೂತ ಬದಲಾವಣೆಯನ್ನು ತರುವಲ್ಲಿ, ಆ ದಿಕ್ಕಿನೆಡೆ ಜನತೆಯ ಹೋರಾಟವನ್ನು ನಿರಂತರವಾಗಿ ಮುನ್ನಡೆಸಿಕೊಂಡು ಹೋಗುವುದರಲ್ಲಿ ವಿಫಲಗೊಂಡಿವೆ. ಇದಕ್ಕೆ ಕಾರಣಗಳೇನು?

ಸತ್ಯ

(ಕಳೆದ ಸಂಚಿಕೆಯಿಂದ ಮುಂದುವರೆದುದು)

ನೇಪಾಳಿ ಜನತೆಯಂತೆಯೇ ಕರ್ನಾಟಕದ ಜನತೆ ಇಲ್ಲಿನ ಆಳ್ವಿಕೆ ವಿರುದ್ಧ, ಅಸಮಾನತೆ ಹಾಗೂ ಶೋಷಣೆ ವಿರುದ್ಧ ಹೋರಾಡುತ್ತಾ ಬಂದಿದ್ದರೂ ಸರಿಯಾದ ಮೂಂಚೂಣಿ ಶಕ್ತಿಯ ಅನುಪಸ್ಥಿತಿಯಿಂದಾಗಿ ಅಮೂಲಾಗ್ರ ಬದಲಾವಣೆಗಳನ್ನು ತರಲು ಸಾಧ್ಯವಾಗಿಲ್ಲ. ಕರ್ನಾಟಕದ ಇತಿಹಾಸದ ಪರಿಚಯ ನಮ್ಮೆಲ್ಲರಿಗೂ ಇರುವುದರಿಂದ ಅದರ ವಿವರಗಳಿಗಿಲ್ಲಿ ಹೋಗುತ್ತಿಲ್ಲ. ಬದಲಿಗೆ ೧೯೫೬ ರ ನಂತರದ ಕರ್ನಾಟಕದ ಜನಪರ ಹೋರಾಟಗಳ ಇತಿಹಾಸವನ್ನು ಈ ಕೆಳಗಿನ ರೀತಿಯಲ್ಲಿ ಸಾರಸಂಗ್ರಹಿಸಿ ನೋಡಬಹುದು ಅನಿಸುತ್ತದೆ.

ಸಮಾಜದಲ್ಲಿನ ಚಿಕ್ಕ/ದೊಡ್ಡ ಬದಲಾವಣೆಗಾಗಿ ನಾನಾ ಸಂಘ ಸಂಸ್ಥೆಗಳಡಿ ಹಲವಾರು ಹೋರಾಟಗಳು ಈ ಕಾಲಾವಧಿಯಲ್ಲಿ ನಡೆದಿದ್ದರೂ ಕರ್ನಾಟಕದ ರಾಜಕಾರಣದ ಮೇಲೆ ಪ್ರಭಾವ ಬೀರಿದ ೬ ರೀತಿಯ ಚಳುವಳಿಗಳನ್ನು ಮುಖ್ಯವಾಗಿ ಗುರುತಿಸಬಹುದು. ಲೋಹಿಯಾ ಚಳುವಳಿ, ಏಕೀಕರಣ ಚಳುವಳಿ, ಕಮ್ಯುನಿಸ್ಟ್ ಚಳುವಳಿ, ದಲಿತ ಚಳುವಳಿ, ರೈತ ಚಳುವಳಿ ಮತ್ತು ನಕ್ಸಲೈಟ್ ಚಳವಳ. ಈ ಎಲ್ಲಾ ಚಳುವಳಿಗಳೂ ತಮ್ಮದೇ ರೀತಿಯಲ್ಲಿ ಕರ್ನಾಟಕದ ಮುನ್ನೆಡೆಗೆ ತಮ್ಮ ಕೊಡುಗೆಯನ್ನು ನೀಡಿವೆ. ಆಯಾಕಾಲಘಟ್ಟದಲ್ಲಿ ಜನರನ್ನು ವೀರೋಚಿತ ಹೋರಾಟಗಳಲ್ಲಿ ತೊಡಗಿಸಿವೆ. ಆದರೆ ಮೂಲಭೂತ ಬದಲಾವಣೆಯನ್ನು ತರುವಲ್ಲಿ, ಆ ದಿಕ್ಕಿನೆಡೆ ಜನತೆಯ ಹೋರಾಟವನ್ನು ನಿರಂತರವಾಗಿ ಮುನ್ನಡೆಸಿಕೊಂಡು ಹೋಗುವುದರಲ್ಲಿ ವಿಫಲಗೊಂಡಿವೆ. ಇದಕ್ಕೆ ಕಾರಣಗಳೇನು?

ಲೋಹಿಯಾ ಸಮಾಜವಾದ: ಲೋಹಿಯಾ ಸಮಾಜವಾದದ ಪ್ರಭಾವ ಹೊಂದಿದ್ದ ಕಾಗೋಡು ಹೋರಾಟ ೫೦ ರ ದಶಕದ ಕೊನೆ ಭಾಗದಲ್ಲಿ ನಡೆಯಿತು. ಗೇಣಿ ಪದ್ಧತಿ ವಿರುದ್ಧ ನಡೆದ ಈ ಹೋರಾಟ ಭೂ ಸಮಸ್ಯೆಯನ್ನು ಮುಂದೆ ತಂದಿತು. ಆ ಭಾಗದ ಹಿಂದುಳಿದ ಜಾತಿಗಳ ಜನರು ಮತ್ತು ಮಹಿಳೆಯರು ದೊಡ್ಡ ಮಟ್ಟದಲ್ಲಿ ಈ ಹೋರಾಟದಲ್ಲಿ ಪಾಲ್ಗೊಂಡರು. ಈ ಹೋರಾಟ ಬಡಜನರ ಸಮಸ್ಯೆಗಳತ್ತ ಗಮನ ಸೆಳೆದಿದ್ದಲ್ಲದೆ ಸಮಾಜವಾದಿ ನೆಲೆಯಲ್ಲಿ ಪ್ರಗತಿಪರ ಚಿಂತನೆಗಳು ಕರ್ನಾಟಕದಲ್ಲಿ ಬೆಳೆಯಲು ಕಾರಣವಾಯಿತು. ಕ್ರಿಯಾಶೀಲ ವಿದ್ಯಾರ್ಥಿ-ಯುವಜನರನ್ನು ಹೋರಾಟದತ್ತ ಆಕರ್ಷಿಸಿ ಜನಪರ ಚಿಂತಕರ ಬೆಳವಣಿಗೆಗೆ ಭೂಮಿಕೆ ಹಾಕಿಕೊಟ್ಟಿತು. ಲೋಹಿಯವಾದವು ಭಾರತದ ಜಾತಿಯಾಧಾರಿತ ಸಮಾಜದ ಬಗ್ಗೆ ಅರಿವನ್ನು ಬೆಳೆಸಿ, ಶೂದ್ರ ಪ್ರಜ್ಞೆ ಜಾಗೃತಗೊಳ್ಳುವುದರಲ್ಲೂ ಮುಖ್ಯ ಭೂಮಿಕೆಯನ್ನು ವಹಿಸಿತು. ಆದರೆ ವರ್ಗಗಳ ಪ್ರಾಮುಖ್ಯತೆಯನ್ನು ಅದು ಆಳಕ್ಕೆ ನೋಡಲಿಲ್ಲ. ಸಮಾಜವಾದದ ಪರಿಕಲ್ಪನೆಗಳನ್ನು ಪರಿಚಯಿಸಿದರೂ ಸಮಾಜವಾದವನ್ನು ತರುವುದು ಹೇಗೆ ಎಂಬ ಬಗ್ಗೆ ಸರಿಯಾದ ಗ್ರಹಿಕೆ ಇರಲಿಲ್ಲ. ಸಮಾಜವಾದ ಸ್ಥಾಪನೆಯಾಗಬೇಕಾದರೆ ಪ್ರಭುತ್ವದ ಚುಕ್ಕಾಣಿ ಜನಸಾಮಾನ್ಯರ ಕೈಗೆ ಬರಬೇಕು ಎಂಬ ಬಗ್ಗೆ ಅದು ಗಮನನೀಡಲಿಲ್ಲ. ಕರ್ನಾಟಕದ ಬುದ್ಧಿಜೀವಿಗಳು ಹಾಗೂ ಹೋರಾಟಗಾರರ ಮೇಲೆ ಪ್ರಭಾವ ಬೀರಿದ ಲೋಹಿಯಾ ಸಮಾಜವಾದ ಮುಂದೆ ಮೂಡಿ ಬಂದ ಹೋರಾಟಗಳ ಮೇಲೂ ತನ್ನ ಶಕ್ತಿ ಮತ್ತು ಮಿತಿಗಳಿಂದಾಗಿ ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ರೀತಿಯ ಪರಿಣಾಮವನ್ನು ಬೀರಿತು. ಅದರ ಕೆಲವು ಪ್ರಮುಖ ಮೂಂಚೂಣಿ ನಾಯಕರು ಆಳುವ ವರ್ಗದ ರಾಜಕೀಯದ ಭಾಗವಾಗಿ ಹೋದರು. ಇನ್ನು ಕೆಲವರು ತಮ್ಮ ತಮ್ಮ ರೀತಿಯಲ್ಲಿ ಜನಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ಮುಂದುವರಿಸಿದರು. ಆದರೆ ಇದು ಸಂಘಟಿತ ಶಕ್ತಿಯಾಗಿ ಮುಂದುವರಿಯಲಿಲ್ಲ.

ಕನ್ನಡ ಚಳುವಳಿ: ಹರಿದು ಹಂಚಿಹೋಗಿದ್ದ ಕನ್ನಡನಾಡನ್ನು ಒಟ್ಟು ಮಾಡಿ ಅದಕ್ಕೆ ಸ್ವತಂತ್ರ ಅಸ್ತಿತ್ವವನ್ನು ತಂದುಕೊಳ್ಳಲು ೬೦ರ ದಶಕದಲ್ಲಿ ಪ್ರಬಲವಾದ ಏಕೀಕರಣ ಚಳವಳಿ ನಡೆಯಿತು. ಕನ್ನಡ ಭಾಷೆ-ಸಂಸ್ಕೃತಿಗಳನ್ನು ರಕ್ಷಿಸಿ ಬೆಳೆಸುವುದು ಮತ್ತು ಕನ್ನಡಿಗರಿಗೆ ಸ್ವಯಂ ಆಳ್ವಿಕೆಯ ಅಧಿಕಾರವನ್ನು ದಕ್ಕಿಸಿಕೊಳ್ಳುವುದು ಅದರ ಹಿಂದಿದ್ದ ಆಶಯಗಳಾಗಿದ್ದವು. ಕನ್ನಡಿಗರ ಈ ಸ್ವಾಭಿಮಾನಿ ಹೋರಾಟಕ್ಕೆ 'ಸ್ವತಂತ್ರ' ಭಾರತ ನೀಡಿದ ಗುಂಡು, ಲಾಠಿ, ಬೂಟು, ಜೈಲಿನ ಕೊಡುಗೆಯನ್ನು ಕನ್ನಡಿಗರು ದಿಟ್ಟವಾಗಿಯೇ ಸ್ವೀಕರಿಸಿದರು. ನಾಡಿನ ಬಗ್ಗೆ, ನಾಡಿನ ಭಾಷೆ-ಸಂಸ್ಕೃತಿಗಳ ಬಗ್ಗೆ ಅಭಿಮಾನ, ಜಾಗೃತಿ ಮೂಡಿಸುವಲ್ಲಿ ಈ ಚಳುವಳಿ ಮುಖ್ಯ ಪಾತ್ರವಹಿಸಿತು. ಪ್ರತ್ಯೇಕ ಏಕೀಕೃತ ರಾಜ್ಯ ಅಸ್ತಿತ್ವಕ್ಕೆ ಬಂದಿತು. ಒಂದು ರೀತಿಯಲ್ಲಿ ಇದು ಜನತೆಯ ಹೋರಾಟಕ್ಕೆ ಸಿಕ್ಕ ಜಯವಾಗಿತ್ತು, ಮತ್ತೊಂದು ರೀತಿಯಲ್ಲಿ ಆಳುವವರು ಜನತೆಗೆ ಮಾಡಿದ ವಂಚನೆ ಸಹ ಆಗಿತ್ತು. ಕನ್ನಡ ನಾಡು ಏಕೀಕರಣಗೊಂಡು ಕರ್ನಾಟಕ ವಾಯಿತಾದರೂ ಅದರ ನೆಲ, ಜಲ, ಭಾಷೆ, ಸಂಸ್ಕೃತಿ ಮತ್ತು ಆರ್ಥಿಕತೆ ಮೇಲೆ ಅದಕ್ಕೆ ನಿಜವಾದ ಅಧಿಕಾರ ದೊರಕಲಿಲ್ಲ. ದಿಲ್ಲಿ ದೊರೆಗಳು ನಮ್ಮ ಭವಿಷ್ಯವನ್ನು ನಾವೇ ತೀರ್ಮಾನಿಸುವ ಅಧಿಕಾರವನ್ನು ಬಿಟ್ಟು ಕೊಡಲಿಲ್ಲ, ಅಖಿಲ ಭಾರತ ದೊಡ್ಡ ಬಂಡವಾಳಿಗರು ಮತ್ತು ಸಾಮ್ರಾಜ್ಯಶಾಹಿಗಳು ಕರ್ನಾಟಕವನ್ನು ಕೊಳ್ಳೆ ಹೊಡೆಯುವುದು ನಿಲ್ಲಲಿಲ್ಲ, ಇಂಗ್ಲಿಶ್-ಹಿಂದಿ-ಸಂಸ್ಕೃತಗಳ ಮೇಲಾಧಿಪತ್ಯ ಅಂತ್ಯಗೊಳ್ಳಲಿಲ್ಲ. ಬದಲಿಗೆ ಅದು ದಿನೇ ದಿನೇ ಹೆಚ್ಚಾಗುತ್ತಲೇ ಹೋಯಿತು. ಆಳುವವರ ಈ ವಂಚನೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಕನ್ನಡ ಚಳುವಳಿ ವಿಫಲಗೊಂಡಿತು. ನಂತರದ ದಿನಗಳಲ್ಲಿ ಕನ್ನಡ ಚಳುವಳಿ ತನ್ನ ದಿಕ್ಕನ್ನೇ ಕಳೆದುಕೊಂಡಿತು. ಮುಂದುವರಿದ ಮೇಲ್ಕಂಡ ಶೋಷಣೆಗಳ ವಿರುದ್ಧ ಹೋರಾಡುವ ಬದಲು, ದಿಲ್ಲಿಯನ್ನು ಗುರಿಮಾಡುವ ಬದಲು, ಅನ್ಯ ಭಾಷಿಗ ಸಾಮಾನ್ಯ ಜನರನ್ನೇ ಶತ್ರುಗಳನ್ನಾಗಿ ಕಾಣುವ, ನೆರೆ ಹೊರೆ ರಾಜ್ಯಗಳ ಜೊತೆ ಮಾತ್ರ ಜಗಳ ಕಾಯುವ ತಪ್ಪು ಧೋರಣೆ ಬೆಳೆಯತೊಡಗಿತು. ಸಾರಾಂಶದಲ್ಲಿ ಕನ್ನಡ ಚಳವಳಿ ಸರಿಯಾದ ನಾಯಕತ್ವವಿಲ್ಲದೆ ಹರಿದು ಹಂಚಿಹೋಗಿದ್ದಲ್ಲದೆ, ಹೆಚ್ಚಿನಪಾಲು ಗುರಿತಪ್ಪಿದ ಸಂಘಗಳಾಗಿ ಪರ್ಯಸನಗೊಂಡಿತು.

ಕಮ್ಯುನಿಸ್ಟ್ ಚಳುವಳಿ: ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ ದೊಡ್ಡ ಪ್ರಭಾವ ಬೀರಿಲ್ಲವಾದರೂ ದುಡಿಯುವ ಜನರನ್ನು ಸಂಘಟಿಸಿ ಹೋರಾಡುವುದರಲ್ಲಿ ಒಂದು ಮುಖ್ಯ ಪಾತ್ರವನ್ನು ವಹಿಸಿದೆ. ಹಲವಾರು ಕಾರ್ಖಾನೆಗಳಲ್ಲಿ, ಪ್ಲಾಂಟೇಶನ್‌ಗಳಲ್ಲಿ, ಹಳ್ಳಿ-ಪಟ್ಟಣಗಳಲ್ಲಿ ಮಾಲೀಕರ ವಿರುದ್ಧ ಅನೇಕ ಹೋರಾಟಗಳನ್ನು ನಡೆಸಿದೆ. ಆದರೆ ಸಿಪಿಐ-ಸಿಪಿಎಂ ಪಕ್ಷಗಳ ನೇತೃತ್ವದಲ್ಲಿ ನಡೆದ ಈ ಕಮ್ಯುನಿಸ್ಟ್

ಹೋರಾಟಗಳು ಕ್ರಮೇಣ ದಿಟ್ಟತನವನ್ನು ಕಳೆದುಕೊಂಡವು. ಹೋರಾಟಕ್ಕೆ ಸರಿಯಾದ ರಾಜಕೀಯ ಲಕ್ಷ್ಯ ಇಲ್ಲವಾಯಿತು. ಬಹುಪಾಲು ಸಾಂಕೇತಿಕ ಪ್ರತಿಭಟನೆ, ಪ್ರದರ್ಶನಗಳ ಹೋರಾಟಗಳೆ ಹೆಚ್ಚಾದವು. ಮಾಲೀಕರ ಜೊತೆ ಸಂಘರ್ಷ ನಡೆಸುವುದಕ್ಕಿಂತ ಸಾಮರಸ್ಯ ಸಾಧಿಸುವ ಗುಣ ಬೆಳೆಯತೊಡಗಿತು. ಹೊಸ ಚಿಂತನೆಯ, ದಿಟ್ಟ ನಿಲುವಿನ ಕೊರತೆ ಇದಕ್ಕೆ ಕಾರಣವಾಗಿತ್ತು. ಅಲ್ಲದೆ ಅದು ಹೆಚ್ಚಿನಪಾಲು ಸಂಘಟಿತ ವಲಯದ ಕಾರ್ಮಿಕರ ನಡುವೆ ಟ್ರೇಡ್ ಯೂನಿಯನ್ ಚಟುವಟಿಕೆ ನಡೆಸಲು ಗಮನ ನೀಡಿತಾಗಲೀ, ಅಸಂಘಟಿಯ ಕಾರ್ಮಿಕರನ್ನು, ವಿಶಾಲ ರೈತಾಪಿಯನ್ನು, ಅತ್ಯಂತ ದಮನಕ್ಕೊಳಗಾದ ದಲಿತರನ್ನು ಸಂಘಟಿಸಲು ತಲೆಕೆಡಿಸಿಕೊಳ್ಳಲಿಲ್ಲ. ಈ ನೆಲದ ವಾಸ್ತವತೆಗೆ ಕಿವಿಗೊಡಲಿಲ್ಲ. ಕಮ್ಯುನಿಸಂ ಬಗ್ಗೆ ಅದು ಮಾತನಾಡಿದರು ಅಂತಹ ಸಮಾಜಕ್ಕಾಗಿ ಸಂಘರ್ಷ ನಡೆಸುವ ಯಾವ ನಿರ್ದಿಷ್ಟ ಯೋಜನೆಗಳೂ ಅದಕ್ಕಿರಲಿಲ್ಲ. ಸಾರಾಂಶದಲ್ಲಿ ವಾಸ್ತವ ಬೇಡುತಿದ್ದ ರೀತಿಯಲ್ಲಿ ಜನರ ಮುಂಚೂಣಿ ಶಕ್ತಿಯಾಗಿ ಕಾರ್ಯನಿರ್ವಹಿಸಲಾಗದೆ ಬಲಹೀನ ಶಕ್ತಿಯಾಗಿ ಮಾತ್ರ ಮುಂದುವರಿಯುತ್ತಿದೆ.

ದಲಿತ ಚಳವಳಿ: ಕರ್ನಾಟಕದ ಮೇಲೆ ೭೦ರ ಮಧ್ಯ ಭಾಗದಿಂದ ೮೦ ರ ಮಧ್ಯ ಭಾಗದ ತನಕ ದಲಿತ ಚಳವಳಿ ಬೀರಿದ ಪರಿಣಾಮ ಮಹತ್ತರವಾದುದು. ಅದು ಕರ್ನಾಟಕದಲ್ಲಿನ ಜಾತಿ ವ್ಯವಸ್ಥೆಯ ಬುಡವನ್ನು ಬಲವಾಗಿ ಅಲುಗಾಡಿಸಿತೆಂದು ಹೇಳಬಹುದು. ದಲಿತ ಸಮುದಾಯದಲ್ಲಿ ಸ್ವಾಭಿಮಾನದ ತರಂಗವನ್ನದು ಬಡಿದೆಬ್ಬಿಸಿತು. ಹಳ್ಳಿಗಾಡಿನ ಭೂಮಾಲಿಕರಿಗೆ ಸಂತೃಪ್ತಿಯ ನಿದ್ದೆ ಇಲ್ಲದಂತೆ ಮಾಡಿತು. ಎಲ್ಲಾ ಕಡೆ ದಲಿತ ಯುವಕರು ಸಂಘಟಿತಗೊಂಡು ಜಾತಿ ದೌರ್ಜನ್ಯಗಳ ವಿರುದ್ಧ ಸಿಡಿದೆದ್ದರು. ಇತರೆ ಜಾತಿಗಳಲ್ಲಿದ್ದ ಪ್ರಗತಿಪರ ಶಕ್ತಿಗಳನ್ನು ಸೆಳೆದುಕೊಳ್ಳುವಷ್ಟು ಪ್ರಬಲವಾದ ಪ್ರಭಾವವನ್ನು ದಲಿತ ಚಳುವಳಿ ಬೀರಿತು. ಆದರೆ ವೇಗವಾಗಿ ಬೆಳೆದ ಚಳುವಳಿ ಅಷ್ಟೇ ವೇಗವಾಗಿ ಛಿದ್ರಗೊಂಡು ಕುಸಿತವನ್ನು ಅನುಭವಿಸಿತು. ಚಳವಳಿಗೆ ಐಕ್ಯ ಮತ್ತು ಸರಿಯಾದ ಸೈದ್ಧಾಂತಿಕ ಗ್ರಹಿಕೆ ಇಲ್ಲದೇ ಹೋದದ್ದು ಇದಕ್ಕೆ ಮುಖ್ಯ ಕಾರಣವಾಗಿತ್ತು. ಜಾತಿಯನ್ನು ಮಾತ್ರ ನೋಡುತ್ತಾ ವರ್ಗಗಳ ಪಾತ್ರವನ್ನು ನಿರ್ಲಕ್ಷಿಸಲಾಯಿತು. ಚಳುವಳಿಯನ್ನು ಮುಂದೆ ಹೇಗೆ ಒಯ್ಯಬೇಕು ಎಂಬ ಬಗ್ಗೆ ನಾಯಕತ್ವಕ್ಕೆ ಸರಿಯಾದ ಗ್ರಹಿಕೆ ಇರಲಿಲ್ಲ. ಅಲ್ಲದೆ ಕ್ರಮೇಣ ನಾಯಕತ್ವದಲ್ಲಿ ಸಾಮಾನ್ಯ ದಲಿತರ ಹಿತಾಸಕ್ತಿಗಿಂತ ತಮ್ಮ ಸ್ವಾರ್ಥ ಹಿತಾಸಕ್ತಿಗಳು ಬಲಗೊಳ್ಳತೊಡಗಿದವು. ಆಳುವ ಪಕ್ಷಗಳ ಅಂತರಾತ್ಮವನ್ನು ಅರಿಯಲು ನಾಯಕತ್ವ ವಿಫಲಗೊಂಡಿತು. ರಾಜಕೀಯ ಪಕ್ಷಗಳ ಚದುರಂಗದಾಟದೊಳಗೆ ಕಾಲಿಟ್ಟು ತನ್ನತನವನ್ನು ಉಳಿಸಿಕೊಳ್ಳಲಾಗದೆ ಸ್ವಯಂ ಛಿದ್ರಗೊಂಡಿತು. ಭ್ರಷ್ಟತನ-ರಾಜಿಕೋರತನ ವಿಷದಂತೆ ವ್ಯಾಪಿಸಿ ದಲಿತ ಚಳವಳಿಯ ಸತ್ವವನ್ನು ದುರ್ಬಲಗೊಳಿಸಿತು.

ರೈತ ಚಳುವಳಿ: ೮೦ ಮತ್ತು ೯೦ ರ ದಶಕದಲ್ಲಿ ರೈತ ಚಳುವಳಿಯು ಪ್ರಬಲ ವಿದ್ಯಮಾನವಾಗಿ ಮುಂದೆ ಬಂದಿತು. ಬಾಗಿದ್ದ ರೈತ ಬಾರುಕೋಲು ಹಿಡಿದು ವಿಧಾನಸೌಧಕ್ಕೆ ಲಗ್ಗೆ ಹಾಕುವ ಕೆಚ್ಚನ್ನು ಅದು ಮೂಡಿಸಿತು. ಅಧಿಕಾರಿಗಳನ್ನು, ಆಳುವವರನ್ನು ತರಾಟೆಗೆ ತೆಗೆದುಕೊಂಡ ಚಳುವಳಿ ಧೀರ ಹೋರಾಟಗಳಿಗೆ ಮುಂದಾಗುವಂತೆ ಜನಸಾಮಾನ್ಯರನ್ನು ಪ್ರೇರೇಪಿಸಿತು. ರೈತರ ಬದುಕಿನ ಮೇಲೆ ಆಕ್ರಮಣ ಪ್ರಾರಂಭಿಸಿದ್ದ ವಿದೇಶಿ ಕಂಪನಿಗಳ ವಿರುದ್ಧ, ಜಾಗತೀಕರಣದ ಷಡ್ಯಂತ್ರದ ಬಲವಾಗಿ ದನಿ ಎತ್ತಿತು. ರೈತರನ್ನು [ವಿಶೇಷವಾಗಿ ಶ್ರೀಮಂತ ಮತ್ತು ಮಧ್ಯಮ ರೈತರನ್ನು] ಸಂಘಟಿಸಿದರೂ ಭೂ ಹೀನ ಮತ್ತು ಬಡ ರೈತರನ್ನು ಒಳಗೊಳ್ಳುವಂಥ ಯೋಜನೆಗಳು ಅದರ ಮುಂದಿರಲಿಲ್ಲ. ರೈತ ಶಕ್ತಿಯನ್ನು ಕಾರ್ಮಿಕ-ದಲಿತ ಹಾಗೂ ಇತರೆ ದಮನಿತ ಜನ ಸಮುದಾಯಗಳ ಜೊತೆ ಸಮನ್ವಯಗೊಳಿಸುವ ಸ್ಪಷ್ಟತೆ ಇರಲಿಲ್ಲ. ಚಳುವಳಿಯನ್ನು ಮುಂದಕ್ಕೆ ಹೇಗೆ ಒಯ್ಯಬೇಕು ಎಂಬುದು ನಿಚ್ಚಳಗೊಳ್ಳಲಿಲ್ಲ. ರೈತರ ಕೈಗೆ ರಾಜ್ಯಾಧಿಕಾರ ತಂದುಕೊಳ್ಳಬೇಕೆಂದು ಚುನಾವಣೆಗಳಲ್ಲಿ ಭಾಗವಹಿಸುವ ನಿರ್ಧಾರ ತೆಗೆದುಕೊಳ್ಳಲಾಯಿತು. ಆದರೆ ಆಳುವವರ ಚುನಾವಣಾ ಮೋಡಿ ರೈತ ಸಂಘವನ್ನೇ ಒಡೆದುಹಾಕಿತು. ರೈತ ಸಂಘ ಮೊದಲಿನ ಹೋರಾಟದ ಗುಣವನ್ನು ಕಳೆದುಕೊಳ್ಳತೊಡಗಿ ದಿನೇ ದಿನೇ ಸಂಘಟನೆ ದುರ್ಬಲಗೊಂಡಿತು.

ನಕ್ಸಲೈಟ್ ಚಳುವಳಿ: ೯೦ ರ ದಶಕದ ಮಧ್ಯಭಾಗದಿಂದ ಮುಖ್ಯವಾಗಿ ೨೦೦೨ ರಿಂದ ನಕ್ಸಲೈಟ್ ಚಳುವಳಿ ಕರ್ನಾಟಕದ ರಾಜಕೀಯದಲ್ಲಿ ಚರ್ಚೆಗೆ ಬಂದಿತು. ೯೦ ರ ದ್ವಿತಿಯಾರ್ಧದಲ್ಲಿ ರಾಯಚೂರಿನ ಹಳ್ಳಿಗಳಲ್ಲಿ ಭೂಮಾಲೀಕರ ವಿರುದ್ಧ ನಕ್ಸಲೈಟರು ಬಡಜನರನ್ನು ಸಂಘಟಿಸಿ ಕೆಲವು ದಿಟ್ಟ ಹೋರಾಟಗಳನ್ನು ನಡೆಸಿದರು. ಆ ಭಾಗದ ಬಡಜನರಲ್ಲಿ ಅದು ಸ್ಪೂರ್ತಿಯ ಚಿಲುಮೆಯನ್ನು ಮೂಡಿಸಿತು. ಆದರೆ ಪೋಲಿಸರ ದೌರ್ಜನ್ಯಗಳ ಮೂಲಕ ಹೋರಾಟವನ್ನು ಹತ್ತಿಕ್ಕುವ ಪ್ರಕ್ರಿಯೆಯನ್ನು ಪ್ರಭುತ್ವ ಪ್ರಾರಂಭಿಸಿದ ನಂತರ ಅದನ್ನು ಎದುರಿಸಲಾಗದೆ ರಾಯಚೂರಿನ ಹಳ್ಳಿಗಳಲ್ಲಿ ನಡೆಯುತಿದ್ದ ಹೋರಾಟ ಕುಸಿಯಿತು. ನಂತರ ಮಲೆನಾಡಿನ ಆದಿವಾಸಿಗಳನ್ನಾಧರಿಸಿ ಈ ಶತಮಾನದ ಪ್ರಾರಂಭದಲ್ಲಿ ನಕ್ಸಲೈಟರು ಮತ್ತೆ ಸಶಸ್ತ್ರ ಹೋರಾಟವನ್ನು ಪ್ರಾರಂಭಿಸಿದರು. ಮಲೆನಾಡಿನ ಜ್ವಲಂತ ಸಮಸ್ಯೆಗಳನ್ನು ಈ ಹೋರಾಟ ಸಮಾಜದ ಮುಂದೆ ತಂದಿತು. ಪ್ರಭುತ್ವ ಮಾತು ಕತೆಯ ನಾಟಕವಾಡುತ್ತಲೇ ಚಿಗುರಿನಲ್ಲೇ ಈ ಹೋರಾಟವನ್ನು ಚಿವುಟಲು ಉಗ್ರಕ್ರಮಗಳನ್ನು ಕೈಗೆತ್ತಿಕೊಂಡಿತು. ಹಲವಾರು ಧೀರ ಯುವಕ-ಯುವತಿಯರು ಪೋಲೀಸರ ದೌರ್ಜನ್ಯಕ್ಕೆ ಬಲಿಯಾದರು. ಉನ್ನತ ಆಶಯಗಳಿಗಾಗಿ, ಅತ್ಯಂತ ಪ್ರಾಮಾಣಿಕತೆಯೊಂದಿಗೆ ಪ್ರಾರಂಭಿಸಿದ ಹೋರಾಟ ಇದಾಗಿತ್ತಾದರೂ ಜನರನ್ನೊಳಗೊಂಡ ಚಳುವಳಿಯಾಗಿ ಮಾರ್ಪಡಲಿಲ್ಲ. ವಿಶಾಲ ಜನರ ಮನಸ್ಥಿತಿಯನ್ನು, ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಸಶಸ್ತ್ರ ಚಳುವಳಿ ಬೆಳೆಸಲು ಹೋಗಿದ್ದು, ಕೆಲವರು ಕೆಚ್ಚಿನಿಂದ ಮುನ್ನುಗ್ಗಿದರೆ ಜನರು ಚಳುವಳಿಗೆ ಧುಮುಕಿಬಿಡುತ್ತಾರೆ ಎಂದು ಭ್ರಮಿಸಿದ್ದು, ಪ್ರಭುತ್ವದ ಶಕ್ತಿಯನ್ನು ಗೌಣಗೊಳಿಸಿ ನೋಡಿದ್ದು, ಸಶಸ್ತ್ರ ಹೋರಾಟ ಏಕೈಕ ಮಾರ್ಗ ಎಂದು ಇತರೆ ಹೋರಾಟದ ವಿಧಾನಗಳನ್ನು ನಿರ್ಲಕ್ಷಿಸಿದ್ದು ಇದರ ವೈಫಲ್ಯಕ್ಕೆ ಮುಖ್ಯ ಕಾರಣಗಳು.

೮೦ ಮತ್ತು ೯೦ ರ ದಶಕದಲ್ಲಿ ರೈತ ಚಳುವಳಿಯು ಪ್ರಬಲ ವಿದ್ಯಮಾನವಾಗಿ ಮುಂದೆಬಂದಿತು. ಬಾಗಿದ್ದ ರೈತ ಬಾರು ಕೋಲು ಹಿಡಿದು ವಿಧಾನಸೌಧಕ್ಕೆ ಲಗ್ಗೆ ಹಾಕುವ ಕೆಚ್ಚನ್ನು ಅದು ಮೂಡಿಸಿತು. ಅಧಿಕಾರಿಗಳನ್ನು, ಆಳುವವರನ್ನು ತರಾಟೆಗೆ ತೆಗೆದುಕೊಂಡ ಚಳುವಳಿ ಧೀರ ಹೋರಾಟಗಳಿಗೆ ಮುಂದಾಗುವಂತೆ ಜನ ಸಾಮಾನ್ಯರನ್ನು ಪ್ರೇರೇಪಿಸಿತು.

ಪ್ರಸ್ತುತ ಪರಿಸ್ಥಿತಿ ಮತ್ತು ಸವಾಲುಗಳು:

ಇಂದಿನ ಪರಿಸ್ಥಿತಿಗೆ ಬರುವುದಾದರೆ ಮೇಲ್ಕಂಡ ಯಾವುದೇ ಚಳುವಳಿಗಳು ಬಲವಾಗಿಲ್ಲ. ಎಲ್ಲವೂ ದುರ್ಬಲಗೊಂಡಿವೆ ಎಂದೇ ಹೇಳಬೇಕು. ಇದರರ್ಥ ಸಮಾಜದಲ್ಲಿ ಗಂಭೀರ ಸಮಸ್ಯೆಗಳಿಲ್ಲವೆಂದೋ, ಜನರು ಹೋರಾಟಕ್ಕೆ ಸಿದ್ಧರಿಲ್ಲವೆಂದೋ ಅಲ್ಲ. ಸಮಸ್ಯೆಗಳು ತೀವ್ರಗೊಳ್ಳುತ್ತಿವೆ, ಜನ ಬಿಡಿಬಿಡಿಯಾಗಿ ತಮಗೆ ತೋಚಿದ ಮಟ್ಟದಲ್ಲಿ ಪ್ರತಿಭಟಿಸುತಿದ್ದಾರೆ. ಆದರೆ ಅವರನ್ನು ಒಗ್ಗೂಡಿಸುವ, ಸರಿಯಾದ ಗುರಿಯನ್ನು ನೀಡುವ, ಸರಿಯಾದ ಮಾರ್ಗವನ್ನು ತೋರಿಸುವ ಸಂಘಟಿತ ಶಕ್ತಿ ಇಲ್ಲ ವಾಗಿದೆ. ಈ ಪರಿಸ್ಥಿತಿಯನ್ನು ಪ್ರತಿಗಾಮಿ ಶಕ್ತಿಗಳು ದುರ್ಲಾಭ ಮಾಡಿಕೊಳ್ಳುತ್ತಿವೆ. ಜನರ ಅತೃಪ್ತಿಯನ್ನು ಅಲ್ಪ ಸಂಖ್ಯಾತರತ್ತ ತಿರುಗಿಸಿ ತಮ್ಮ ಬಲವನ್ನು ಹೆಚ್ಚಿಸಿಕೊಳ್ಳುತ್ತಿವೆ. ಮೇಲ್ಜಾತಿ, ಮೇಲ್ವರ್ಗಗಳ ಪರವಾಗಿರುವ, ಪುರುಷ ಮೇಲಾಧಿಪತ್ಯದ ಸಂಸ್ಕೃತಿಯನ್ನು ಹೊಂದಿರುವ, ರಾಷ್ಟ್ರೀಯ ದುರಭಿಮಾನವನ್ನು ಉಸಿರನ್ನಾಗಿ ಮಾಡಿಕೊಂಡಿರುವ ಕೋಮುವಾದಿ ಶಕ್ತಿ ಈಗ ಅಧಿಕಾರದ ಚುಕ್ಕಾಣಿಯನ್ನೂ ಹಿಡಿದಿವೆ. ಈ ಪರಿಸ್ಥಿತಿಗೆ ಮೇಲಿನ ಎಲ್ಲಾ ಜನಪರ ಶಕ್ತಿಗಳ ವೈಫಲ್ಯ ಮುಖ್ಯ ಕಾರಣವಾಗಿದೆ ಎಂದೇ ಹೇಳಬೇಕಾಗುತ್ತದೆ.

ಮೇಲಿನ ಎಲ್ಲ ಹೋರಾಟಧಾರೆಗಳನ್ನು ಸೇರಿಸಿಕೊಂಡು 'ನಾವು' ಎಂದು ಸಂಬೋಧಿಸುವುದಾದರೆ, ನಾವು ಎಡವಿದ್ದು ಎಲ್ಲಿ ಎಂದು ಆತ್ಮಾವಲೋಕನ ಮಾಡಿಕೊಳ್ಳುವ ಸಂದರ್ಭ ನಮ್ಮ ಮುಂದಿದೆ. ನೇಪಾಳದ ಜನಪರ ಹೋರಾಟದ ಯಶಸ್ಸಿಗೆ ಕಾರಣವಾದ ಮೇಲೆ ಉಲ್ಲೇಖಿತ ಮುಖ್ಯ ಅಂಶಗಳನ್ನೂ ಹಿನ್ನೆಲೆಯಾಗಿಟ್ಟುಕೊಂಡು ಆಲೋಚಿಸುವುದಾದರೆ ನಮ್ಮ ವೈಫಲ್ಯಕ್ಕೆ ಈ ಕೆಳಗಿನ ೫ ಅಂಶಗಳನ್ನು ಮುಖ್ಯ ಕಾರಣಗಳನ್ನಾಗಿ ಗುರುತಿಸಬಹುದು.

೧. ನಾವು ನಮ್ಮ ಶತ್ರುಗಳು ಯಾರು, ನಮ್ಮ ಮಿತ್ರರು ಯಾರು ಎಂಬುದನ್ನೆ ಸರಿಯಾಗಿ ಗುರುತಿಸಿಕೊಳ್ಳಲಿಲ್ಲ. ಹಾಗಾಗಿಯೇ ಈ ಪ್ರಭುತ್ವ ಯಾರ ಪರ? ಈ ರಾಜಕೀಯ ಪಕ್ಷಗಳು ಯಾರ ಪರ? ವರ್ಗ ಶೋಷಣೆಗೂ, ಜಾತಿ ಶೋಷಣೆಗೂ, ರಾಷ್ಟ್ರೀಯತಾ ಶೋಷಣೆಗೂ, ಮಹಿಳಾ ಶೋಷಣೆಗೂ ಇರುವ ಅವಿನಾಭಾವ ಸಂಬಂಧವೇನು? ಎಂಬುದನ್ನು ಆಳವಾಗಿ ಆಲೋಚಿಸಲಿಲ್ಲ. ಈ ಎಲ್ಲಾ ಶೋಷಣೆಗಳು ಇಲ್ಲದಿರುವಂಥ ಸಮಾಜ ಬರ ಬೇಕಾದರೆ ಇಂದಿನ ವ್ಯವಸ್ಥೆಯಲ್ಲಿ ಬರಬೇಕಾದ ಮೂಲಭೂತವಾದ ಮತ್ತು ರಾಚನೀಕವಾದ ಬದಲಾವಣೆಗಳೇನು? ಅಂತಹ ಬದಲಾವಣೆಗಳನ್ನು ತರುವಲ್ಲಿ ಯಶಸ್ವಿಯಾಗಬೇಕಾದರೆ ಯಾವ ರೀತಿಯ ಚಳುವಳಿ ಕಟ್ಟಬೇಕು? ಹೋರಾಟ ಮಾರ್ಗಗಳು ಏನಾಗಿರಬೇಕು? ಮುಂತಾದ ಪ್ರಶ್ನೆಗಳಿಗೆ ಸರಿಯಾದ ಮತ್ತು ಸಮಗ್ರವಾದ ಉತ್ತರವನ್ನು ಕಂಡುಕೊಳ್ಳಲಿಲ್ಲ. ಸಾರಾಂಶದಲ್ಲಿ ಸೈದ್ಧಾಂತಿಕ ಅಸ್ಪಷ್ಟತೆಗಳು, ಗೊಂದಲಗಳು ನಮ್ಮಲ್ಲಿ ಮನೆಮಾಡಿದ್ದವು.

ಈಗಿರುವ ವ್ಯವಸ್ಥೆಯೇ [illegible] ಎಂದು [illegible] ಬಿಟ್ಟು ಕೊಂಡೆವು. ಪ್ರಜಾಪ್ರಭುತ್ವದ ಮುಸುಕಿನಲ್ಲಿ ಬಲಾಢ್ಯ ಶಕ್ತಿಗಳೆ ಆಳ್ವಿಕೆ ಮಾಡುತ್ತಿರುವುದನ್ನು ನಾವು ಗಮನಿಸಿದರೂ ಅದಕ್ಕೆ ಕಾರಣ ಈ ತಥಾಕಥಿತ ಪ್ರಜಾಪ್ರಭುತ್ವ ವ್ಯವಸ್ಥೆಯ ರಚನೆಯಲ್ಲೆ ಇದೆ ಎಂಬುದನ್ನು ಗುರುತಿಸಲಿಲ್ಲ. ಈ ಸಂಸದೀಯ ವ್ಯವಸ್ಥೆಯನ್ನೇ ಅಂತಹವರು ಮಾತ್ರ ಗೆಲ್ಲಲು, ಉಳಿಯಲು, ಕಬಳಿಸಲು ಸಾಧ್ಯವಾಗುವಂತೆ ರೂಪಿಸಲಾಗಿದೆ ಎಂಬ ಸತ್ಯವನ್ನು ಕಂಡುಕೊಳ್ಳುವಲ್ಲಿ ವಿಫಲರಾದೆವು. ಪ್ರಾಮಾಣಿಕರು ಅದರಲ್ಲಿ ಹೋಗಿ ಭಾಗವಹಿಸಿದರೆ ಬದಲಾವಣೆ ತರಬಹುದು ಎಂದು ಭ್ರಮಿಸಿದೆವು. ನಮ್ಮ ಪರಿಸ್ಥಿತಿಯನ್ನು, ಆಳುವವರ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಚುನಾವಣಾ ರಾಜಕೀಯದಲ್ಲಿ ಧುಮುಕಿದೆವು. ಮಳೆ ಹುಳುಗಳಂತೆ ಬೆಂಕಿಯತ್ತ ಆಕರ್ಷಿತಗೊಂಡು ರೆಕ್ಕೆ ಪುಕ್ಕ ಸುಟ್ಟುಕೊಂಡೆವು. ಆದರೆ ಪಾಠ ಕಲಿಯದೆ ಮತ್ತೆ ಮತ್ತೆ ಅದನ್ನೇ ಮಾಡುತ್ತಾ ಹೋದೆವು. ಈ 'ಸೋಗಲಾಡಿ ಪ್ರಜಾಪ್ರಭುತ್ವ'ವನ್ನು ಬದಲಾಯಿಸಿ ಬಹುಸಂಖ್ಯಾತ ದಮನಿತರ ಕೈಗೆ ಮುಂಚೂಣಿ ಅಧಿಕಾರ ದಕ್ಕುವಂತಹ ಪರ್ಯಾಯ 'ನೈಜ ಪ್ರಜಾತಂತ್ರ' ವ್ಯವಸ್ಥೆಯನ್ನು ರೂಪಿಸುವುದು ಹೇಗೆ ಎಂಬ ಅತ್ಯಂತ ಪ್ರಮುಖವಾದ ಪ್ರಶ್ನೆಯನ್ನು ನಾವು ಹಾಕಿಕೊಳ್ಳಲೇ ಇಲ್ಲ.

೩. ನಮ್ಮಲ್ಲಿ ಒಂದೊಂದು ಚಳುವಳಿ ಒಂದೊಂದು ದಮನಿತ ಸಮುದಾಯವನ್ನು ಸಂಘಟಿಸುವಲ್ಲಿ ಕಾರ್ಯ ನಿರ್ವಹಿಸಿದರೂ ವಿವಿಧ ರೀತಿಯ ತಾರತಮ್ಯ ಮತ್ತು ಶೋಷಣೆಗೆ ಗುರಿಯಾಗಿರುವ ಜನರನ್ನು, ವಿವಿಧ ಹೋರಾಟದ ಧಾರೆಗಳನ್ನು ಒಗ್ಗೂಡಿಸಲು ಗಮನ ನೀಡಲಿಲ್ಲ. ಎಲ್ಲರ ಶೋಷಣೆಗೂ ಕಾರಣವಾಗಿರುವ ಸಾಮಾನ್ಯ ಶತ್ರುಗಳ ವಿರುದ್ಧ ಸಂಘಟಿತರಾಗಿ ಹೋರಾಡಲು ಅಗತ್ಯವಿರುವ ಸಾಮಾನ್ಯ ಕಾರ್ಯಕ್ರಮವನ್ನು ರೂಪಿಸಿಕೊಂಡು ಅದರ ಆಧಾರದ ಮೇಲೆ ಒಗ್ಗೂಡಲು, ಆ ಮೂಲಕ ಶತ್ರುವನ್ನು ದುರ್ಬಲಗೊಳಿಸಲು ಮತ್ತು ನಮ್ಮನ್ನು ಬಲಗೊಳಿಸಿಕೊಳ್ಳಲು ಪ್ರಯತ್ನ ಮಾಡಲಿಲ್ಲ.

೪. ಒಬ್ಬೊಬ್ಬರು ಒಂದೊಂದು ಸಿಧ್ಧಾಂತವನ್ನು, ಹೋರಾಟದ ವಿಧಾನವನ್ನು ಎತ್ತಿಹಿಡಿಯುತ್ತಾ ಅದೇ ಸರಿ ಎಂದು ವಾದಿಸಿದೆವು, ಮಡಿವಂತಿಕೆ ತೋರಿಸಿದೆವು. ಎಲ್ಲಾ ಸಿದ್ಧಾಂತಗಳಲ್ಲಿರುವ ಜನಪರ ಅಂಶವನ್ನು ಮುಕ್ತವಾಗಿ ಸ್ವೀಕರಿಸುವ ವಿಶಾಲತೆಯನ್ನು ಪ್ರದರ್ಶಿಸಲಿಲ್ಲ. ಹಾಗೆಯೇ ಪ್ರಜಾ ಚಳುವಳಿಯನ್ನು ಮುಂದಕ್ಕೆ ಒಯ್ಯಲು ಎಲ್ಲಾ ರೀತಿಯ ಹೋರಾಟ ಮಾರ್ಗಗಳೂ ಅಗತ್ಯ ಎಂಬುದನ್ನು ಗುರುತಿಸಲಿಲ್ಲ. ಜನರ ಸಿದ್ಧತೆಯನ್ನು, ಹೋರಾಟದ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು, ವಸ್ತುಸ್ಥಿತಿಯ ಸಾಧ್ಯತೆಯನ್ನು, ಅದಕ್ಕೆ ತಕ್ಕ ಹೋರಾಟಗಳನ್ನು ಅನ್ವಯಿಸುವ ಜಾಣ್ಮೆ, ದಿಟ್ಟತನವನ್ನು ತೋರಲಿಲ್ಲ.

೫. ನಿಸ್ವಾರ್ಥವಾಗಿ ಜನಹಿತಕ್ಕೆ ಬದ್ಧವಾಗಿದ್ದು ಕೆಲಸ ಮಾಡಬಲ್ಲಂತಹ, ಪ್ರಾಮಾಣಿಕ, ಧೀರ ಮತ್ತು ಶಿಸ್ತಿನ ಸಂಘಟನೆಯನ್ನು ಕಟ್ಟುವ ವಿಚಾರದಲ್ಲಿ ಹಲವು ತಪ್ಪುಗಳನ್ನು ಎಸಗಿದೆವು. ವಿಶೇಷವಾಗಿ ಆಸ್ತಿ ಮತ್ತು ಅಧಿಕಾರದ ಅಮಲು ನಾಯಕತ್ವದಲ್ಲಿ ಬೆಳೆಯದಂತೆ ಕಟ್ಟೆಚ್ಚರ ವಹಿಸಲಿಲ್ಲ. ಹಾಗಾಗಿಯೆ ಹಲವಾರು ಸಂದರ್ಭಗಳಲ್ಲಿ ಚಳವಳಿ ಬೆಳೆಸಿದ ನಾಯಕರುಗಳೆ ಚಳುವಳಿಯ ಮುಳುಗಡೆಗೆ ಕಾರಣರಾದರು. ಇವು ಕರ್ನಾಟಕದಲ್ಲಿ ಜನಪರ ಚಳುವಳಿ ಬೆಳೆಯಲು ಅಡ್ಡಿಯಾದ ಪ್ರಮುಖ ಅಂಶಗಳು.

ಈ ತಪ್ಪುಗಳನ್ನು ಗುರುತಿಸಿಕೊಳ್ಳುವ ಉದ್ದೇಶ ಅದರ ಪಾಠಗಳನ್ನು ಹೆಕ್ಕಿಕೊಂಡು ಸರಿಯಾದ ಹಾದಿಯಲ್ಲಿ ಹೋರಾಟವನ್ನು ಕಟ್ಟುವತ್ತ ಮುಖಮಾಡಬೇಕು ಎಂಬುದು. ನಮ್ಮ ಪೂರ್ವಜರು ತಮ್ಮ ತಮ್ಮ ಮಿತಿಗಳಲ್ಲಿ ಈ ಸಮಾಜದ ಅನ್ಯಾಯಗಳ ವಿರುದ್ಧ ಹೋರಾಡಿದ್ದಾರೆ, ಅತ್ಯಂತ ತೀವ್ರತರನಾದ ಕಷ್ಟಗಳನ್ನು ಅನುಭವಿಸಿದ್ದಾರೆ. ಅವರ ಹೋರಾಟ ಮತ್ತು ಚಿಂತನೆಗಳಲ್ಲಿದ್ದ ಸತ್ವ ಮತ್ತು ಶಕ್ತಿಯಿಂದಾಗಿಯೇ ಸಮಾಜದಲ್ಲಿ ಕೆಲವು ಬದಲಾವಣೆಗಳಾದರೂ ಬಂದಿವೆ. ಅವರ ಶ್ರಮ ಮತ್ತು ಸಾಧನೆಯನ್ನು ಗೌರವದಿಂದ ನಾವು ಗುರುತಿಸಬೇಕು. ಆದರೆ ಅದೇ ಸಮಯದಲ್ಲಿ ಅವರ ಆಲೋಚನೆ ಮತ್ತು ಕೆಲಸದಲ್ಲಿದ್ದ ಮಿತಿಗಳಿಂದಾಗಿಯೇ ಆಮೂಲಾಗ್ರ ಬದಲಾವಣೆಯತ್ತ ಚಳುವಳಿಗಳನ್ನು ಬೆಳೆಸಲು ಸಾಧ್ಯವಾಗಲಿಲ್ಲ ಎಂಬ ವಾಸ್ತವವನ್ನೂ ಗುರುತಿಸಿಬೇಕು. ದುರಂತವೆಂದರೆ ಒಂದು ಕಾಲದಲ್ಲಿ ಜನರ ಹೋರಾಟಕ್ಕೆ ನಾಯಕತ್ವ ನೀಡಿದ್ದ ಹಲವರು ತಮ್ಮಲ್ಲಿದ್ದ ಹೋರಾಟಗಾರನನ್ನು ಕಳೆದುಕೊಂಡು ಶೋಷಕರ ಮೇಳದಲ್ಲಿ ಸೇರಿ ಮೆರವಣಿಗೆ ಹೊರಟಿದ್ದಾರೆ. ಅಂತಹವರಿಂದ ಮತ್ತೆ ಸರಿದಾರಿಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಪರಿಸ್ಥಿತಿಯಿಂದ ಬೇಸತ್ತು ಕೈಕಟ್ಟಿ ಕೂರುವಂತೆಯೂ ಇಲ್ಲ. ಪ್ರಾಮಾಣಿಕತೆ, ಹೋರಾಟದ ಕೆಚ್ಚು, ನಿಜವಾದ ಜನಪರ ಕಾಳಜಿಯನ್ನು ಉಳಿಸಿಕೊಂಡಿರುವ ಹೋರಾಟಗಾರರು ಹಳೆಯದರಿಂದ ಕಲಿಯುತ್ತಾ ಹೊಸ ಹಾದಿಯ ಅನ್ವೇಷಣೆಯಲ್ಲಿ ತೊಡಗಬೇಕಿದೆ.

'ನಮ್ಮ' ವೈಫಲ್ಯಕ್ಕೆ ಕಾರಣವಾದ ಪ್ರಮುಖ ಅಂಶಗಳಿಂದ ನಾವು ಕಲಿಯಬೇಕು ಎಂಬುದರ ಅರ್ಥ; ಶತ್ರುಗಳನ್ನು ಮತ್ತು ಮಿತ್ರರನ್ನು ಸರಿಯಾಗಿ ಗುರುತಿಸುವುದು. ಜಗತ್ತಿನ ಶತ್ರುಗಳಾದ ಸಾಮ್ರಾಜ್ಯಶಾಹಿಗಳು, ನುಂಗುಬಾಕ ದೊಡ್ಡ ದೊಡ್ಡ ಬಂಡವಾಳ ಶಾಹಿಗಳು, ಜನದ್ರೋಹಿ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳು, ಊಳಿಗಮಾನ್ಯ ಭೂಮಾಲೀಕರು ನಮ್ಮ ಶತ್ರುಗಳು ಎಂಬುದನ್ನು ನಾವೆಲ್ಲರೂ ಗುರುತಿಸುವುದು. ಜನರನ್ನು ಹಿಂಸಿಸುತ್ತಿರುವ ಬಡತನಕ್ಕೆ, ಜಾತಿವಾದಕ್ಕೆ, ಕೋಮುವಾದಕ್ಕೆ, ಪುರುಷ ದುರಭಿಮಾನಕ್ಕೆ, ದಿಲ್ಲಿಯ ದಬ್ಬಾಳಿಕೆಗೆ ಇವರೆ ಕಾರಣರು ಎಂಬುದನ್ನು ಮನಗಾಣುವುದು. ಪಕ್ಷದ ಬಣ್ಣ ಬದಲಾದರೂ ಅಂತಿಮವಾಗಿ ಇವರ ಹಿತಾಸಕ್ತಿಗೆ ಅಡ್ಡಿಯಾಗದಂತೆ, ಇವರ ಪರವಾಗಿರುವ ಶಕ್ತಿಗಳೆ ಅಧಿಕಾರದಲ್ಲಿರುವಂತೆ ಈ ವ್ಯವಸ್ಥೆಯನ್ನು ರಚಿಸಲಾಗಿದೆ ಎಂಬುದನ್ನು ಗುರುತಿಸುವುದು. ಈ ಸಮಾಜದಲ್ಲಿ ಅಮೂಲಾಗ್ರ ಬದಲಾವಣೆ ಬರಬೇಕಾದರೆ ಬಹುಸಂಖ್ಯಾತರಾದ ಜನಸಾಮಾನ್ಯರೆ ಆಳುವವರಾಗಿರುವಂಥ ನಿಜವಾದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಿರ್ಮಿಸುವುದನ್ನು ಹೋರಾಟದ ಪ್ರಧಾನ ಗುರಿಯಾಗಿ ಮಾಡಿಕೊಳ್ಳುವುದು. ವಿವಿಧ ರೀತಿಯಲ್ಲಿ ಶೋಷಣೆಗೆ ಗುರಿಯಾಗಿರುವ ದಮನಿತ ಜನ ಸಮುದಾಯಗಳನ್ನು ಆಯಾ ರೂಪದ ಶೋಷಣೆಯ ವಿರುದ್ಧ ಪ್ರತ್ಯೇಕವಾಗಿಯೂ ಸಂಘಟಿಸುವುದು, ಸಮಾನ ಶತ್ರುಗಳ ವಿರುದ್ಧ ಸಮಾನ ಗುರಿಗಾಗಿ ಮುಷ್ಠಿಯಂತೆಯೂ ಒಗ್ಗೂಡಿಸುವುದು. ಅದಕ್ಕಾಗಿ ಸದಾ ಜನಹಿತಕ್ಕೆ ಬದ್ಧವಾಗಿರುವಂತಹ, ದಿಟ್ಟ ಮತ್ತು ಶಿಸ್ತಿನ ಸಂಘಟನೆಯನ್ನು ಕಟ್ಟುವುದು. ಮುಖ್ಯವಾಗಿ ಇದನ್ನು ಮಾಡುವುದು ಹೇಗೆ ಎಂಬ ಗಂಭೀರ ಚರ್ಚೆಯನ್ನು ಅಷ್ಟೇ ಗಂಭೀರತೆ ಯೊಂದಿಗೆ ಕೈಗೆತ್ತಿಕೊಳ್ಳುವುದು ನಾವಿಂದು ಮಾಡ ಬೇಕಿ ರುವ ಮೊಟ್ಟಮೊದಲ ಕೆಲಸವಾಗಿದೆ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಎಲ್ಲರೂ ಸಭ್ಯರೇ ಇಲ್ಲಿ..



ಎಲ್ಲರೂ ಸಭ್ಯರೇ ಇಲ್ಲಿ
ನಂಜು ನಾಲಿಗೆಯ ಶಬ್ದ ಶೂರರು
ಚೂರಿ ಕೈಗಳ ರಕ್ತರಂಜಿತ
ವರ್ಣಚಿತ್ರ ಕುಶಲಗಾರರು.

ಮುಂಜಾನೆ ಕಣ್ಣ ಕೆಂಡದಲ್ಲಿ
ಪರಸ್ಪರ ಸುಟ್ಟುಕೊಳ್ಳುವರು
ನಡು ಹಗಲಿಗೆ ಮತ್ತೇರಿ
ದಾರಿಗಳ ತಿರುವು ಮುರುವು ಮಾಡುವರು

ಸಂಜೆಗೆ ತಮ್ಮದೇ ಬಣ್ಣ ಬಳಿಯುವರು
ಬಾನಿಗೆ ತಮ್ಮದೇ ನಕ್ಷತ್ರ ಅಂಟಿಸುವರು
ತಮ್ಮ ಚಂದ್ರನ ಕರೆದು ತಂಪು ನೀಡಲು ಆಜ್ಞಾಪಿಸುವರು
ಚಂಚಲೆಯರ ತೊಡೆಯಲ್ಲಿ ನಿರಾಳ ಸ್ಖಲಿಸುವರು.

ನಟ್ಟಿರುಳಲ್ಲಿ ಹಗಲ ಸೃಷ್ಟಿಸುವರು
ಗುಟ್ಟಿನ ಸಂದಿಗಳಲ್ಲಿ ಗುಟ್ಟಾಗಿ ಅಲೆಯುವರು
ಜಾವಕ್ಕೆ ಸರಿಯಾಗಿ ಮನೆಯ ಸೇರುವರು
ಭಾವಕ್ಕೆ ಸರಿಯಾಗಿ ವೇಷ ಧರಿಸುವರು

ಭಕ್ತಿ ಗೀತೆಗಳಲ್ಲಿ ಅನವರತ ತಲ್ಲೀನರು
ದೇವರಿಗೆ ಮಂಕು ಕವಿದಂತೆ ಗಾನಗೈಯುವರು
ಸ್ವರ್ಗದ ಅಸಲೀ ವಾರಸುದಾರರು
ಇಲ್ಲಿ ನರಕದ ಖಾಯಂ ಸೃಷ್ಟಿಕರ್ತರು

ಹಲವು ಕೊಲೆಗಳ ಕೈಯಲ್ಲಿ ಶಾಂತ ಚಿತ್ತವನಿರಿಸುವರು
ಸುಲಿಗೆಗಳ ಬಗೆಯಲ್ಲಿ ಅತಿ ಚತುರರು
ಸರ್ವ ಭಾಷಾ ಪಾರಂಗತರು, ಸರ್ವ ದೇಶ ಸಂಚಾರಿಗರು
ಬಗೆ ಬಗೆಯ ಪೋಷಾಕಿನಲಿ ಮಿಂಚಿ ಮೆರೆಯುವರು
ಇಲ್ಲಿ ಎಲ್ಲರೂ ಸಭ್ಯರು
ನಾನು ಕೂಡ

○ ಚಂದ್ರಶೇಖರ ತಾಳ್ಯ

ವಾಸ್ತವದ ಭೂತ ಕಾಡಿದಾಗ

ಕಥೆ

ನರಸಯ್ಯನ ಹುಂಡಿಗೆ ಹೋಗಿ ವರ್ಷಗಳೇ ಕಳೆದಿತ್ತು. ಒಮ್ಮೆ ಹಳ್ಳಿಯನ್ನು ತೊರೆದು, ನಗರದ ಐಷಾರಾಮಿ ಜೀವನಕ್ಕೆ ಒಗ್ಗಿಹೋದವರಿಗೆ ಗ್ರಾಮೀಣ ಬದುಕೇ ಪರಕೀಯವೆನಿಸುತ್ತದೆ ಎಂಬ ಸಮಾಜ ಶಾಸ್ತ್ರಜ್ಞರ ತರ್ಕ ನಿಜವೇನೋ ಎನಿಸಿತ್ತು. ಇಪ್ಪತ್ತೈದು ವರ್ಷಗಳಾಗಿವೆ, ಮೂಲ ಬೇರು-ಕೊಂಡಿಗಳನ್ನು ಕಿತ್ತುಹಾಕಿ. ಅಪ್ಪ ಮಾಡಿಟ್ಟಿದ್ದ ಜಮೀನನ್ನು ಮಾರುವಾಗ ಬಂದ ಕಣ್ಣೀರು ಬೆಂಗಳೂರಿನ ಕಾಂಕ್ರೀಟ್ ಕಾಡಿನ ಯಾವುದೋ ಮೂಲೆಯಲ್ಲಿ ಮರೆಯಾಗಿಹೋಗಿತ್ತು. ತಪ್ಪು ನನ್ನದಾಗಿರಲಿಲ್ಲ ಎನ್ನುವುದೊಂದೇ ಸಮಾಧಾನ. ಒಬ್ಬನೇ ಮಗ, ಚೆನ್ನಾಗಿ ಓದಲಿ ಎಂದು ಹಳ್ಳಿಯ ಪರಿಸರದಿಂದ ದೂರವಿಟ್ಟು ನಗರದ ಹಾಸ್ಟೆಲುಗಳಲ್ಲಿ, ನಂತರ ಮನೆಗಳಲ್ಲಿ ಓದಲು ಬಿಟ್ಟಿದ್ದು ಅಪ್ಪನೇ ಅಲ್ಲವೇ? ನನಗೂ ಆಗ ಹಳ್ಳಿಗಾಡಿನಲ್ಲಿ ಓದುತ್ತಿದ್ದಾಗಲೇ ದೇಶದಲ್ಲಿ ನಡೆಯುತ್ತಿದ್ದ ವಿದ್ಯಮಾನಗಳ ಬಗ್ಗೆ ತೀವ್ರ ಕುತೂಹಲ. ಊರಿಗೆಲ್ಲಾ ನಮ್ಮನೆಯಲ್ಲಿ ಮಾತ್ರ ಪೇಪರ್ ಬರುತ್ತಿದ್ದುದು ನನ್ನ ಸಾಮಾನ್ಯ ಜ್ಞಾನ ವೃದ್ಧಿಗೆ ಸಹಾಯಕವೂ ಆಗಿತ್ತು. ತುರ್ತು ಪರಿಸ್ಥಿತಿ, ಇಂದಿರಾ ಗಾಂಧಿಯವರ ದಮನಕಾರಿ ರಾಜಕೀಯ, ಜೆ.ಪಿ ಚಳುವಳಿ ಇವೆಲ್ಲವೂ ನಗರ ಪಟ್ಟಣಗಳಿಗೇ ಸೀಮಿತವಾಗಿತ್ತು. ನಾನೂ ನಗರದಲಿದ್ದಿದ್ದರೆ ಈ ಚಳುವಳಿಗಳಲ್ಲಿ ಭಾಗವಹಿಸಬಹುದಿತ್ತೇನೋ ಎಂಬ ಹುಚ್ಚು ಹಂಬಲ ಆಗಲೇ ಕಾಡಿತ್ತು. ದೇವರಾಜ ಅರಸುರವರ ಭೂ ಸುಧಾರಣೆಗಳಿಂದ ಹಳ್ಳಿಗಳ ಜಮೀನ್ದಾರರ ಸೊಕ್ಕು ಕೊಂಚ ಅಡಗಿದ್ದರೂ, ಅಪ್ಪನ ಸೊಕ್ಕು ಅಡಗಿರಲಿಲ್ಲ. ಪಾರಂಪರಿಕ ಬಳುವಳಿಯಲ್ಲವೇ?

"ಇವೆಲ್ಲಾ ನಮ್ಮ ಪಿತ್ರಾರ್ಜಿತ ಆಸ್ತಿ ಮಗಾ, ಅವನ್ಯಾರು ಕಿತ್ಕೊಳ್ಳೋಕೆ, ಉಳೋರಿಗೆ ಭೂಮಿ ಅಂತ ಕೊಟ್ಟು ಬಿಟ್ರೆ , ಈ ಬಡ್ಡಿ ಹೈಕ್ಳು ಏನ್ ಮಾಡ್ತಾವೆ" ಅಂತ ನನ್ನ ಮುಂದೆ ಕೂಗಾಡುತ್ತಿದ್ದ ನೆನಪು.

ಆಗಿನ್ನೂ ಇವೆಲ್ಲದರ ಸೂಕ್ಷ್ಮಗಳು ಅರಿವಾಗದಿದ್ದರೂ ಪತ್ರಿಕೆಗಳಲ್ಲಿ ಓದಿ ಭೂ ಸುಧಾರಣೆಗಳ ಬಗ್ಗೆ ಅಲ್ಪಸ್ವಲ್ಪ ಜ್ಞಾನ ಹೊಂದಿದ್ದೆ. ಒಮ್ಮೊಮ್ಮೆ ಅಪ್ಪನ ಜಮೀನ್ದಾರಿಕೆ, ದಬ್ಬಾಳಿಕೆಗಳು ಮುಜುಗರ ಉಂಟುಮಾಡುತ್ತಿದ್ದುದೂ ಉಂಟು. ಅದರಲ್ಲೂ ನಮ್ಮ ತೋಟದ ಆಳು ನಿಂಗಯ್ಯನ ಮಗ ಕರಿನಿಂಗನನ್ನು ಅಪ್ಪ ಅವಮಾನಿಸಿದಾಗೆಲ್ಲಾ ಕೋಪ ಉಕ್ಕಿ ಬರುತ್ತಿತ್ತು. ಕರಿನಿಂಗ ನನ್ನ ಸಹಪಾಠಿ. ಶಾಲೆಯಲ್ಲಿ ಒಂದೇ ಬೆಂಚಿನಲ್ಲಿ ಕುಳಿತುಕೊಳ್ಳುತ್ತಿದ್ದೆವು. ಮೇಲ್ಜಾತಿಯ ಟೀಚರುಗಳು ಇದೇ ಕಾರಣಕ್ಕೆ ನನ್ನನ್ನು ಕೆಂಗಣ್ಣಿನಿಂದ ನೋಡುತ್ತಿದ್ದುದೂ ಉಂಟು. ಸಾಲದ್ದಕ್ಕೆ ಅಪ್ಪನ ಹತ್ತಿರ ಚಾಡಿ.

"ಅದ್ಯಾಕ್ಲಾ ಮಗ ಆ ನಿಂಗನ ಜೊತೆ ಕೂಡ್ತಿಯಂತೆ. ಈಶ್ವರಪ್ಪನೋರು ಹೇಳ್ತಿದ್ರು. ನಿನ್ನ ಅಂತಸ್ತಿಗೆ ತಕ್ಕ ಹಾಗಿರೋದು ಕಲಿತ್ಕೋ ಮಗಾ, ಏನೇ ಆದ್ರೂ ನಮ್ಮ ಸಂಪ್ರದಾಯ ಬಿಡಬಾರದು" ಎಂದು ಅಪ್ಪ ಜಾಡಿಸಿದಾಗೆಲ್ಲಾ ನನ್ನ ಅಸಹಾಯಕ ಕಣ್ಣುಗಳು ಒದ್ದೆಯಾಗುತ್ತಿದ್ದವು. ಪತ್ರಿಕೆಗಳಲ್ಲಿ ನಾನು ಓದುತ್ತಿದ್ದ ದಲಿತ, ಬಂಡಾಯ ಚಳುವಳಿಗಳ ನೆನಪಾಗುತ್ತಿತ್ತು.



* * *

'ನರಸಯ್ಯನ ಹುಂಡಿ ಕ್ರಾಸ್'ಎಂದು ಕಂಡಕ್ಟರ್ ಕೂಗಿದಾಗ ನಿದ್ರೆಯಿಂದ ಎಚ್ಚೆತ್ತವನಂತೆ ಬೆದರಿದೆ. ಹಳೆಯ ನೆನಪುಗಳ ಮೆಲುಕಿನ ನಡುವೆ ಹಾದಿ ಸವೆದದ್ದೇ ತಿಳಿದಿರಲಿಲ್ಲ. 30 ವರ್ಷಗಳ ಹಿಂದೆ ಇದ್ದಂತೆಯೇ ಈಗಲೂ ನಮ್ಮೂರಿಗೆ ನಾಲ್ಕೈದು ಕಿಲೋಮೀಟರ್ ನಡೆದೇ ಹೋಗಬೇಕು. ಕ್ರಾಸಿನಲ್ಲಿ ಕೆಲವು ಆಟೋಗಳು ಕಾಯುತ್ತಿದ್ದವು. ಬಹುಶಃ ಮುಚ್ಚಿದ ಕಾರ್ಖಾನೆಗಳ ಕಾರ್ಮಿಕರ ಅನಿವಾರ್ಯತೆ ಇರಬಹುದೆಂದುಕೊಂಡು ನಡೆದೇ ಹೋಗಲು ತೀರ್ಮಾನಿಸಿದೆ. ನಮ್ಮೂರಿನ ಹಳೆಯ ಸವಿಯನ್ನು ಮೆಲುಕು ಹಾಕಿದಂತೆಯೂ ಆಗುತ್ತದೆ ಎಂದೆನಿಸಿ, ಬಿಸಿಲಿನ ಝಳ ಲೆಕ್ಕಿಸದೆ ಹೆಜ್ಜೆ ಹಾಕಿದೆ. ಎರಡೂ ಬದಿಗಳಲ್ಲಿ ಕಬ್ಬಿನ, ಭತ್ತದ ಗದ್ದೆಗಳು, ತೆಂಗು,ಬಾಳೆ ತೋಟಗಳು, ನಮ್ಮೂರಿನ ಬದುಕನ್ನೇ ಬದಲಾಯಿಸಿದ ಕಾವೇರಿ ನಾಲೆ, ಬಟ್ಟೆ ಒಗೆಯುತ್ತಲೇ ಸಂಸಾರ ತಾಪತ್ರಯಗಳೆಲ್ಲವನ್ನೂ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳುವ ಹೆಂಗಸರು, ಬಿಸಿಲ ಬೇಗೆ ತಾಳಲಾರದೆ ನಾಲೆಯಲ್ಲಿ ಮೈತೊಳೆಯುತ್ತಿರುವ ಪಡ್ಡೆ ಹುಡುಗರು. ಅದೇ ದೃಶ್ಯಗಳು. ಒಂದೇ ಬದಲಾವಣೆ ಎಂದರೆ ಡಾಂಬರು ರಸ್ತೆ. ಗ್ರಾಮೀಣ ಅಭಿವೃದ್ಧಿಗೆ ಮೊದಲ ಮೆಟ್ಟಲು ರಸ್ತೆಯ ಡಾಂಬರೀಕರಣವೇ ಅಲ್ಲವೇ ಎಂದು ಗೊಣಗುತ್ತಾ ಮುನ್ನಡೆದಿದ್ದೆ. ಹಾದು ಹೋದವರಾರೂ ಗುರುತಿಸಲೇ ಇಲ್ಲವಲ್ಲಾ ಎನಿಸಿತು. ಇಷ್ಟು ವರ್ಷ ಹುಟ್ಟೂರಿನ ಕಡೆ ತಿರುಗಿಯೂ ನೋಡದಿದ್ದ ಪಾಪ ಪ್ರಜ್ಞೆ ಕಾಡದಿರಲಿಲ್ಲ. ಅಷ್ಟರಲ್ಲೇ ಹಿಂದಿನಿಂದ ಯಾರೋ ಕೂಗಿದಂತಾಯಿತು.

"ಅಯ್ಯಾವ್ರೇ, ನೀವು ನರಸಿಂಹಪ್ಪನವರ ಮಗಾ ಅಲ್ವರಾ" ಎಂದಾಗ ಕಕ್ಕಾಬಿಕ್ಕಿಯಾದೆ. ಮಾತನಾಡಿಸಿದವನನ್ನು ಗುರುತಿಸಲಾಗಲಿಲ್ಲ.

"ನಾನು ಅಯ್ನೋರೇ, ಲಕ್ಕಪ್ಪ, ಗುರುತು ಹತ್ಲಿಲ್ವಾ , ನಿಮ್ಮಪ್ಪಾರ ತೋಟದಾಗ ಗೇಯ್ತಾ ಇರ್ಲಿಲ್ವೇ? ಏಸೋ ವರ್ಸ ಆಗೈತೆ ಐಡಿ ನಿಮಗೆ ಗೆಪ್ತಿ ಇರ್ಲಕ್ಕಿಲ್ಲ, ಹೋಗ್ಲಿ ಮನೀಕಡೆ ಎಲ್ಲಾ ಸಂದಾಗವ್ರಾ" ಎಂದಾಗ ಸಮಾಧಾನವಾಯಿತು.

"ಹೀಗೇ ಊರಿನ ಕಡೆ ನೋಡೋಣ ಅನ್ನಿಸ್ತು ಬಂದೆ, ನನ್ನ ಗೆಳೆಯ ನಿಂಗ ಇದ್ದಾನೋ?" ಎಂದು ಕೇಳುತ್ತಲೇ ಮುನ್ನಡೆದೆ.

ಪುಸ್ತಕದಲ್ಲಿರೋದನ್ನ ಭಟ್ಟಿ ಇಳಿಸಿ, ಪದವಿ ಗಳಿಸುವ ನಮಗಿಂತಲೂ, ಅನಕ್ಷರಸ್ಥರಾದ ಈ ರೈತಾಪಿ ಜನರಿಗಿರುವ ಜ್ಞಾಪಕ ಶಕ್ತಿ ಅಪ್ರತಿಮ ಎನಿಸಿತು. ಹಳ್ಳಿಯೊಳಗೆ ಪ್ರವೇಶಿಸುತ್ತಿರುವಂತೆಯೇ ನನ್ನ ಕಣ್ಣನ್ನೇ ನಂಬಲಾಗದಂತಹ ಬದಲಾವಣೆಗಳು. ಉತ್ತಮ ಶಾಲಾ ಕಟ್ಟಡ, ಬೋರ್ ವೆಲ್‌ಗಳು, ಡಾಂಬರೀಕರಿಸಿದ ರಸ್ತೆ, ಉತ್ತಮ ಮನೆಗಳು, ಪಂಚಾಯತಿ ಕಛೇರಿ, ಇವುಗಳ ನಡುವೆಯೇ ಹಳೆಯ ಗ್ರಾಮೀಣ ಸೊಗಡಿನ ಪರಿಸರ, ದನದ ಕೊಟ್ಟಿಗೆ, ಹುಲ್ಲಿನ ಮೆದೆಗಳು, ಭತ್ತದ ಕಣಗಳು, ಆಲೆಮನೆ. ಅಭಿವೃದ್ಧಿಯ ನಡುವೆಯೂ ಪರಿಸರವನ್ನು ರಕ್ಷಿಸುವ ಗ್ರಾಮೀಣ ಸಮಾಜವೇ ನಗರಗಳಿಗಿಂತಲೂ ಲೇಸು ಎನಿಸಿತು.

ನೆನಪಿನ ಅಲೆಗಳಲ್ಲಿ

○ ನಾ ದಿವಾಕರ

ಮುಳುಗಿದ್ದ ನನಗೆ ನಾವಿದ್ದ ಮನೆಯ ಮುಂದೆ ಬಂದು ನಿಂತದ್ದೇ ಗೊತ್ತಾಗಲಿಲ್ಲ. ಮನೆ ಹಾಗೆಯೇ ಇದೆ, ಪಾರಂಪರಿಕ ಕಟ್ಟಡವೇನೋ ಎನ್ನುವಂತೆ. ಚಿಕ್ಕಂದಿನಲ್ಲಿ ಆಡಿ ಬೆಳೆದ, ತಾಯಿ ಪ್ರೀತಿ ಕಾಣದಿದ್ದರೂ, ತಂದೆಯ ಆರೈಕೆಯಲ್ಲೇ ಚಿಗುರಿದ ಬಾಲ್ಯ, ಯೌವ್ವನಗಳ ಆಶ್ರಯವಾಗಿದ್ದ ಅದೇ ತೊಟ್ಟಿ ಮನೆ. ಅಪ್ಪ ಎಷ್ಟೇ ಜಮೀನ್ದಾರಿ ದರ್ಪ ತೋರುತ್ತಿದ್ದರೂ, ನನ್ನನ್ನ ಹಡೆದು ಅಸುನೀಗಿದ ಅಮ್ಮನ ಸ್ಥಾನಕ್ಕೆ ಮಲತಾಯಿಯನ್ನು ತರಲಿಲ್ಲ ಎಂದು ನೆನೆದು ಅಪ್ಪನ ಬಗ್ಗೆ ಮನದಲ್ಲೇ ಹೆಮ್ಮೆ ಮೂಡಿತು. ಮನೆಯಲ್ಲಿ ಯಾರೂ ಇದ್ದಂತಿರಲಿಲ್ಲ. ಪಕ್ಕದಲ್ಲಿ ಕೊಟ್ಟಿಗೆಯಲ್ಲಿದ್ದವರನ್ನು ಕೇಳಿದಾಗ, ಈ ಮನೆಯನ್ನು ಕೊಂಡವರು ಈಗ ಬೆಂಗಳೂರಿನಲ್ಲೇ ವಾಸವಾಗಿದ್ದಾರೆಂದು ತಿಳಿಯಿತು.

"ಹೊಲ ಗದ್ದೆ ನೋಡೋಕ್ ಬಂದಾಗ ಇಲ್ಲೇ ತಂಗೋಕೆ ಈ ಮನೆ ಇಟ್ಕೊಂಡಿದ್ದಾರೆ ಬುದ್ಧಿ" ಎಂದು ಅವ ಹೇಳಿದ ಮೇಲೆ, ಸದ್ಯ ಭೂತ ಬಂಗಲೆಯಾಗಿಲ್ಲವಲ್ಲ ಎಂದು ನೆನೆದು ಮನಸ್ಸಿಗೆ ಹಾಯೆನಿಸಿತು. ಆಸ್ತಿಯನ್ನು ಮಾರಿದ ಮೇಲೂ ನಮ್ಮದು ಎಂಬ ವ್ಯಾಮೋಹ ಬಿಡುವುದಿಲ್ಲವಲಾ ಎಂದು ನೆನೆಯುತ್ತಾ ಕೇರಿಯ ಕಡೆ ನಡೆದೆ, ಕರಿನಿಂಗನನ್ನು ನೋಡಲು.

* * *

ಹಳ್ಳಿ ಎಷ್ಟೇ ಅಭಿವೃದ್ಧಿ ಹೊಂದಿದ್ದರೂ, ಅಗ್ರಹಾರ ಕೇರಿಗಳು ತಲೆ ಎತ್ತಿರುವುದು ಸ್ಪಷ್ಟವಾಗಿ ಕಾಣುತ್ತಿತ್ತು. ಒಂದೆಡೆ ಮುಸ್ಲಿಮರ ಕಾಲೋನಿ, ಮತ್ತೊಂದೆಡೆ ದಲಿತರ ಕೇರಿ, ನಡುವೆ ಮೇಲ್ಜಾತಿಗಳ, ಇತರರ ಮನೆಗಳು. ಊರು ಬಿಡುವ ಮುನ್ನ 50 ಮನೆಗಳಿದ್ದದ್ದು ಈಗ 100 ದಾಟಿವೆ ಎನಿಸಿತು. ಹೊರಗಿನವರು ಬರದಿದ್ದರೂ, ಅವಿಭಕ್ತ ಕುಟುಂಬಗಳು ಒಡೆದು, ಹಳ್ಳಿ ದೊಡ್ಡದಾಗಿದೆ, ಜನಸಂಖ್ಯೆ ಬೆಳೆದಿದೆ. ಆದರೂ ಗ್ರಾಮದ ಸಾಮಾಜಿಕ ಚೌಕಟ್ಟು ಬದಲಾಗಿಯೇ ಇಲ್ಲವೆಂಬ ಅಂಶ ಮನವನ್ನು ತಟ್ಟಿ ಮರೆಯಾಯಿತು. ನಗರಗಳಲ್ಲೇ ಇರದ ವಾಸ್ತವತೆಗಳನ್ನು ಹಳ್ಳಿಗಳಲ್ಲಿ ಹುಡುಕುವುದು ಅವಾಸ್ತವವೆನಿಸಿ ಮುನ್ನಡೆದೆ.

ಕರಿನಿಂಗನ ಸಣ್ಣ ಮನೆಯ ಮುಂದೆ ನಿಂತಾಗ ಒಂದು ಕ್ಷಣ ಇಡೀ ಬಾಲ್ಯದ ಚಿತ್ರಣವೇ ಕಣ್ಣ ಮುಂದೆ ಹಾದು ಹೋಯಿತು. ಹತ್ತು ವರ್ಷಕ್ಕೂ ಮೇಲಾಗಿತ್ತು ನಿಂಗನನ್ನು ಕಂಡು. ಎಂದೋ ಬೆಂಗಳೂರಿಗೆ ಬಂದಿದ್ದ ಒಂದು ರಾತ್ರಿ ತಂಗಲು. ಇಡೀ ರಾತ್ರೆ ನಿದ್ದೆಗೆಟ್ಟು ಹರಟೆ ಹೊಡೆದು ಮನೆಯವರಿಗೂ ನಿದ್ದೆ ಕೆಡಿಸಿದ್ದು ನೆನಪಾಗದಿರಲಿಲ್ಲ. ನಮ್ಮ ಬಾಲ್ಯದ ಆಟಾಟೋಪಗಳನ್ನು, ಸಾಹಸಗಳನ್ನು, ಇಂದಿನ ಪೀಳಿಗೆಯ ಮಕ್ಕಳು ಕಂಡು ಕೇಳಿರದ ಲಗೋರಿ, ಮರಕೋತಿ ಆಟಗಳ ವೈಭವವನ್ನು ಮಕ್ಕಳ ಎದುರಿಗೆ ಹೇಳುವುದೇ ಹೆಮ್ಮೆ ಎನಿಸಿತು.

"ಏನೋ ರಾಜೀವ, ಯಾವಾಗ್ ಬಂದೆ ಕರಿಯೋಕಾಗ್ಲಿಲ್ವಾ" ನಿಂಗನ ದನಿ ಕೇಳಿದಾಗಲೇ ನನಗೆ ಪರಿವೆ ಬಂದದ್ದು.

"ಏನೋ ನಿಂಗ ಊರು ಇಷ್ಟೊಂದು ಚೆನ್ನಾಗಾಗಿದೆ, ನಂಗಂತೂ ನಂಬೋಕೇ ಆಗ್ತಿಲ್ಲ, ಅದನ್ನೇ ನೋಡ್ತಾ ನಿಂತ್ ಬಿಟ್ಟೆ ನೋಡು"

"ಮನೆ ಒಳಗೆ ಬಾರಯ್ಯಾ, ಅಪರೂಪಕ್ಕೆ ಬಂದಿದೀಯ, ಬೆಳ್ಗಿರೋದೆಲ್ಲಾ ಹಾಲು ಅಂದ್ಕೋಬೇಡ" ಎಂದ ನಿಂಗ ತನ್ನ ಹೆಂಡತೀನ ಕರೆಯಲು ತೋಟದ ಕಡೆ ಓಡಿದ.

ನಿಂಗನ ಮಾತಿನಿಂದ ಸ್ವಲ್ಪ ವಿಚಲಿತನಾದರೂ, ಏನೋ ಸಮಸ್ಯೆ ಇರಬೇಕೆಂದುಕೊಂಡು ಸುಮ್ಮನಾದೆ. ನಿಂಗ ತನ್ನ ಮನೆಯನ್ನು ಕೊಂಚ ದುರಸ್ತಿ ಮಾಡಿಸಿಕೊಂಡಿದ್ದ.

"ಹೇಗಿದ್ದೀಯೋ ನಿಂಗ, ಹೇಗಿದೆ ನಿನ್ನ ತೋಟ, ಹೊಲ, ಕೃಷಿ" ಮುದ್ದೆ ಸಾರು ಉಣ್ಣುತ್ತಲೇ ಕೇಳಿದೆ.

"ಏನೋ ರಾಜೀವ, ನಿಮ್ಮಪ್ಪನ ಆಸ್ತೀಲಿ ಕೊಟ್ಟಿರೋ ಈ ಎರಡು ಎಕರೆ ಜಮೀನ್ನಲ್ಲಿ ವ್ಯವಸಾಯ ಮಾಡೋದೆ ಕಷ್ಟ ಆಗ್ತಿದೆ. ಒಪ್ಪೊತ್ತಿನ ಊಟಕ್ಕೆ ಬರ ಇಲ್ಲ, ನಡೀತಾ ಇದೆ. ದೊಡ್ಡ ರೈತರಿಗಾದ್ರೆ ಸಂಘಗಳಿವೆ. ನಮ್ಮಂಥ ಸಣ್ಣ ರೈತರ ಪಾಡು ದೇವ್ರೇ ಗತಿ. ಅರ್ಧ ವರ್ಷ ವ್ಯವಸಾಯ ಇನ್ನರ್ಧ ಕೂಲಿಕೆಲ್ಸ, ಒಮ್ಮೊಮ್ಮೆ ಏನೂ ಇಲ್ಲ. ಕಾಸಿದ್ದಾಗ ಉಗಾದಿ ಅಂತಾರಲ್ಲ ಹಾಗೆ. ಇನ್ನು ಕೂಲಿನೇ ನಂಬಿರೋರು ಪಾಪ ಎಷ್ಟೋಜನ ಗುಳೆ ಎದ್ದು ಹೋಗಾಯ್ತು. ನೀನೇ ನೋಡ್ತಿರ್ತೀಯಲ್ಲ ನಮ್ಮ ಪಾಡನ್ನ"

ನಿಂಗನ ಮಾತುಗಳನ್ನು ಕೇಳಿ ಕೃಷಿ ಕ್ಷೇತ್ರದ ಬಿಕ್ಕಟ್ಟಿನ ವಿಶ್ವರೂಪ ದರ್ಶನವೇ ಆದಂತಾಗಿತ್ತು. ಫಸಲಿಗೆ ಸರಿಯಾದ ಬೆಲೆ ಇಲ್ಲ, ಗೊಬ್ಬರ ದುಬಾರಿ, ರಾಸುಗಳಿಗೆ ಮೇವು ಹಾಕೋದೂ ಕಷ್ಟ, ಬ್ಯಾಂಕಿನ ಸಾಲ ಸಿಗೋದಕ್ಕೆ ಸಾವಿರ ಪ್ರಯತ್ನ, ಅದೂ ಬೇಕಾದಷ್ಟು ಸಿಗೋಲ್ಲ, ಮತ್ತೆ ಊರ ಗೌಡ್ರ ಹತ್ರ ಸಾಲ, ಚಕ್ರ ಬಡ್ಡಿ, ರಕ್ತ ಹೀರುವ ಹೊಸ ಅವಿಷ್ಕಾರ

ಆಗಿನ್ನೂ ಇವೆಲ್ಲದರ ಸೂಕ್ಷ್ಮಗಳು ಅರಿವಾಗದಿದ್ದರೂ ಪತ್ರಿಕೆಗಳಲ್ಲಿ ಓದಿ ಭೂ ಸುಧಾರಣೆಗಳ ಬಗ್ಗೆ ಅಲ್ಪಸ್ವಲ್ಪ ಜ್ಞಾನ ಹೊಂದಿದ್ದೆ. ಒಮ್ಮೊಮ್ಮೆ ಅಪ್ಪನ ಜಮೀನ್ದಾರಿಕೆ, ದಬ್ಬಾಳಿಕೆಗಳು ಮುಜುಗರ ಉಂಟುಮಾಡುತ್ತಿದ್ದುದೂ ಉಂಟು. ಅದರಲ್ಲೂ ನಮ್ಮ ತೋಟದ ಆಳು ನಿಂಗಯ್ಯನ ಮಗ ಕರಿನಿಂಗನನ್ನು ಅಪ್ಪ ಅವಮಾನಿಸಿದಾಗೆಲ್ಲಾ ಕೋಪ ಉಕ್ಕಿ ಬರುತ್ತಿತ್ತು. ಕರಿನಿಂಗ ನನ್ನ ಸಹಪಾಠಿ. ಶಾಲೆಯಲ್ಲಿ ಒಂದೇ ಬೆಂಚಿನಲ್ಲಿ ಕುಳಿತುಕೊಳ್ಳುತ್ತಿದ್ದೆವು. ಮೇಲ್ಜಾತಿಯ ಟೀಚರುಗಳು ಇದೇ ಕಾರಣಕ್ಕೆ ನನ್ನನ್ನು ಕೆಂಗಣ್ಣಿನಿಂದ ನೋಡುತ್ತಿದ್ದುದೂ ಉಂಟು. ಸಾಲದ್ದಕ್ಕೆ ಅಪ್ಪನ ಹತ್ತಿರ ಚಾಡಿ.

"ಅದ್ಯಾಕ್ಲಾ ಮಗ ಆ ನಿಂಗನ ಜೊತೆ ಕೂಡ್ತಿಯಂತೆ. ಈಶ್ವರಪ್ಪನೋರು ಹೇಳ್ತಿದ್ರು, ನಿನ್ನ ಅಂತಸ್ತಿಗೆ ತಕ್ಕ ಹಾಗಿರೋದು ಕಲಿತ್ಕೋ ಮಗಾ, ಏನೇ ಆದ್ರೂ ನಮ್ಮ ಸಂಪ್ರದಾಯ ಬಿಡಬಾರದು" ಎಂದು ಅಪ್ಪ ಚಾಡಿಸಿದಾಗೆಲ್ಲಾ ನನ್ನ ಅಸಹಾಯಕ ಕಣ್ಣುಗಳು ಒದ್ದೆಯಾಗುತ್ತಿದ್ದವು. ಪತ್ರಿಕೆಗಳಲ್ಲಿ ನಾನು ಓದುತ್ತಿದ್ದ ದಲಿತ, ಬಂಡಾಯ ಚಳುವಳಿಗಳ ನೆನಪಾಗುತ್ತಿತ್ತು.

ತಂತ್ರ ಮೀಟರ್ ಬಡ್ಡಿ, ಹೀಗೆ ನಿಂಗ ನೂರಾರು ಸಮಸ್ಯೆಗಳ ನದಿಯನ್ನು ಹರಿಸುವಷ್ಟರಲ್ಲೇ ನಮ್ಮಿಬ್ಬರ ಊಟ ಮುಗಿದಿತ್ತು.

"ಹೋಗ್ಲಿ ನಡಿ ರಾಜೀವ, ಅಪರೂಪಕ್ಕೆ ಬಂದಿದ್ದೀ, ನಮ್ಮ ಸಮಸ್ಯೆಗಳು ಇದ್ದದ್ದೇ, ಊರೆಲ್ಲಾ ಸುತ್ತೋಣ, ನಿಂಗೂ ಸ್ವಲ್ಪ ಬಾಲ್ಯದ ನೆನಪು ಚಿಗುರುತ್ತೇನೋ" ಎಂದವನೇ ಹೊರ ನಡೆದ ನಿಂಗನೊಡನೆ ನಾನೂ ಹೆಜ್ಜೆ ಹಾಕಿದೆ. ಮಾತಿನ ಸುರಿಮಳೆಯಲ್ಲಿ ಇಬ್ಬರಿಗೂ ಗಂಟಲು ಒಣಗಿತ್ತು. ಅಲ್ಲೇ ಇದ್ದ ಟೀ ಅಂಗಡಿಗೆ ನಡೆದೆವು. ಹಿಂದೆ ಹಳ್ಳಿಗಳಲ್ಲಿ ಅಶ್ವತ್ಥ ಕಟ್ಟೆಗಳ ಮೇಲೆ ನಡೆಯುತ್ತಿದ್ದ ಚರ್ಚೆಗಳೆಲ್ಲಾ ಈಗ ಟೀ ಅಂಗಡಿಗಳಲ್ಲಿ ನಡೆಯುವುದು ಹಳ್ಳಿಗಾಡಿನಲ್ಲಿ ಉಂಟಾಗಿರುವ ಒಂದು ಪ್ರಮುಖ ಬದಲಾವಣೆ ಎನಿಸಿತು.

"ಓ ಹೋ ಹೋ, ಬನ್ನಿ ಸ್ವಾಮಿ, ನೀವು ನರಸಿಂಹಪ್ಪನವರ ಮಗ ಅಲ್ವೇ, ಎಷ್ಟೋ ವರ್ಷ ಆಗೋಯ್ತು ನಿಮ್ಮನ ನೋಡಿ" ಎಂದು ಟೀ ಅಂಗಡಿಯ ಗೋಪಾಲಯ್ಯ ಕರೆಯುವ ಮೊದಲೇ ನಾನು ಒಳ ಹೊಕ್ಕಿದ್ದಾಗಿತ್ತು. ನಿಂಗ ಹೊರಗಡೆಯೇ ಉಳಿದ.

"ಬಾರೋ ನಿಂಗ ಒಳಗೆ, ಅಲ್ಲೇ ಯಾಕೆ ನಿಂತಿದ್ದೀ" ಎಂದು ಕರೆದೆ.

"ನೀವು ಕೂತ್ಕೊಳ್ಳಿ ರಾಜೀವಪ್ನೋರೇ, ಅವ ಅಲ್ಲೇ ಕಲ್ಲು ಬೆಂಚಿನ ಮೇಲೆ ಕೂಡ್ತಾನೆ" ಎಂದು ಹೇಳುತ್ತಾ ಗೋಪಾಲಯ್ಯ ನನಗೆ ಟೀ ಕೊಟ್ಟು ಬಾಗಿಲಲ್ಲಿ ಒಂದು ಲೋಟವನ್ನಿಟ್ಟು ಅದಕ್ಕೆ ಟೀ ಹೊಯ್ದ. ಅದೂ ಆಧುನಿಕ ಯುಗದ ಮಡಿವಂತಿಕೆಯ ಅವಿಷ್ಕಾರವಾದ Use and throw ಲೋಟ.

"ಅದ್ಯಾಕೋ ಗೋಪಾಲಯ್ಯ, ಅವನೂ ಒಳಕ್ಕೆ ಬರ್ಲಿ, ಒಟ್ಟಿಗೇ ಟೀ ಕುಡೀತೀವಿ" ಎನ್ನುತ್ತಾ ನಿಂಗನನ್ನು ಕರೆಯಲು ಹೊರಟೆ.

"ಅಯ್ಯಯ್ಯೋ ಬೇಡ ಬುದ್ಧಿ, ಅವ್ನೇನಾದ್ರೂ ಒಳಕ್ ಬಂದ್ರೆ ನಾಳೆ ನನ್ನ ಬಾಳು ಮೂರಾಬಟ್ಟೆ ಆಗೋಯ್ತದೆ, ನಾವು ಕೇರಿಯೋರ್ನೆಲ್ಲಾ ಸೇರ್ಸೋದಿಲ್ಲ"

ಗೋಪಾಲನ ಮಾತುಗಳು ನನ್ನನ್ನು ಮೂಕವಿಸ್ಮಿತನನ್ನಾಗಿ ಮಾಡಿತ್ತು. ಕೂಡಲೇ ನಿಂಗ ಆಡಿದ್ದ ಎಚ್ಚರಿಕೆಯ ಮಾತುಗಳೂ ನೆನಪಾಗದಿರಲಿಲ್ಲ. ನನ್ನ ನಂಬಿಕೆ, ಸಿದ್ಧಾಂತ, ಬರಹ, ಭಾಷಣಗಳೆಲ್ಲಾ ವ್ಯರ್ಥವೇನೋ ಎನಿಸತೊಡಗಿತು. ಒಂದು ವೇಳೆ ನಿಂಗನನ್ನು ಎಳೆದು ಒಳತಂದರೆ ಏನು ಮಾಡಿಯಾರು, ಸ್ವಲ್ಪ ಗಲಾಟೆ ಮಾಡಬಹುದು. ಪೋಲೀಸರನ್ನು ಕರಿಸ್ತೀನಿ ಅಂದ್ರೆ ತೆಪ್ಪಗಾಗ್ತಾರೆ ಎಂದು ಯೋಚಿಸುವಷ್ಟರಲ್ಲೇ ನಿಂಗ ಮಾಯವಾಗಿದ್ದ ಕೈಲಿದ್ದ ಟೀ ಲೋಟವನ್ನು ಅಲ್ಲಿಯೇ ಬಿಟ್ಟು ಅವನನ್ನು ಹಿಂಬಾಲಿಸಿ ಓಡಿದೆ. ಏನೂ ನಡೆದೇ ಇಲ್ಲ ಎನ್ನುವಂತಿದ್ದ ಅವನ ನಿರ್ಲಿಪ್ತ ಭಾವ ಅಚ್ಚರಿ

* * *

ಇತ್ತೀಚೆಗೆ ಇದೇ ಹಳ್ಳಿಯಲ್ಲಿ ರಾಜ್ಯದ ಮುಖ್ಯಮಂತ್ರಿಗಳು ದಲಿತರ ಮನೆಯಲ್ಲಿ ತಂಗಿದ್ದುದು ದೊಡ್ಡ ಸುದ್ದಿಯಾಗಿದ್ದು ನೆನಪಾಯಿತು. ಅಸ್ಪೃಶ್ಯತೆಯ ಅನಿಷ್ಟವನ್ನು ತೊಲಗಿಸಬೇಕೆಂಬ ಐವತ್ತು ವರ್ಷಗಳ ಹೋರಾಟಗಳು, ಭಾಷಣಗಳು, ಸೆಮಿನಾರುಗಳು ನನ್ನ ಹುಟ್ಟಿದೂರಿಗೇ ತಲುಪಿಲ್ಲವೇ ಎಂದು ವ್ಯಥೆಯಾಯಿತು.

"ಏನೊ ನಿಂಗ, ಹಾಗ್ಯಾಕೆ ಓಡಿ ಬಂದೆ, ನೀನಲ್ಲೇ ಇದ್ದಿದೆ ಚೆನ್ನಾಗಿತ್ತು, ನಾನಿರ್ಲಿಲ್ವಾ" ನನ್ನ ದನಿ ಕೊಂಚ ಕಠಿಣವಾಗೇ ಇತ್ತು.

"ಇವತ್ತೇನೋ ನೀನಿದ್ದೀಯಪಾ, ನಾಳೆಯಿಂದ ನಾನು ಬದುಕೋದು ಹೇಗೆ ಅಂತ ಯೋಚನೆ ಮಾಡಿದ್ದೀಯ"

"ಅಲ್ಲಯ್ಯಾ ಇತ್ತೀಚೆಗಷ್ಟೇ ಮುಖ್ಯಮಂತ್ರಿಗಳು ದಲಿತರ ಮನೇಲಿ ತಂಗಿದ್ದೂ ಪರಿಸ್ಥಿತಿ ಹೀಗೇ ಇದ್ಯಲ್ಲಾ"

"ಅದೇ ನೋಡು ಬಂದಿದ್ದು ಗ್ರಾಚಾರ. ಮುಂಚೆ ನಮ್ಮಗೋಳ್ ಜೊತೆ ಸ್ವಲ್ಪ ಮಾತನ್ನಾದ್ರೂ ಆಡ್ತಿದ್ರು, ಈಗ ನಮ್ಮ ಮುಖ ಕಂಡ್ರೆ ಉರಿದು ಬೀಳ್ತಾರೆ. ಮೊದ್ಲೇ ದೇವರ ಮಕ್ಳು ಅಂತಿದ್ರು, ಈಗ ಸರ್ಕಾರದ ಮಕ್ಳು ಅಂಥ ರೇಗಿಸ್ತಾರೆ. ಮುಖ್ಯಮಂತ್ರಿಗಳೇನು ನಮ್ಮ ಹಟ್ಟೀಲಿ ಮಲಗಿದ್ರಾ, ಕಕ್ಕಸ್ ಮನೆಯಿಂದ ಹಿಡ್ಕೊಂಡು ಎಲ್ಲಾನೂ ಹೊಸದಾಗಿ ಕಟ್ಟಿಸಿ, ಸುಣ್ಣ ಬಣ್ಣ ಮಾಡಿಸಿ, ಅಲ್ಲೇ ಮಲಗಿ, ಆ ಕಕ್ಕಸ್ ಮನೇನೂ ಎತ್ಕೊಂಡು ಹೋದ್ರು, ಮನಸ್ಸು ಬದಲಾಗ್ದೇ ಇದ್ರೆ ಏನೂ ಬದಲಾಗೋಲ್ಲ. ಬುದ್ಧಿ ಮಾತಾಡ್ಬಾರ್ದು ರಾಜೀವ, ಮನಸ್ಸು ಮಾತಾಡ್ಬೇಕು, ಆಗ್ಲೇ ಸುಧಾರಣೆ ಎಲ್ಲಾ ಆಗೋದು. ಇವೆಲ್ಲಾ ಆಗ್ದೇರೋ ಮಾತು ಬಿಡಣ್ಣ, ಏನಿದ್ರೂ ನಿಮ್ಮ ಭಾಷಣಗಳಿಗೇ ಸರಿ ಅಷ್ಟೆ." ನಿಂಗನ ಅನುಭವದ ಮಾತುಗಳು ನನ್ನನ್ನು ಮೂಕನನ್ನಾಗಿಸಿತ್ತು. ಸಿನಿಕಲ್ ಅನಿಸಿದರೂ, ಆಶಾಭಾವನೆ ಮೂಡಿಸುವ ಅಸ್ತ್ರ ನನ್ನಲ್ಲಿ ಉಳಿದಿರಲಿಲ್ಲ.

ಇಂದಿಗೂ ಕೇರಿ, ಅಗ್ರಹಾರಗಳ ಸಂಸ್ಕೃತಿ ಗಟ್ಟಿಯಾಗೇ ಇರುವುದು ಇನ್ನಷ್ಟು ಖಾತರಿಯಾಯಿತು. ಊರಿನಲ್ಲಿದ್ದ ಒಂದೇ ದೇವಸ್ಥಾನಕ್ಕೆ ಹೋಗೋಣವೆಂದುಕೊಂಡರೂ, ಒಂದು ಕ್ಷಣ ಹಿಂಜರಿದೆ. ಎಂದೋ ಚಿಕ್ಕವಯಸ್ಸಿನಲ್ಲಿ ಒಳಹೊಕ್ಕಿದ್ದು ನೆನಪಾಯಿತು. ದೇವಸ್ಥಾನಕ್ಕೆ ಹೋಗಿ ಎರಡು ದಶಕಗಳೇ ಕಳೆದಿದ್ದರೂ, ನಮ್ಮೂರಿನ ಗುಡಿಯಲ್ಲವೇ, ರಾಜಗೋಪುರದಿಂದ ನಳನಳಿಸುತ್ತಿತ್ತು. ಆದರೂ ನಿಂಗ ಹೇಳಿದ ಕಳೆದ ವರ್ಷದ ಜಾತ್ರೆ ಪ್ರಸಂಗವನ್ನು ಕೇಳಿದ ಮೇಲೆ ಹೋಗದಿರಲು ನಿರ್ಧರಿಸಿದೆ. ಊರ ಜಾತ್ರೆಯಲ್ಲಿ ತೇರನ್ನು ಎಳೆಯಲು ದಲಿತರಿಗೆ ಅವಕಾಶ ನೀಡದಿದ್ದ ವಿಷಯ ಪತ್ರಿಕೆಗಳಲ್ಲಿ ಬಂದಿರಲೇ ಇಲ್ಲ. ಗಲಭೆಯಾದದ್ದು ಮಾತ್ರ ವರದಿಯಾಗಿತ್ತು. ಎಷ್ಟಾದರೂ ಮಾಧ್ಯಮಗಳೂ ವ್ಯವಸ್ಥೆಯ ಭಾಗವಲ್ಲವೇ ಎಂದುಕೊಂಡೆ. ನಿಂಗ ಎಲ್ಲವನ್ನೂ ವಿವರಿಸಿದ್ದ.

ಐದು ದಲಿತರ ಗುಡಿಸಲುಗಳು ಭಸ್ಮವಾಗಿದ್ದವು. ಇಬ್ಬರ ಕೊಲೆಯಾಗಿತ್ತು. ದಲಿತ ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ ಹೇರಲಾಗಿದ್ದು ಇನ್ನೂ ಸೂಕ್ಷ್ಮವಾಗಿ ಜಾರಿಯಲ್ಲಿತ್ತು. ಕೆರೆಯ ನೀರನ್ನು ಅವರು ಮುಟ್ಟುವಂತಿರಲಿಲ್ಲ. ದೇವಸ್ಥಾನದ ಪ್ರದೇಶವಂತೂ ಆರಕ್ಷಿತ ಪ್ರದೇಶವಾಗಿತ್ತು. ಶಾಸಕರು, ಮಂತ್ರಿಗಳು, ಮಾನವ ಹಕ್ಕುಗಳ ಸಂಘಟನೆಗಳು, ದಲಿತ ಸಂಘಟನೆಗಳು ಭೇಟಿ ನೀಡಿದ ನಂತರ ಕೆಲವು ಪೋಲೀಸ್ ಕೇಸುಗಳೂ ದಾಖಲಾಗಿದ್ದವು. ಸರ್ಕಾರದ ವತಿಯಿಂತ, ಜೀವಕ್ಕೆ ಬೆಲೆಕಟ್ಟುವ ಪರಿಹಾರ ನಿಧಿ ಕೆಲವರಿಗೆ ಲಭಿಸಿತ್ತು. ಪರಿಸ್ಥಿತಿ ತಿಳಿಯಾಗಿದ್ದರೂ ಜಾತಿ ವೈಷಮ್ಯದ ಹೊಗೆ ಸುಪ್ತವಾಗಿದ್ದುದು ನಿಂಗನ ಮಾತುಗಳಲ್ಲೇ ವ್ಯಕ್ತವಾಗುತ್ತಿತ್ತು. ನಡೆದ ಅಹಿತಕರ ಘಟನೆಗಳ ನಡುವೆಯೇ ಇಪ್ಪತ್ತು ವರ್ಷಗಳ ನೆನಪುಗಳನ್ನು ಮೆಲುಕು ಹಾಕುತ್ತಾ ಊರಾಚೆ ಹೆಜ್ಜೆ ಹಾಕಿದೆವು. ಅದೇ ಘಟನೆಗಳು, ಅವಘಡಗಳು, ಯಾತನೆಗಳು ಇಬ್ಬರ ಮನಸ್ಸುಗಳನ್ನು ಪ್ರಕ್ಷುಬ್ಧಗೊಳಿಸಿತ್ತು.

"ಏನ್ ರಾಜೀವಪ್ಪನೋರೆ ಊರ್ ಕಡೆ ಬಂದ್ಬಿಟ್ಟಿದ್ದೀರಿ , ಎಲ್ಲಾ ಆರಾಮಾಗಿದ್ದಾರಾ ಮನೆ ಕಡೆ" ಊರಿನ ಹಿರಿಯಜ್ಜ ಖಾದರ್ ಸಾಬ್‌ರ ದನಿ ಕೇಳಿ ಸಂತಸವಾಯಿತು. ಚಿಕ್ಕಂದಿನಲ್ಲಿ ಸಮಯ ಸಿಕ್ಕಾಗಲೆಲ್ಲಾ ಸಹಪಾಠಿಗಳೊಡನೆ ಸೇರಿ ಅವರ ಬಳಿ ಕುಳಿತು ಕಥೆ ಕೇಳುತ್ತಿದ್ದುದು ನೆನಪಾಯಿತು. ರಾಮಾಯಣ, ಮಹಾಭಾರತಗಳ ಕಥೆಗಳನ್ನು ಮನದಟ್ಟಾಗುವಂತೆ ಖಾದರ್ ತಾತ ಹೇಳುತ್ತಿದ್ದರು. ಬಿಳಿ ಗಡ್ಡದ ತಾತ ಎಂದೇ ನಮಗೆಲ್ಲ ಚಿರಪರಿಚಿತರಾಗಿದ್ದ ಖಾದರ್ ಸಾಬ್ ಊರಿಗೇ ಪ್ರಿಯರಾಗಿದ್ದರು.

"ಸಲಾಂ ಖಾದರ್ ತಾತ, ತುಂಬಾ ಸಂತೋಷ ಆಯ್ತು ನಿಮ್ಮನ್ನ ನೋಡಿ, ಎಷ್ಟು ವರ್ಷ ಆಗ್ಹೋಯ್ತು, ಹೇಗಿದ್ದೀರಿ ತಾತ" ಎಂದು ಉಭಯ ಕುಶಲೋಪರಿ ಮಾತನಾಡುತ್ತಿರುವಂತೆಯೇ ಅವರ ಕಂಗಳಲ್ಲಿ ನೀರು ತುಂಬಿತ್ತು. ಅವರ ಮನಸ್ಸಿನಲ್ಲಿ

ಏನೋ ಖೇದ ತುಂಬಿರುವುದು ಸ್ಪಷ್ಟವಾಗಿತ್ತು.

"ಯಾಕ್ ತಾತ ಅಳ್ತಿದ್ದೀರಿ, ನಮ್ಮಪ್ಪಾರ ನೆನಪಾಯ್ತೇನೋ" ಎಂದೆ.

"ಏನಿಲ್ಲಾ ಬಿಡು ಮರಿ, ಈಗ್ಲೂ ನನ್ನ ತಾತ ಅಂದೆಯಲ್ಲಾ ಆ ಖುಷಿಗೆ ಕಣ್ಣೀರಷ್ಟೆ . ಎಲ್ಲಾ ಆ ಅಲ್ಲಾಹನ ಕೃಪೆ, ನಂಗೂ ಹೋಗೋ ವಯಸ್ಸಾಯ್ತು, ಕಾಲ ತಳ್ತಾ ಇದ್ದೇನೆ" ಎಂದು ಹೇಳುತ್ತಲೇ ಸರಸರನೆ ನಡೆದುಬಿಟ್ಟರು.

"ಈಗ್ಲೂ ತಾತ ಅಂತೀಯಲ್ಲಾ" ಅವರ ಈ ಮಾತುಗಳು ನನ್ನ ಮನಸ್ಸನ್ನು ಕಲಕಿತ್ತು. ನಮ್ಮೂರಿಗೆ ಭೀಷ್ಮ ಪಿತಾಮಹರ ತರಹ ಇದ್ದೋರಲ್ವೇ , ಈಗ್ಯಾಕೆ ಖಿನ್ನರಾಗಿದ್ದಾರೆ ಎಂಬ ಅನುಮಾನ ಕಾಡತೊಡಗಿತು.

"ಏನೋ ನಿಂಗ ಊರಲ್ಲಿ ಎಲ್ಲಾ ಚೆನ್ನಾಗಿದೆ ತಾನೆ. ಮೊದಲಿನಂಗೇ ಸೌಹಾರ್ದ ವಾತಾವರಣ ಇದ್ಯಾ ತಾತ ಯಾಕೋ ಬೇಜಾರಾಗಿದ್ರು"

"ಹೋಗ್ಲಿ ಬಿಡಯ್ಯಾ, ನೀನೇನು ಟಿ.ವಿ ಧಾರಾವಾಹಿ ಮಾಡೋಕೆ ಬಂದಿದ್ಯೋ ಇಲ್ಲಾ ಸಮಯ ಕಳೆಯೋಕೋ. ಇರೋದು ಒಂದು ದಿನ ಆರಾಮವಾಗಿ ಹರಟೆ ಹೊಡೆದು ಹೋಗೋದು ಕಲಿ" ಎಂದ ನಿಂಗ ಮತ್ತೊಮ್ಮೆ ಎಳನೀರಿಗಾಗಿ ತೆಂಗಿನ ಮರ ಏರಿದ್ದ. ಆದರೂ ನನ್ನ ಕಾಟ ತಡೆಯಲಾರದೆ ನಡೆದ ಘಟನೆಗಳನ್ನು ವಿವರಿಸಿದ್ದ.

"ನೋಡೋ ರಾಜೀವ, ನಮ್ಮೂರಲ್ಲಿ ಜಾತಿ ವೈಷಮ್ಯ ಮೊದಲಿಂದ್ಲೂ ಇದ್ದದ್ದೇ. ನಮ್ಗೂ ಅದೊಂಥರ ಅಭ್ಯಾಸ ಆಗ್ಬಿಟ್ಟಿದೆ. ಆದ್ರೂ ಸಾಬರ ಜೊತೆ ನಾವು ಚೆನ್ನಾಗೇ ಇದ್ದೀವಿ ಅಲ್ವಾ . ನೀನಿದ್ದ ಕಾಲದಿಂದ್ಲೂ ಹಾಗೇ ನಡೀತಾ ಇತ್ತು. ನಮ್ಮ ಊರ ಹಬ್ಬದಲ್ಲೆಲ್ಲಾ ಅವರೂ ಇರ್ತಾರೆ. ದೇವಸ್ಥಾನಕ್ಕೆ ಹಣ ಕೊಡ್ತಾರೆ. ಮೊನ್ನೆ ನಡೆದ ಗಣೇಶನ ಹಬ್ಬಕ್ಕೆ ಅವರೇ ಪೆಂಡಾಲ್ ಹಾಕಿಸಿ, ಗಣೇಶನನ್ನು ತರಲು ಕಾಸೂ ಕೊಟ್ಟಿದ್ದರು.ಆ ರಾಜಗೋಪುರ ನೋಡಿದ್ಯಲ್ಲ ಅದಕ್ಕೆ ಖಾದರ್ ಸಾಹೇಬ್ರೇ ಮುಕ್ಕಾಲು ಪಾಲು ಹಣ ನೀಡಿದ್ದು. ನಾವು ಅವರ ಹಬ್ಬಗಳಲ್ಲಿ ಹಾಗೆ ಪಾಲ್ಗೊಳ್ತಾ ಇದ್ದೀವಿ. ಆದ್ರೆ ಇತ್ತೀಚೆಗೆ ಅದ್ಯಾವ್ದೋ ಪುಸ್ತಕ ಬಂದಿದೆಯಂತಲ್ಲ. ಮುಸ್ಲಿಂ ರಾಜರ ಬಗ್ಗೆ. ಅವ್ನಾರಪ್ಪಾ ಮೊಗಲ್ ದೊರೆ, ಔರಂಗಜೇಬ ಅಲ್ವಾ, ಅವನ ಬಗ್ಗೆ ಮತ್ತೆ ನಮ್ಮ ಟಿಪ್ಪು ಸುಲ್ತಾನನ ಬಗ್ಗೆ ಆ

“ನೋಡೋ ರಾಜೀವ, ನಮ್ಮೂರಲ್ಲಿ ಜಾತಿ ವೈಷಮ್ಯ ಮೊದಲಿಂದ್ಲೂ ಇದ್ದದ್ದೇ. ನಮ್ಗೂ ಅದೊಂಥರ ಅಭ್ಯಾಸ ಆಗ್ಬಿಟ್ಟಿದೆ. ಆದ್ರೂ ಸಾಬರ ಜೊತೆ ನಾವು ಚೆನ್ನಾಗೇ ಇದ್ದೀವಿ ಅಲ್ವಾ . ನೀನಿದ್ದ ಕಾಲದಿಂದ್ಲೂ ಹಾಗೇ ನಡೀತಾ ಇತ್ತು. ನಮ್ಮ ಊರ ಹಬ್ಬದಲ್ಲೆಲ್ಲಾ ಅವರೂ ಇರ್‍ತಾರೆ. ದೇವಸ್ಥಾನಕ್ಕೆ ಹಣ ಕೊಡ್ತಾರೆ. ಮೊನ್ನೆ ನಡೆದ ಗಣೇಶನ ಹಬ್ಬಕ್ಕೆ ಅವರೇ ಪೆಂಡಾಲ್ ಹಾಕಿಸಿ, ಗಣೇಶನನ್ನು ತರಲು ಕಾಸೂ ಕೊಟ್ಟಿದ್ದರು.ಆ ರಾಜಗೋಪುರ ನೋಡಿದ್ಯಲ್ಲ ಅದಕ್ಕೆ ಖಾದರ್ ಸಾಹೇಬ್ರೇ ಮುಕ್ಕಾಲು ಪಾಲು ಹಣ ನೀಡಿದ್ದು. ಆದ್ರೆ ಇತ್ತೀಚೆಗೆ...

ಪುಸ್ತಕದಲ್ಲಿ ಏನೇನೋ ಹೇಳಿದ್ದಾರಂತೆ. ದೇಶದಲ್ಲಿರೋ ಮಸೀದಿಗಳೆಲ್ಲಾ ಮೊದಲು ಹಿಂದೂ ದೇವಾಲಯಗಳಾಗಿದ್ವು, ಮುಸ್ಲಿಮರು ಈ ದೇಶಾನಾಳ್ದಾಗ ಎಲ್ಲಾ ಧ್ವಂಸ ಮಾಡಿದ್ರು ಅಂತೆಲ್ಲಾ ಬರೆದಿದ್ದಾರಂತೆ.”

“ಆ ಥರ ಬರೆಯೋಕೆ ಅಂತಲೇ ಕೆಲವು ಸಾಹಿತಿಗಳು ಇದ್ದಾರೆ. ಅವರನ್ನ ಬೆಂಬಲಿಸೋಕೆ ಇತಿಹಾಸಕಾರರೂ ಇದ್ದಾರೆ . ನಾನೂ ಅದನ್ನು ಓದಿದ್ದೀನಿ. ಒಂಥರಾ ಮನಸ್ಸನ್ನ ಕೆಡಿಸಿಬಿಡುತ್ತೆ ಅನ್ನಿಸ್ತು ಅದಕ್ಕೂ ನಿಮ್ಮೂರಿಗೂ ಏನಯ್ಯಾ ಸಂಬಂಧ”

“ಅಲ್ಲೇ ಇರೋದು ನೋಡು, ಈಗ ಆ ಪುಸ್ತಕಾನೇ ನಮ್ಮ ವಾನರಸೇನೆಗೆ ಬೈಬಲ್ ಥರ ಆಗಿದೆ. ಅದನ್ನ ಹಿಡ್ಕೊಂಡು ಊರೆಲ್ಲಾ ಪ್ರಚಾರ ಮಾಡ್ತಾ ಇದ್ದಾರೆ. *‘ನಾವು ಹೇಳಿದ್ರೆ ನೀವೆಲ್ಲಾ ನಂಬಲ್ಲ, ಇಲ್ನೋಡಿ ಇತಿಹಾಸದ ಸಾಕ್ಷಿ ಸಮೇತ ಇದೆ. ಮುಸ್ಲಿಮ್ ದೊರೆಗಳು ನಮ್ಮ ದೇವಸ್ಥಾನಗಳನ್ನು ಉರುಳಿಸಿರೋದು ದಿಟ’* ಎಂದೆಲ್ಲಾ ಹೇಳ್ಕೊಂಡು ತಿರುಗಾಡ್ತಾ ಇದ್ದಾರೆ. ನಮ್ಮೂರಲ್ಲೂ ಒಂದು ಹಳೇ ಮಸೀದಿ ಇತ್ತಿಲ್ವಾ, ಅದೇ ಸಮಯಕ್ಕೆ ಆ ಮಸೀದೀನ ಸ್ವಲ್ಪ ಚೆನ್ನಾಗಿ ಕಟ್ಬೋಣ ಅಂತ ಈಗಿರೋದನ್ನ ಬೀಳ್ಸಿದ್ರು. ಈಗೆಲ್ಲಾ ಅದೇ ಪರಂಪರೆ ತಾನೆ. ದೇವಸ್ಥಾನ ಆಗ್ಲಿ, ಮಸೀದಿ–ಚರ್ಚ್ ಆಗ್ಲಿ, ನೋಡೋಕೆ ಸುಂದರವಾಗಿ ಕಾಣ್ಬೇಕು. ಮಸೀದಿ ಕೆಡವ್ತಾ ಇದ್ದಾಗ ತಳಪಾಯದಲ್ಲಿ ಒಂದು ಗುಂಡಗೆ, ಉದ್ದಗಿರುವ ಕಲ್ಲು ಸಿಕ್ತು. ಅಲ್ಲಿ ಕೆಲಸ ಮಾಡ್ತಿದ್ದೋರ್‍ಗೆ ಅದು ಹೇಗೆ ಕಾಣಿಸ್ತೋ ಏನೋ, ನೇರವಾಗಿ ಆ ವಾನರಸೇನೆ ನಾಯಕ ಇದ್ದಾನಲ್ಲ ಅವಂಗೇ ತೋರ್‍ಸಿದ್ರು. ತಕ್ಕೊಳ್ಳಪ್ಪ ಶುರುವಾಯ್ತು. ಅದನ್ನ ಶಿವಲಿಂಗ ಅಂದ್ರು, ಅಲ್ಲಿ ಶಿವನ ದೇವಸ್ಥಾನ ಇತ್ತು, ಅದನ್ನೇ ಬೀಳಿಸಿ ಸಾಬರು ಮಸೀದಿ ಕಟ್ಟಿದ್ದಾರೆ ಅಂದ್ರು, ಮಸೀದಿ ಕಟ್ಬೋಕೆ ಬಿಡಬಾರದು ಅಂತ ಹಠ ಹಿಡಿದ್ರು, ಆಮೇಲೇನಾಗಿರ್‍ಬೋದು ನೀನೇ ಊಹಿಸ್ಕೋ, ರಾಮಮಂದಿರ ಶುರುವಾದ ಮೇಲೆ ದೇಶದಲ್ಲೆಲ್ಲಾ ಒಂದೇ ರಾಜಕೀಯ ಅಲ್ವೇ” ನಿಂಗ ಒಂದೇ ಉಸುರಿನಲ್ಲಿ ಎಲ್ಲವನ್ನೂ ಹೇಳಲಾರಂಭಿಸಿದ್ದ.

“ಊರ್‍ನಲ್ಲಿ ದೊಡ್ಡೋರೆಲ್ಲಾ ಸುಮ್ನಿದ್ರೇ, ಆ ಪಡ್ಡೆ ಹುಡುಗರ್‍ಗೆ ಒದ್ದು ಬುದ್ಧಿ ಹೇಳ್ಬೇಕಿತ್ತು”

“ಈಗೆಲ್ಲಾ ಮೊದಲಿನ ಥರಾ ಇಲ್ಲ ರಾಜೀವ. ಎಲ್ಲಾರ್‍ಗೂ ಅವರ ಸ್ವಾರ್ಥಾನೆ ಮುಖ್ಯ. ಊರಿಗೋಸ್ಕರ ಕಾಳಜಿ ತೋರೋ ಕಾಲ ಆಗೋಯ್ತು. ಇಲ್ಲಿ ಮಸೀದಿ ಎಷ್ಟು ವರ್ಷಗಳಿಂದ ಇದೆ ಅಂತ ನಮ್ಮ ತಾತಂದಿರೂ ಕಥೆ ಹೇಳ್ತಿರ್‍ಲಿಲ್ವಾ, ನಾವೂ 40 ವರ್ಷಗಳಿಂದ ನೋಡ್ತಾನೇ ಇದ್ದೀವಿ. ಈಗ ಇವರು ತಕರಾರು ತೆಗೆದ್ರೆ ಹೇಗೆ. ಪಾಪ ಖಾದರ್ ತಾತ ಸಹ ಬಹಳ ಹೇಳಿದ್ರು, ಅಷ್ಟು ಜಾಗ ಬೇಕಾದ್ರೆ ಬಿಟ್ಟು ಬಿಡ್ತೀವಿ, ಪಕ್ಕದಲ್ಲಿ ಕಟ್ಟಿಕೊಳ್ತೀವಿ ಅಂತಾನೂ ಗೋಗರೆದ್ರು, ಆದ್ರೆ ಊರಿನ ಹಿರಿಯರ ಮಾತಿಗೆ ಬೆಲೆ ಕೊಡೋ ಸಂಸ್ಕೃತಿನೇ ಕಳ್ಕೊಂಡ್ಬಿಟ್ಟಿದ್ದೀವಿ ರಾಜೀವ. ಈಗೆಲ್ಲಾ ಪುಢಾರಿಗಳದ್ದೇ ಕಾರುಬಾರು. ಏನೇ ಆದ್ರೂ ವಾನರ ಸೇನೆಯೋರು ತಮ್ಮ ಪಟ್ಟು ಬಿಡಲಿಲ್ಲ ನೋಡು. ಇನ್ನು ಸಾಬರ ಹುಡುಗ್ರು ಸುಮ್ನಿರ್‍ತಾರ. ಅವರಲ್ಲೂ ಪಡ್ಡೆ ಹುಡುಗ್ರು ಇದ್ದಾರಲ್ಲ. ಇದೇ ವಿಷಯಕ್ಕೇ ಸಣ್ಣ ಗಲಭೆ, ಹೊಡೆದಾಟಾನೂ ನಡೀತು. ನೀನು ಬರ್‍ತಾ ನೋಡ್ಲಿಲ್ವಾ, ಊರ ಹೊರಗೆ ಸಾಬರೆಲ್ಲಾ ಹೊಸ ಬಡಾವಣೆ ಮಾಡ್ಕೊಂಡಿದ್ದಾರೆ. ಹಳಬರು ಮಾತ್ರ ಇಲ್ಲೇ ಇದಾರೆ.”

“ಆಮೇಲೇನಾಯ್ತು” ನನ್ನ ಕುತೂಹಲ ಹೆಚ್ಚಾಗಿತ್ತು.

“ಇನ್ನೇನಾಗುತ್ತೆ. ಸ್ವಲ್ಪ ಜನ ಜೈಲಿಗೆ ಹೋಗಿ ಬಂದ್ರು, ಪೋಲೀಸ್ ತನಿಖೆ ನಡೀತು. ಮಾಮೂಲಂತೆ ಶಾಂತಿ ಸಮಿತಿ ಆಯ್ತು. ಈಗ ಹೇಗೋ ನಡೀತಾ ಇದೆ. ಆದ್ರೆ ತನಿಖೇಲಿ ಗೊತ್ತಾಗಿದ್ದೇನಪ್ಪಾ ಅಂದ್ರೆ ಮಸೀದಿ ಜಾಗ್ದಲ್ಲಿ ಮೊದಲು ಖಾದರ್ ಸಾಹೇಬ್ರ ತಾತಂದ್ರು ವಾಸ ಇದ್ರಂತೆ. ಅವರ ಮನೇನೇ ಬೀಳ್ಸಿ ಮಸೀದಿ ಕಟ್ಟಿದ್ರಂತೆ. ಅಲ್ಲಿ ಸಿಕ್ಕಿದ್ದೂ ಶಿವಲಿಂಗ ಅಲ್ಲ, ಆಗಿನ ಕಾಲದ ರುಬ್ಬೋಗುಂಡು ಅಂತ ಎಲ್ರಿಗೂ ಗೊತ್ತಾಯ್ತು. ಅಮೇಲೆ ಮಸೀದಿನೂ ಕಟ್ಟಿದ್ರು ಅಂತಿಟ್ಕೋ.ಆದ್ರೂ ಮುಂಚಿನ ಹಾಗೆ ಪ್ರೀತಿ ವಿಶ್ವಾಸ ಇಲ್ಲ ರಾಜೀವ. ಬೂದಿ ಮುಚ್ಚಿದ ಕೆಂಡ ಇದ್ದಾಗಿದೆ ಅಷ್ಟೆ. ದೇಶದ ಎಲ್ಲಾ ಕಡೆ ಆದದ್ದೂ ಇಲ್ಲೂ ಆಗಿದೆ”

* * *

ಒಂದು ಸಾಹಿತ್ಯ ಕೃತಿ ಏನೆಲ್ಲಾ ಪ್ರಭಾವ ಬೀರಬಹುದು ಎಂಬ ಆಲೋಚನೆಯಲ್ಲೇ ಬಸ್ಸಿನ ಸೀಟಿಗೆ ಒರಗಿದವನಿಗೆ, ನಿದ್ದೆ ಹತ್ತಿದ್ದೇ ತಿಳಿಯಲಿಲ್ಲ. ಮೈಸೂರು ಬಂತು ಇಳೀರೀ ಎಂದು ಕಂಡಕ್ಟರ್ ಅರಚಿದಾಗ್ಲೇ ಎಚ್ಚರವಾದದ್ದು. ಟೌನ್‌ಹಾಲ್‌ನಲ್ಲಿ ಕಿಕ್ಕಿರಿದ ಜನಸ್ತೋಮದ ನಡುವೆ, ನಿಂಗ ಹೇಳಿದ ಪುಸ್ತಕದ ಅನಾವರಣ ನಡೆಯುತ್ತಿತ್ತು. ವಿಚಾರ ಸಂಕಿರಣ ಇರಬಹುದೆಂದು ಹೋಗಿ ಹಿಂದಿನ ಸೀಟಿನಲ್ಲಿ ಕುಳಿತೆ. “*ಐತಿಹಾಸಿಕ*” ಕೃತಿಯ ಬಗ್ಗೆ ಪರಾಕುಗಳ ಹೊಳೆಯೇ ಹರಿಯುತ್ತಿತ್ತು. ಅಲ್ಲಲ್ಲಿ ಕಪ್ಪುಬಾವುಟಗಳು. ಪ್ರಗತಿಪರರಿರಬೇಕು ಎಂದುಕೊಂಡೆ. ಕರತಾಡನಗಳ ಸದ್ದೂ ಕೇಳದಂತೆ ಮನಸ್ಸನ್ನು ನರಸಯ್ಯನ ಹುಂಡಿ ಆಕ್ರಮಿಸಿತ್ತು. □

ಸಂವಾದ



ಲೇಖಕರದಲ್ಲಿ ಮನವಿ

‘ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ ‘ಸಂವಾದ’ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ ‘ಸಂವಾದ’ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. ‘ಸಂವಾದ’ ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
‘ಸಂವಾದ’ ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಚದುರಿಹೋಗುತ್ತಿರುವ ಮೀಮಾಂಸೆಯ ಪರಿಕಲ್ಪನೆಗಳು

ಭಾರತೀಯ ಶ್ರಮಣಧಾರೆಗಳ ತಾತ್ವಿಕತೆಯನ್ನಾಧರಿಸಿದ ಜೀವನ ಕ್ರಮಗಳು ತಮ್ಮ ವಿರುದ್ಧದ ಸಾಂಸ್ಕೃತಿಕ ರಾಜಕಾರಣಕ್ಕೆ ಪ್ರತಿರೋಧವನ್ನೊಡ್ಡಲಾರದೆ ಪಕ್ಕಕ್ಕೆ ಸರಿಯುತ್ತಲೇ ಬಂದಿವೆ. ಅವು ಮುಂದಿಟ್ಟ ಕಾವ್ಯ ಮತ್ತು ಕಲಾಮೀಮಾಂಸೆಯ ಪರಿಕಲ್ಪನೆಗಳು ಚದುರಿಹೋಗಿವೆ. ವಿರೋಧಿ ಪ್ರಸ್ಥಾನಗಳು ಪ್ರಚುರಪಡಿಸಿದ ಮಿಥ್ಯಾ ಮಾರ್ಗಗಳ ಸಾಧಕ–ಬಾಧಕಗಳನ್ನು ಅನಾವರಣಮಾಡುವ ಮತ್ತು ಸರಿದಾರಿಯನ್ನು ವಿವರಿಸಿ ಕೊಡುವ ಇಮ್ಮಡಿ ಒತ್ತಡದಲ್ಲಿ ಅವು ತೊಳಲಾಡುತ್ತಿವೆ. ಜ್ಞಾನದ ವಾಹಕಗಳೆಂದು ಸಾಧಿಸುವ ಪರಿಕರಗಳನ್ನು ಬದಲಿಸಿಕೊಳ್ಳದೇ ಮುಂದುವರಿಯಲು ಸಾಧ್ಯವಿಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ಉದಾಹರಣೆಗೆ 'ಅಕ್ಷರವು' ಒಂದು ಪ್ರಮಾಣವಾಗಿ 'ಮಾತಿನ' ಮೇಲೆ ಬಹಳ ಕಾಲದಿಂದ ಯಜಮಾನಿಕೆಯನ್ನು ಸಾಧಿಸುತ್ತ ಬಂದಿದೆ. ಅಕ್ಷರ ಪ್ರಮಾಣವನ್ನು ಒಪ್ಪಿ ಬಾಳುತ್ತಿರುವ ಸಮೂಹದೆದುರಿಗೆ ಅದನ್ನು ನಿರಾಕರಿಸಿ ಮಾತನಾಡುವುದು ಬಹಳ ಕಷ್ಟ. ಆದರೆ ವಿಶ್ವದ ದೊಡ್ಡ ಸಮೂಹಗಳು ಇದೇ ಕಾರಣಕ್ಕೆ ಸಂಕಟಕ್ಕೆ ಸಿಕ್ಕಿ ತೊಳಲಾಡುತ್ತಿವೆ. ಅಕ್ಷರವನ್ನು ನಿರಾಕರಿಸಿ ಮಾತನ್ನು ಸ್ವೀಕರಿಸುವುದೆಂದರೆ ಚಲನಶೀಲತೆಯನ್ನು ಒಪ್ಪುವುದೆಂದೇ ಅರ್ಥ. ಬದುಕಿನಲ್ಲಿ ಮತ್ತು ಕಾವ್ಯ–ಕಲೆಗಳಲ್ಲಿ ಸ್ಥಗಿತ ಮೌಲ್ಯಗಳನ್ನು ನಿರಾಕರಿಸಿ ಚಲನಶೀಲರಾಗಲು ಅಗತ್ಯವಾದ ಮೀಮಾಂಸೆಯನ್ನು ಭಾರತೀಯ ಶ್ರಮಣಧಾರೆಗಳು ಒದಗಿಸಿಕೊಟ್ಟಿವೆ. ಬೌದ್ಧ, ನಾಥ, ಸಿದ್ಧ ಇತ್ಯಾದಿ ಶ್ರಮಣಧಾರೆಗಳು ರೂಪಿಸಿಕೊಟ್ಟಿರುವ ಮೀಮಾಂಸೆಯನ್ನು ನಾವೀಗ ಪುನರ್ ರೂಪಿಸಿಕೊಳ್ಳಬೇಕಾದ ಅಗತ್ಯವಿದೆ. ವಿಶೇಷವಾಗಿ ಬೌದ್ಧ ಧರ್ಮವು ಮುಂದಿಟ್ಟ ಮೀಮಾಂಸೆಯ ಮುಖ್ಯ ಪರಿಕಲ್ಪನೆಗಳನ್ನು ಚರ್ಚಿಸುವುದು ಈ ಲೇಖನಸರಣಿಯ ಉದ್ದೇಶವಾಗಿದೆ.



ಡಾ. ಎಸ್. ನಟರಾಜ್ ಬೂದಾಳು

ಈ ಲೋಕಕ್ಕೆ ಒಂದು ಆದಿಯನ್ನು ಮತ್ತು ಒಂದು ಆಧಾರವನ್ನು ನಿರಾಕರಿಸದ ಹೊರತು, ಈ ವಸ್ತು ಪ್ರಪಂಚವನ್ನು ಆಕಾರ ಅಥವಾ ನಿರಾಕಾರಗಳಲ್ಲಿ ಗ್ರಹಿಸುವುದನ್ನು ಬಿಡದ ಹೊರತು, ಎದುರಿಗಿನ ಎಲ್ಲ ಸಂರಚನೆಗಳನ್ನು ದಾಟಿ ಹೋಗದ ಹೊರತು, ಶರಣನೊಬ್ಬ 'ಉದಯಿಸಲು' ಸಾಧ್ಯವಿಲ್ಲ. ಅನುಭಾವೀ ಸಾಧಕನೊಬ್ಬ ತನ್ನನ್ನು ಮತ್ತು ತನ್ನ ಸುತ್ತಲ ಈ ಲೋಕವನ್ನು ವಿವರಿಸಿಕೊಳ್ಳದೆ ತನ್ನ ಯಾನವನ್ನು ಪ್ರಾರಂಭಿಸಲು ಸಾಧ್ಯವಿಲ್ಲ. ಕಲಾವಿದನ ಬದುಕೂ ಇದಕ್ಕಿಂತ ಭಿನ್ನವೇನಲ್ಲ. ಅವನೂ ಕೂಡ ತನ್ನ ಸುತ್ತಲಿನ ಲೋಕದ ಬಗೆಗೆ ನಿಲುವೊಂದನ್ನು ತಾಳಬೇಕು. ಅನೇಕ ಧರ್ಮಗಳು, ಪಂಥಗಳು, ಚಿಂತನಾಪ್ರಸ್ಥಾನಗಳು ಮತ್ತು ವಿಜ್ಞಾನ ಲೋಕವನ್ನು ವಿವರಿಸಿಕೊಡುವ ಉದ್ಯೋಗವನ್ನು ಮಾಡುತ್ತವೆ. ಹಾಗಾದರೆ ಬೌದ್ಧಧರ್ಮ ಲೋಕವನ್ನು ಏನೆಂದು ವಿವರಿಸಿದೆ?

ನಮ್ಮ ಇಂದ್ರಿಯಗಳು ದಕ್ಕಿಸಿಕೊಳ್ಳುವ ಅನುಭವಗಳು 'ಶುದ್ಧ' ರೂಪದಲ್ಲಿ ದಾಖಲಾಗಬೇಕು. ಇದು ಸೌಂದರ್ಯ ಮೀಮಾಂಸೆಯ ಮೊದಲ ಹಂತ. ಎಲ್ಲ ಅನುಭವಗಳೂ ಮೊದಲಿಗೆ ನಮಗೆ ಇಂದ್ರಿಯಗಳ ಮೂಲಕವೇ ದೊರಕಬೇಕು. ಇಂದ್ರಿಯಾತೀತ ಅನುಭವಗಳನ್ನು ಕಲೆ ಒಳಗೊಳ್ಳುವುದಾದರೆ ಅವುಗಳು ಕೂಡ ಇಂದ್ರಿಯಾನುಭವಗಳ ಮೂಲಕವೇ ನಮಗೆ ದೊರಕಬೇಕು. ನಮಗೆ ದಕ್ಕಿದ ಅನು ಭವಗಳು ಶುದ್ಧವೋ ಅಶುದ್ಧವೋ ಎಂದು ತೀರ್ಮಾನಿಸುವುದು ಹೇಗೆ? ಯಾವ ಮೂಲ ಆಕರದಿಂದ ಈ ಲೋಕ ಉಂಟಾಗಿದೆಯೋ ಆ ಮೂಲ ಆಕರದೊಂದಿಗೆ ಐಕ್ಯವನ್ನು ಸಾಧಿಸಿದರೆ, ಅದು ಶುದ್ಧ ಅನುಭವ ಎನ್ನುವುದು 'ಭಾರತೀಯ' (ಸ್ಥೂಲವಾಗಿ 'ಸಂಸ್ಕೃತ ಕಾವ್ಯ ಮೀಮಾಂಸೆ) ಸೌಂದರ್ಯ ಮೀಮಾಂಸೆಯ ಪ್ರಧಾನ ನಿಲುವು. ಅಂತಹ ಒಂದು 'ಮೂಲ'ವನ್ನು ಬೌದ್ಧ ಧರ್ಮವು ಮಾನ್ಯ ಮಾಡುವುದಿಲ್ಲ. ಹಾಗೆ ಲೋಕವು ಯಾವುದೋ ಒಂದರಿಂದ ಉಂಟಾಗಿದೆ ಮತ್ತು ಅದಕ್ಕೆ ನಿಶ್ಚಿತವಾದ ಪ್ರಾರಂಭವೊಂದಿದೆ ಎನ್ನುವುದನ್ನು ಬೌದ್ಧ ತಾತ್ವಿಕತೆಯು ಒಪ್ಪುವುದಿಲ್ಲ. 'ಭಾರತೀಯ' ಸೌಂದರ್ಯ ಮೀಮಾಂಸೆಯು ಈ ಲೋಕ ಸಮಸ್ತಕ್ಕೂ ಪ್ರಾರಂಭವೊಂದಿದೆ, ಅದೆಲ್ಲವೂ ಒಂದರಿಂದಲೇ ಉಂಟಾಗಿದೆ, ಅದೇ ಇದರ ನಡೆಯನ್ನು ನಿಯಂತ್ರಿಸುತ್ತಿದೆ ಮತ್ತು ಎಲ್ಲವೂ ಅದರಲ್ಲೇ ಲೀನವಾಗುತ್ತದೆ, ಎಂದು ಪ್ರತಿಪಾದಿಸುತ್ತದೆ. ಈ ನಿಲುವು ಆಯಾ ಪಂಥಗಳ ಮುಂದಿನ ನಡೆಯನ್ನು ನಿಯಂತ್ರಿಸುವುದರಿಂದ ಇದು ಬಹಳ ಮುಖ್ಯವಾದುದು. ಈ ನಿಲುವು ಕೇವಲ ಕಲೆ ಕಾವ್ಯಗಳ ಅಭಿವ್ಯಕ್ತಿಯನ್ನು ಮಾತ್ರ ವ್ಯಾಖ್ಯಾನಿಸದೆ, ಜೀವನಕ್ರಮವನ್ನೂ ನಿಯಂತ್ರಿಸುತ್ತದೆ. ಹಾಗಾಗಿ ನಮ್ಮ ಬದುಕು ಮತ್ತು ಅಭಿವ್ಯಕ್ತಿ ಒಂದೇ ಆಕರದಿಂದ ನಿರ್ದೇಶಿತವಾಗಿರುತ್ತದೆ. ಇಲ್ಲಿ ಒಬ್ಬ ಕಲಾವಿದನಾಗಲೀ, ಕವಿಯಾಗಲೀ, ಅನುಭಾವೀ ಸಾಧಕನಾಗಲೀ ತೆಗೆದುಕೊಳ್ಳುವ ನಿಲುವು ಬಹಳ ಮುಖ್ಯವಾಗುತ್ತದೆ. ಕಲಾವಿದನೊಬ್ಬ ತನ್ನ ಕಲೆಯ ಮೂಲಕ ಮಾಡಬಯಸುವ ಸಾಂಸ್ಕೃತಿಕ ರಾಜಕಾರಣವನ್ನು ಇದು ತೀರ್ಮಾನಿಸುತ್ತದೆ. ಲೋಕವನ್ನು ಸರಿಯಾಗಿ ವಿವರಸಿಕೊಡುವ ಮೂಲಕವೇ ಎದುರಾಗುವ ಎಲ್ಲ ಸಂದರ್ಭಗಳನ್ನು ಮಾನವೀಯವಾಗಿ ನಿರ್ವಹಿಸುವುದು ಹೇಗೆ ಎಂಬುದನ್ನು ಎಲ್ಲ ದರ್ಶನಗಳೂ ತಿಳಿಸಿಕೊಡಬೇಕು. ದರ್ಶನವೊಂದಕ್ಕೆ ನಿಜವಾದ ಸವಾಲು ಲೋಕಸಂದರ್ಭವೊಂದನ್ನು ಸರಿಯಾಗಿ ನಿರ್ವಹಿಸುವ ಸಾಮರ್ಥ್ಯವನ್ನು ದೊರಕಿಸಿ ಕೊಡುವುದು. ಅದನ್ನು ಸರಿಯಾಗಿ ನಿರ್ವಹಿಸುವ ಸಾಮರ್ಥ್ಯ ಬರುವುದು ಲೋಕವನ್ನು ಸರಿಯಾಗಿ ಅರಿತು ಕೊಂಡಾಗ. ಸರಿಯಾಗಿ ಅರಿತುಕೊಳ್ಳುವುದು ಅಂದರೆ ಏನು? ಎಲ್ಲ ಚಿಂತನಾಪ್ರಸ್ಥಾನಗಳೂ

ತಮ್ಮ ಯಾನವನ್ನು ಇಲ್ಲಿಂದಲೇ ಆರಂಭಿಸುತ್ತವೆ. ಅಲ್ಲಮಪ್ರಭುವಿನ ವಚನ ಸಂಕಲನಗಳು ಸಾಮಾನ್ಯವಾಗಿ ಈ ಕೆಳಗಿನ ವಚನದಿಂದ ಪ್ರಾರಂಭವಾಗುತ್ತವೆ.

ಆದಿ ಆಧಾರವಿಲ್ಲದಂದು
ಹಮ್ಮುಬಿಮ್ಮುಗಳಿಲ್ಲದಂದು
ಸುರಾಳ ನಿರಾಳವಿಲ್ಲದಂದು
ಸಚರಾಚರವೆಲ್ಲ ರಚನೆಗೆ ಬಾರದಂದು
ಗುಹೇಶ್ವರ, ನಿಮ್ಮ ಶರಣನುದಯಿಸಿದನಂದು

ಶರಣನೊಬ್ಬ 'ಉಂಟಾಗಲು' ಅವನು ತೆಗೆದುಕೊಳ್ಳಬೇಕಾದ ನಿಲುವೇನು ಎಂಬುದನ್ನು ಕುರಿತು ಅಲ್ಲಮ ನುಡಿಯುತ್ತಿದ್ದಾನೆ. ಈ ಲೋಕಕ್ಕೆ ಒಂದು ಆದಿಯನ್ನು ಮತ್ತು ಒಂದು ಆಧಾರವನ್ನು ನಿರಾಕರಿಸದ ಹೊರತು, ಈ ವಸ್ತುಪ್ರಪಂಚವನ್ನು ಆಕಾರ ಅಥವಾ ನಿರಾಕಾರಗಳಲ್ಲಿ ಗ್ರಹಿಸುವುದನ್ನು ಬಿಡದ ಹೊರತು, ಎದುರಿಗಿನ ಎಲ್ಲ ಸಂರಚನೆಗಳನ್ನು ದಾಟಿ ಹೋಗದ ಹೊರತು, ಶರಣನೊಬ್ಬ 'ಉದಯಿಸಲು' ಸಾಧ್ಯವಿಲ್ಲ. ಅನುಭಾವೀ ಸಾಧಕನೊಬ್ಬ ತನ್ನನ್ನು ಮತ್ತು ತನ್ನ ಸುತ್ತಲ ಈ ಲೋಕವನ್ನು ವಿವರಿಸಿಕೊಳ್ಳದೆ ತನ್ನ ಯಾನವನ್ನು ಪ್ರಾರಂಭಿಸಲು ಸಾಧ್ಯವಿಲ್ಲ. ಕಲಾವಿದನ ಬದುಕೂ ಇದಕ್ಕಿಂತ ಭಿನ್ನ ವೇನಲ್ಲ. ಅವನೂ ಕೂಡ ತನ್ನ ಸುತ್ತಲಿನ ಲೋಕದ ಬಗೆಗೆ ನಿಲುವೊಂದನ್ನು ತಾಳಬೇಕು. ಅನೇಕ ಧರ್ಮಗಳು, ಪಂಥಗಳು, ಚಿಂತನಾಪ್ರಸ್ಥಾನಗಳು ಮತ್ತು ವಿಜ್ಞಾನ ಲೋಕವನ್ನು ವಿವರಿಸಿಕೊಡುವ ಉದ್ಯೋಗವನ್ನು ಮಾಡುತ್ತವೆ. ಹಾಗಾದರೆ ಬೌದ್ಧಧರ್ಮ ಲೋಕವನ್ನು ಏನೆಂದು ವಿವರಿಸಿದೆ?

ಬೌದ್ಧ ಧರ್ಮದ ಲೋಕವಿವರಣೆ:

ಮಂಗಳವೂ ಪ್ರಾಪಂಚಿಕತೆಯ ಉಪಶಮನವೂ ಆದ ಪ್ರತೀತ್ಯಸಮುತ್ಪಾದವನ್ನು ಅನಿರೋಧ, ಅನುತ್ಪಾದ, ಅನುಚ್ಛೇದ, ಅಶಾಶ್ವತ, ಅನೇಕಾರ್ಥ, ಅನಾನಾರ್ಥ, ಅನಾಗಮ, ಅನಿರ್ಗಮ ಎಂದು ಉಪದೇಶಿಸಿದ ಸಂಬುದ್ಧನಿಗೆ ವಂದಿಸುತ್ತೇನೆ.

(ನಾಗಾರ್ಜುನನ 'ಮೂಲಮಧ್ಯಮಕಕಾರಿಕಾ'ದ ಅರ್ಪಣೆಯ ವಚನ)

ಈ ವಸ್ತು ಪ್ರಪಂಚವನ್ನು ಬುದ್ಧಗುರು ಹೇಗೆ ವಿವರಿಸಿಕೊಟ್ಟಿದ್ದಾನೆಂಬುದನ್ನು ನಾಗಾರ್ಜುನ ತನ್ನ ಆಚಾರ್ಯಕೃತಿಯಾದ ಮೂಲ ಮಧ್ಯಮಕಕಾರಿಕಾದ ಅರ್ಪಣೆಯ ವಚನದಲ್ಲಿಯೇ ಪ್ರಸ್ತಾಪಿಸುತ್ತಾನೆ. ಸದಾ ಚಲನೆಯಲ್ಲಿಯೇ ಇರುವ ಈ ಲೋಕಪ್ರವಾಹವನ್ನು 'ಪ್ರತೀತ್ಯಸಮುತ್ಪಾದ'ವೆಂದು ಕರೆಯಲಾಗಿದೆ. ಸದಾ ಮುಂದಕ್ಕೆ ಚಲಿಸುತ್ತಿರುವ ಚಕ್ರ ಪ್ರವಾಹವೇ ವಸ್ತುಪ್ರಪಂಚದ 'ಧರ್ಮ'ವಾಗಿರುವುದರಿಂದ, ಲೋಕದ ಶುದ್ಧ 'ಚಿತ್ರ'ವೆಂದರೆ ಈ ಚಲನೆಯೇ. ಇದರ ವಿವರಣೆಯನ್ನು ಆಮೇಲೆ ಗಮನಿಸೋಣ. ಮೊದಲಿಗೆ ಇಲ್ಲಿ ಎಂಟು ನಿರಾಕರಣೆಗಳಿವೆ. ಇಲ್ಲೊಂದು ವಿಶೇಷವಿದೆ. ಮೇಲ್ನೋಟಕ್ಕೆ ಈ ನಿರಾಕರಣೆಗಳನ್ನು ನಾವು ಒಪ್ಪಿಕೊಂಡರೂ, ನಮ್ಮ ಬದುಕಿನ ಕ್ರಮದಲ್ಲಿ ಅದನ್ನು ಅನ್ವಯಿಸಿಕೊಳ್ಳುವುದಿಲ್ಲ. ಅವುಗಳನ್ನು ನಿರಾಕರಿಸಲಾಗದಷ್ಟು ಮೊಂಡು ಹಠಕ್ಕೆ ಬಿದ್ದಿದ್ದೇವೆ. ಜಾಡಿಗೆ ಬಿದ್ದಿರುವ ನಮ್ಮನ್ನು ಸರಿದಾರಿಗೆ ತರಲು ಈ ನಿರಾಕರಣೆಗಳು ಅತ್ಯಗತ್ಯ. ಈ ಲೋಕವನ್ನು ವಿವರಿಸಿಕೊಡುವಾಗ ಬೌದ್ಧಧರ್ಮ ಮತ್ತು ವಿಜ್ಞಾನ ಮಾತ್ರ ಇದು 'ಏನೇನಲ್ಲ' ಎಂದು ವಿವರಿಸುವ ಮೂಲಕ ತಪ್ಪು ವಿವರಣೆಗಳನ್ನು ಮೊದಲು ನಿವಾರಿಸುತ್ತವೆ. ಹಾಗೆಯೇ ಈ ಲೋಕ ಏನು ಎನ್ನುವ ಪ್ರಶ್ನೆಗೆ ತನ್ನ ಅರಿವಿಗೆ ಇದುವರೆಗೆ ಬಂದಿರುವ ಸಂಗತಿಯನ್ನು ತಿಳಿಸಿ ಹೊಸ ಅರಿವಿಗೆ ಬಾಗಿಲನ್ನು ಸದಾ ತೆರೆದಿಡುತ್ತವೆ. ಹಾಗಾಗಿ ಬೌದ್ಧ ಧರ್ಮದ ತಾತ್ವಿಕತೆ ಯೆನ್ನುವುದು ಈಗಾಗಲೇ ತೀರ್ಮಾನವಾಗಿರುವ ಸಂಗತಿಯಲ್ಲ. ನಾಗಾರ್ಜುನ ಇದನ್ನು ತನ್ನ ಕಾರಿಕೆಯೊಂದರಲ್ಲಿ ಸ್ಪಷ್ಟಪಡಿಸುತ್ತಾನೆ.

ಬುದ್ಧನಿಲ್ಲದಂದು, ಅವನ ಶಿಷ್ಯರಿಲ್ಲದಂದು
ಬುದ್ಧಪ್ರಜ್ಞೆ ಪ್ರವಹಿಸುತ್ತಿರುತ್ತದೆ. ಅದಕ್ಕೆ ಸಂಸರ್ಗದ ಹಂಗಿಲ್ಲ.

(ಕಾರಿಕೆ ೧೨ ಅಧ್ಯಾಯ ೧೮, ನಾಗಾರ್ಜುನನ ಮೂಲ ಮಧ್ಯಮಕಕಾರಿಕಾ)

ಬುದ್ಧ ತಿಳಿಸಿಕೊಟ್ಟಿರುವ ಈ ಅರಿವು ಬುದ್ಧನ ಮೂಲಕವೇ ಅಥವಾ ಅವನ ಶಿಷ್ಯರ ಮೂಲಕವೇ ಬರಬೇಕಿಲ್ಲ. ಏಕೆಂದರೆ ಅದು 'ಸರಿಯಾದ ತಿಳುವಳಿಕೆ'ಯಾಗಿರುವುದರಿಂದ, 'ಸತ್ವ'ವುಳ್ಳ ಯಾರಿಗಾದರೂ ಯಾವಾಗಬೇಕಾದರೂ ಬರಬಹುದು.

ಎಂಟು ನಿರಾಕರಣೆಗಳು:

೧. **ಅನಿರೋಧ:** ಈ ಲೋಕದ ಯಾವುದಕ್ಕೂ ಶಾಶ್ವತ ಅಂತ್ಯವೆಂಬುದಿಲ್ಲ, ಯಾವುದೂ ಶಾಶ್ವತವಾಗಿ 'ಸತ್ತು' ಹೋಗುವುದಿಲ್ಲ. ಎಲ್ಲದಕ್ಕೂ ರೂಪಾಂತರವಿದೆಯೇ ಹೊರತು ಕೊನೆ ಯೆಂಬುದಿಲ್ಲ. ಜೀವಿಗಳಿಗೂ ಅಷ್ಟೇ, ರೂಪಾಂತರವಿದೆಯೇ ಹೊರತು ಸಾವೆಂಬುದಿಲ್ಲ.

೨. **ಅನುತ್ಪಾದ:** ಯಾವುದೂ ಹೊಸದಾಗಿ ಉಂಟಾಗುವುದಿಲ್ಲ. ತನ್ನಷ್ಟಕ್ಕೆ ತಾನೇ ಯಾವುದೂ ಸೃಷ್ಟಿಸಲ್ಪಡುವುದಿಲ್ಲ. ಬೇರೊಂದರಿಂದಲೂ ಸೃಷ್ಟಿಸಲ್ಪಡುವುದಿಲ್ಲ ಮತ್ತು ಕಾರಣವೇ ಇಲ್ಲದೆ ಯಾವುದೂ ಉಂಟಾಗುವುದಿಲ್ಲ. ಯಾವುದಾದರೊಂದು 'ಜನಿಸಿತು' ಅಂದರೆ ಅದು ರೂಪಾಂತರ ಹೊಂದಿತು ಎಂದೇ ಹೊರತು ಹೊಸದಾಗಿ ಹುಟ್ಟಿತು ಎಂದಲ್ಲ.

ಹುಟ್ಟು ಮತ್ತು ಸಾವುಗಳನ್ನು ಬೌದ್ಧಧರ್ಮ ವ್ಯಾಖ್ಯಾನಿಸಿದ ರೀತಿ ಭಿನ್ನವಾಗಿದೆ. ಸದಾ ಚಲಿಸುತ್ತಲೇ ಇರುವ ಈ ಲೋಕ ಪ್ರವಾಹದಲ್ಲಿ ಹುಟ್ಟು ಪ್ರಾರಂಭವೂ ಅಲ್ಲ, ಸಾವು ಕೊನೆಯೂ ಅಲ್ಲ. ಅವು ರೂಪಾಂತರದ ಹಂತಗಳಷ್ಟೇ.

೩. **ಅನುಚ್ಛೇದ:** ಯಾವುದೂ ಉಚ್ಛೇದಗೊಳ್ಳುವುದಿಲ್ಲ. ಯಾವುದನ್ನೂ ಛಿದ್ರಗೊಳಿಸಿ ನಾಶ ಮಾಡಲು ಬರುವುದಿಲ್ಲ.

೪. **ಅಶಾಶ್ವತ:** ಯಾವುದೂ ಒಂದು ಕ್ಷಣವೂ ಸ್ಥಗಿತ ಸ್ಥಿತಿಯಲ್ಲಿರುವುದಿಲ್ಲ. ನಿರಂತರವಾಗಿ ಬದಲಾಗುತ್ತಲೇ ಇರುತ್ತದೆ. ಹಾಗಾಗಿ ಯಾವುದೂ ಸ್ವತಂತ್ರವಲ್ಲ ಮತ್ತು ಶಾಶ್ವತವಲ್ಲ.

೫. **ಅನೇಕಾರ್ಥ:** ಯಾವುದನ್ನೂ ಕಡಿಮೆಗೊಳಿಸಿ ಒಂದನ್ನಾಗಿಸಲು ಸಾಧ್ಯವಿಲ್ಲ.

೬. **ಅನಾನಾರ್ಥ:** ಯಾವುದನ್ನೂ ಭಿನ್ನಗೊಳಿಸಿ ಅನೇಕವನ್ನಾಗಿಸಲು ಸಾಧ್ಯವಿಲ್ಲ.

೭. **ಅನಾಗಮ:** ಹೊಸದೊಂದರ ಆಗಮನ ಸಾಧ್ಯವಿಲ್ಲ.

೮. **ಅನಿರ್ಗಮ:** ಈ ಲೋಕಪ್ರವಾಹದಿಂದ ಯಾವುದೂ ನಿರ್ಗಮಿಸದು.

ಇದು ಲೋಕಪ್ರವಾಹದ ನೇತ್ಯಾತ್ಮಕ ವಿವರಣೆಯಾದರೆ, ಅದರ ಇತ್ಯಾತ್ಮಕ ವಿವರಣೆಯೂ ಅದೇ ಕಾರಿಕೆಯಲ್ಲಿದೆ. ಮೂರು ಸಂಗತಿಗಳನ್ನು ಅಲ್ಲಿ ತಿಳಿಸಲಾಗಿದೆ. ಮೊದಲನೆಯದಾಗಿ ಈ ಲೋಕ ಸಮಸ್ತವೂ 'ಪ್ರತೀತ್ಯ ಸಮುತ್ಪನ್ನವಾದುದು', ಎರಡನೆಯದಾಗಿ ಈ ತಿಳುವಳಿಕೆಯಿಂದ ಪ್ರೇರಿತವಾದ ನಡವಳಿಕೆ ಲೋಕಕ್ಕೆ ಮಂಗಳವನ್ನು ತರುತ್ತದೆ, ಮತ್ತು ಮೂರನೆಯದಾಗಿ ಈ ಅರಿವು ನಮ್ಮನ್ನು ದುಃಖ ಮುಕ್ತರನ್ನಾಗಿಸುತ್ತದೆ (ಪ್ರಾಪಂಚಿಕತೆಯ ಉಪಶಮನ).

ಪ್ರತೀತ್ಯಸಮುತ್ಪಾದ: ಕಾರಣವಿಲ್ಲದೆ ಯಾವುದೂ ಉಂಟಾಗುವುದಿಲ್ಲ. ಉಂಟಾಗುವ ಎಲ್ಲವೂ ಕಾರಣ ಮತ್ತು ಪರಿಸ್ಥಿತಿಗಳ(ಪ್ರತ್ಯಯ) ಸಂಬಂಧದಲ್ಲಿ ಒದಗಿಬಂದ ಪರಿಣಾಮ ಮಾತ್ರಹಾಗಾಗಿ ಇದು ಪ್ರತೀತ್ಯ ಸಮುತ್ಪಾದ (ಪ್ರತ್ಯಯಗಳಿಂದ ಉಂಟಾದುದು). ಅಂದರೆ:

೧. ಕಾರಣ-ಪರಿಸ್ಥಿತಿ-ಪರಿಣಾಮಗಳ ಈ ಲೋಕ ಪ್ರವಾಹವು 'ಸಂಬಂಧಗಳ ಜಾಲ' ಮಾತ್ರ.

೨. ಈ ಸಂಬಂಧ ಜಾಲದಲ್ಲಿರುವ ಕಾರಣ, ಪರಿಸ್ಥಿತಿ ಮತ್ತು ಪರಿಣಾಮಗಳು ಸ್ವತಂತ್ರ ಘಟಕಗಳಲ್ಲ. ಸ್ವಲ್ಪ ವಿಸ್ತಾರವಾದ ಉದಾಹರಣೆಯೊಂದನ್ನು ಕೊಡಬಹುದು. ಹಣ್ಣು-ಬೀಜ-ಮೊಳಕೆ-ಸಸಿ-ಮರ-ಹೂ-ಹೀಚು-ಕಾಯಿ-ಹಣ್ಣು-ಬೀಜ-ಮೊಳಕೆ-ಸಸಿ ಇದೊಂದು ಪ್ರವಾಹ ಸರಣಿ. ಮೊದಲನೆಯದಾಗಿ ಈ ಸರಣಿಯಲ್ಲಿ ಪ್ರಾರಂಭದ ಹಂತವೆಂದಾಗಲೀ ಕೊನೆಯ ಹಂತವೆಂದಾಗಲೀ ಯಾವುದನ್ನೂ ಗುರುತಿಸಲಾಗದು. ಮೊಳಕೆ ಎನ್ನುವುದು ಬೀಜ ಎನ್ನುವ ಕಾರಣ ಮತ್ತು ಮೊಳೆಯಲು ಬೇಕಾದ ಪರಿಸ್ಥಿತಿಯ ಸಂಯೋಗದ ಪರಿಣಾಮವಾಗಿದೆ. ಹಾಗೆಯೇ ಸಸಿ ಎನ್ನುವುದು ಮೊಳಕೆ ಎನ್ನುವ ಕಾರಣ, ಅಗತ್ಯವಿರುವ ಮಣ್ಣು ಶಾಖ ಇತ್ಯಾದಿ ಪರಿಸ್ಥಿತಿಯ ಸಂಯೋಗದಿಂದ ಉಂಟಾದ ಪರಿಣಾಮವಾಗಿದೆ. ಈ ಸರಣಿಯಲ್ಲಿ ಯಾವುದೂ ಯಾವ ಹಂತದಲ್ಲಿಯೂ ಸ್ವತಂತ್ರವಲ್ಲ. ಸದಾ ಬದಲಾವಣೆಯಲ್ಲಿಯೇ ಇರುತ್ತವೆ.

೩. ನಾವು ಕಾಣುವ ಲೋಕ ದೃಶ್ಯಗಳೆಲ್ಲ ಅನೇಕಗಳ ಸಂಯೋಜನೆಗಳೇ ಆಗಿವೆ. ಈ ಅನೇಕಗಳ ನಡುವಿನ ಸಂಬಂಧವಾಗಿರುವ ಲೋಕವನ್ನು ಹಾಗೆಂದು ಅರಿತಾಗ ನಾವು ನಿಜವನ್ನು ಅರಿಯುತ್ತೇವೆ. ಈ ಸಂಯೋಜನೆಗಳ ಲಕ್ಷಣಗಳೆಂದರೆ: ೧) ಯಾವಾಗಲೂ ಬದಲಾವಣೆಯನ್ನು ಹೊಂದುತ್ತಿರುವುದು ೨) ಅದರದೇ ಆದ 'ಆತ್ಮ'ವೆನ್ನುವುದು ಇಲ್ಲದಿರುವುದು ಮತ್ತು ೩) ನಿರಂತರ 'ತಲ್ಲಣ'ದಿಂದಿರುವುದು. ಆದರೆ ಸಾಮಾನ್ಯ ಮಾನವಮತಿ ಲೋಕವನ್ನು ಸ್ವತಂತ್ರವಸ್ತುಗಳ ಒಂದು ಸಂಗ್ರಹವೆಂದು ಭಾವಿಸಿ ವ್ಯವಹರಿಸುತ್ತದೆ.

ವಸ್ತು ಪ್ರಪಂಚವನ್ನು ಕುರಿತಾದ ಈ ಬೌದ್ಧ ವಿವರಣೆಯನ್ನು ಮಧ್ಯಮಮಾರ್ಗ, ಶೂನ್ಯತೆ, ಪ್ರತೀತ್ಯಸಮುತ್ಪಾದ, ನಿಃಸ್ವಭಾವವಾದ, ಅನಾತ್ಮವಾದ ಮುಂತಾದುವುಗಳಿಂದ ಸೂಚಿಸುತ್ತಾರೆ. ತಾನು ಮತ್ತು ತನ್ನ ಎದುರಿನ ಎಲ್ಲವನ್ನೂ 'ಇದೆ' ಎಂದೋ ಅಥವಾ 'ಇದೆಲ್ಲ ನಿಜವಲ್ಲ, ಇದರ ಹಿಂದೆ ಇರುವುದು ಮತ್ತೊಂದು' ಎಂದು ಗ್ರಹಿಸಿ ವ್ಯವಹರಿಸುವ ನಮಗೆ, ಇದೆ-ಇಲ್ಲ ಎಂಬ ಎರಡು ತುದಿಗಳನ್ನು ಬಿಟ್ಟು ಲೋಕವನ್ನು ಚಲಿಸುತ್ತಿರುವ ಪ್ರವಾಹ ಎಂದು ನೋಡುವ ಮಧ್ಯಮ ಮಾರ್ಗವನ್ನು ಬುದ್ಧಗುರು ತೋರಿಸಿಕೊಟ್ಟನು. ಯಾವುದಕ್ಕೂ ಸ್ವತಂತ್ರವಾದ ಅಸ್ತಿತ್ವ (ಸ್ವ-ಭಾವ) ಇಲ್ಲದಿರುವುದನ್ನು ತೋರಿಸಿ ಕೊಟ್ಟುದುದರಿಂದ ಇದನ್ನು ನಿಃಸ್ವಭಾವವಾದವೆಂದೂ, ನಾವು ತಪ್ಪಾಗಿ ಗ್ರಹಿಸುವ ವಸ್ತುರೂಪದಲ್ಲಿ ಸ್ವತಂತ್ರ ವಸ್ತುವೇ ಇಲ್ಲದಿರು

(೪೫ನೇ ಪುಟಕ್ಕೆ)

ಅಭಿವೃದ್ಧಿ ಮತ್ತು ಬಜೆಟ್: ಕರ್ನಾಟಕ ಎತ್ತ ಸಾಗುತ್ತಿದೆ



-೨-

ಡಾ. ಟಿ.ಆರ್. ಚಂದ್ರಶೇಖರ್

ಕರ್ನಾಟಕದ ಮುಖ್ಯಮಂತ್ರಿ ಶ್ರೀ ಬಿ.ಎಸ್ ಯಡಿಯೂರಪ್ಪ ಅಭಿವೃದ್ಧಿ ಬಗ್ಗೆ ತುಂಬಾ ಮಾತನಾಡುತ್ತಾರೆ. ಅದನ್ನು ಒಂದು ರೀತಿಯಲ್ಲಿ ಮಂತ್ರದಂತೆ ಜಪಿಸುತ್ತಾರೆ. ಅವರು ಪ್ರತಿನಿಧಿಸುವ ಪಕ್ಷದ ಒಲವು-ನಿಲವುಗಳ ಹಿನ್ನೆಲೆಯಲ್ಲಿ ಅವರ ಅಭಿವೃದ್ಧಿ ಕುರಿತ ಮಾತುಗಳು ಕುತೂಹಲ ಹುಟ್ಟಿಸುತ್ತವೆ. ಅವರು ಉದ್ವೇಗಕಾರಿ-ಭಾವನಾತ್ಮಕ ಸಂಗತಿಗಳನ್ನು ಬದಿಗಿಟ್ಟು ಅಭಿವೃದ್ಧಿ ಸಂಗತಿಗಳನ್ನು ಮುಂಚೂಣಿಗೆ ತಂದಿರುವುದು ನಿಜಕ್ಕೂ ಶ್ಲಾಘನೀಯ ಕಾರ್ಯವಾಗಿದೆ. ಪ್ರತಿಗಾಮಿ ಶಕ್ತಿಗಳನ್ನು ಮಣಿಸಿ ಅವುಗಳನ್ನು ಪ್ರಗತಿಗಾಮಿಗಳನ್ನಾಗಿ ಮಾಡಬಲ್ಲ ಶಕ್ತಿ ಕರ್ನಾಟಕಕ್ಕಿದೆ ಎಂಬುದಕ್ಕೆ ಇದು ಒಂದು ಸಾಕ್ಷಿಯಾಗಬಹುದು. ಇದು ಆಳುವ ಪಕ್ಷವು ರೂಪಿಸಿರುವ ಕೇವಲ ಸದ್ಯದ ರಾಜಕೀಯ ತಂತ್ರವೋ ಅಥವಾ ನಿಜವಾಗಿ ಅದರಲ್ಲಿ ಪರಿವರ್ತನೆ ಉಂಟಾಗಿದೆಯೊ ಎಂಬುದನ್ನು ಕಾಲವು ಮಾತ್ರ ಹೇಳಬಲ್ಲದು.

ಉದ್ವೇಗ- ಭಾವನೆಗಳನ್ನು ಕೆರಳಿಸಿ ರಾಜಕೀಯ ನಡೆಸುವ ಪಕ್ಷವೊಂದು ಹೀಗೆ ದಿಢೀರನೆ ಜನರು ಹರಿಸುವ ಬೆವರು, ಕಣ್ಣೀರು, ರಕ್ತದ ಘಾಟುವಿನ ಬಗ್ಗೆ ಮಾತನಾಡ ತೊಡಗಿದೆಯೆಂದರೆ ಅದನ್ನು ಸ್ವಲ್ಪ ಅನುಮಾನದಿಂದ ನೋಡ ಬೇಕಾಗುತ್ತದೆ. ಏಕೆಂದರೆ ಅವರು ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಿರುವಂತೆ ಕಂಡರೂ ಅವರ ೨೦೦೮-೦೯ನೆಯ ಸಾಲಿನ ಬಜೆಟ್ಟನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪ ಅಭಿವೃದ್ಧಿಯ ಬಗ್ಗೆ ಅತ್ಯಂತ ಮುಗ್ಧವಾಗಿ ತಮ್ಮ ವಿಚಾರಗಳನ್ನು ಮಂಡಿಸಿರುವುದು ನಮ್ಮ ಅನುಮಾನಗಳನ್ನು ಗಟ್ಟಿಗೊಳಿಸುತ್ತವೆ. ಕೇವಲ ಸದಾಶಯಗಳೇ ಅಭಿವೃದ್ಧಿಯನ್ನು ತರುವುದಾದರೆ ಅವರ ಬಜೆಟ್ಟಿನ ಬಗ್ಗೆ ಟೀಕೆ ಸಾಧ್ಯವಿಲ್ಲ. ಆದರೆ ಅಭಿವೃದ್ಧಿ ಯೆಂಬುದು ಸದಾಶಯಗಳಿಂದ ಸಾಧಿಸಿಕೊಳ್ಳುವ ಸಂಗತಿಯಲ್ಲವಲ್ಲ! ಎಲ್ಲರಿಗೂ ಒಳ್ಳೆಯದಾಗಬೇಕೆಂಬುದು ಸರಿ. ಎಲ್ಲರೂ ಒಳ್ಳೆಯವರಾಗ ಬೇಕೆಂಬುದೂ ಸರಿ. ಆದರೆ ಸಾಮಾಜಿಕ ಬದುಕಿನಲ್ಲಿ ಅದು ಸಾಧ್ಯವೆ? ಅಲ್ಲಿ ಪರಸ್ಪರ ಘರ್ಷಣೆಗಳಿರುವುದಿಲ್ಲವೆ? ಜನರ ಪರಸ್ಪರ ಹಿತಾಸಕ್ತಿಗಳು ಭಿನ್ನವಾಗಿರುವುದಿಲ್ಲವೆ?. ಭಿನ್ನವಾಗಿರುವುದಿಲ್ಲವೆ ಅನ್ನುವುದಕ್ಕಿಂತ ಅವು ಪರಸ್ಪರ ವಿರುದ್ಧವಾದ ಸಂಬಂಧವಿರುವ ಸಂಗತಿಗಳಾಗಿರುವುದಿಲ್ಲವೆ?

ಬಂಡವಾಳ-ಶ್ರಮ, ಜಮೀನುದಾರ-ಕೃಷಿ ದಿನಗೂಲಿ ದುಡಿಮೆ ಗಾರ, ಮಹಿಳೆ-ಪುರುಷ, ನಗರವಾಸಿ-ಗ್ರಾಮೀಣವಾಸಿ, ಅಕ್ಷರಸ್ಥ-ಅನಕ್ಷರಸ್ಥ, ಉದ್ಯೋಗಿ-ನಿರುದ್ಯೋಗಿ, ಶಿಷ್ಟ-ಪರಿಶಿಷ್ಟ ಮುಂತಾದ ಒಂದಕ್ಕೊಂದು ವಿರುದ್ಧವಾದ ಹಿತಾಸಕ್ತಿಗಳನ್ನುಳ್ಳ, ತನ್ನದು ಮಾತ್ರವೆ ಅಧಿಕೃತವೆನ್ನುವ ಪರಸ್ಪರ ಭಿನ್ನವಾದ ಸಂಗತಿಗಳು ನಮಗೆ ವಾಸ್ತವ ಜಗತ್ತಿನಲ್ಲಿ ಎದುರಾಗುತ್ತವೆ. ಈ ಬಗೆಯ ಸಂಗತಿಗಳ ನಡುವೆ ಘರ್ಷಣೆಗಳಿರುತ್ತವೆ. ಪರಸ್ಪರ ವಿರುದ್ಧವಾದ ಸಂಗತಿಗಳ ನಡುವೆ ಸಂಬಂಧ ಸೌಹಾರ್ದಯುತವಾಗಿರುವುದಿಲ್ಲ. ಇಲ್ಲಿ ಸರ್ಕಾರವೊಂದು ಯಾರ ಪರ ಅಥವಾ ಯಾವುದರ ಪರ ನಿಲ್ಲುತ್ತದೆ ಯೆಂಬುದು ಮುಖ್ಯವಾಗುತ್ತದೆ. ಸರ್ಕಾರದ ಅಭಿವೃದ್ಧಿ ನೀತಿ-ಕಾರ್ಯಕ್ರಮಗಳು ಇಂತಹ ಸಂಗತಿಗಳ ಬಗ್ಗೆ ಕುರುಡಾಗಿರುವುದು ಅಥವಾ ಸ್ಪಂದಿಸದಿರುವುದು ಸಾಧ್ಯವಿಲ್ಲ. ನಿಜವಾಗಿ ಹೇಳಬೇಕೆಂದರೆ ಸರ್ಕಾರವೊಂದರ ಅಭಿವೃದ್ಧಿ ನೀತಿಗಳನ್ನು ಮೌಲ್ಯಮಾಪನ ಮಾಡುವ ಮಾನದಂಡಗಳೇ ಇವಾಗಿವೆ. ಈ ಮಾನದಂಡದಿಂದ ಬಿ.ಎಸ್ ಯಡಿಯೂರಪ್ಪ ಅವರ ೨೦೦೮-೦೯ನೆಯ ಸಾಲಿನ ಬಜೆಟ್ಟನ್ನು ಪರಿಶೀಲಿಸಿದಾಗ ನಮಗೆ ಅನೇಕ ಪ್ರಶ್ನೆಗಳು ಎದುರಾಗುತ್ತವೆ. ಅಂತಹ ಪ್ರಶ್ನೆಗಳನ್ನು ಕುರಿತಂತೆ ಇಲ್ಲಿ ಚರ್ಚಿಸಲಾಗಿದೆ.

ಬಿ.ಎಸ್.ಯಡಿಯೂರಪ್ಪ ಅವರ ಅಭಿವೃದ್ಧಿ ಪ್ರಣಾಳಿಕೆ

ಮುಖ್ಯಮಂತ್ರಿಗಳು ತಮ್ಮ ಬಜೆಟ್ಟು ಭಾಷಣದಲ್ಲಿ ತಮ್ಮ ಅಭಿವೃದ್ಧಿ ಪ್ರಣಾಳಿಕೆ ಬಗ್ಗೆ ಮಾತನಾಡಿದ್ದಾರೆ. ಅದನ್ನು ಹತ್ತು ಅಂಶಗಳ ಸೂತ್ರಗಳಲ್ಲಿ ಅವರು ಅಲ್ಲಿ ಮಂಡಿಸಿದ್ದಾರೆ. ಈಗಾಗಲೆ ತಿಳಿಸಿರುವಂತೆ ಅವು 'ಸದಾಶಯ'ಗಳನ್ನು ಹೊತ್ತ ಮುಗ್ಧ ವಿಚಾರಗಳಾಗಿವೆ.

· ರಾಜ್ಯದ ಎಲ್ಲ ಹಳ್ಳಿಗಳಿಗೂ ಕುಡಿಯುವ ನೀರು, ನೈರ್ಮಲ್ಯ,ರಸ್ತೆ, ವಿದ್ಯುತ್ತು, ಆರೋಗ್ಯ, ಶಿಕ್ಷಣ, ಮುಂತಾದವುಗಳನ್ನು ಒದಗಿಸುವುದು(ಕಳೆದ ೫೦ ವರ್ಷಗಳಿಂದ ಹೇಳಿಕೊಂಡು ಬಂದಿರುವ ಮತ್ತು ಇನ್ನೂ ಮುಂದೆಯೂ ೫೦-೬೦ ವರ್ಷ ಹೇಳಿಕೊಂಡೆ ಬದುಕುವ ರಾಜಕಾರಣದ ಮಾತುಗಳಿವು).

· ಹತ್ತು ಲಕ್ಷ ಜನರಿಗೆ ಉದ್ಯೋಗ ಒದಗಿಸುವುದು (ಸರ್ಕಾರದ ಉದ್ಯೋಗ ಒದಗಿಸುವ ಸಾಮರ್ಥ್ಯವೇ ಹಿಂಗಿ ಹೋಗುತ್ತಿರುವ ಹಿನ್ನೆಲೆಯಲ್ಲಿ ಇಂತಹ ಅವರ ಅಭಿಲಾಷೆಗಳನ್ನು ನಾವು ನೋಡಬೇಕು).

· ದುರ್ಬಲ ವರ್ಗ-ಅಲ್ಪಸಂಖ್ಯಾತರ ಪ್ರಗತಿಗೆ ನೆರವು ನೀಡುವುದು(ಇದು ಕೇವಲ ಸದಾಶಯ)

· ಪ್ರಜಾಪ್ರಭುತ್ವದ ಪರಂಪರೆಯನ್ನು ಕಾಪಾಡುವುದು(ದೊಡ್ಡ ಪಟ್ಟಣವೊಂದರ ನಟ್ಟನಡುವಿನ ವೃತ್ತದಲ್ಲಿರುವ ೫೦ ವರ್ಷ ಹಳೆಯದಾದ ಸ್ಮಾರಕದಂತಹ ಬೃಹತ್ ಕಟ್ಟಡವೊಂದನ್ನು ರಾತ್ರೋ-ರಾತ್ರಿ ಸಂಪೂರ್ಣ ನಾಶ ಮಾಡಿ ಅನೇಕ ತಿಂಗಳುಗಳೇ ಕಳೆದರೂ ಅದನ್ನು ನಾಶ ಮಾಡಿದ ಅಪರಾಧಿಗಳನ್ನು ಹುಡುಕಿಸುವುದರ ಬಗ್ಗೆ ಯಾವುದೇ ಗಮನ ನೀಡದೆ ಮುಗುಮ್ಮಾಗಿ 'ಸಂಸ್ಕೃತಿ'ಯ ಬಗ್ಗೆ ಉದ್ದುದ್ದ ಭಾಷಣ ಮಾಡುತ್ತಲೇ 'ಸಂಸ್ಕೃತಿ'ಯ ನಾಶದಲ್ಲಿ ಪಾಲುದಾರರಾಗಿರುವ ಸರ್ಕಾರದಿಂದ ನಾವು ಯಾವ ಬಗೆಯ ಪ್ರಜಾಪ್ರಭುತ್ವ ಆದರ್ಶಗಳನ್ನು ಬಯಸಬಹುದು? (ಒಲೆಹತ್ತಿ ಉರಿದಾಗ)

· ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು (ಸಂವಿಧಾನೇತರ 'ಜಿಲ್ಲಾ ಉಸ್ತುವಾರಿ ಸಚಿವ' ಹುದ್ದೆಯನ್ನು ಪಂ.ರಾ.ಸಂ.ಗಳ ಮೇಲೆ ಹೇರಿ ಅವುಗಳ ಕಾರ್ಯಕ್ಷಮತೆಯನ್ನು ಉತ್ತಮಪಡಿಸುತ್ತೇವೆಂಬುದು ಕೇವಲ ಬೂಟಾಟಿಕೆಯೆಂಬುದು ಯಾರಿಗೂ ತಿಳಿಯುವುದಿಲ್ಲವೆಂದು ಸರ್ಕಾರ ಭಾವಿಸಿರು

ಕೇವಲ ಸದಾಶಯಗಳೇ ಅಭಿವೃದ್ಧಿಯನ್ನು ತರುವುದಾದರೆ ಅವರ ಬಜೆಟ್ಟಿನ ಬಗ್ಗೆ ಟೀಕೆ ಸಾಧ್ಯವಿಲ್ಲ. ಆದರೆ ಅಭಿವೃದ್ಧಿಯೆಂಬುದು ಸದಾಶಯಗಳಿಂದ ಸಾಧಿಸಿಕೊಳ್ಳುವ ಸಂಗತಿಯಲ್ಲವಲ್ಲ! ಎಲ್ಲರಿಗೂ ಒಳ್ಳೆಯದಾಗ ಬೇಕೆಂಬುದು ಸರಿ. ಎಲ್ಲರೂ ಒಳ್ಳೆಯವರಾಗ ಬೇಕೆಂಬುದೂ ಸರಿ. ಆದರೆ ಸಾಮಾಜಿಕ ಬದುಕಿನಲ್ಲಿ ಅದು ಸಾಧ್ಯವೆ? ಅಲ್ಲಿ ಪರಸ್ಪರ ಘರ್ಷಣೆಗಳಿರುವುದಿಲ್ಲವೆ? ಜನರ ಪರಸ್ಪರ ಹಿತಾಸಕ್ತಿಗಳು ಭಿನ್ನವಾಗಿರುವುದಿಲ್ಲವೆ? ಭಿನ್ನವಾಗಿರುವುದಿಲ್ಲವೆ ಅನ್ನುವುದಕ್ಕಿಂತ ಅವು ಪರಸ್ಪರ ವಿರುದ್ಧವಾದ ಸಂಬಂಧವಿರುವ ಸಂಗತಿಗಳಾಗಿರುವುದಿಲ್ಲವೆ? ಬಂಡವಾಳ-ಶ್ರಮ, ಜಮೀನುದಾರ-ಕೃಷಿ ದಿನಗೂಲಿ ದುಡಿಮೆಗಾರ, ಮಹಿಳೆ-ಪುರುಷ, ನಗರವಾಸಿ-ಗ್ರಾಮೀಣ ವಾಸಿ, ಅಕ್ಷರಸ್ಥ-ಅನಕ್ಷರಸ್ಥ, ಉದ್ಯೋಗಿ-ನಿರುದ್ಯೋಗಿ, ಶಿಷ್ಟ-ಪರಿಶಿಷ್ಟ ಮುಂತಾದ ಒಂದಕ್ಕೊಂದು ವಿರುದ್ಧವಾದ ಹಿತಾಸಕ್ತಿಗಳನ್ನುಳ್ಳ, ತನ್ನದು ಮಾತ್ರವೆ ಅಧಿಕೃತವೆನ್ನುವ ಪರಸ್ಪರ ಭಿನ್ನವಾದ ಸಂಗತಿಗಳು ನಮಗೆ ವಾಸ್ತವ ಜಗತ್ತಿನಲ್ಲಿ ಎದುರಾಗುತ್ತವೆ.

ವಂತೆ ಕಾಣುತ್ತದೆ).

· ನಿರ್ದಿಷ್ಟ ಕಾರ್ಯಕ್ರಮಗಳ ಚೌಕಟ್ಟನ್ನು ಬಿಟ್ಟು ಇಡೀ ಬಜೆಟ್ಟಿನಲ್ಲಿ ಮುಖ್ಯಮಂತ್ರಿಗಳು ಪ.ಜಾ. ಪ.ಪಂ. ಒಬಿಸಿ,ಮಹಿಳೆಯರು ಮತ್ತು ಕೂಲಿಕಾರರು ಮುಂತಾದವರ ಹಿತಾಸಕ್ತಿಗಳ ಬಗ್ಗೆ ಎಲ್ಲಿಯೂ ಉಪಚಾರಕ್ಕಾದರೂ ಮಾತನಾಡಿಲ್ಲ.

· ನಮಗೆಲ್ಲಾ ತಿಳಿದಿರುವಂತೆ ನಮ್ಮ ರಾಜ್ಯವನ್ನು ಕಿತ್ತು ತಿನ್ನುತ್ತಿರುವ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯ ಬಗ್ಗೆ ಅವರು ತಮ್ಮ 'ಅಭಿವೃದ್ಧಿ ಪ್ರಣಾಳಿಕೆ'ಯಲ್ಲಿ ಎಲ್ಲಿಯೂ ಮಾತನಾಡಿಲ್ಲ. ಅದರ ಬಗ್ಗೆ ಅವರ ಆಸಕ್ತಿಯು ಕೇವಲ ಔಪಚಾರಿಕವಾದುದು ಎಂಬುದನ್ನು ಮುಂದೆ ಚರ್ಚಿಸಲಾಗುವುದು. ಒಟ್ಟಾರೆಯಾಗಿ ಬಜೆಟ್ಟು ದಲಿತ ಸಂವೇದನೆ,ಮಹಿಳಾ ಸಂವೇದನೆ ಮತ್ತು ಕೂಲಿಕಾರರ ಸಂವೇದನೆಗಳಿಂದ ಅತೀತವಾಗಿದೆ.

· ಇವರ ಲಿಂಗ ಸಂಬಂಧಗಳ ಬಗೆಗಿನ ಧೋರಣೆ ಬಗ್ಗೆ ಏನನ್ನೂ ಹೇಳದಿರುವುದೆ ಲೇಸು. ಅಧಿಕಾರಕ್ಕೆ ಬಂದು ನೂರು ದಿನಗಳು ಕಳೆಯುತ್ತಿದ್ದರೂ ಅದಕ್ಕೆ ರಾಜ್ಯದ ಮಹಿಳಾ ಆಯೋಗಕ್ಕೆ ಒಬ್ಬ ಮುಖ್ಯಸ್ಥರನ್ನು ನೇಮಿಸುವುದು ಸಾಧ್ಯವಾಗಿಲ್ಲ. ಆದರೆ ತಕ್ಷಣಕ್ಕೆ ರಾಜಕೀಯ ಲಾಭವಾಗುವಂತಹ ಜನಪ್ರಿಯ ಕಾರ್ಯಕ್ರಮಗಳನ್ನು ಮಾತ್ರ ಘೋಷಿಸುವುದರಲ್ಲಿ ಕಾಲ ವಿಳಂಬ ಮಾಡುವುದಿಲ್ಲ. ಈ ರಾಜ್ಯದಲ್ಲಿ ಸರಿ ಸುಮಾರು ೪೦ಲಕ್ಷ ದಿನಗೂಲಿ ಮಹಿಳಾ ದುಡಿಮೆಗಾರರಿದ್ದಾರೆ. ಅವರಲ್ಲಿ ಹೆಚ್ಚು ಜನ ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿದ್ದಾರೆ. ಬೆಂಗಳೂರಿನ ಕಟ್ಟಡ ಕಾಮಗಾರಿನಲ್ಲಿ ನಿರತವಾಗಿರುವವರಲ್ಲಿ ಮುಕ್ಕಾಲು ಪಾಲು ಜನರು ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಗಳಾದ ವಿಜಾಪುರ, ಕೊಪ್ಪಳ, ರಾಯಚೂರು ಮತ್ತು ಗುಲಬರ್ಗಾಗಳಿಗೆ ಸೇರಿದವರಾಗಿರುತ್ತಾರೆ. ಅಲ್ಲಿ ಯಾವುದೆ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ದುರಂತ ಸಂಭವಿಸಿದರೆ ಅದರಲ್ಲಿ ಬಲಿಯಾಗುವವರು ಸರ್ವೆ ಸಾಮಾನ್ಯವಾಗಿ ಗುಲಬರ್ಗಾ ವಿಭಾಗದ ಜಿಲ್ಲೆಗಳಿಗೆ ಸೇರಿದವರಾಗಿರುತ್ತಾರೆ. ಇಂತಹ ಸಂಗತಿಗಳ ಬಗ್ಗೆ ಇವರ ಬಜೆಟ್ಟು, ಇವರ ಅಭಿವೃದ್ಧಿ ಪ್ರಣಾಳಿಕೆ ಮೌನದಿಂದಿದೆ.

ಪ್ರಾದೇಶಿಕ ಅಸಮಾನತೆ ಮತ್ತು 'ವಿಶೇಷ ಅಭಿವೃದ್ಧಿ ಯೋಜನೆ'.

ಡಾ। ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯ ಬಹು ಮುಖ್ಯವಾದ ಶಿಫಾರಸ್ಸಾದ 'ಎಂಟು ವರ್ಷಗಳ ಅಭಿವೃದ್ಧಿ ಯೋಜನೆ'ಯನ್ನು ೨೦೦೭-೨೦೦೮ನೆಯ ಸಾಲಿನಲ್ಲಿ ಅದರ ಮೊದಲ ವರ್ಷದ ಬಾಬ್ತು ರೂ.೧೫೭೧.೫೦ಕೋಟಿಯನ್ನು ತೆಗೆದಿರಿಸಿ ಅನುಷ್ಠಾನಗೊಳಿಸಿದ ಕೀರ್ತಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಸಲ್ಲಬೇಕು. ಈ ಯೋಜನೆ ಬಗ್ಗೆ ಎಲ್ಲ ವಿವರಗಳೂ ಇಂದು ನಮಗೆ ಲಭ್ಯವಿವೆ. ಈ ಯೋಜನೆಯನ್ನು ಶಿಫಾರಸ್ಸು ಮಾಡುವಾಗ ಡಾ।ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯಲ್ಲಿ ಅತ್ಯಂತ ಸ್ಪಷ್ಟವಾಗಿ ಎಂಟು ವರ್ಷಗಳ ಅಭಿವೃದ್ಧಿ ಯೋಜನೆಗಾಗಿ ಪ್ರತ್ಯೇಕ ಹಣ ವ್ಯಯಿಸಬೇಕೆಂದು ತಿಳಿಸಲಾಗಿದೆ. ಸಮಿತಿ ಪ್ರಕಾರ ಎಂಟು ವರ್ಷಗಳಲ್ಲಿ ರಾಜ್ಯದ ೧೧೪ ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಅಗತ್ಯವಾದ ಮೊತ್ತ ರೂ.೩೧,೦೦೦ ಕೋಟಿ. ಇದರಲ್ಲಿ ರೂ. ೧೫,೦೦೦ ಕೋಟಿ ರೂಢಿಗತವಾಗಿ ವಾರ್ಷಿಕವಾಗಿ ಹರಿದು ಬರುವ ಮೊತ್ತವಾದರೆ ಉಳಿದ ರೂ. ೧೬,೦೦೦ ಕೋಟಿಯನ್ನು ಹೆಚ್ಚುವರಿಯಾಗಿ

ಈ ಸರ್ಕಾರವಂತೂ ಗುಲಬರ್ಗಾ ವಿಭಾಗದ ಜಿಲ್ಲೆಗಳೆಂದರೆ ಕೇವಲ 'ಬಳ್ಳಾರಿ'ಯೆಂದು ತಿಳಿದಿರುವಂತೆ ಕಾಣುತ್ತದೆ. ಗುಲಬರ್ಗಾ,ಕೊಪ್ಪಳ, ರಾಯಚೂರು, ವಿಜಾಪುರ ಮುಂತಾದ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಜನರ ಕಣ್ಣಿನಲ್ಲಿ ರಕ್ತ ಬರುವುದೊಂದು ಬಾಕಿಯಿದೆ. ಅವರು ಬೆವರು ಹರಿಸಿ ದುಡಿಯುತ್ತಿದ್ದಾರೆ. ಮಧ್ಯವರ್ತಿ ರಾಜಕೀಯ ಚೇಲಾಗಳಿಂದಾಗಿ ಬಡ ಕೂಲಿಕಾರರಿಗೆ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೆಲಸ ಸಿಗುವುದು ದುರ್ಲಭವಾಗಿಬಿಟ್ಟಿದೆ. ಪಟ್ಟಭದ್ರ ಹಿತಾಸಕ್ತಿಗಳು ಅದನ್ನು ವಿಫಲಗೊಳಿಸಲು ಹರಸಾಹಸ ಮಾಡುತ್ತಿವೆ. ಅದರ ವಿರುದ್ಧ ಜನರು ಪ್ರತಿಭಟನೆ ಮಾಡುವಂತೆ ಪ್ರಚೋದಿಸುತ್ತಿದ್ದಾರೆ. ಈ ಯೋಜನೆಯಡಿಯಲ್ಲಿ ೭೦-೮೦ ರೂಪಾಯಿ ಕೂಲಿ ನಿಗದಿಯಾಗಿ ಬಿಟ್ಟರೆ ಜಮೀನುದಾರರ ಹೊಲಗದ್ದೆಗಳು ಪಾಳುಬೀಳ ಬೇಕಾಗುತ್ತದೆ. ಆದರೆ ಈ ಯೋಜನೆಯು ಬಡ ಕೂಲಿಕಾರ ಮಹಿಳೆಯರಿಗೆ ವಿಮೋಚನೆಯ ಸಾಧನವಾಗುವ ಸಾಧ್ಯತೆಯಿದೆ. ಆದರೆ ಬಡ ಕೂಲಿಕಾರರನ್ನು ತಳಮಟ್ಟದಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳು ದಾರಿ ತಪ್ಪಿಸುತ್ತಿವೆ.

ನೀಡಬೇಕೆಂದು ಅದು ತಿಳಿಸಿದೆ.

ಆದರೆ ಬಿ.ಎಸ್.ಯಡಿಯೂರಪ್ಪ ಸರ್ಕಾರವು ಎಂಟು ವರ್ಷದ ಯೋಜನೆಯನ್ನು ಅನುಷ್ಠಾನಗೊಳಿಸಿರುವುದೇನೋ ನಿಜ. ಆದರೆ ಅದು ಅದರ ಅನುಷ್ಠಾನಕ್ಕೆ ಹೆಚ್ಚುವರಿಯಾಗಿ ಹಣವನ್ನು ತೆಗೆದಿಟ್ಟಿಲ್ಲವೆಂಬುದು ಈಗ ಸರ್ಕಾರದ ದಾಖಲೆಗಳಿಂದಲೇ ತಿಳಿದುಬರುತ್ತದೆ. ನಿಯಮಿತವಾದ ವಾರ್ಷಿಕ ಕಾರ್ಯಕ್ರಮಗಳ ಅನುದಾನವನ್ನೇ ವಿಶೇಷ ಅನುದಾನವೆಂದು ಸರ್ಕಾರವು ಹೇಳಿಕೊಳ್ಳುತ್ತಿದೆ. ಇದು ರಾಜ್ಯದ ಅತ್ಯಂತ ಹಿಂದುಳಿದ ಗುಲಬರ್ಗಾ ವಿಭಾಗದ ಜಿಲ್ಲೆಗಳ ಒಂದು ಕೋಟಿಗೂ ಮೀರಿದ ಜನರಿಗೆ ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯ ಹೆಸರಿನಲ್ಲಿ ಮಾಡುತ್ತಿರುವ ಮೋಸವಾಗಿದೆ. ಈ ಸರ್ಕಾರವು ೨೦೦೭-೦೮ರಲ್ಲಿ ಎಂಟು ವರ್ಷದ ಯೋಜನೆ ಬಾಬ್ತು ತೆಗೆದಿಟ್ಟಿದ್ದ ರೂ. ೧೫೭೧-೫೦ ಕೋಟಿಯಲ್ಲಿ ವಾಸ್ತವಿಕವಾಗಿ ಖರ್ಚು ಮಾಡಿರುವುದು ಕೇವಲ ರೂ.೯೭೬.೩೨ ಕೋಟಿ ಮಾತ್ರವಾಗಿದೆ. ಎಂಟು ವರ್ಷದ ಯೋಜನೆಯ ಅನುದಾನ ಹಂಚಿಕೆ ಸೂತ್ರಕ್ಕೆ ಸಂಬಂಧಿಸಿದಂತೆ ಗೊಂದಲ ಉಂಟು ಮಾಡಿ ೨೦೦೭-೦೮ರಲ್ಲಿ ಸರ್ಕಾರವು ಗುಲಬರ್ಗಾ ವಿಭಾಗಕ್ಕೆ ರೂ.೧೨೮ಕೋಟಿ ಹಣದ ನಷ್ಟ ಉಂಟುಮಾಡಿದೆ. ಈಗಲೂ ಬಿ.ಎಸ್.ಯಡಿಯೂರಪ್ಪ ತಾವು ೨೦೦೭-೦೮ರಲ್ಲಿ ಅನುದಾನ ಹಂಚಿಕೆ ಬಗ್ಗೆ ಸಮಿತಿ ಸೂತ್ರಕ್ಕೆ ಪ್ರತಿಯಾಗಿ ತನ್ನದೆ ಸರ್ಕಾರಿ ಸೂತ್ರ ಜಾರಿಗೊಳಿಸಿ ಗುಲಬರ್ಗಾ ವಿಭಾಗಕ್ಕೆ ಅನ್ಯಾಯ ಮಾಡಿದ್ದನ್ನು ಸರಿಪಡಿಸುವ ಕ್ರಮಕ್ಕೆ ಕೈಹಾಕಿದಂತೆ ಕಾಣಲಿಲ್ಲ. ಅದರ ಬಗ್ಗೆ ಸರ್ಕಾರಕ್ಕೆ ನಾವು ಇನ್ನಿಲ್ಲದಂತೆ ಮನವಿ ಮಾಡಿಕೊಂಡರೂ ಅನುದಾನ ಹಂಚಿಕೆ ಸೂತ್ರದ ಬದಲಾವಣೆ ಬಗ್ಗೆ ೨೦೦೮-೦೯ರ ಬಜೆಟ್ಟಿನಲ್ಲಿ ಯಾವುದೆ ಸೂಚನೆ ನೀಡಿಲ್ಲ. ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ಈ ಸರ್ಕಾರಕ್ಕೆ ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ರವಷ್ಟು ಆಸಕ್ತಿಯಿಲ್ಲವೆಂಬುದು – ಚಿಂತೆಯಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಈ ಸರ್ಕಾರವಂತೂ ಗುಲಬರ್ಗಾ ವಿಭಾಗದ ಜಿಲ್ಲೆಗಳೆಂದರೆ ಕೇವಲ 'ಬಳ್ಳಾರಿ'ಯೆಂದು ತಿಳಿದಿರುವಂತೆ ಕಾಣುತ್ತದೆ. ಗುಲಬರ್ಗಾ,ಕೊಪ್ಪಳ, ರಾಯಚೂರು, ವಿಜಾಪುರ ಮುಂತಾದ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಜನರ ಕಣ್ಣಿನಲ್ಲಿ ರಕ್ತ ಬರುವುದೊಂದು ಬಾಕಿಯಿದೆ. ಅವರು ಬೆವರು ಹರಿಸಿ ದುಡಿಯುತ್ತಿದ್ದಾರೆ. ಮಧ್ಯವರ್ತಿ ರಾಜಕೀಯ ಚೇಲಾಗಳಿಂದಾಗಿ ಬಡ ಕೂಲಿಕಾರರಿಗೆ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೆಲಸ ಸಿಗುವುದು ದುರ್ಲಭವಾಗಿಬಿಟ್ಟಿದೆ. ಪಟ್ಟಭದ್ರ ಹಿತಾಸಕ್ತಿಗಳು ಅದನ್ನು ವಿಫಲಗೊಳಿಸಲು ಹರಸಾಹಸ ಮಾಡುತ್ತಿವೆ. ಅದರ ವಿರುದ್ಧ ಜನರು ಪ್ರತಿಭಟನೆ ಮಾಡುವಂತೆ ಪ್ರಚೋದಿಸುತ್ತಿದ್ದಾರೆ. ಈ ಯೋಜನೆಯಡಿಯಲ್ಲಿ ೭೦-೮೦ ರೂಪಾಯಿ ಕೂಲಿ ನಿಗದಿಯಾಗಿ ಬಿಟ್ಟರೆ ಜಮೀನುದಾರರ ಹೊಲಗದ್ದೆಗಳು ಪಾಳುಬೀಳ ಬೇಕಾಗುತ್ತದೆ. ಆದರೆ ಈ ಯೋಜನೆಯು ಬಡ ಕೂಲಿಕಾರ ಮಹಿಳೆಯರಿಗೆ ವಿಮೋಚನೆಯ ಸಾಧನವಾಗುವ ಸಾಧ್ಯತೆ ಯಿದೆ. ಆದರೆ ಬಡ ಕೂಲಿಕಾರರನ್ನು ತಳಮಟ್ಟದಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳು ದಾರಿ ತಪ್ಪಿಸುತ್ತಿವೆ.

ಪ್ರಾದೇಶಿಕ ಅಸಮಾನತೆ ಬಗ್ಗೆ ಸರ್ಕಾರಗಳು ಯಾವತ್ತೂ ಗಂಭೀರ ನಿಲವನ್ನು ತಳೆಯಲಿಲ್ಲ. ಈ ಬಗೆಯ ಪ್ರಾದೇಶಿಕ ಅಸಮಾನತೆ ಬಗೆಗಿನ ನಿರ್ಲಿಪ್ತ ನಿಲುವಿನ ದೃಷ್ಟಿಯಿಂದ ಪ್ರಸ್ತುತ ಸರ್ಕಾರವು ಭಿನ್ನವಲ್ಲ ವೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಸಿದ್ದಮಾಡಿ ತೋರಿಸುತ್ತಿದ್ದಾರೆ. ಬೆಂಗಳೂರು, ಶಿವಮೊಗ್ಗಗಳೇ ಕರ್ನಾಟಕವಾಗಿರುವಂತೆ ಕಾಣುತ್ತದೆ. ಇವರ ಅಭಿವೃದ್ಧಿ ಪ್ರಣಾಳಿಕೆಯಲ್ಲಿ ಆದ್ಯತೆಗಳೇ ಇದ್ದಂತೆ ಕಾಣುವುದಿಲ್ಲ. ಅದಕ್ಕೆ ಇವರ ಬಜೆಟ್ಟು ಆದ್ಯತೆಗಳಿಲ್ಲದ ಕಂತೆಯಂತೆ ಕಾಣುತ್ತದೆ. ಈ ಸರ್ಕಾರವು ಇನ್ನೂವರೆವಿಗೂ ತನ್ನ ಆದ್ಯತೆಯನ್ನು ಸ್ಪಷ್ಟವಾಗಿ ಘೋಷಿಸಲಿಲ್ಲ. ಹತ್ತಾರು ಸಂಗತಿಯ ಮೇಲೆ ಇವರು ಬಜೆಟ್ಟಿನ ಹಣವನ್ನು ಹಂಚಿಬಿಟ್ಟಿದ್ದಾರೆ. ಹಣಕಾಸಿನ ನಿರ್ವಹಣೆಯಲ್ಲಿ ಪಟ್ಟಭದ್ರರ ಬಗೆಗಿನ ಔದಾರ್ಯತೆ ಕಂಡುಬರುತ್ತದೆ.

ಅಭಿವೃದ್ಧಿಯು 'ಹಂಗಿ'ನ ಸಂಗತಿಯಾಗುತ್ತಿದೆ!

ಬಿ.ಎಸ್.ಯಡಿಯೂರಪ್ಪ ಅವರ ಬಜೆಟ್ಟಿನಲ್ಲಿ ಒಳ್ಳೆಯ ಆಶಯಗಳಿವೆ. ಆಶಯಗಳೇ ಅಭಿವೃದ್ಧಿಯಾಗುವುದಿಲ್ಲ. ಅದರಲ್ಲಿ ನಿರ್ದಿಷ್ಟತೆಯೆಂಬುದಿಲ್ಲ. ಎಲ್ಲದರ ಮೇಲೂ ಹಣತೊಡಗಿಸುವ ಅವರ ಪರೋಪಕಾರಿ ಮನೋಭಾವ ವೈಯಕ್ತಿಕವಾಗಿ ಸರಿಯಿರಬಹುದು. ಈಗಂತೂ ರಾಜ್ಯದಲ್ಲಿ ದಾನಶೂರ 'ಕರ್ಣ'ರ ಹಾವಳಿ ಅಧಿಕವಾಗಿ ಬಿಟ್ಟಿದೆ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿಯಂತೂ

[illegible] ನಡುವೆ ಪೈಪೋಟಿಯಿದೆ. ಕುಡಿಯುವ ನೀರು ಬೇಕಾ?(ಆ ಲಾರಿಗಳನ್ನು ತಮ್ಮ ಹೊಟೇಲುಗಳಿಗೆ,ಗಣಿಗಳಿಗೆ ನೀರು ಬಿಡಲೂ ಬಳಸಿಕೊಳ್ಳುತ್ತಾರೆಂಬುದು ಬೇರೆ ಮಾತು) ದಾನಿಗಳು ಅದಕ್ಕಾಗಿ ಲಾರಿಗಳನ್ನು ಬಿಡುತ್ತಾರೆ. ಓಣಿಗಳಲ್ಲಿ ಗಟಾರಗಳಿಲ್ಲವೆ? ದಾನಿಗಳು ತಮ್ಮದೆ ಸ್ವಂತ ಹಣದಿಂದ ಕಟ್ಟಿಸಿಕೊಡುತ್ತಾರೆ. ತುಂಗಭದ್ರಾ ನದಿಯ ನೀರನ್ನು ಉದ್ದಿಮೆಗಳಿಗೆ ಬಿಡಕೂಡದೆಂದು ರೈತರು ಮುಷ್ಕರ ಮಾಡಿದರೆ ಅದರ ನಿವಾರಣೆಯ ಜವಾಬುದಾರಿಯನ್ನು 'ರೋಗ' ಕ್ಕೆ ಕಾರಣರಾಗಿರುವವರೆ ವಹಿಸಿಕೊಳ್ಳುತ್ತಾರೆ. ಗಣಿಗಾರಿಕೆಯನ್ನ ಮಾಡುವವರು ಅವರೆ, ಕಬ್ಬಿಣ ಕಾರ್ಖಾನೆಯನ್ನು ನಡೆಸುವವರೂ ಅವರೆ. ಈಗ ಅದಕ್ಕೆ ಸಂಬಂಧಿಸಿದಂತೆ ಉಂಟಾಗಿರುವ ರೈತರ ಸಮಸ್ಯೆಯನ್ನು ನಿವಾರಿಸುವ ಜವಾಬ್ದಾರಿಯನ್ನು ಹೊರುತ್ತಿರುವವರೂ ಅವರೇ. ಈ ಗೊಂದಲದಲ್ಲಿ ರೈತರಿಗೆ ನ್ಯಾಯ ದೊರೆಯುವುದಂತು ಕೇವಲ ಭ್ರಮೆ. ಸಮಸ್ಯೆಯೂ ಅವರೇ. ಅದರ ಪಂಚಾಯಿತಿಯ ಜವಾಬುದಾರಿಯನ್ನೂ ಅವರು ವಹಿಸಿಕೊಳ್ಳುತ್ತಾರೆ. ರೋಗವೂ ಔಷದವೂ ಒಂದೇ ಆಗಿರುವ ವಿಚಿತ್ರ ಸ್ಥಿತಿ ಬಳ್ಳಾರಿ ಜಿಲ್ಲೆಯಲ್ಲಿದೆ. ಇಲ್ಲಿ ಎಲ್ಲವೂ ಜನಪ್ರತಿನಿಧಿಗಳ ಮರ್ಜಿಯಲ್ಲಿ ಆಗಬೇಕು ಮತ್ತು ಜನರ ಬದುಕು 'ಹಂಗಿ'ನದ್ದಾಗಬೇಕು. ಕುಡಿಯುವ ನೀರು ಜನರ ಹಕ್ಕಿನದ್ದಾಗದೆ ಅದು ಜನರು ಜನಪ್ರತಿನಿಧಿಗಳನ್ನು ಬೇಡಿ ಪಡೆಯುವಂತ ಸಂಗತಿಯಾಗಬೇಕು. ಇಲ್ಲಿ ಹಕ್ಕಿನ ಪರಿಭಾಷೆಗೆ ಕುತ್ತು ಬಂದಿದೆ. ಹಂಗಿನ ಪರಿಭಾಷೆಯ ಮೆರೆದಾಟ ಅಧಿಕವಾಗಿದೆ.

ವಿಕೇಂದೀಕರಣಕ್ಕೆ ಬಂದ ಕುತ್ತು!

ಪಂಚಾಯತ್ ರಾಜ್ ಸಂಸ್ಥೆಗಳ ಸ್ವಾಯತ್ತ ಬೆಳವಣಿಗೆ ಬಗ್ಗೆ ಸರ್ಕಾರಗಳು ಬಹಳ ಮಾತನಾಡುತ್ತವೆ. ಅವುಗಳ ಬೆಳವಣಿಗೆಗಾಗಿ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಮೂರು ಹಂತದ ಪಂ.ರಾ.ಸಂ.ಗಳ ಚಟುವಟಿಕೆಗಳ ವರ್ಗೀಕೃತ ಪಟ್ಟಿಯನ್ನು ಸರ್ಕಾರವು ಬಹಳಷ್ಟು ಹಿಂದೆಯೇ ಪ್ರಕಟಿಸಿದೆ. ಆದರೆ ಅದನ್ನು ಗಮನಿಸದೆ ಡಾ.ಡಿ.ಎಮ್.ನಂಜುಂಡಪ್ಪ ಸಮಿತಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸುವಾಗ ಅದರ ಬಾಬ್ತು ಕ್ರಿಯಾ ಯೋಜನೆ ಸಿದ್ದಪಡಿಸುವ ಜವಾಬ್ದಾರಿಯನ್ನು ರಾಜ್ಯಮಟ್ಟದ ಇಲಾಖೆಗಳಿಗೆ ನೀಡಲಾಗಿದೆ. ಈ ಯೋಜನೆಯ ಬಾಬತ್ತು ತೆಗೆದಿಟ್ಟ ಸಂಪನ್ಮೂಲವನ್ನು ಇಲಾಖಾವಾರು ಖರ್ಚು ಮಾಡುವ ಕ್ರಮವನ್ನು ಅಳವಡಿಸಿಕೊಂಡಿದೆ. ಇದು ವಿಕೇಂದ್ರೀಕರಣಕ್ಕೆ ಎಸಗಿದ ದ್ರೋಹವಾಗಿದೆ. ಹಿಂದುಳಿದ ಜಿಲ್ಲೆ-ತಾಲೂಕುಗಳ ಅಭಿವೃದ್ಧಿಗೆ ಸಂಬಂಧಿಸಿದ ಕ್ರಮಗಳನ್ನು ರಾಜ್ಯಮಟ್ಟದ ಇಲಾಖೆಗಳು ಮಾಡುವುದಾದರೆ ಪಂಚಾಯತ್ ರಾಜ್ ಸಂಸ್ಥೆಗಳೇಕೆ ಬೇಕು? ಅವುಗಳಿಗೆ ಅಧಿಕಾರ ಕೊಟ್ಟಿದ್ದೇವೆಂಬುದು ಕೇವಲ ಬೂಟಾಟಿಕೆಯಾಗುತ್ತದೆ. ಈ ಬಗೆಯ ವಿಕೃತಿ ೨೦೦೭-೦೮ ರ ಬಜೆಟ್ಟಿನ ಸಂದರ್ಭದಲ್ಲಿ ಉಂಟಾಗಿದ್ದುದನ್ನು ೨೦೦೮-೦೯ನೆಯ ಸಾಲಿನ ಬಜೆಟ್ಟಿನ ಸಂದರ್ಭದಲ್ಲಿ ಸರಿಪಡಿಸಬಹುದಿತ್ತು. ಆದರೆ ಹಣಕಾಸು ಮಂತ್ರಿಗಳು ಅಂತಹ ಕಾರ್ಯಕ್ಕೆ ಮುಂದಾಗದಿದ್ದುದು ಅಚ್ಚರಿಯ ಸಂಗತಿಯಾಗಿದೆ. ಸಂವಿಧಾನದ ೭೩-೭೪ನೆಯ ತಿದ್ದುಪಡಿಗಳಾದ ಮೇಲೆ ಅಭಿವೃದ್ಧಿ ಯೋಜನೆ ಸಿದ್ದಪಡಿಸುವ ಜವಾಬುದಾರಿಯು ಪಂಚಾಯತ್ ರಾಜ್ ಸಂಸ್ಥೆಗಳದ್ದಾಗಿದೆ. ಅವು ತಮಗೆ ವಹಿಸಿದ ಜವಾಬುದಾರಿಯನ್ನು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ

ಗಣಿ ಉದ್ಯಮವು ಜನರ ಜೀವನವನ್ನು ಮೂರಾ ಬಟ್ಟೆ ಮಾಡುತ್ತಿದೆ. ಅದು ಬಡ ಜನರ ಜೀವಕ್ಕೆ ಕುತ್ತಾಗಿ ಪರಿಣಮಿಸಿದೆ. ಗಣಿಧಣಿಗಳು ತಾವು ನಡೆಸುತ್ತಿರುವ ಗಣಿ ಉದ್ಯಮದಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯದಿಂದ ಮುಕ್ತರಾಗಿರಬಲ್ಲರು. ಏಕೆಂದರೆ ಅವರಿಗೆ ಹೆಲಿಕಾಪ್ಟರುಗಳಿವೆ. ಹೈಟೆಕ್ ಆಸ್ಪತ್ರೆಗಳಿವೆ. ಇವರ ಪಾಪ ಕಳೆಯಲು ಕಾಸಿಗೊಬ್ಬರು ಕುಸರಿಗೊಬ್ಬರು ಸ್ವಾಮಿಗಳಿದ್ದಾರೆ. ಪ್ರಕೃತಿ ಮಾತೆಯ ಮೇಲೆ ಗಣಿಧಣಿಗಳು ಒಂದು ರೀತಿಯಲ್ಲಿ 'ಹಾದರ' ನಡೆಸಿದ್ದಾರೆ.

ನಿರ್ವಹಿಸುತ್ತಿವೆ. ಅವುಗಳ ಸಾಮರ್ಥ್ಯವನ್ನು ಬಲಪಡಿಸುವುದನ್ನು ಬಿಟ್ಟು ಅವುಗಳ ಅಧಿಕಾರವನ್ನು ಮೊಟಕು ಮಾಡುವುದು ತಳಮಟ್ಟದ ಅಭಿವೃದ್ಧಿಯ ದೃಷ್ಟಿಯಿಂದ ಅಪೇಕ್ಷಣೀಯವಲ್ಲ.

ಸುಟ್ಟಹೋಗಿದ್ದು ಯಾರ ಯಂತ್ರಗಳು?
ಖಾಲಿಯಾದದ್ದು ಯಾರ ಸಂಪತ್ತು?

ಚಿಕ್ಕನಾಯಕನಹಳ್ಳಿಯಲ್ಲಿ ಗಣಿಗಾರಿಕೆ ವಿರುದ್ಧವಾಗಿ ನಡೆದ ಮುಷ್ಕರದ ಸಂದರ್ಭದಲ್ಲಿ ಗಣಿ ಕಂಪೆನಿಗಳ ಯಂತ್ರೋಪಕರಣಗಳಿಗೆ ಹಾನಿಯಾಗಿದೆಯೆಂದು ಅನೇಕ ರೈತರ ಮೇಲೆ ಮೊಕದ್ದಮೆ ಹೂಡಿ ಸರ್ಕಾರವು ಅವರನ್ನು ಜೈಲಿಗೆ ಕಳುಹಿಸಿದೆ. ಇದರ ಹಿಂದೆ ಗಣಿ ಉದ್ಯಮಿಗಳ ಕೈವಾಡವಿರುವುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಇಲ್ಲಿ ಪ್ರಶ್ನೆಯೆಂದರೆ ಯಂತ್ರೋಪಕರಣಗಳು ಯಾರವು ಅಂತ? ಈ ನಾಡಿನ ಸಕಲ ಜೀವ ಜಂತುಗಳಿಗೂ ಸೇರಿದ ಭೂಮಿಯೊಳಗಿನ ಖನಿಜ ಸಂಪತ್ತನ್ನು ಲೂಟಿಯೊಡೆಯುತ್ತಿರುವವರಿಗೆ ಯಾರು ಶಿಕ್ಷೆಕೊಡಬೇಕು? ಗಣಿಧಣಿಗಳು ತಮ್ಮದೆಂದು ಹೇಳಿಕೊಳ್ಳುತ್ತಿರುವ ಯಂತ್ರಗಳು ಯಾರ-ಯಾವ ಹಣದಿಂದ ಸಂಪಾದಿಸಿದ ಆಸ್ತಿ? ಅವುಗಳ ಮೇಲೆ ಜನರಿಗೆ ಹಕ್ಕಿಲ್ಲವೆ? ಅವು ಜನರ ಜೀವ ಜಾಲ ಜಗತ್ತನ್ನೇ ನಿರ್ನಾಮ ಮಾಡುತ್ತಿರಬೇಕಾದರೆ ಜನರು ಸುಮ್ಮನೆ ಕೂರಬೇಕೇ? ಪ್ರಕೃತಿ ಸಂಪತ್ತು ಯಾರದು ಸ್ವಾಮಿ! ಬಂಡವಾಳವಿದ್ದವರದ್ದೆ?ಅಧಿಕಾರವಿದ್ದವರದ್ದೆ?ಅಥವಾ ಅಲ್ಲಿ ಜೀವನ ಮಾಡುತ್ತಿರುವವರದ್ದೇ? ಜನರಿಗೆ ಅವುಗಳ ಮೇಲೆ ಅಧಿಕಾರವಿಲ್ಲವೆ? ಇಂದು ವಿದ್ವಾಂಸರು ಪ್ರಕೃತಿ ಸಂಪತ್ತಿನ ಮೇಲೆ ಇಂದಿನ ತಲೆಮಾರಿನ ಜೊತೆಯಲ್ಲಿ ಮುಂದಿನ ತಲೆಮಾರಿನ ಜನರಿಗೂ ಅಧಿಕಾರವಿದೆಯೆಂದು ವಾದಿಸುತ್ತಿದ್ದಾರೆ. ಮುಂದಿನ ತಲೆಮಾರಿನ ಆಸ್ತಿಯನ್ನು ಲೂಟಿ ಮಾಡುತ್ತಿರುವ, ಆ ಮುಂದಿನ ತಲೆಮಾರಿನ ಮಕ್ಕಳ ದೃಷ್ಟಿಯಲ್ಲಿ ಅಪರಾಧಿಗಳಾದ ಗಣಿಧಣಿಳಿಗೆ ಶಿಕ್ಷೆಯಿಲ್ಲವೆ? ಸರ್ಕಾರವು ದರೋಡೆಗಾರರ ಲೂಟಿಕೋರರ ಪರವಾಗಿ ನಿಲ್ಲದೆ ರೈತರ ಪರವಾಗಿ ನಿಲ್ಲುವುದನ್ನು ಬಿಟ್ಟು ಮುಗ್ಧ ಜನರನ್ನು ಜೈಲಿಗಟ್ಟಿರುವುದು ವಿಚಿತ್ರವಾಗಿದೆ. ಯಂತ್ರಗಳು ಸುಟ್ಟಿದ್ದರೆ ಅವುಗಳನ್ನು ಮತ್ತೆ ತಯಾರಿಸಿಕೊಡಬಹುದು. ಆದರೆ ಖಾಲಿ ಯಾದ ಖನಿಜ ಸಂಪತ್ತನ್ನು ಹೇಗೆ ಮತ್ತು ಯಾರು ತುಂಬಿ ಕೊಡುತ್ತಾರೆ ಸ್ವಾಮಿ! ಗಣಿಗಳಲ್ಲಿನ ಸಂಪತ್ತೇನಿದೆ ಅದು ಪುನರ್ ನವೀಕರಿಸಲಾಗದ ಸಂಪತ್ತಾಗಿದೆ. ಈ ಸಂಪತ್ತು ಒಮ್ಮೆ ಮುಗಿದೋದರೆ ಮತ್ತೆ ಅದು ಸಿಗುವು ದಿಲ್ಲ. ಮುಂದ್ಧಿನ ತಲೆಮಾರಿನ ವಾರಸುದಾರರಿಗೆ ಯಡಿಯೂ ರಪ್ಪ ಅವರು ಏನು ಉತ್ತರ ಕೊಡುತ್ತಾರೆ? ಉತ್ತರ ಕೊಡುವುದು ಸಾಧ್ಯವಿಲ್ಲವಾಗಿದೆ. ಮುಖ್ಯಮಂತ್ರಿಗಳಾದ ಯಡಿಯೂರಪ್ಪ ಅವರು ಕೇವಲ ಇಂದಿನ ತಲೆಮಾರಿನ ಅಗತ್ಯಗಳನ್ನು ನೋಡಿಕೊಂಡುಬಿಟ್ಟರೆ ಸಾಕಾಗುವುದಿಲ್ಲ. ಇಂದಿನ ತಲೆಮಾರಿನ ಅಗತ್ಯಗಳನ್ನು ಈಡೇರಿಸಿಕೊಡುವುದರ ಜೊತೆಗೆ ಅವರು ಮುಂದಿನ ತಲೆಮಾರಿನ ಅಗತ್ಯಗಳನ್ನು ಕೂಡ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಆಗ ಅವರು ಮುತ್ಸದ್ದಿಗಳಾಗುತ್ತಾರೆ. ಅಲ್ಲದಿದ್ದರೆ ಅವರು ಕೇವಲ ಮುಂದಿನ ಚುನಾವಣೆ ಬಗ್ಗೆ ಮಾತ್ರ ಯೋಚಿಸುವ ಪುಢಾರಿಗಳಾಗುತ್ತಾರೆ.

ಗಣಿ ಉದ್ಯಮವು ಜನರ ಜೀವನವನ್ನು ಮೂರಾ ಬಟ್ಟೆ ಮಾಡುತ್ತಿದೆ. ಅದು ಬಡ ಜನರ ಜೀವಕ್ಕೆ ಕುತ್ತಾಗಿ ಪರಿಣಮಿಸಿದೆ. ಗಣಿಧಣಿಗಳು ತಾವು ನಡೆಸುತ್ತಿರುವ ಗಣಿ ಉದ್ಯಮದಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯದಿಂದ ಮುಕ್ತರಾಗಿರಬಲ್ಲರು. ಏಕೆಂದರೆ ಅವರಿಗೆ ಹೆಲಿಕಾಪ್ಟರುಗಳಿವೆ. ಹೈಟೆಕ್ ಆಸ್ಪತ್ರೆಗಳಿವೆ. ಇವರ ಪಾಪ ಕಳೆಯಲು ಕಾಸಿಗೊಬ್ಬರು ಕುಸರಿಗೊಬ್ಬರು ಸ್ವಾಮಿಗಳಿದ್ದಾರೆ. ಪ್ರಕೃತಿ ಮಾತೆಯ ಮೇಲೆ ಗಣಿಧಣಿಗಳು ಒಂದು ರೀತಿಯಲ್ಲಿ 'ಹಾದರ' ನಡೆಸಿದ್ದಾರೆ. ಗಣಿಧಣಿಗಳನ್ನು ಹದ್ದುಬಸ್ತಿನಲ್ಲಿಡುವುದನ್ನು ಬಿಟ್ಟು ಸರ್ಕಾರವು ಮುಗ್ಧ ಜನರನ್ನು ಹಿಂಸಿಸುವುದು ಸರಿಯಲ್ಲ. ನಮ್ಮ ನಾಡಿನ ಖನಿಜ ನಿಕ್ಷೇಪದ ರೂಪದಲ್ಲಿ ಉಂಟಾಗಿರುವ ನಷ್ಟವನ್ನು ಗಣಿಧಣಿಗಳು ತುಂಬಿಕೊಡಬೇಕಾಗುತ್ತದೆ. ವಾಸ್ತವವಾಗಿ ಅವರ ಯಂತ್ರಗಳಿಗೇನು ನಷ್ಟವಾಗಿದೆ ಅದರ ಬಾಬ್ತು ಹಣವನ್ನು ಕಳೆದು ಉಳಿದುದನ್ನು ಲೆಕ್ಕಹಾಕಿದರೆ ಗಣಿಧಣಿಗಳು ಜನರಿಗೆ ಅನೇಕ ಸಾವಿರ ಕೋಟಿ ಪರಿಹಾರ ಕಟ್ಟಿ ಕೊಡಬೇಕಾಗುತ್ತದೆ. ಆದ್ದರಿಂದ ಚಿಕ್ಕನಾಯಕನಹಳ್ಳಿ ಗಣಿಧಣಿಗಳು ಒಳ್ಳೆ ಮಾತಿನಿಂದ ಮುಗ್ಧ ರೈತರ ಮೇಲೆ ಹೂಡಿರುವ ಮೊಕದ್ದಮೆಗಳನ್ನು ಹಿಂತೆಗೆದುಕೊಂಡು ಆ ರೈತರಿಗೆ ಉಂಟುಮಾಡಿರುವ ಮಾನಸಿಕ ಹಿಂಸೆಯ ಬಾಬ್ತು ಪರಿಹಾರವನ್ನು ಕಟ್ಟಿಕೊಟ್ಟು ಜನರ ನೆಮ್ಮದಿಗೆ ನಾಂದಿ ಹಾಡುವುದು ಒಳ್ಳೆಯದು.

ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಇಂದಿನ ಸರ್ಕಾರವು ಯಾವ ಅಪರಾಧಿ ನೋವನ್ನು ಅನುಭವಿಸದೆ ರೈತರ ಬದುಕನ್ನು ನಿರ್ನಾಮ ಮಾಡುತ್ತಿದೆ. ಅದಕ್ಕೆ ಗುನ್ನೆಯ ಭಾವನೆಯೆ ಇದ್ದಂತೆ ಕಾಣುವುದಿಲ್ಲ. ಈ ಸರ್ಕಾರಕ್ಕೆ ಅಧಿಕಾರವೊಂದೆ ಮುಖ್ಯವಾಗಿರುವಂತೆ ಕಾಣುತ್ತಿದೆ. ಅದಕ್ಕಾಗಿ ಏನನ್ನಾದರೂ ಮಾಡಲು ಅದು ಸಿದ್ಧವಿರುವಂತಿದೆ. ಅದರ ನಡೆತೆಯನ್ನು ನೋಡಿದರೆ ಕರ್ನಾಟಕದಲ್ಲಿ ರಾಜಕೀಯ ಪಕ್ಷಗಳ ನಡುವೆ ಅಂತರವೆ ಮಾಯವಾಗಿರುವಂತೆ ಕಾಣುತ್ತದೆ. ಪ್ರಜಾಪ್ರಭುತ್ವದ ದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆಯಲ್ಲ.

ಈ ಹಿನ್ನೆಲೆಯಲ್ಲಿ ರಾಜ್ಯದ ಆತ್ಮಸಾಕ್ಷಿಯಿರುವ ಹಾಗೂ ಜಾಗೃತಿಯಿಂದಿರುವ ಜನರ ಜವಾಬುದಾರಿ ಅಧಿಕವಾಗಿದೆ. ಇಲ್ಲಿ ಪ್ರಗತಿಗಾಮಿಶಕ್ತಿಗಳು ಸಂಘಟಿತರಾಗಬೇಕಾಗಿದೆ ಮತ್ತು ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳ ಅಟ್ಟಹಾಸವನ್ನು ಮಟ್ಟ ಹಾಕಲು ಸನ್ನದ್ಧರಾಗಬೇಕಾಗಿದೆ. □

ಚದುರಿಹೋಗುತ್ತಿರುವ ಮೀಮಾಂಸೆಯ ಪರಿಕಲ್ಪನೆಗಳು

(೪೧ನೇ ಪುಟದಿಂದ)

ವುದರಿಂದ ಶೂನ್ಯತೆ ಎಂದೂ, ಯಾವ ವಸ್ತುವಿನಲ್ಲಿಯೂ ಅದರ ಸ್ವಂತದ್ದೇ ಆದ ಸಾರ, ಸತ್ವ ಅಥವಾ ಆತ್ಮವೆನ್ನುವುದು ಇಲ್ಲವೆಂದು ತೋರಿಸಿಕೊಟ್ಟುದುದರಿಂದ ಅನಾತ್ಮವಾದವೆಂದೂ ಎಲ್ಲವೂ ಪ್ರತ್ಯಯಗಳ ಸಂಬಂಧದಿಂದ ಉಂಟಾಗಿರುವುದರಿಂದ ಪ್ರತೀತ್ಯಸಮುತ್ಪಾದವೆಂದೂ ಈ ಪ್ರಕ್ರಿಯೆಯನ್ನು ಸೂಚಿಸುತ್ತಾರೆ.

ಬೌದ್ಧ ಸೌಂದರ್ಯ ಮೀಮಾಂಸೆ:

ಬೌದ್ಧೇತರ ಭಾರತೀಯ ಮೀಮಾಂಸಾ ಪ್ರಸ್ಥಾನಗಳು, – ಕಾವ್ಯಮೀಮಾಂಸೆಯಾಗಲೀ, ಸೌಂದರ್ಯ ಮೀಮಾಂಸೆಯಾಗಲೀ– ನೇರವಾಗಿ ಸಿದ್ಧ ಸತ್ಯದ ಅನುಸಂಧಾನಕ್ಕೆ ತೊಡಗುತ್ತವೆ. ಅವರು ಸತ್ಯವನ್ನು ಕಟ್ಟಬೇಕಾಗಿಲ್ಲ, ಅವರಿಗೆ ಸತ್ಯ ಸಿದ್ಧವಿದೆ. ಅವರು ಎಲ್ಲವನ್ನೂ ವಾಸ್ತವ ಸಂಗತಿಗಳೆಂದೇ ತಿಳಿದು ಪ್ರಾರಂಭಿಸುತ್ತಾರೆ. ಸೃಷ್ಟಿ, ಮನುಷ್ಯ, ಭಾಷೆ ಇತ್ಯಾದಿಗಳೆಲ್ಲ ವಾಸ್ತವ ಎಂಬುದರಿಂದಲೇ ಪ್ರಾರಂಭಿಸಿ ಕಡೆಗೆ ಇವೆಲ್ಲ ಸ್ವಯಂಕೃತ ಎಂದೋ ಪರಕೃತ ಎಂದೋ ತೀರ್ಮಾನಿಸುತ್ತಾರೆ. ಕಾವ್ಯ, ಕಲೆ ಇತ್ಯಾದಿಗಳು ಈ ಅನುಸಂಧಾನದ ಹಾದಿಗಳಾಗಿದ್ದು, ಅವರವರು ತಲುಪಬೇಕಾದ ಗಂತವ್ಯಕ್ಕೆ ಅವರನ್ನು ಮುಟ್ಟಿಸಿ ಆನಂದವನ್ನೋ ಮುಕ್ತಿಯನ್ನೋ ಅಥವಾ ಎರಡನ್ನೂ ನೀಡಿ ವಿರಮಿಸುತ್ತವೆ. ಶಿಲ್ಪಿಯೊಬ್ಬ ತಾನು ಕಡೆಯಬೇಕಾಗಿರುವ ಶಿಲ್ಪವನ್ನು ಹೊಸದಾಗಿ ಸೃಜಿಸಬೇಕಾಗಿಲ್ಲ. ಅದು ಈಗಾಗಲೇ ಇದೆ. ಅದು ಇರುವ ಶಿಲೆಯಲ್ಲಿ ವ್ಯರ್ಥಭಾಗವನ್ನು ತೆಗೆದು ಹಾಕಿದರೆ ಸಾಕು. ಅದು ಅನಾವರಣವಾಗುತ್ತದೆ. ಎಲ್ಲವೂ ಸಿದ್ಧವಾಗಿವೆ. ತೆರೆ ಸರಿಸುವುದಷ್ಟೇ ಕಲಾವಿದನ ಕೆಲಸ. ಹೀಗೆ ಶಬ್ದಾರ್ಥ ಸಂಬಂಧಗಳು ಅವರಿಗೆ ಪಾರ್ವತಿ– ಪರಮೇಶ್ವರ ರಾಗಿಯೂ, ಭಾಷೆ ಮುಕ್ತಿದಾಯಕವಾಗಿಯೂ ಗೋಚರಿಸಬಹುದು. ಇದು ತುಂಬಾ ಸ್ಥೂಲವಾದ ವಿವರಣೆ.

ಬೌದ್ಧ ಸೌಂದರ್ಯ ಮೀಮಾಂಸೆಯ ಪ್ರವೇಶಕ್ಕೆ ಈ ಮೇಲಿನ ಮಾತುಗಳಿಂದ ಆಗಬೇಕಾದ್ದೇನೂ ಇಲ್ಲ ಅಥವಾ ಈ ನಿಲುವನ್ನು ಆಚೆಗಟ್ಟಿ ಮತ್ತೊಂದನ್ನು ಸ್ಥಾಪಿಸುವ ಉದ್ಯೋಗವೂ ಇದಲ್ಲ. ಆದರೆ ಇಂತಹದ್ದೊಂದು ನಿಲುವಿದ್ದರೆ ಅದನ್ನು ಬರಿದಾಗಿಸಿ ನಿರಾಳವಾಗಿ ಬನ್ನಿ ಎಂಬುದಷ್ಟೇ ನೀಡಬಹುದಾದ ಸೂಚನೆ. ಏಕೆಂದರೆ ನಾವೆಲ್ಲ ನಮ್ಮ ಲೋಕ ವ್ಯವಹಾರವನ್ನು ಅವಳಿ–ವೈರುಧ್ಯಗಳ ಮೂಲಕವೇ ನಡೆಸಿ ರೂಢಿಗೆ ಬಿದ್ದಿದ್ದೇವೆ. ಮೇಲೆ–ಕೆಳಗೆ, ಉದ್ದ–ಗಿಡ್ಡ, ಒಳಿತು–ಕೆಡುಕು, ಚಲನೆ–ನಿಶ್ಚಲ, ಸಾರೂಪ–ಅಮೂರ್ತ ಇತ್ಯಾದಿಗಳೆಲ್ಲ ಸ್ವತಂತ್ರ ಸತ್ಯಗಳೆಂಬಂತೆ ಭಾವಿಸಿ ವ್ಯವಹರಿಸಿಬಿಡುತ್ತೇವೆ. ಇವೆಲ್ಲ ಸಾಪೇಕ್ಷ ಸಂಗತಿಗಳೆಂದು ಭಾವಿಸುವುದು ಕಡಿಮೆ. ಹೀಗಾಗಿ ಅಸ್ತಿತ್ವ–ನಾಸ್ತಿತ್ವ ಎಂಬ ತುದಿಗಳು ಎರಡು ವಿರುದ್ಧ ತುದಿಗಳಾಗಿ ನಾವು ಆ ತುದಿಯಿಂದ ಈ ತುದಿಗೋ, ಈ ತುದಿಯಿಂದ ಆ ತುದಿಗೋ ಲಾಳಿ ಹೊಡೆಯುತ್ತಿರುತ್ತೇವೆ ಅಥವಾ ಯಾವುದಾದರೊಂದು ತುದಿಗೆ ಜೋತುಬಿದ್ದುಬಿಡುತ್ತೇವೆ. ಲೋಕದ ಎಲ್ಲವನ್ನೂ ಭಿನ್ನ ಭಿನ್ನವಾದ ಚೂರುಗಳನ್ನಾಗಿ ನೋಡುವ ಅಭ್ಯಾಸದಿಂದಾಗಿ ಪ್ರತಿಯೊಂದನ್ನೂ ಬೇರೆ ಬೇರೆ ಫ್ರೇಮುಗಳನ್ನಾಗಿಸಿ ಬಿಡುವುದರಿಂದ ಅಂಚುಗಳು (borders) ಇಲ್ಲದಿರುವುದನ್ನು ಗ್ರಹಿಸಲಾರದ ಸ್ಥಿತಿಗೆ ಬಂದು ಬಿಡುತ್ತೇವೆ. ಇದನ್ನು border defined perception of thing ಎನ್ನುತ್ತಾರೆ.

ಸದಾ ಮುಂದಕ್ಕೆ ಚಲಿಸುತ್ತಿರುವ ಚಕ್ರಪ್ರವಾಹವೇ ವಸ್ತು ಪ್ರಪಂಚದ 'ಧರ್ಮ'ವಾಗಿರುವುದರಿಂದ, ಲೋಕದ ಶುದ್ಧ ಚಿತ್ರವೆಂದರೆ ಈ ಚಲನೆಯೇ. ಸೌಂದರ್ಯ ಮೀಮಾಂಸೆಯಲ್ಲಿ ಈ ವಸ್ತುಪ್ರಪಂಚದ ನಿಜಗುಣವನ್ನು ಅರಿಯುವುದು ಮತ್ತು ಆ ಅರಿವನ್ನು ಚಾಲ್ತಿಯಲ್ಲಿಟ್ಟುಕೊಂಡು ವ್ಯವಹರಿಸುವುದು ಮುಖ್ಯ. ಅಂದರೆ ನಮ್ಮ ಇಂದ್ರಿಯಗಳು ದಕ್ಕಿಸಿಕೊಳ್ಳುವ ಅನುಭವಗಳು 'ಶುದ್ಧ' ರೂಪದಲ್ಲಿ ದಾಖಲಾಗಬೇಕು. ಬೌದ್ಧ ಪರಿ ಭಾಷೆಯಲ್ಲಿಯೇ ಹೇಳುವುದಾದರೆ ವಸ್ತುಪ್ರಪಂಚವನ್ನು ಅದು 'ಹೇಗಿದೆಯೋ ಹಾಗೆಯೇ' ಗ್ರಹಿಸಬೇಕು. ಹಾಗಾದರೆ ನಾವು ಕಾಣುವ ಸಂಗತಿಗಳನ್ನು ' ಕಲಬೆರಕೆ' ಮಾಡಿ ಅಶುದ್ಧಗೊಳಿಸುವ ಸಂಗತಿಗಳು ಯಾವುವು? ಅವುಗಳನ್ನು ದಾಟುವುದು ಹೇಗೆ? ವಸ್ತು ಪ್ರಪಂಚದ 'ಶುದ್ಧಅವಸ್ಥೆ'ಯನ್ನು ವಿವರಿಸುವುದು ಹೇಗೆ? ಈ ಎಲ್ಲ ಅಂಶಗಳನ್ನು ಚರ್ಚಿಸುವುದೇ ಈ ಲೇಖನ ಸರಣಿಯ ಉದ್ದೇಶವಾಗಿದೆ. ಬೌದ್ಧ ಸೌಂದರ್ಯ ಮೀಮಾಂಸೆಯ ಲಕ್ಷಣಗಳೆಂದು ಕೆಳಗಿನ ಸಂಗತಿಗಳನ್ನು ಗುರುತಿಸಿಕೊಳ್ಳಲಾಗಿದೆ.

೧. ದು:ಖದ ಅನುಸಂಧಾನವೇ ಕಾವ್ಯ ಮತ್ತು ಕಲೆಗಳ ಉದ್ಯೋಗವಾಗಿದೆ.

೨. ಈ ಮೀಮಾಂಸೆಯ ಲೋಕಾನುಸಂಧಾನದ ಕ್ರಮವೆಂದರೆ:

ಅ) ಈ ಲೋಕವೊಂದು ನಿರಂತರವಾಗಿ ಬದಲಾಗುತ್ತಿರುವ ಪ್ರವಾಹ

ಆ) ಇದಕ್ಕೆ ಪ್ರಾರಂಭವೆಂಬುದಾಗಲೀ ಕೊನೆಯೆಂಬುದಾಗಲೀ ಇಲ್ಲ

ಇ) ಇದನ್ನು 'ಇದೆ' ಅಥವಾ 'ಇಲ್ಲ' ಎಂಬ ಕ್ರಮದಲ್ಲಿ ಗ್ರಹಿಸಲಾಗದು.

ಈ) ಎದುರಿಗೆ ಕಾಣುವ ಎಲ್ಲವೂ ಕಾರಣ ಮತ್ತು ಪರಿಸ್ಥಿತಿಗಳ ಸಂಬಂಧದಿಂದ ಉಂಟಾದ ಪರಿಣಾಮವಾಗಿದ್ದು, ಯಾವುದರಲ್ಲೂ ಅದರ ಸ್ವಂತದ್ದು ಎಂದು ಗುರುತಿಸಬಹುದಾದ್ದು ಏನೂ ಇರುವುದಿಲ್ಲ

ಉ) ಬದಲಾವಣೆ ಪೂರ್ಣವಾದುದು ಮತ್ತು ನಿರಂತರವಾದುದು. ಈ ಪ್ರವಾಹವು ನಿರಂತರ 'ತಲ್ಲಣ' ದಲ್ಲಿಯೇ ಮುಂದುವರಿಯುವುದರಿಂದ ಯಾವ ಹಂತವೂ ಸ್ಥಗಿತವಲ್ಲ.

೩. **ಒಂದು** ಮೂಲಕೃತಿಯೆನ್ನುವುದು ಇರಲು ಸಾಧ್ಯವಿಲ್ಲ. ಕೃತಿ ಉಂಟಾಗಲು ನೋಡುವವನು ಮತ್ತು ನೋಡುವ ಪರಿಸ್ಥಿತಿಗಳ ಸಂಬಂಧ ಏರ್ಪಡಲೇಬೇಕು. ಏಕೆಂದರೆ ಯಾವ ಕೃತಿಯೂ 'ಸಿದ್ಧವಾಗಿ' ಇರುವುದಿಲ್ಲ. ಪ್ರತಿ ಸಾರಿ ಓದಿದಾಗ, ಪ್ರತಿಸಾರಿ ನೋಡಿದಾಗ ಕೃತಿ ಉಂಟಾಗುವುದರಿಂದ, **ಒಂದು** ಮೂಲಕೃತಿ ಇರಲು ಸಾಧ್ಯವಿಲ್ಲ. ನಾವು 'ಮೂಲ' ವೆಂದು ತಪ್ಪಾಗಿ ಭಾವಿಸುವ ಕೃತಿಯನ್ನು ಸಾಪೇಕ್ಷ ಕೃತಿಯೆನ್ನಬಹುದು. ತಿಳಿಯಬೇಕಾದ್ದು, ತಿಳಿಯುವ ಸಂದರ್ಭ ಮತ್ತು ತಿಳಿಯುವವನು ಈ 'ತ್ರಿಕ' ವನ್ನು ಬೌದ್ಧಮೀಮಾಂಸೆಯು ವಿವರಿಸುವ ಕ್ರಮ ಭಿನ್ನವಾದುದು.

ಒಂದು ಮೂಲಕೃತಿಯೆನ್ನುವುದು ಇರಲು ಸಾಧ್ಯವಿಲ್ಲ. ಕೃತಿ ಉಂಟಾಗಲು ನೋಡುವವನು ಮತ್ತು ನೋಡುವ ಪರಿಸ್ಥಿತಿಗಳ ಸಂಬಂಧ ಏರ್ಪಡಲೇಬೇಕು. ಏಕೆಂದರೆ ಯಾವ ಕೃತಿಯೂ 'ಸಿದ್ಧವಾಗಿ' ಇರುವುದಿಲ್ಲ. ಪ್ರತಿ ಸಾರಿ ಓದಿದಾಗ, ಪ್ರತಿಸಾರಿ ನೋಡಿದಾಗ ಕೃತಿ ಉಂಟಾಗುವುದರಿಂದ, ಒಂದು ಮೂಲಕೃತಿ ಇರಲು ಸಾಧ್ಯ ವಿಲ್ಲ. ನಾವು 'ಮೂಲ' ವೆಂದು ತಪ್ಪಾಗಿ ಭಾವಿಸುವ ಕೃತಿ ಯನ್ನು ಸಾಪೇಕ್ಷ ಕೃತಿಯೆನ್ನಬಹುದು. ತಿಳಿಯಬೇಕಾದ್ದು, ತಿಳಿಯುವ ಸಂದರ್ಭ ಮತ್ತು ತಿಳಿಯುವವನು ಈ 'ತ್ರಿಕ' ವನ್ನು ಬೌದ್ಧಮೀಮಾಂಸೆಯು ವಿವರಿಸುವ ಕ್ರಮ ಭಿನ್ನವಾದುದು.

೪. ಸದಾ ಚಲಿಸುತ್ತಲೇ ಇರುವ ಈ ಲೋಕ ಪ್ರವಾಹವನ್ನು ಒಂದರಿಂದ ಇನ್ನೊಂದು ಭಿನ್ನವೆಂದಾಗಲೀ ಅಭಿನ್ನವೆಂದಾಗಲೀ ವಿವರಿಸಲು ಸಾಧ್ಯವಿಲ್ಲ. ಈ ಭಿನ್ನಾಭಿನ್ನ ನಿರಾಕರಣೆ ಬೌದ್ಧ ಮೀಮಾಂಸೆಯ ಅತ್ಯಂತ ಪ್ರಮುಖ ಉಪಕರಣ.

೫. ಬೌದ್ಧ ಮೀಮಾಂಸೆಯು ಪ್ರತ್ಯಕ್ಷ, ಅನುಮಾನ ಮತ್ತು ಶಬ್ದ ಈ ಮೂರೂ ಪ್ರಮಾಣಗಳನ್ನು ಮಾನ್ಯ ಮಾಡುವುದಿಲ್ಲ.

೬. ಕಾಲ ಮತ್ತು ದೇಶಗಳನ್ನು ನಿರಾಕರಿಸುತ್ತದೆ.

೭. ಶ್ರಮವನ್ನಾಧರಿಸಿದ ಜೀವನಕ್ರಮವನ್ನು ಈ ಮೀಮಾಂಸೆ ಯುಕ್ತವೆಂದು ನಂಬುತ್ತದೆ.

೮. ಲೌಕಿಕ ಮತ್ತು ಪಾರಮಾರ್ಥಿಕಗಳ ಸಂಬಂಧವನ್ನು ಭಿನ್ನ ರೀತಿಯಲ್ಲಿ ವಿವರಿಸುತ್ತದೆ. ಲೌಕಿಕವನ್ನು ನಿರಾಕರಿಸಿದ ಪರಮಾರ್ಥವನ್ನು ಅದು ಮಾನ್ಯ ಮಾಡುವುದಿಲ್ಲ. ಸಾಮಾನ್ಯ ಲೋಕಜೀವನಕ್ಕೆ ಒದಗಿಬಾರದ ತಾತ್ವಿಕಚಿಂತನೆಯನ್ನು ಒಳಗೊಳ್ಳಲು ಬೌದ್ಧ ಮೀಮಾಂಸೆಯು ಬಯಸುವುದಿಲ್ಲ. ಅಂತಹ ಸಂದರ್ಭಗಳಲ್ಲೆಲ್ಲ ಬುದ್ಧ ಮೌನ ವಹಿಸಿದ.

೯. ಬೌದ್ಧಮೀಮಾಂಸೆಯು ಸಿದ್ಧ ಸತ್ಯದ ಅನುಸಂಧಾನಕ್ಕೆ ತೊಡಗುವುದಿಲ್ಲ. ಅದಕ್ಕೆ ಸತ್ಯ ಸಿದ್ಧವಿರುವುದಿಲ್ಲ. ಅದು ಕಟ್ಟ ಬೇಕಾದದ್ದು. □

ಮನು ವರ್ಸಸ್ ಆಡಂ ಸ್ಮಿತ್

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್



ಕಳೆದ ವಾರ ದೆಹಲಿಯ ಸ್ನೇಹಿತರ ಜೊತೆಗೆ ನಾನು ಮತ್ತೆ ನನ್ನ ಸ್ವಗ್ರಾಮಕ್ಕೆ ಹೋಗಿದ್ದೆ. ಪ್ರಯಾಣದಿಂದ ದಣಿದಿದ್ದ ನಾನು, ದೆಹಲಿಯಿಂದ ಸುಮಾರು ೮೦೦ ಕಿ.ಮೀ ದೂರದ ಒಂದು ಸ್ಥಳದಲ್ಲಿ ತಳ್ಳುವ ಗಾಡಿಯವನ ಬಳಿ ಕೂಲ್ ಡ್ರಿಂಕ್ ಖರೀದಿಸಿದೆ. ಪಕ್ಕದ ಟೀ ಅಂಗಡಿಯಲ್ಲಿ, ಮತ್ತು ಕಿರಾಣಿ ಅಂಗಡಿಯಲ್ಲಿ ವಿದ್ಯುತ್ ಕೊರತೆ ಯಿಂದಾಗಿ ಕೂಲ್ ಡ್ರಿಂಕ್ಸ್ ಮಾರಾಟ ಮಾಡುತ್ತಿಲ್ಲವೆಂದು ವಿಚಾರಿಸಿ ತಿಳಿದುಕೊಂಡೆ. ಹಾಗಾದರೆ, ತಳ್ಳುವ ಗಾಡಿಯ ಈ ವ್ಯಾಪಾರಿ ಹೇಗೆ ಕೂಲ್ ಡ್ರಿಂಕ್ಸ್ ಮಾರುವಂತಾದ? ಈತ, ಅಲ್ಲಿಂದ ಸುಮಾರು ೨೦ ಕಿ.ಮೀ ದೂರದ ಜಿಲ್ಲಾ ಕೇಂದ್ರ ಅಜ್ಞಾಂಗಢದ ಮಾರುಕಟ್ಟೆಗೆ ಹೋಗಿ ತನ್ನ ಬೈಸಿಕಲ್ಲಿನಲ್ಲಿ ಕೂಲ್ ಡ್ರಿಂಕ್ಸ್‌ಗಳನ್ನು ತಂಪಾಗಿಡಲು ಅತ್ಯವಶ್ಯಕ ವಾದ 'ಐಸ್' ತರುತ್ತಿದ್ದುದು ತಿಳಿದುಬಂತು.

ಒಂದು ವೇಳೆ ಉತ್ತರ ಪ್ರದೇಶದ ಗ್ರಾಮೀಣ ಪ್ರದೇಶಗಳಲ್ಲಿ ೨೪ ಗಂಟೆಗಳ ಕಾಲ ವಿದ್ಯುತ್ ಸರಬರಾಜು ವ್ಯವಸ್ಥೆಯಿದ್ದರೆ ಏನಾ ಗುತ್ತಿತ್ತು? ಗ್ರಾಮೀಣ ಪ್ರದೇಶದ ನಾಲ್ಕನೇ ಒಂದಕ್ಕಿಂತ ಹೆಚ್ಚು ಮಂದಿ ರೆಫ್ರಿಜರೇಟರ್‌ಗಳು, ಡಿಷ್ ಆಂಟೆನಾ ವ್ಯವಸ್ಥೆ ಹೊಂದಿರುವ ಟಿ.ವಿಗಳು, ಕೂಲರ್‌ಗಳು, ಏರ್‌ಕಂಡಿಷನರ್‌ಗಳು ಮತ್ತು ಕಂಪ್ಯೂಟ ರ್‌ಗಳನ್ನು ಹೊಂದಿರುತ್ತಿದ್ದರು. ವಿದ್ಯುಚ್ಛಕ್ತಿ, ಈ ಗ್ರಾಮೀಣ ಪ್ರದೇಶದ ಸೌಲಭ್ಯಕಾಂಕ್ಷಿಗಳನ್ನು ಗ್ರಾಹಕರನ್ನಾಗಿ ಪರಿವರ್ತಿಸುವ ಶಕ್ತಿಯನ್ನು ಹೊಂದಿದೆ.

ವಿದ್ಯುತ್‌ಚ್ಛಕ್ತಿಯಿಂದಾಗಿ ಹೊಸ ಕೃಷಿಯೇತರ ಉದ್ಯೋಗಗಳು ಸೃಷ್ಟಿಯಾಗುತ್ತವೆ ಹಾಗೂ ಸಂಪನ್ಮೂಲಗಳನ್ನು ಹೊಂದಿರುವವರು ಸೌಕರ್ಯಗಳಿಗೆ ಖರ್ಚು ಮಾಡಲಾರಂಭಿಸುತ್ತಾರೆ. ಭೂಮಿಯ ಒಡೆ ತನವಿಲ್ಲದ ಗ್ರಾಮೀಣ ಜನರಿಗೆ ಪ್ರಸ್ತುತ, ಕೃಷಿ ಚಟುವಟಿಕೆ, ನಗರಗಳ ಕಾರ್ಖಾನೆಗಳು ಹಾಗೂ ಸರ್ಕಾರಿ ನೌಕರಿ, ಈ ಮೂರು ಉದ್ಯೋ ಗಾವಕಾಶಗಳಿವೆ.

ಎಲ್ಲ ಭಾರತೀಯರು ಸರ್ಕಾರಿ ನೌಕರಿ ಗಿಟ್ಟಿಸುವುದಂತೂ ಸಾಧ್ಯವಿಲ್ಲ. ಹೀಗಾಗಿ, ಓರ್ವ ಸಾಮಾನ್ಯ ಭಾರತೀಯ, ಕೃಷಿ ಕಾರ್ಮಿಕನಾಗಿ ಕೆಲಸ ಮಾಡಬೇಕು ಅಥವಾ ನಗರಗಳಿಗೆ ವಲಸೆ ಹೋಗಬೇಕಿದೆ. ನಗರಗಳಲ್ಲಿ ಉದ್ಯೋಗ ಸೃಷ್ಟಿ, ಕೈಗಾರಿಕೀಕರಣದ ವೇಗ ಮತ್ತು ವ್ಯಾಪ್ತಿಯನ್ನು ಅವಲಂಬಿಸಿರುತ್ತದೆ. ಇನ್ನು ಕೈಗಾರಿಕೀ ಕರಣ ಬೇಡಿಕೆಯ ಮಟ್ಟವನ್ನು ಅವಲಂಬಿಸಿರುತ್ತದೆ.

ದೇಶದ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಶೇ. ೭೦ರಷ್ಟು ಮಂದಿ ಗ್ರಾಹಕರಾಗಿ ವಿಕಾಸಗೊಳ್ಳದಿದ್ದರೆ ಕೈಗಾರಿಕೀಕರಣದ ಪ್ರಕ್ರಿಯೆ ಮಂದಗತಿಯಲ್ಲಿಯೇ ಮುಂದುವರೆಯಲಿದೆ. ಗ್ರಾಮೀಣ ಪ್ರದೇಶಗ ಳಲ್ಲಿ ಪ್ರಸ್ತುತ ಅಲ್ಪಾವಧಿಗೆ ನೀಡಲಾಗುತ್ತಿರುವ ವಿದ್ಯುತ್, ೨೪ ಗಂಟೆ ಗಳೂ ಸರಬರಾಜಾಗುವಂತಾದರೆ ಭಾರತದ ಕೈಗಾರಿಕೀಕರಣ ಪ್ರಕ್ರಿಯೆ ಕ್ರಾಂತಿಕಾರಿ ಸ್ವರೂಪ ಪಡೆದುಕೊಳ್ಳುವುದರಲ್ಲಿ ಸಂಶಯವಿಲ್ಲ.

ಸಾಫ್ಟ್‌ವೇರ್ ತಂತ್ರಜ್ಞರು, ಮ್ಯಾನೇಜರ್‌ಗಳು ಮತ್ತು ವ್ಯಾಪಾರಿ ಗಳ ಜೊತೆಗೆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಹೆಚ್ಚಿನ ಶಿಕ್ಷಣ ಪಡೆ ಯದ ಕಾರ್ಮಿಕರು, ಮೆಕ್ಯಾನಿ ಕ್‌ಗಳು, ಡ್ರೈವರ್‌ಗಳು ಮತ್ತು ಸಣ್ಣ ವ್ಯಾಪಾರಿಗಳು ಕೂಡ ಕೈಗಾರಿಕೀಕರಣ ವ್ಯವಸ್ಥೆಯ ಅವಿಭಾಜ್ಯ ಅಂಗಗಳೇ ಆಗಿ ದ್ದಾರೆ.

ದೇಶವನ್ನು ಪ್ರಸ್ತುತ ಕಾಡುತ್ತಿರುವ ಬಿಕ್ಕಟ್ಟು ಪರಮಾಣು ಒಪ್ಪಂದ ಕುರಿತದ್ದು ಎಂದು ನಮಗೆ ಗೋಚರಿಸುತ್ತಿದೆ. ಆದರೆ 'ಗೋಚರಿಸುತ್ತಿರುವುದು'ವಾಸ್ತವ ವಾಗಿರಬೇಕಿಲ್ಲ.

ಪರಮಾಣು ಒಪ್ಪಂದ ಹೆಚ್ಚಿನ ವಿದ್ಯುತ್‌ಚ್ಛಕ್ತಿಯ ಉತ್ಪಾದನೆ ಯನ್ನು ಕುರಿತಾಗಿರುವುದರಿಂದ ಎಡರಂಗ ಮತ್ತು ಸಂಘಪರಿವಾರ ಅದರ ವಿರುದ್ಧ ಕಿಡಿ ಕಾರುತ್ತಿರುವುದೇಕೆ? ಎಡರಂಗ ಮತ್ತು ಸಂಘ ಪರಿವಾರ ಮಾತ್ರ ಹೆಚ್ಚಿನ ವಿದ್ಯುತ್ ಉತ್ಪಾದನೆಗೆ ವಿರೋಧ ವ್ಯಕ್ತಪ ಡಿಸುತ್ತಿರುವುದೇಕೆ?

ಸೈದ್ಧಾಂತಿಕ ಭಿನ್ನತೆಯನ್ನು ಹೊಂದಿರುವ ಈ ಎರಡು ಗುಂಪುಗಳ ನಡುವೆ ಇರುವ ಸಾಮ್ಯತೆ ಕೇವಲ ಪರಮಾಣು ಒಪ್ಪಂದಕ್ಕೆ ಮಾತ್ರ ಸೀಮಿತವಾಗಿಲ್ಲ. ವಿಶೇಷ ಆರ್ಥಿಕ ವಲಯಗಳು, ಮಾಲ್ ಸಂಸ್ಕೃತಿ, ಅಮೆರಿಕದೊಂದಿಗಿನ ಸ್ನೇಹ, ಮತ್ತು ಭಾರತೀಯ ಸಮಾಜದ ಪಾಶ್ಚಿಮಾತ್ಯೀಕರಣ ಕುರಿತು ಈ ಎರಡೂ ಗುಂಪುಗಳು ಸಮಾನ ಅಭಿಪ್ರಾಯ ಹೊಂದಿವೆ.

ಭಾರತದ ಜಾತಿ ಸರ್ವಾಧಿಕಾರ ವ್ಯವಸ್ಥೆಯ ಬಗ್ಗೆ ಎಡರಂಗ ಮತ್ತು ಸಂಘಪರಿವಾರ ಸಮಾನ ಅಭಿಪ್ರಾಯ ಹೊಂದಿರುವುದು ಕೇವಲ ಆಕಸ್ಮಿಕವೇ? ಎಡರಂಗದ ಪ್ರಕಾರ ಭಾರತೀಯ ಸಮಾಜದ ಬಹುದೊಡ್ಡ ತೊಡಕು 'ವರ್ಗ'ವೇ ಹೊರತು 'ಜಾತಿ'ಯಲ್ಲ. ಇನ್ನು ಸಂಘಪರಿವಾರದ ಪ್ರಕಾರ ಭಾರತೀಯ ಸಮಾಜವನ್ನು ಬಾಧಿಸುತ್ತಿ ರುವ ಬಹುದೊಡ್ಡ ಸಮಸ್ಯೆ, ಧರ್ಮವೇ ಹೊರತು ಜಾತಿಯಲ್ಲ. ಈ ಎರಡೂ ಗುಂಪುಗಳು ಬ್ರಿಟಿಷ್ ಆಡಳಿತದ ಬಗ್ಗೆ ಕೂಡ ಒಂದೇ ಅಭಿಪ್ರಾಯ ಹೊಂದಿವೆ. 'ಭಾರತೀಯ ದಂಡ ಸಂಹಿತೆ' ಜಾರಿಗೆ ತರುವ ಮೂಲಕ ಎಲ್ಲ ಭಾರತೀಯರನ್ನೂ ಶಾಸನಾತ್ಮಕವಾಗಿ ಸಮಾ ನವಾಗಿ ಕಂಡ ಲಾರ್ಡ್ ಮೆಕಾಲೆಯನ್ನು ಈ ಎರಡೂ ಗುಂಪುಗಳು ತೀವ್ರವಾಗಿ ಟೀಕಿಸುತ್ತವೆ.

ಎಡರಂಗ ಮತ್ತು ಸಂಘಪರಿವಾರದ ನಾಯಕ ಶಿಖಾಮಣಿಗಳ ಪೋಷಕರು ಎಂದೂ ಸಾರ್ವಜನಿಕ ಭೋಜನಕೂಟಗಳಲ್ಲಿ ಪ್ರತ್ಯೇಕವಾಗಿ ಕೂರುತ್ತಿರಲಿಲ್ಲ ಅಥವಾ ಹೊಸ ರೀತಿಯ ವಸ್ತ್ರಗಳನ್ನು ಧರಿಸಲು ನಿರ್ಬಂಧ ಹೇರುತ್ತಿರಲಿಲ್ಲ ಅಥವಾ ಚಿನ್ನದ ಆಭರಣಗ ಳನ್ನು ತೊಡಲು ಕೂಡ ಯಾವುದೇ ನಿರ್ಬಂಧಗಳನ್ನು ವಿಧಿಸುತ್ತಿರ ಲಿಲ್ಲ. ಹೀಗಿರುವಾಗ, ಜಾತಿ ಸರ್ವಾಧಿಕಾರದ ವಿರುದ್ಧ ಈ ಗುಂಪು ಗಳಿಗೆ ಸಮಸ್ಯೆ ಇರುವುದಕ್ಕೆ ಹೇಗೆ ಸಾಧ್ಯ? ಆದರೆ, ಜಾತಿ ಸರ್ವಾಧಿ ಕಾರದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯಗಳು ಇಲ್ಲದಿರುವುದಕ್ಕೂ, ಜಾತಿ ಸರ್ವಾಧಿಕಾರವನ್ನು ಅನುಭವಿಸಿ ಸಂಭ್ರಮಿಸುವುದಕ್ಕೂ ಖಂಡಿತ ವ್ಯತ್ಯಾಸವಿದೆ.

ವಿಶ್ವದಾದ್ಯಂತ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವಿದ್ಯುಚ್ಛ ಕ್ತಿಯೇ ಕೈಗಾರಿಕೀಕರಣದ ಎಂಜಿನ್‌ನಂತೆ ಕೆಲಸ ಮಾಡಿರುವುದ ರಿಂದ, ವಿದ್ಯುತ್‌ಚ್ಛಕ್ತಿಯ ವಿಸ್ತರಣೆಗೆ ವಿರೋಧ ವ್ಯಕ್ತಪಡಿಸುವುದು, ಒಟ್ಟಾರೆ ಕೈಗಾರಿಕೀಕರಣ ಪ್ರಕ್ರಿಯೆಗೇ ವಿರೋಧ ವ್ಯಕ್ತಪಡಿಸಿದಂತಾ ಗುತ್ತದೆ.

ಹೀಗಾಗಿ, ಈಗ ಭಾರತದಲ್ಲಿ ಉದ್ಭವಿಸಿರುವ ಬಿಕ್ಕಟ್ಟು, ವಾಸ್ತವವಾಗಿ ಕೈಗಾರಿ ಕೀರಣ ಮತ್ತು ಕೃಷಿವ್ಯವಸ್ಥೆಯ ನಡುವೆ ನಡೆಯುತ್ತಿರುವ ಸಮ ರವಾಗಿದೆ; ಇದು ಗ್ರಾಮ ಸ್ವರಾಜ್ಯ ಮತ್ತು ಭಾರತೀಯ

ಎಲ್ಲ ಭಾರತೀಯರು ಸರ್ಕಾರಿ ನೌಕರಿ ಗಿಟ್ಟಿಸುವುದಂತೂ ಸಾಧ್ಯವಿಲ್ಲ. ಹೀಗಾಗಿ, ಓರ್ವ ಸಾಮಾನ್ಯ ಭಾರತೀಯ, ಕೃಷಿ ಕಾರ್ಮಿಕನಾಗಿ ಕೆಲಸ ಮಾಡಬೇಕು ಅಥವಾ ನಗರಗಳಿಗೆ ವಲಸೆ ಹೋಗಬೇಕಿದೆ. ನಗರಗಳಲ್ಲಿ ಉದ್ಯೋಗ ಸೃಷ್ಟಿ, ಕೈಗಾರಿಕೀಕರಣದ ವೇಗ ಮತ್ತು ವ್ಯಾಪ್ತಿಯನ್ನು ಅವಲಂಬಿಸಿರುತ್ತದೆ. ಇನ್ನು ಕೈಗಾರಿಕೀಕರಣ ಬೇಡಿಕೆಯ ಮಟ್ಟವನ್ನು ಅವಲಂಬಿಸಿರುತ್ತದೆ. ದೇಶದ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಶೇ. ೭೦ರಷ್ಟು ಮಂದಿ ಗ್ರಾಹಕರಾಗಿ ವಿಕಾಸಗೊಳ್ಳದಿದ್ದರೆ ಕೈಗಾರಿಕೀಕರಣದ ಪ್ರಕ್ರಿಯೆ ಮಂದಗತಿಯಲ್ಲಿಯೇ ಮುಂದುರೆಯಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರಸ್ತುತ ಅಲ್ಪಾವಧಿಗೆ ನೀಡಲಾಗುತ್ತಿರುವ ವಿದ್ಯುತ್, ೨೪ ಗಂಟೆಗಳೂ ಸರಬರಾಜಾಗುವಂತಾದರೆ ಭಾರತದ ಕೈಗಾರಿಕೀಕರಣ ಪ್ರಕ್ರಿಯೆ ಕ್ರಾಂತಿಕಾರಿ ಸ್ವರೂಪ ಪಡೆದುಕೊಳ್ಳುವುದರಲ್ಲಿ ಸಂಶಯವಿಲ್ಲ

ಅನುವಾದ :
ಸತ್ಯಪ್ರಕಾಶ್ ಎಂ.ಆರ್

ಭಾರತೀಯ ಮತದಾರರೇ ಆಯ್ಕೆ ಮಾಡಲಿ

ಗಣರಾಜ್ಯದ ನಡುವೆ ನಡೆಯುತ್ತಿರುವ ಸಮರ.

ನಮಗೆಲ್ಲ ತಿಳಿದಿರುವಂತೆ, ಗ್ರಾಮೀಣ ಭಾರತ 'ಮನುಧರ್ಮ'ದ ಕರ್ತೃ ಮನುವಿಗೆ ಹತ್ತಿರವಾದರೆ, ಕೈಗಾರಿಕೀಕರಣ ಮತ್ತು ನಗರೀಕರಣಗೊಂಡ ಭಾರತ 'ಕ್ಯಾಪಿಟಲಿಸಂ- ದ ಎಂಜಿನ್ ಆಫ್ ಇಂಡಸ್ಟ್ರಿಯಲೈಸೇಷನ್ ಅಂಡ್ ಅರ್ಬನಿಸಂ'ನ ಕರ್ತೃ ಆಡಂ ಸ್ಮಿತ್‌ಗೆ ಹತ್ತಿರವಾದುದು.

ಅಭಿವೃದ್ಧಿ ಹೊಂದಿದ ಸಮಾಜದಲ್ಲಿ ಕೆಲಸ ಮಾಡುವುದು ಅಸಾಧ್ಯವೆಂದು ಎಡರಂಗದವರಿಗೆ ಗೊತ್ತು. ಹಾಗೆ, ಪಾಶ್ಚಿಮಾತ್ಯೀಕರಣ ಹೊಂದಿದ ಸಮಾಜದಲ್ಲಿ ತಮ್ಮ ಬೇಳೆ ಬೇಯುವುದಿಲ್ಲವೆಂದು ಸಂಘಪರಿವಾರದವರಿಗೂ ಗೊತ್ತು.

ಆದ್ದರಿಂದ, ಭಾರತದಲ್ಲಿ ಈಗ ನಡೆಯುತ್ತಿರುವ ಸಂಘರ್ಷ ಏನಿದೆ, ಇದು ಜಾತಿ ಸರ್ವಾಧಿಕಾರ ಮತ್ತು ಸಮೂಹ- ಬಂಡವಾಳಶಾಹಿ ವ್ಯವಸ್ಥೆಯ ನಡುವೆ ನಡೆಯುತ್ತಿರುವ ಸಂಘರ್ಷ. ಮನು ಮತ್ತು ಆಡಂ ಸ್ಮಿತ್ ನಡುವೆ ನಡೆಯುತ್ತಿರುವ ಸಂಘರ್ಷ!

ಎಡಪಕ್ಷಗಳು ಮತ್ತು ಬಿಜೆಪಿ ಕೈಜೋಡಿಸಿರುವುದು ಹೊಸ ಬೆಳವಣಿಗೆಯೇನಲ್ಲ. ತಮ್ಮ ಸಾಮಾಜಿಕ- ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ವೈರುಧ್ಯಕ್ಕಿಂತ ಸಮಾನವಾಗಿಯೇ ಇರುವ ಈ ಎರಡು ಗುಂಪುಗಳು ಈ ಹಿಂದೆ ಕೂಡ ಜೊತೆಗೂಡಿದ್ದವು. ಬಿಎಸ್‌ಪಿ ಮತ್ತು ಬಿಜೆಪಿ ಕೈಜೋಡಿಸಿರುವುದೂ ಕೂಡ ಹೊಸದೇನಲ್ಲ. ಸಮಾಜವಾದಿ ಪಕ್ಷದ ಪ್ರಬಲವಾದ ಆಡಳಿತಾವಧಿಯಲ್ಲಿ ಈ ಹಿಂದೆ ಮೂರು ಸಲ ಈ ಎರಡು ಪಕ್ಷಗಳು ಜೊತೆಯಾಗಿದ್ದವು. ಆದರೆ, ಬಿಎಸ್‌ಪಿ ಮತ್ತು ಎಡಪಕ್ಷಗಳು ಕೈಜೋಡಿಸಿರುವುದು ನಿಜಕ್ಕೂ ಸುದ್ದಿ!

ಪ್ರಬಲ ಹಿಂದುಳಿದ ವರ್ಗಗಳ ಕಡೆಗೆ ವಾಲುತ್ತಾ ಕಾಂಗ್ರೆಸ್ ಪಕ್ಷ ದಲಿತರಿಂದ ದೂರ ಸರಿಯುತ್ತಿರುವುದರಿಂದ, ಬಿಎಸ್‌ಪಿ, ಎಡಪಕ್ಷಗಳ ಜೊತೆ ಕೈಜೋಡಿಸಿರುವುದನ್ನು ತಪ್ಪು ಎನ್ನಲಾಗುವುದಿಲ್ಲ. ಸಮಾಜವಾದಿ ಪಕ್ಷ, ಯುಪಿಎ ಜೊತೆಗೂಡಿ, ತಮ್ಮ ನಾಯಕಿ ಮಾಯಾವತಿಯ ವಿರುದ್ಧ ಸಿಬಿಐ ತನಿಖೆಗೆ ಒತ್ತಡ ತರಬಹುದೆಂಬ ಅನಿಸಿಕೆ ದಲಿತರಲ್ಲಿ ಮೂಡಲಾರಂಭಿಸಿದ್ದು ನಿಜ. ಹೀಗಾಗಿ, ಬಿಎಸ್‌ಪಿ ಎಡಪಕ್ಷಗಳನ್ನೊಳಗೊಂಡಂತೆ, ಹೊಸ ರಾಜಕೀಯ ಸ್ನೇಹ ಮಾಡಿದ್ದಕ್ಕೆ ಸಮರ್ಥನೆಯಿದೆ.

ಆದರೆ, ಸಾರ್ವಜನಿಕರ ನಗೆಪಾಟಲಿಗೀಡಾಗಿ ದಿಕ್ಕು ತೋಚದಂತಾಗಿರುವ ಎಡಪಕ್ಷಗಳು, ಅವರಿವರಿಂದ ಸಮರ್ಥನೆ ಬಯಸುತ್ತಿವೆ. ರಾಜಕಾರಣದಲ್ಲಿ ಇಂತಹ ತರ್ಕಕ್ಕೆ ನಿಲುಕದ ಕೆಲವು ಬೆಳವಣಿಗೆಗಳು ಅಲ್ಪಾವಧಿಯ ಲಾಭಗಳಿಗಾಗಿ ನಡೆಯುತ್ತಲೇ ಇರುತ್ತವೆ. ಈಗ ಕಾಂಗ್ರೆಸ್, ಸಮಾಜವಾದಿ ಪಕ್ಷದೊಂದಿಗೆ ಸ್ನೇಹ ಮಾಡಿಲ್ಲವೇ?

ಎಲ್ಲವೂ ಸರಿ. ಆದರೆ, ಜುಲೈ ೨೨ರಂದು ಲೋಕಸಭೆಯಲ್ಲಿ ವಿಶ್ವಾಸಮತ ಮುಗಿದ ನಂತರ ಬಿಎಸ್‌ಪಿಯ ಮುಂದಿನ ಹೆಜ್ಜೆಯೇನಿರಬಹುದು? ದಲಿತರು ಬಿಎಸ್‌ಪಿಯ ಪ್ರಮುಖ ಸಾಮಾಜಿಕ ತಳಹದಿಯಾಗಿದ್ದಾರೆ. ದಲಿತರ ಮೇಲೆ ಬಿಎಸ್‌ಪಿಯ ಹಿಡಿತವಿರುವವರೆಗೂ ಇತರರು ಕೂಡ ಬಿಎಸ್‌ಪಿ ಜೊತೆ ಕೈಜೋಡಿಸಲು ಉತ್ಸಾಹ ತೋರಲಿದ್ದಾರೆ. ಆದರೆ, ಎಲ್ಲ ಜಾತಿಗಳು, ಸಮುದಾಯಗಳು ಮತ್ತು ವರ್ಗಗಳಲ್ಲಿ, ಸಾಮಾಜಿಕ ಪರಿವರ್ತನೆಯ ಒತ್ತಾಸೆ ಹೊಂದಿರುವವರು ದಲಿತರು ಮಾತ್ರ. ಹೀಗಾಗಿ, ಬಿಎಸ್‌ಪಿ ತನ್ನ ಮೂಲ ನೆಲೆಯನ್ನು ಉಳಿಸಿಕೊಳ್ಳಬೇಕಾದರೆ, ಸಾಮಾಜಿಕ ಪರಿವರ್ತನೆಯ ವಿಚಾರಗಳ ಕಡೆಗೆ ಗಮನ ಹರಿಸಬೇಕಿದೆ.

ಜುಲೈ ೨೨ರ ನಂತರ ಬಿಎಸ್‌ಪಿಗೆ ಎರಡೇ ಆಯ್ಕೆಗಳು ಉಳಿಯುವುದು- ಎಡಪಕ್ಷಗಳು ಮತ್ತು ಯುಎನ್‌ಪಿಎ ಜೊತೆಗೂಡಿ ಲೋಕಸಭಾ ಚುನಾವಣೆಯನ್ನು ಎದುರಿಸುವುದು ಅಥವಾ ಈ ಹಿಂದಿನಂತೆ ಸ್ವತಂತ್ರವಾಗಿ ಚುನಾವಣೆಯನ್ನು ಎದುರಿಸುವುದು. ಯುಎನ್‌ಪಿಎನಲ್ಲಿರುವ ಬಹುತೇಕ ಪಕ್ಷಗಳು ಕಾಂಗ್ರೆಸ್ ವಿರೋಧಿಯಾಗಿರುವುದರಿಂದ, ಬಿಎಸ್‌ಪಿ ಎಡಪಕ್ಷಗಳು ಮತ್ತು ಯುಎನ್‌ಪಿಎ ಜೊತೆಗೆ ಚುನಾವಣೆ ಎದುರಿಸುವುದು ರಾಜಕೀಯ ತಂತ್ರವಾಗಿ ಸರಿಯೆನಿಸುತ್ತದೆ.

ಆದರೆ ಬಿಎಸ್‌ಪಿ-ಎಡಪಕ್ಷಗಳು-ಯುಎನ್‌ಪಿಎ ಒಕ್ಕೂಟ ೨೭೩ರ ಮ್ಯಾಜಿಕ್ ಸಂಖ್ಯೆ ತಲುಪಿ ಮಾಯಾವತಿ ಪ್ರಧಾನಮಂತ್ರಿ ಹುದ್ದೆಗೇರಲು ಸಾಧ್ಯವೆ? ಒಂದು ವೇಳೆ, ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ ಎಲ್ಲ ೮೦ ಸ್ಥಾನಗಳನ್ನು ಗೆದ್ದರೆ, ಎಡಪಕ್ಷಗಳು ಪಶ್ಚಿಮ ಬಂಗಾಳದಲ್ಲಿ ಮತ್ತು ಕೇರಳದಲ್ಲಿ ಕ್ರಮವಾಗಿ ೪೨ ಮತ್ತು ೨೦ಸ್ಥಾನಗಳನ್ನು ಗೆದ್ದರೆ, ಎಐಡಿಎಂಕೆ ತಮಿಳುನಾಡಿನಲ್ಲಿ ಎಲ್ಲ ೩೯ ಸ್ಥಾನಗಳನ್ನು ಗೆದ್ದರೆ, ಟಿಡಿಪಿ ಆಂಧ್ರಪ್ರದೇಶದಲ್ಲಿ ಎಲ್ಲ ೪೨ ಸ್ಥಾನಗಳನ್ನು ಗೆದ್ದರೆ, ಎಜಿಪಿ ಅಸ್ಸಾಂನಲ್ಲಿ ಎಲ್ಲ ೧೪ ಸ್ಥಾನಗಳನ್ನು ಗೆದ್ದರೆ, ಹಾಗೂ ಎನ್‌ಎಲ್‌ಡಿ ಹರಿಯಾಣ ರಾಜ್ಯದಲ್ಲಿ ಎಲ್ಲ ೧೦ ಸ್ಥಾನಗಳನ್ನು ಗೆದ್ದರೆ, ಒಟ್ಟಾರೆ ೨೪೭ ಸ್ಥಾನಗಳು ಮಾತ್ರ ಲಭಿಸುವುದು. ಅಂದರೆ, ಸರ್ಕಾರ ರಚಿಸಲು ಇನ್ನೂ ೨೬ ಸ್ಥಾನಗಳು ಬೇಕಾಗುತ್ತದೆ.

> **ವಿಶ್ವದಾದ್ಯಂತ, ಎಡಪಕ್ಷಗಳು ಯಶಸ್ಸು ಕಂಡಿರುವುದು ಬಡರಾಷ್ಟ್ರಗಳಲ್ಲಿ ಮಾತ್ರ. ಹೀಗಾಗಿ, ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಎಡರಂಗ ಶ್ರೀಮಂತ ಸಮಾಜವನ್ನು ಕೂಡ ಬಡವಾಗಿಸುತ್ತವೆ. ಪೂರ್ವ ಜರ್ಮನಿ ಸಂಪೂರ್ಣ ನಿರ್ನಾಮವಾಗಿದೆ. ಇನ್ನು ಪಶ್ಚಿಮ ಬಂಗಾಳ ಆಹಾರ ಕೇಂದ್ರಿತ ಗಲಭೆಗಳ ತಾಣವಾಗಿ ಪರಿವರ್ತಿತವಾಗಿದೆ. ಬೈಕ್ ಸವಾರಿ ಮಾಡುವ ದಲಿತರಿಗಿಂತ ರೇಷನ್ ಕಾರ್ಡ್‌ಗಳಿಗೆ ಕಿತ್ತಾಡುವ ದಲಿತರು ಎಡರಂಗಕ್ಕೆ ಅಚ್ಚುಮೆಚ್ಚು. ಬಿಎಸ್‌ಪಿ ನೇತೃತ್ವದ ಸರ್ಕಾರ ದಲಿತರನ್ನು ರೇಷನ್ ಕಾರ್ಡ್ ಮಟ್ಟದಿಂದ ಮೇಲೆತ್ತುವ ಕ್ರಮ ಕೈಗೊಂಡ ದಿನವೇ, ಎಡಪಕ್ಷಗಳು ಒಂದಿಲ್ಲೊಂದು ಕುಂಟುನೆಪ ಹೇಳಿ ಬೆಂಬಲ ವಾಪಸ್ ಪಡೆಯುವುದಂತೂ ಖಚಿತ.**

ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಕಾಂಗ್ರೆಸ್ ಅಥವಾ ಬಿಜೆಪಿಯ ಬೆಂಬಲವಿಲ್ಲದೆ ಯಾವುದೇ ಪಕ್ಷ ಮುಂದಿನ ಸರ್ಕಾರ ರಚಿಸಲು ಸಾಧ್ಯವಿಲ್ಲ. ಇನ್ನೂ ಒಂದು ಹೆಜ್ಜೆ ಮುಂದುವರೆದು ನೋಡೋಣ. ಒಂದು ವೇಳೆ ಕಾಂಗ್ರೆಸ್ ಪಕ್ಷದ ಬೆಂಬಲವಿಲ್ಲದೆ ಮಾಯಾವತಿ ಪ್ರಧಾನ ಮಂತ್ರಿಯಾದರೆ, ಇದರಿಂದ ಉಂಟಾಗಬಹುದಾದ ಪರಿಣಾಮಗಳೇನಿರಬಹುದು?

ಮೊಟ್ಟಮೊದಲನೆಯದಾಗಿ, ದಲಿತರು ಬದಲಾದ ಸನ್ನಿವೇಶದಲ್ಲಿ ಹೆಮ್ಮೆ ಪಡುವುದಲ್ಲದೆ, ಒಟ್ಟಾರೆ ಸಮುದಾಯದಲ್ಲಿ ವ್ಯಾಪಕವಾದ ಆತ್ಮವಿಶ್ವಾಸ ಮೂಡುವುದರಲ್ಲಿ ಸಂಶಯವಿಲ್ಲ. ಆದರೆ, ಮಾಯಾವತಿಗೆ ಬೆಂಬಲ ನೀಡುವ ಎಲ್ಲ ಪಕ್ಷಗಳು ತಂತಮ್ಮ ಪಾಲನ್ನು ಕೇಳುವುದರಲ್ಲಿ ಸಂಶಯವಿಲ್ಲ- ಕಳೆದ ನಾಲ್ಕು ವರ್ಷಗಳಿಂದ ಕಾಂಗ್ರೆಸ್‌ನೊಂದಿಗಿದ್ದ ಎಡಪಕ್ಷಗಳು ಮಾಡಿಕೊಂಡು ಬಂದಿದ್ದೂ ಅದನ್ನೇ.

ಎಡಪಕ್ಷಗಳು ಅಭಿವೃದ್ಧಿ ಹೊಂದಿದ ಸಮಾಜದಲ್ಲಿ ಕೆಲಸ ಮಾಡಲು ಶಕ್ತವಲ್ಲ ಎಂಬುದನ್ನು ಬಿಎಸ್‌ಪಿ ಅರ್ಥಮಾಡಿಕೊಳ್ಳಬೇಕಿದೆ. ವಿಶ್ವದಾದ್ಯಂತ, ಎಡಪಕ್ಷಗಳು ಯಶಸ್ಸು ಕಂಡಿರುವುದು ಬಡರಾಷ್ಟ್ರಗಳಲ್ಲಿ ಮಾತ್ರ. ಹೀಗಾಗಿ, ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಎಡರಂಗ ಶ್ರೀಮಂತ ಸಮಾಜವನ್ನು ಕೂಡ ಬಡವಾಗಿಸುತ್ತವೆ. ಪೂರ್ವ ಜರ್ಮನಿ ಸಂಪೂರ್ಣ ನಿರ್ನಾಮವಾಗಿದೆ. ಇನ್ನು ಪಶ್ಚಿಮ ಬಂಗಾಳ ಆಹಾರ ಕೇಂದ್ರಿತ ಗಲಭೆಗಳ ತಾಣವಾಗಿ ಪರಿವರ್ತಿತವಾಗಿದೆ. ಬೈಕ್ ಸವಾರಿ ಮಾಡುವ ದಲಿತರಿಗಿಂತ ರೇಷನ್ ಕಾರ್ಡ್‌ಗಳಿಗೆ ಕಿತ್ತಾಡುವ ದಲಿತರು ಎಡರಂಗಕ್ಕೆ ಅಚ್ಚುಮೆಚ್ಚು. ಬಿಎಸ್‌ಪಿ ನೇತೃತ್ವದ ಸರ್ಕಾರ ದಲಿತರನ್ನು ರೇಷನ್ ಕಾರ್ಡ್ ಮಟ್ಟದಿಂದ ಮೇಲೆತ್ತುವ ಕ್ರಮ ಕೈಗೊಂಡ ದಿನವೇ, ಎಡಪಕ್ಷಗಳು ಒಂದಿಲ್ಲೊಂದು ಕುಂಟುನೆಪ ಹೇಳಿ ಬೆಂಬಲ ವಾಪಸ್ ಪಡೆಯುವುದಂತೂ ಖಚಿತ. ೨೦೦೪ರಲ್ಲಿ ಎಡಪಕ್ಷಗಳು 'ಕೋಮುವಾದ'ದ ವಿರುದ್ಧ ಹೋರಾಡುವಂತೆ ಕಾಂಗ್ರೆಸ್ ಪಕ್ಷವನ್ನು ಒತ್ತಾಯಿಸಿತು. ಆದರೆ, ಈಗ 'ವಸಾಹತುವಾದ'ದ ಕಾರಣ ನೀಡಿ ತನ್ನದೇ ಸರ್ಕಾರವನ್ನು ಬಿಜೆಪಿಯ ಜೊತೆಗೂಡಿ ಉರುಳಿಸುವ ಹವಣಿಕೆಯಲ್ಲಿದೆ. ಕಳೆದ ನಾಲ್ಕು ವರ್ಷಗಳ ಕಾಲ ಅಧಿಕಾರದ ಸವಿ ಉಂಡಿರುವ ಎಡಪಕ್ಷಗಳು, ಇದೇ ರೀತಿ, 'ಜಾತಿವಾದಿ' ಪಕ್ಷವೆಂದು ಬಿಎಸ್‌ಪಿಯನ್ನು ತೊರೆದು ಮತ್ತೆ ಕಾಂಗ್ರೆಸ್‌ಗೆ ಬೆಂಬಲ ನೀಡಿದರೂ ಆಶ್ಚರ್ಯಪಡಬೇಕಿಲ್ಲ.

ಇನ್ನು ಬಿಜೆಪಿ ಆಧುನಿಕ- ಪಾಶ್ಚಿಮಾತ್ಯ ಸಮಾಜದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲಾಗುವುದಿಲ್ಲ. ಆದರೆ, ದಲಿತರಿಗೆ ಆಧುನಿಕ- ಪಾಶ್ಚಿಮಾತ್ಯ ಸಮಾಜ, ಸಾಂಪ್ರದಾಯಿಕ ಜಾತಿವಾದಿ ಭಾರತೀಯ ಸಮಾಜಕ್ಕಿಂತ ಸಾವಿರಾರು ಪಟ್ಟು ಉತ್ತಮ. ಇತರ ಪ್ರಾದೇಶಿಕ ಪಕ್ಷಗಳಿಗೆ ತಮ್ಮ ಗ್ರಾಮ ಸ್ವರಾಜ್ಯಗಳನ್ನು ಕಾಪಾಡಿಕೊಳ್ಳುವುದನ್ನು ಬಿಟ್ಟರೆ ಬೇರೆ

[illegible] ಬಿಡಲು. [illegible], [illegible], [illegible], ಗ್ರಾಮೀಣ [illegible] ವಿರೋಧಿಸು [illegible].

ಪರಮಾಣು ಒಪ್ಪಂದದಂತಹ ಪ್ರಮುಖವಾದ ವಿಚಾರಗಳಲ್ಲಿ ಮೂಗು ತೂರಿಸಿ ತನ್ನ ಅಸ್ಮಿತೆಗೆ ಧಕ್ಕೆ ತಂದುಕೊಳ್ಳುವುದರ ಬದಲು, ಬಿಎಸ್‌ಪಿ ಉತ್ತರ ಪ್ರದೇಶದಲ್ಲಿ ದೇಶಕ್ಕೆ ಮಾದರಿಯಾಗುವಂತಹ ಹಾಗೂ ಬೆಳವಣಿಗೆಗೆ ಪೂರಕವಾದ ಆಡಳಿತ ನಡೆಸಿ ಸೈ ಎನಿಸಿ ಕೊಳ್ಳಲಿ. ಉತ್ತರ ಪ್ರದೇಶದ ಜನತೆ ಅಭೂತಪೂರ್ವ ಬಹುಮತದೊಂದಿಗೆ ಮಾಯಾವತಿ ಅವರನ್ನು ಆಯ್ಕೆ ಮಾಡಿದಂತೆ, ದೇಶದ ಜನತೆಯೇ ಅವರನ್ನು ಉನ್ನತ ಹುದ್ದೆಗೆ ಆಯ್ಕೆ ಮಾಡುವಂತಾಗಲಿ. ಈ ಆಯ್ಕೆ ಭಾರತೀಯ ಮತದಾರರಿಗೆ ಬಿಟ್ಟದ್ದು.

'ಬೂಬಿ-ಟ್ರ್ಯಾಪ್,' ಸಾಮಾನ್ಯವಾಗಿ ಯುದ್ಧಗಳಲ್ಲಿ ಬಳಸಲಾಗುವ ಲ್ಯಾಂಡ್‌ಮೈನ್‌ನಂತೇ ಇದ್ದರೂ ಸ್ವಲ್ಪ ಭಿನ್ನವಾಗಿರುತ್ತದೆ. "ವಿರೋಧಿ ಸೈನಿಕರನ್ನು ಮಾನಸಿಕವಾಗಿ ಆಕರ್ಷಿಸುವಂತಹ ಕಟ್ಟಡ ಅಥವಾ ಯುದ್ಧ ನಡೆಯದ ಸ್ಥಳದಲ್ಲಿ" 'ಬೂಬಿ-ಟ್ರ್ಯಾಪ್'ನ್ನು ಇರಿಸಲಾಗುತ್ತದೆ. ಅಂದರೆ, ಯುದ್ಧಕ್ಕೆ ಸಂಬಂಧವಿಲ್ಲದ ಪ್ರದೇಶದಲ್ಲಿ ಬಾಂಬ್ ಇಟ್ಟು, ವಿರೋಧಿ ಸೈನಿಕರು ಅದನ್ನು ಮೆಟ್ಟುವಂತೆ ಆಕರ್ಷಿಸುವುದು. "ಬೂಬಿ-ಟ್ರ್ಯಾಪ್ ಸೂಕ್ತ ಸ್ಥಳದಲ್ಲಿಡಲು ಮನಃಶಾಸ್ತ್ರದ ಪರಿಚಯ ಇರುವುದು ಅತ್ಯವಶ್ಯಕ."

ಎಡಪಕ್ಷಗಳು/ ಯುಎನ್‌ಪಿಎ- ಬಿಎಸ್‌ಪಿ ಒಕ್ಕೂಟಕ್ಕೆ ಇದೇ ವಿವರಣೆಯನ್ನು ಅನ್ವಯಿಸುವುದಾದರೆ, ಹೀಗೆ ಹೇಳಬಹುದು. ಎಡಪಕ್ಷಗಳು ಮಾಯಾವತಿ ಅವರ ಮಾನಸಿಕ ಇಂಗಿತವನ್ನು ಅರ್ಥೈಸಿಕೊಂಡಿದ್ದಾರೆ- ಮಾಯಾವತಿಗೆ ಪ್ರಧಾನಿಯಾಗುವ ಕನಸು. ಅದರಲ್ಲಿ ತಪ್ಪೇನಿಲ್ಲ.

ದಲಿತ ಚಳವಳಿಗಳಿಗೆ ಮಾಯಾವತಿಯವರ ಕೊಡುಗೆಯನ್ನು ಕೆಲವೇ ಪದಗಳಲ್ಲಿ ಹೇಳುವುದಾದರೆ, ಈ ರೀತಿ ವಿವರಿಸಬಹುದು: ದಲಿತರ ಆಕಾಂಕ್ಷೆಗಳನ್ನು ಗಗನದೆತ್ತರಕ್ಕೆ ಕೊಂಡೊಯ್ದವರು ಮಾಯಾವತಿ. ತಾವು ಪ್ರತಿನಿಧಿಸುವ ಜನರ ಆಕಾಂಕ್ಷೆಗಳನ್ನು ಉನ್ನತಮಟ್ಟಕ್ಕೆ ಏರಿಸಿದರೆ- ಮಕ್ಕಳಿಗೆ ಪೋಷಕರಿದ್ದಂತೆ- ಆ ಜನ ಕೂಡ ಅದೇ ದಾರಿಯಲ್ಲಿ ನಡೆದು ಜೀವನದಲ್ಲಿ ಮಹಾ ಸಾಧನೆ ಮಾಡಬಹುದು. ಮಾಯಾವತಿ ಬರುವ ಮುಂಚೆ ದಲಿತರ ನಾಯಕತ್ವ ವಹಿಸಿದ್ದ ಕಾಂಗ್ರೆಸ್ ಪಕ್ಷ ದಲಿತರನ್ನು 'ಅಶಕ್ತ ವರ್ಗಗಳು' ಎಂದು ಪರಿಗಣಿಸುತ್ತಾ ಬಂದಿದೆ. ಹೀಗಾಗಿ, ಕಾಂಗ್ರೆಸ್ ಸರ್ಕಾರಗಳು ದಲಿತರಿಗೆ ಭೂಮಿಯ ಪತ್ರಗಳು, ರೇಷನ್ ಕಾರ್ಡ್‌ಗಳು, ಮಧ್ಯಾಹ್ನದ ಊಟ ಇತ್ಯಾದಿ ಸೌಕರ್ಯಗಳನ್ನು ನೀಡುತ್ತಾ ಬಂದಿದೆ. ದಲಿತರು ಸಾರಾ ಸಗಟಾಗಿ ಕಾಂಗ್ರೆಸ್ ಪರವಾಗಿ ಮತ ಚಲಾಯಿಸಿದರೂ, ದಲಿತರು ಮುಂದೊಂದು ದಿನ ದೇಶದ ಆಡಳಿತದ ಚುಕ್ಕಾಣಿ ಹಿಡಿಯಲಿದ್ದಾರೆ ಎಂಬ ವಿಶ್ವಾಸವನ್ನು ಕಾಂಗ್ರೆಸ್ ಪಕ್ಷ ಎಂದೂ ತುಂಬಲಿಲ್ಲ. ಮಾಯಾವತಿ ಆ ಕೆಲಸ ಮಾಡಿದರು. ಉತ್ತರ ಪ್ರದೇಶ ರಾಜ್ಯದಲ್ಲಿ ಅದನ್ನು ಸಾಧಿಸಿ

> **ಪರಮಾಣು ಒಪ್ಪಂದದಂತಹ ಪ್ರಮುಖವಾದ ವಿಚಾರಗಳಲ್ಲಿ ಮೂಗು ತೂರಿಸಿ ತನ್ನ ಅಸ್ಮಿತೆಗೆ ಧಕ್ಕೆ ತಂದುಕೊಳ್ಳುವುದರ ಬದಲು, ಬಿಎಸ್‌ಪಿ ಉತ್ತರ ಪ್ರದೇಶದಲ್ಲಿ ದೇಶಕ್ಕೆ ಮಾದರಿಯಾಗುವಂತಹ ಹಾಗೂ ಬೆಳವಣಿಗೆಗೆ ಪೂರಕವಾದ ಆಡಳಿತ ನಡೆಸಿ ಸೈ ಎನಿಸಿಕೊಳ್ಳಲಿ. ಉತ್ತರ ಪ್ರದೇಶದ ಜನತೆ ಅಭೂತಪೂರ್ವ ಬಹುಮತ ದೊಂದಿಗೆ ಮಾಯಾವತಿ ಅವರನ್ನು ಆಯ್ಕೆ ಮಾಡಿದಂತೆ, ದೇಶದ ಜನತೆಯೇ ಅವರನ್ನು ಉನ್ನತ ಹುದ್ದೆಗೆ ಆಯ್ಕೆ ಮಾಡುವಂತಾಗಲಿ. ಈ ಆಯ್ಕೆ ಭಾರತೀಯ ಮತದಾರರಿಗೆ ಬಿಟ್ಟದ್ದು.**

ತೋರಿಸಿದರು. ನಿಜ, ದಲಿತರು ಸಾರ್ವಜನಿಕ ಬದುಕಿನಲ್ಲಿ ಹಸಿವು, ಅವಮಾನ ಮತ್ತು ತಾರತಮ್ಯದಿಂದ ಬಳಲುತ್ತಿದ್ದಾರೆ. ಆದರೆ, ಇದೇ ಪರಿಸ್ಥಿತಿಗೆ ಜೋತುಬಿದ್ದರೆ, ತಾವು 'ಅಶಕ್ತರು,' ಸಮಾಜದಲ್ಲಿ ಅಸ್ತಿತ್ವ ಪಡೆದುಕೊಳ್ಳಲು ತಮಗೆ ಸಹಾಯ ಹಸ್ತ ಬೇಕು ಎಂಬ ಧೋರಣೆ ದಲಿತರಲ್ಲಿ ಪುನರ್ ಪ್ರತಿಷ್ಠಾಪನೆಯಾಗುತ್ತಾ ಹೋಗುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಆತ್ಮವಿಶ್ವಾಸವನ್ನು ಬಿತ್ತುವ ಮೂಲಕ ಮಾಯಾವತಿ ದಲಿತ ಸಮುದಾಯದಲ್ಲಿ ಕ್ರಾಂತಿಕಾರಿ ಪರಿವರ್ತನೆ ತರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಹುದ್ದೆಗೇರುವ ಮಾಯಾವತಿ ಅವರ ಮಹತ್ವಾಕಾಂಕ್ಷೆ, ಇಡೀ ದಲಿತ ಸಮುದಾಯಕ್ಕೆ ಒಂದು ದೊಡ್ಡ ಪ್ರೇರಣೆ ಒದಗಿಸಿದಂತಾಗುತ್ತದೆ.

ಆದರೆ, ಎಡರಂಗ ಮಾಯಾವತಿ ಅವರನ್ನು ಎತ್ತ ಕೊಂಡೊಯ್ಯುತ್ತದೆ? ದಲಿತರ ಪ್ರಶ್ನೆ ಬಂದರೆ, ಎಡ ಪಕ್ಷಗಳ ಸಾಧನೆ ಕಾಂಗ್ರೆಸ್ ಪಕ್ಷಕ್ಕಿಂತ ತೀರ ಕಳಪೆಯಾಗಿದೆ. ಕಾಂಗ್ರೆಸ್ ಕನಿಷ್ಠಪಕ್ಷ ದಲಿತ ನಾಯಕರನ್ನು ಸೃಷ್ಟಿಸಿದೆ- ಈ ನಾಯಕರು ಪ್ರಬಲರಲ್ಲದಿರಬಹುದು ಅಥವಾ ವೈಯಕ್ತಿಕ ಹಿತಾಸಕ್ತಿ ಮಾತ್ರ ಹೊಂದಿರುವವರಾಗಿರಬಹುದು. ಆದರೆ ದೇಶದ ಎಲ್ಲ ರಾಜ್ಯಗಳಲ್ಲಿಯೂ ದಲಿತ ನಾಯಕರನ್ನು ಕಾಂಗ್ರೆಸ್ ನೀಡಿದೆ. ಆದರೆ, ಎಡಪಕ್ಷಗಳು ಪಶ್ಚಿಮ ಬಂಗಾಳದಂತಹ ರಾಜ್ಯದಲ್ಲಿ ಕಳೆದ ನಾಲ್ಕು ದಶಕಗಳಿಂದ ಅಧಿಕಾರ ನಡೆಸುತ್ತಿದ್ದರೂ ಇದುವರೆಗೆ ರಾಷ್ಟ್ರಮಟ್ಟದಲ್ಲಿ ಓರ್ವ ದಲಿತ ನಾಯಕನನ್ನೂ ನೀಡಲು ಸಾಧ್ಯವಾಗಿಲ್ಲ.

ಅದೇನೇ ಇರಲಿ, ದಲಿತರ ವಿಷಯದಲ್ಲಿ ಎಡರಂಗವನ್ನು ಮನ್ನಿಸಿ ಹೊಸ ಹುರುಪಿನಿಂದ ಮುನ್ನಡೆಯೋಣ. ಆದರೆ, ಈ ಸ್ನೇಹದಿಂದ ಎಡಪಕ್ಷಗಳು ಮತ್ತು ಬಿಎಸ್‌ಪಿ ಪರಸ್ಪರ ಒಂದರ ಮೇಲೊಂದು ಬೀರುವ ಪ್ರಭಾವವೆಷ್ಟಿರಬಹುದು? ಎಡರಂಗ ತನ್ನ ಸೈದ್ಧಾಂತಿಕ ನೆಲೆಗಟ್ಟಿನಿಂದ ಎಂದೂ ಅಲುಗಾಡುವುದಿಲ್ಲ ಎಂಬುದಂತೂ ಸ್ಪಷ್ಟ. ಪಕ್ಷದ ನಿಯಮವನ್ನು ಪಾಲಿಸಲಿಲ್ಲ ಎಂಬ ಕಾರಣಕ್ಕೆ ಸಿಪಿಐ (ಎಂ), ಪಕ್ಷದ ದಿಗ್ಗಜರಲ್ಲೊಬ್ಬರಾದ ಸೋಮನಾಥ್ ಚಟರ್ಜಿ ಅವರನ್ನು ಉಚ್ಚಾಟಿಸಿತು. ಸೈದ್ಧಾಂತಿಕ ಕಾರಣದಿಂದಾಗಿ ಇದೇ ಪಕ್ಷದ ನಾಯಕರು ಜ್ಯೋತಿಬಸು ಪ್ರಧಾನಿಯಾಗುವುದನ್ನು ತಪ್ಪಿಸಿದರು. ಬಿಜೆಪಿ ಅಧಿಕಾರಕ್ಕೆ ಬರದಂತೆ ತಡೆಯಲು ಮತ್ತು ಕೋಮುವಾದವನ್ನು ವಿರೋಧಿಸುವ ನಿಟ್ಟಿನಲ್ಲಿ ಎಡರಂಗ ಕಾಂಗ್ರೆಸ್ ಸರ್ಕಾರಕ್ಕೆ ಬೆಂಬಲ ನೀಡಿತು. ಆದರೆ, ಈಗ ಇದೇ ಎಡರಂಗ 'ವಸಾಹತುವಾದ'ದ ನೆಪ ಹೇಳಿ, ತಾನು ಬೆಂಬಲಿಸಿದ ಸರ್ಕಾರವನ್ನೇ ಉರುಳಿಸಲು ಬಿಜೆಪಿಯ ಬೆಂಬಲ ಅಪೇಕ್ಷಿಸಿತು.

ಜುಲೈ ೨೧ರಂದು, ವಿದೇಶಾಂಗ ನೀತಿಯನ್ನು ಕುರಿತು ಮಾಯಾವತಿ ಪತ್ರಿಕಾಗೋಷ್ಠಿ ನಡೆಸಿದರು. ಬಹುಶಃ ವಿದೇಶಾಂಗ ನೀತಿಯನ್ನು ಕುರಿತು ಇದು ಬಿಎಸ್‌ಪಿಯ ಮೊದಲ ಹೇಳಿಕೆ. ಪರಮಾಣು ಒಪ್ಪಂದಕ್ಕೆ ಸಹಿಹಾಕಿದರೆ ಇರಾನ್ ಮೇಲೆ ದಾಳಿಯಾಗಲಿದೆ ಎಂದು ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಮಾಯಾವತಿ ಎಚ್ಚರಿಕೆ ನೀಡಿದರು. ವಿಶ್ವಶಾಂತಿಗಾಗಿ ಪ್ರಧಾನಿ ಒಪ್ಪಂದವನ್ನು ಕೈಬಿಡಬೇಕೆಂದು ಬೇಡಿಕೆ ಇಟ್ಟರು. ಇದು ಮಾಯಾವತಿಯವರ ದಲಿತ ಚಿಂತನಾ ಮೂಸೆಯಿಂದ ಹೊರಬಂದ ವಿಚಾರವೇ? ಅಥವಾ ಉತ್ತರಪ್ರದೇಶದ ಸರ್ಕಾರಿ ಸಲಹೆಗಾರರಿಂದ ಬಂದ ಚಿಂತನೆಯೇ? ಅಥವಾ, ಸಿಪಿಐ (ಎಂ) ಪಕ್ಷದ ಕೇಂದ್ರ ಕಚೇರಿಯಿಂದ ಎರವಲು ಪಡೆದುಕೊಂಡ ವಾದವೇ? ಅಂದು ಪತ್ರಿಕಾಗೋಷ್ಠಿಯಲ್ಲಿ ಮಾಯಾವತಿ ಮಂಡಿಸಿದ ವಿಚಾರ, ಇರಾನ್ ಕುರಿತು ಎಡಪಕ್ಷಗಳು ಹೊಂದಿರುವ ಖಚಿತವಾದ ಅಭಿಪ್ರಾಯವಲ್ಲದೆ ಮತ್ತೇನೂ ಅಲ್ಲ. ಇದನ್ನೇ ನಾನು ಆರಂಭದಲ್ಲಿ ಎಡರಂಗದ 'ಬೂಬಿ-ಟ್ರ್ಯಾಪ್' ಎಂದು ಕರೆದದ್ದು. ಮಿತ್ರಪಕ್ಷಗಳನ್ನು ತಮ್ಮ ಬಾತ್ಮೀದಾರರನ್ನಾಗಿ ಬಳಸುವ ಚಾಳಿ ಎಡರಂಗಕ್ಕೆ. ಮುಲಾಯಂಸಿಂಗ್ ಯಾದವ್ ಕಳೆದ ಒಂದು ದಶಕದಿಂದ ಮಾಡುತ್ತಾ ಬಂದಿದ್ದು ಇದನ್ನೇ.

೧೯೨೫ರಲ್ಲಿ ಸಿಪಿಐ(ಎಂ) ಪಕ್ಷ ಅಸ್ತಿತ್ವಕ್ಕೆ ಬಂತು. ಅಸ್ತಿತ್ವಕ್ಕೆ ಬಂದು ೮೩ ವರ್ಷಗಳಾದರೂ ಇದುವರೆಗೆ ಕೇಂದ್ರದಲ್ಲಿ ಅಧಿಕಾರ ಹಿಡಿಯಲು ಪಕ್ಷಕ್ಕೆ ಸಾಧ್ಯವಾಗಿಲ್ಲ. ಪ್ರಧಾನಿ ಕುರ್ಚಿಯ ಮೇಲೆ ಕೂರಲು ಎಡರಂಗಕ್ಕೇ ಸಾಧ್ಯವಾಗದಿರುವಾಗ, ಎಡರಂಗದ ಘೋಷವಾಕ್ಯಗಳ ನೆರವಿನಿಂದ ಬಿಎಸ್‌ಪಿ ಹೇಗೆ ಈ ಮಹತ್ವಾಕಾಂಕ್ಷೆಯನ್ನು ಪೂರೈಸಿಕೊಳ್ಳಲು ಸಾಧ್ಯ?

ಎರಡು ಸಂದರ್ಭಗಳಲ್ಲಿ ಮಾತ್ರ ಮಾಯಾವತಿ ಪ್ರಧಾನಿ ಹುದ್ದೆಗೇರಬಹುದು- ಲೋಕಸಭೆಯಲ್ಲಿ ಅತಂತ್ರ ಸ್ಥಿತಿ ಏರ್ಪಟ್ಟು ಬಿಜೆಪಿ ಮತ್ತು ಕಾಂಗ್ರೆಸ್, ಎರಡೂ ಪಕ್ಷಗಳು ಮೂರಂಕಿಯನ್ನು ದಾಟಿರಬೇಕು, ಅಥವಾ ಬಿಎಸ್‌ಪಿ ತನ್ನ ಸ್ವಂತ ಬಲದ ಮೇಲೆ ೨೦೦ ಸ್ಥಾನಗಳಿಸಿ ಲೋಕಸಭೆಗೆ ಆರಿಸಿ ಬರಬೇಕು. ಈ ಎರಡೂ ಸಂದರ್ಭಗಳಲ್ಲಿ ಉತ್ತರಪ್ರದೇಶದಲ್ಲಿ ಆದಂತೆ, ಜಾತಿ, ವರ್ಗ ಮತ್ತು ಧರ್ಮಗಳ ಗೆರೆಯನ್ನು ದಾಟಿ ದೇಶದಾದ್ಯಂತ ಮಾಯಾವತಿ ಪರ ಒಲವು ಮೂಡಬೇಕು. ತನ್ನ ಸಿದ್ಧಾಂತಕ್ಕೆ ವಿರುದ್ಧವಾಗಿ ಬದಲಾವಣೆ ಬಯಸುವ, ಮಹತ್ವಾಕಾಂಕ್ಷೆ

'ಬೂಬಿ-ಟ್ರ್ಯಾಪ್' ಮತ್ತು ವಾಸ್ತವ

ತೃತೀಯ ರಂಗದ ವ್ಯಾಖ್ಯಾನ

ಹೊಂದಿರುವ ಯುವ ಭಾರತ ಈ ನಿಟ್ಟಿನಲ್ಲಿ ಮುಂದುವರೆಯಲು ಎಡರಂಗ ಅವಕಾಶ ನೀಡುವುದೇ?

ಯಾವುದಿದು ತೃತೀಯರಂಗ? ತೃತೀಯರಂಗದಲ್ಲಿರುವವರು ಯಾರು? ಇವರೆಲ್ಲರೂ ಒಂದು ವೇದಿಕೆಯ ಮೇಲೆ ಬಂದು ಸೇರಲು ಕಾರಣವೇನು? ಇವರ ರಾಜಕಾರಣವೇನು? ಭಾರತದ ಅಭಿವೃದ್ಧಿಗೆ ಇವರು ಕಂಡ ಕನಸು ಯಾವುದು? ಭಾರತದ ಬಹಳಷ್ಟು ಮಂದಿ ಯುವಕರು ಈ ಪ್ರಶ್ನೆಗಳಿಗೆ ಉತ್ತರ ಬಯಸುವುದು ಸಹಜ. ತೃತೀಯರಂಗದ ಸತತವಾದ ಏರಿಳಿತಗಳನ್ನು ಗಮನಿಸುತ್ತಿರುವವರು, ಇನ್ನೂ ಸ್ವಲ್ಪ ಆಳವಾಗಿ ಸಮಸ್ಯೆಯನ್ನು ಅರ್ಥೈಸಿಕೊಳ್ಳಬೇಕಿದೆ.

ಮೊದಲಿಗೆ ತೃತೀಯರಂಗದ ಸಂಸ್ಥಾಪಕ ಆಧಾರ ಸ್ತಂಭಗಳನ್ನು ಗಮನಿಸೋಣ. ಕರುಣಾನಿಧಿ ನೇತೃತ್ವದ ಡಿಎಂಕೆ, ದೇವೇಗೌಡ ನೇತೃತ್ವದ ಜೆಡಿಎಸ್ ಮತ್ತು ಚಂದ್ರಬಾಬು ನಾಯ್ಡು ನಾಯಕತ್ವದ ಟಿಡಿಪಿ ದಕ್ಷಿಣದ ಪ್ರಮುಖ ಪಕ್ಷಗಳಾದರೆ, ಲಾಲೂಪ್ರಸಾದ್ ಯಾದವ್ ಅವರ ಆರ್‌ಜೆಡಿ, ಶರದ್ ಯಾದವ್ ಅವರ ಜೆಡಿಯು, ಮುಲಾಯಂ ಸಿಂಗ್ ಯಾದವ್ ಅವರ ಎಸ್‌ಪಿ, ಅಜಿತ್ ಸಿಂಗ್ ಅವರ ಆರ್‌ಎಲ್‌ಡಿ, ಮತ್ತು ಓಂಪ್ರಕಾಶ್ ಚೌತಲಾ ನಾಯಕತ್ವದ ಐಎನ್‌ಎಲ್‌ಡಿ ಉತ್ತರದ ಪ್ರಮುಖ ಪಕ್ಷಗಳು. ಇವರಲ್ಲಿ ಕೆಲವರು ತೃತೀಯರಂಗಕ್ಕೆ ಸಂಪೂರ್ಣವಾಗಿ ನಿಷ್ಠರಾಗಿ ಉಳಿಯದೆ ಹೊರಹೋಗಿ ಬಂದಿದ್ದಾರೆ. ಇನ್ನು ಕೆಲವರು ಹಾಗೇ ಉಳಿದಿದ್ದಾರೆ. ಉದಾಹರಣೆಗೆ ಜೆಡಿ ಯು, ಎನ್‌ಡಿಎ ಜೊತೆ ಕೈಜೋಡಿಸಿದರೆ, ಲಾಲೂಪ್ರಸಾದ್ ಯಾದವ್ ಅವರ ಆರ್‌ಜೆಡಿ, ಯುಪಿಎ ಜೊತೆಗೆ ಸ್ನೇಹ ಮಾಡಿರುವುದನ್ನು ಗಮನಿಸಬಹುದು. ಆದರೆ, ಈ ಪಕ್ಷಗಳು ಎಲ್ಲೇ ಹೋದರೂ ತಮ್ಮ ದೃಷ್ಟಿಕೋನವನ್ನು ಜೊತೆಯಲ್ಲಿ ಹೊತ್ತುಕೊಂಡೇ ಹೋಗುತ್ತಾರೆ. ಹಾಗಾದರೆ ಈ ಪಕ್ಷಗಳಲ್ಲಿರುವ ಸಮಾನ ಅಂಶಗಳೇನು?

ಈ ಎಲ್ಲ ಪಕ್ಷಗಳ ನಾಯಕರ ಮೂಲ ಸಾಮಾಜಿಕ ತಳಹದಿ ಶೂದ್ರವರ್ಗ. ಪ್ರಫುಲ್ಲ ಕುಮಾರ್ ಮಹಂತಾ ಅವರ ಎಜಿಪಿ ಮತ್ತು ಜಯಲಲಿತಾ ಅವರ ಎಐಡಿಎಂಕೆ ಪಕ್ಷಗಳು ಮಾತ್ರ ಈ ನಿಯಮದಿಂದ ಹೊರತಾಗಿವೆ.

ಎರಡನೆಯದಾಗಿ, ತೃತೀಯರಂಗದಲ್ಲಿರುವ ಬಹುತೇಕ ಪಕ್ಷಗಳು ಗ್ರಾಮೀಣ ಕೇಂದ್ರಿತವಾದುದು. ಇವುಗಳು ಪ್ರತಿನಿಧಿಸುವ ಬಹುತೇಕ ಸ್ಥಾನಗಳು ಗ್ರಾಮೀಣ ಪ್ರದೇಶಗಳಾಗಿವೆ. ಮೂರನೆಯದಾಗಿ, ಈ ಪಕ್ಷಗಳು 'ಬಡ ರೈತ'ರೆಂದು ಹೇಳಿಕೊಳ್ಳುವ ರೈತರನ್ನು ಪ್ರತಿನಿಧಿಸುತ್ತವೆ. ನಾಲ್ಕನೆಯದಾಗಿ, ಈ ಎಲ್ಲ ಪಕ್ಷಗಳು ದಲಿತರೊಂದಿಗೆ ಗಂಭೀರವಾದ ಸಾಮಾಜಿಕ ಸಮರದಲ್ಲಿ ತೊಡಗಿಕೊಂಡಿವೆ. ಐದನೆಯದಾಗಿ, ತೃತೀಯರಂಗದ ಬಹಳಷ್ಟು ಪಕ್ಷಗಳು ಇಂಗ್ಲಿಶ್ ಭಾಷೆಯನ್ನು ತುಚ್ಛವಾಗಿ ಕಂಡು, ತಮ್ಮ ಸ್ಥಳೀಯ ಭಾಷೆಗಳ ಮೂಲಕ ವಿಜೃಂಭಿಸುವ ಇರಾದೆ ಹೊಂದಿವೆ.

ಆದರೆ ಭಾರತಕ್ಕಾಗಿ ಇವರು ಕಂಡ ಕನಸು ಏನು? ತೃತೀಯರಂಗದ ಬಹುತೇಕ ಪಕ್ಷಗಳು ರೈತರ ಭೂಮಿಯಲ್ಲಿ ವಿಶೇಷ ಆರ್ಥಿಕ ವಲಯವನ್ನು ನಿರ್ಮಿಸುವ ಪ್ರಕ್ರಿಯೆಗೆ ವಿರೋಧ ಹೊಂದಿರುವವರು. ಜಾಗತೀಕರಣ ಮತ್ತು ಕೋಕ್, ಪೆಪ್ಸಿ, ಮ್ಯಾಕ್‌ಡೊನಾಲ್ಡ್ ಮತ್ತು ಕೆಎಫ್‌ಸಿಯಂತಹ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶವನ್ನು ವಿರೋಧಿಸುವವರು. ಈ ಪಕ್ಷಗಳು ಬಂಡವಾಳಶಾಹಿ ವ್ಯವಸ್ಥೆ, ಮಾಲ್ ಸಂಸ್ಕೃತಿ, ತರಕಾರಿ ಮತ್ತು ಹಣ್ಣುಗಳ ಚಿಲ್ಲರೆ ವ್ಯಾಪಾರದಲ್ಲಿ ಕಾರ್ಪೊರೆಟ್‌ಗಳ ಪ್ರವೇಶವನ್ನು ಕೂಡ ವಿರೋಧಿಸುತ್ತವೆ. ಇವರಲ್ಲಿ ಬಹುತೇಕ ಮಂದಿ ಅಮೆರಿಕಾ ಮತ್ತಿತರ ಅಭಿವೃದ್ಧಿ ಹೊಂದಿದ ರಾಷ್ಟ್ರಗಳನ್ನು ವಿರೋಧಿಸುತ್ತಾರೆ.

ತೃತೀಯರಂಗದ ಮಿತ್ರಪಕ್ಷಗಳ ಬೇಡಿಕೆಗಳೇನು? ಇವರ ಬೇಡಿಕೆಗಳು ಈ ಕೆಳಗಿನಂತಿವೆ:

೧ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ. ಇದರರ್ಥ ಅಕ್ಕಿ ಅಥವಾ ಗೋಧಿ ಮುಕ್ತ ಮಾರುಕಟ್ಟೆಯಲ್ಲಿ ೭ ರೂ.ಗೆ ದೊರಕಿದರೆ, ಸರ್ಕಾರ ರೈತರಿಗೆ ೧೦ ರೂ. ಬೆಂಬಲ ಬೆಲೆ ನೀಡಬೇಕೆಂದು ಬೇಡಿಕೆ.

೨ ರೈತರಿಗೆ ಉಚಿತ ವಿದ್ಯುತ್

೩ ರಸಗೊಬ್ಬರ, ಕ್ರಿಮಿನಾಶಕಗಳು, ಮತ್ತು ಬೀಜಗಳಿಗೆ ಸಬ್ಸಿಡಿ

ಹಾಗಾದರೆ, ತೃತೀಯರಂಗದಲ್ಲಿನ ಮಿತ್ರಪಕ್ಷಗಳು ಪ್ರತಿರೋಧ ವ್ಯಕ್ತಪಡಿಸುವ ಅಂಶಗಳು ಯಾವುವು?

೪ ಭೂ ಸುಧಾರಣೆ. ಇದಕ್ಕೆ ಎರಡು ಮುಖಗಳಿವೆ. ಒಂದು, ಉಳುವವನಿಗೆ ಭೂಮಿ. ಎರಡು, ಭೂಹಿಡುವಳಿಯನ್ನು ವಿಸ್ತರಿಸುವುದು ಮತ್ತು ಕಾರ್ಪೊರೆಟ್ ಸಂಸ್ಥೆಗಳು ಕೃಷಿ ಕ್ಷೇತ್ರವನ್ನು ಪ್ರವೇಶಿಸಿ ದೊಡ್ಡ ಪ್ರಮಾಣದಲ್ಲಿ ಕೃಷಿ ಚಟುವಟಿಕೆಯನ್ನು ಕೈಗೊಳ್ಳುವುದು.

೫ ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ, ಮತ್ತು

೬ ರೈತರನ್ನು ಆದಾಯ ತೆರಿಗೆಯ ವ್ಯಾಪ್ತಿಗೆ ತರುವುದು.

ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ತೃತೀಯರಂಗ ಕೈಗಾರಿಕೀಕರಣದ ಬದಲಿಗೆ ಕೃಷಿವ್ಯವಸ್ಥೆಯನ್ನು, ಬಂಡವಾಳಶಾಹಿವ್ಯವಸ್ಥೆಯ ಬದಲಿಗೆ ಜಮೀನ್ದಾರಿ/ ಪಾಳೆಗಾರಿಕೆ ವ್ಯವಸ್ಥೆಯನ್ನು ಬಯಸುತ್ತದೆ.

'ಬ್ರಾಹ್ಮಣ'ರಾದ ಸೋಮನಾಥ್ ಚಟರ್ಜಿ ಅವರನ್ನು ಪಕ್ಷದಿಂದ ಉಚ್ಚಾಟಿಸಿದವರು ಯಾರು? ಸ್ವತಃ ಬ್ರಾಹ್ಮಣರಾದ ಬುದ್ಧದೇವ್ ಭಟ್ಟಾಚಾರ್ಯ, ಸೀತಾರಾಂ ಯೆಚೂರಿ, 'ಕಾಯಸ್ಥಾ' ಜಾತಿಗೆ ಸೇರಿದ ಜ್ಯೋತಿ ಬಸು, ಚಟರ್ಜಿ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ಯಾಕೆ ವ್ಯಕ್ತಪಡಿಸಲಿಲ್ಲ. ಕೇರಳ–ವಾದ ವರ್ಸಸ್ ಬೆಂಗಾಲ್–ವಾದ ಎಂದರೇನು? ಕೇರಳ ಸಿಪಿಎಂ 'ಶೂದ್ರ'ರಿಂದಲೂ, ಪ. ಬಂಗಾಳದ ಸಿಪಿಎಂ 'ದ್ವಿಜ'ರಿಂದ ನಿಯಂತ್ರಿಸಲ್ಪಡುತ್ತಿರುವುದು ಸುಳ್ಳೇ?

ಆದರೆ, ತೃತೀಯರಂಗವನ್ನು ರಕ್ಷಿಸಲು ಎಡರಂಗ ಏಕೆ ಸೈದ್ಧಾಂತಿಕ ಕೊಡೆ ಹಿಡಿಯಬೇಕು? ಎಡರಂಗ ಕೂಡ ಗ್ರಾಮೀಣ ಭಾಗವನ್ನು ಪ್ರತಿನಿಧಿಸುತ್ತಿರುವುದರಿಂದ ತೃತೀಯರಂಗ ಮತ್ತು ಎಡಪಕ್ಷಗಳು ಒಂದೆಡೆ ಸೇರುವುದು ಆಶ್ಚರ್ಯಪಡಬೇಕಾದ ವಿಚಾರವಲ್ಲ.

ಎಡಪಕ್ಷಗಳ ಬಹಳಷ್ಟು ಲೋಕಸಭಾ ಸದಸ್ಯರು ಗ್ರಾಮೀಣ ಕ್ಷೇತ್ರಗಳಿಂದ ಗೆದ್ದು ಬಂದವರು. ಎಡರಂಗದ ನಾಯಕತ್ವದ ಬೇರುಗಳು ಕೂಡ 'ಶೂದ್ರ' ಇತಿಹಾಸ ಹೊಂದಿದೆ. ಸಿಪಿಎಂ ಪಕ್ಷವನ್ನು ಬಹಳಷ್ಟು ವರ್ಷಗಳ ಕಾಲ ಮುನ್ನಡೆಸಿದ ಹರಿಕಿಷನ್‌ಸಿಂಗ್ ಸುರ್ಜಿತ್ 'ಶೂದ್ರ' ಜನಾಂಗಕ್ಕೆ ಸೇರಿದವರು. ಸುರ್ಜಿತ್ ಸ್ಥಳಕ್ಕೆ ಬಂದ ಪ್ರಕಾಶ್ ಕಾರಟ್ ಕೂಡ 'ಶೂದ್ರ' ಹಿನ್ನೆಲೆ ಹೊಂದಿರುವಂತಹವರು. ಇತ್ತೀಚೆಗೆ ಸಿಪಿಎಂನಲ್ಲಿ ಕಂಡುಬಂದ ಜಾತಿ ಕಲಹ ಇದಕ್ಕೆ ಒಂದು ಉದಾಹರಣೆ.

'ಬ್ರಾಹ್ಮಣ'ರಾದ ಸೋಮನಾಥ್ ಚಟರ್ಜಿ ಅವರನ್ನು ಪಕ್ಷದಿಂದ ಉಚ್ಚಾಟಿಸಿದವರು ಯಾರು? ಸ್ವತಃ ಬ್ರಾಹ್ಮಣರಾದ ಬುದ್ಧದೇವ್ ಭಟ್ಟಾಚಾರ್ಯ, ಸೀತಾರಾಂ ಯೆಚೂರಿ, 'ಕಾಯಸ್ಥಾ' ಜಾತಿಗೆ ಸೇರಿದ ಜ್ಯೋತಿ ಬಸು, ಚಟರ್ಜಿ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ಯಾಕೆ ವ್ಯಕ್ತಪಡಿಸಲಿಲ್ಲ. ಕೇರಳ–ವಾದ ವರ್ಸಸ್ ಬೆಂಗಾಲ್–ವಾದ ಎಂದರೇನು? ಕೇರಳ ಸಿಪಿಎಂ 'ಶೂದ್ರ'ರಿಂದಲೂ, ಪ. ಬಂಗಾಳದ ಸಿಪಿಎಂ 'ದ್ವಿಜ'ರಿಂದ ನಿಯಂತ್ರಿಸಲ್ಪಡುತ್ತಿರುವುದು ಸುಳ್ಳೇ? ಈ ಎರಡೂ ವರ್ಗಗಳ ಸಾಮಾಜಿಕ ತಳಹದಿ 'ಶೂದ್ರ' ವರ್ಗ ಎಂಬುದು ನಿಸ್ಸಂಶಯ.

ಸಾಮಾಜಿಕ ನೆಲೆ, ನಾಯಕತ್ವ, ಮತ್ತು ಪ್ರತಿನಿಧಿತ್ವವನ್ನು ನೋಡುವುದಾದರೆ, ಎಡಪಕ್ಷಗಳು, ನಾಯ್ಡು ಅವರ ಟಿಡಿಪಿ ಅಥವಾ ಚೌತಾಲಾ ಅವರ ಐಎನ್‌ಎಲ್‌ಡಿ ಪಕ್ಷಗಳ 'ಸಾಫ್ಟ್ ಕಾಪಿ'ಯಲ್ಲದೆ ಮತ್ತೇನೂ ಅಲ್ಲ.

ತೃತೀಯರಂಗ ಮತ್ತು ಎಡಪಕ್ಷಗಳು ಕೃಷಿವ್ಯವಸ್ಥೆಗೆ ಒತ್ತು ನೀಡುವುದು ಸಹಜ. ತೃತೀಯರಂಗದಲ್ಲಿರುವ ಯಾವುದೇ ಒಂದು ಪಕ್ಷ ಕೂಡ ಕೈಗಾರಿಕೀಕರಣಗೊಂಡ ಮತ್ತು ನಗರೀಕರಣಗೊಂಡ ಭಾರತದಲ್ಲಿ ಚುನಾವಣೆಗಳಲ್ಲಿ ಯಶಸ್ಸು ಕಾಣಲು ಸಾಧ್ಯವಿಲ್ಲ. ಅಭಿವೃದ್ಧಿ ಹೊಂದಿದ ಆಧುನಿಕ ಭಾರತದಲ್ಲಿ ಇವರಾರು ಅಸ್ತಿತ್ವ ಉಳಿಸಿಕೊಳ್ಳಲಾರರು. ಅಂತಹ ಸಮಾಜದಲ್ಲಿ ಈ ಪಕ್ಷಗಳು ಲಯ (ಅದೃಶ್ಯ) ವಾಗುವುದು ಖಚಿತ.

ಆದರೆ, ಬಿಎಸ್‌ಪಿ ಯಾಕೆ ತೃತೀಯರಂಗದ ಜೊತೆ ಕಾಣಿಸಿಕೊಳ್ಳುತ್ತಿದೆ? ತೃತೀಯರಂಗಕ್ಕೆ ಮಾಯಾವತಿ ಹತ್ತಿರವಾಗುತ್ತಿದ್ದಂತೆ, ಪ್ರಧಾನಿ ಗದ್ದುಗೆಯ ಮಹತ್ವಾಕಾಂಕ್ಷೆಯಿಂದ ದೂರ ಸರಿಯುತ್ತಾ ಹೋಗುತ್ತಾರೆ. ದಲಿತರು ಮತ್ತು ಪ್ರಜಾತಂತ್ರ ವ್ಯವಸ್ಥೆಗೆ ಪೆಟ್ಟು ಕೊಡಲು ಬಳಸಲಾಗುವ ಛಡಿ ಈ ತೃತೀಯರಂಗ ಎಂಬುದನ್ನು ನಾವು ಸದಾ ನೆನಪಿನಲ್ಲಿಡಬೇಕು. □

ಬುದ್ಧಾಯಣ

೩೭

ಹಾಗಾದರೆ ನಾನು, ನನ್ನ ನನ್ನದೆಂದರೆ ಏನು?

ಸಿ.ಎಚ್. ರಾಜಶೇಖರ್

ಜ್ಞಾನಿಗಳು ಬುದ್ಧನ ತ್ರಿಪಿಟಿಕ ಸಾಹಿತ್ಯವನ್ನು ಜಗತ್ತಿನ 'ಜ್ಞಾನ ಖಜಾನೆ' ಎಂದು ಪರಿಗಣಿಸಿದ್ದಾರೆ. ಯಾವುದೇ ಜ್ಞಾನದಾಹಿಯು ಈ ಜ್ಞಾನ ಖಜಾನೆಯ ಬಾಗಿಲನ್ನು ದಬ್ಬಿಕೊಂಡು ಒಳಹೊಕ್ಕರೆ ಮೊದಲ ಬಾರಿಗೆ ಅದರ ಗಾತ್ರವನ್ನು ಕಂಡು ಬೆಚ್ಚಿ ಬೀಳುವುದು ಸಹಜ. ಧೈರ್ಯಮಾಡಿ ಒಂದೊಂದೇ ಹೆಜ್ಜೆಯನ್ನು ಮುಂದಿಡುತ್ತಾ ಅದರ ಆಳಕ್ಕೆ ಇಳಿದರೆ ನಿಜಕ್ಕೂ ದಿಗ್ಮೂಡನಾಗುತ್ತಾನೆ. ಕ್ಷಣ ಕ್ಷಣವೂ ತಬ್ಬಿಬ್ಬು ಗೊಳ್ಳುತ್ತಾನೆ. ಅಲ್ಲಲ್ಲಿ ನಿಂತು ನಿಂತು ಬೆವರೊರೆಸಿಕೊಳ್ಳುತ್ತಾನೆ. ನಿಧಾನವಾಗಿ ಹೆಜ್ಜೆಯ ಮೇಲೆ ಹೆಜ್ಜೆ ಇಡಬೇಕೇ ಹೊರತು ನಾಗಾಲೋಟ ಇಲ್ಲಿ ಸಾಧ್ಯವೇ ಇಲ್ಲ. ಭವಿಷ್ಯ ಜಗತ್ತು ಹುಟ್ಟಿ ಕೋಟ್ಯಾನು ಕೋಟಿ ವರ್ಷಗಳಲ್ಲಿ ಮತ್ತು ಕೋಟ್ಯಾನು ಕೋಟಿ ಮನುಜರಲ್ಲಿ ಬುದ್ಧನಂತೆ 'ಮನಸ್ಸು ಮತ್ತು ಮೆದುಳ'ನ್ನು ಪರಿಪೂರ್ಣವಾಗಿ ಅದರ ಕೊನೆಯ ಹಂತದವರೆಗೆ ಕೊಂಡೊಯ್ದ ಮತ್ತೊಬ್ಬರ ಉದಾಹರಣೆ ಇಲ್ಲಿಯ ತನಕ ಇಲ್ಲವೇ ಇಲ್ಲ ಎಂದರೆ ಅದು ಅತಿಶಯೋಕ್ತಿಯಲ್ಲ.

ಆತ ಮುಟ್ಟದ ವಿಷಯವೇ ಇಲ್ಲ. ಆತ ತಲುಪದ ಹಂತವೇ ಇಲ್ಲ. ಬುದ್ಧ ವಸ್ತುವನ್ನು ಮತ್ತು ವಿಷಯವನ್ನು ಹೇಗಿದೆಯೋ ಹಾಗೇ ಸ್ವೀಕರಿಸುತ್ತಾನೆ. ಕಾಣುತ್ತಾನೆ. ಆತ ತೆಗೆದುಕೊಳ್ಳುವ ಯಾವುದೇ ವಿಚಾರವಾಗಿರಲಿ ಅದರ ಮೂಲಕ್ಕೆ ಕೈ ಹಾಕುತ್ತಾನೆ. ಸಮಗ್ರ ದೃಷ್ಟಿಕೋನಗಳಿಂದ ಅದರ ನೂರಾರು ಮಗ್ಗುಲನ್ನು ಜಾಲಾಡುತ್ತಾನೆ. ಏಕೆಂದರೆ, ಅವನು ಎಲ್ಲವನ್ನು ಅರಿತವನು. ಸಕಲ ಸ್ವಾರ್ಥವನ್ನು ನೀಗಿಸಿಕೊಂಡವನು. ಯಾವುದಕ್ಕೂ ಅಂಟಿಕೊಳ್ಳದವನು. ಆತ ಮೋಹಿಯೂ ಅಲ್ಲ, ನಿರ್ಮೋಹಿಯೂ ಅಲ್ಲ. ಅವನ ಸಮ್ಯಕ ಪ್ರಜ್ಞೆ ಈ ತೆರನಾದದ್ದು. ಹಾಗಾಗಿ ಬುದ್ಧ ನಮ್ಮಂತವರ ಪಾಲಿಗೆ ಅದ್ಭುತವಾಗಿ, ಸದಾ ಕಾಡುವ ಪ್ರಶ್ನೆಯಾಗಿ, ಚಿದಂಬರ ರಹಸ್ಯವಾಗಿ ಮತ್ತು ವಿಸ್ಮಯವಾಗಿ ಕಾಣುತ್ತಾನೆ. ಆದರೆ ಆತ ನಿಜಕ್ಕೂ ಜ್ಞಾನೋದಯಗೊಂಡ ಬುದ್ಧನೇ ಸರಿ. ತಥಾಗತನೇ ಸರಿ.

ಬುದ್ಧನ ಕೊನೆ ಇಲ್ಲದ ಹೋರಾಟ ಮತ್ತು ಅಂತಿಮ ಬಯಕೆ ಇದ್ದದ್ದು ಹುಟ್ಟಿದ ಪ್ರತಿ ವ್ಯಕ್ತಿಯೂ ಯಾಂತ್ರಿಕತೆಯನ್ನು ತೊರೆಯಬೇಕು. ಸಂಪ್ರದಾಯದ ಗೊಡ್ಡು ರೂಢಿಗಳಿಂದ ಕಳಚಿಕೊಳ್ಳಬೇಕು. ಜ್ಞಾನದತ್ತ ಮುಖಮಾಡಬೇಕು. ಪ್ರತಿ ಪದ ಮತ್ತು ಪದಾರ್ಥದ ಹಿಂದಿರುವ ಅರ್ಥ ವಿಶೇಷವನ್ನು ಪ್ರಶ್ನಿಸಬೇಕು. ಪರಿಶೀಲಿಸಬೇಕು. ವಿವೇಕ ಮತ್ತು ವಿವೇಚನೆಯನ್ನು ಮೈಗೂಡಿಸಿಕೊಂಡು ತಾವೇ ಸ್ವತಃ ಪರಿಶ್ರಮದಿಂದ ಸಮಗ್ರ ದೃಷ್ಟಿಕೋನ ಮತ್ತು ಸಮ್ಯುಕ್ ಪ್ರಜ್ಞೆಯನ್ನು ಪಡೆದು ಪರಿಪೂರ್ಣರು ಹಾಗೂ ಬುದ್ಧರಂತಾಗಬೇಕು ಎಂಬ ಹೆಬ್ಬಯಕೆಯೇ ಆಗಿತ್ತು.

ಆದರೆ ನಾವೋ ಕೇವಲ ಮನುಷ್ಯರು. ಮೋಹವನ್ನೇ ಮೈಹೊದ್ದು ಮಲಗಿದವರು. ಈ ದೇಹವನ್ನು ನಾನು, ನನ್ನ ಮತ್ತು ನನ್ನದೆಂದು ಗುರುತಿಸಿದವರು. ಅದು ನನ್ನ ಸ್ವತ್ತು, ಸ್ವಂತಿಕೆ. ಹಕ್ಕು ಹಾಗೂ ಸ್ವಾತಂತ್ರ್ಯ ಅಸ್ತಿತ್ವವುಳ್ಳದೆಂದು ಭ್ರಮಿಸಿ ಅದರ ಮೇಲೆ ಯಜಮಾನಿಕೆ ಚಲಾಯಿಸಿದವರು. ದೇಹವನ್ನು ಅಪಾರವಾಗಿ ಪ್ರೀತಿಸಿದವರು ಅದರಕ್ಕಾಗಿ ಕೊನೆ ಇಲ್ಲದ ಸ್ವಾರ್ಥ, ಜಂಜಾಟ, ಸಂಘರ್ಷ ಮತ್ತು ಹಗೆತನದಲ್ಲಿ ಪರ್ಯಾವಸಾನ ಕಂಡವರು. ಇದನ್ನೆ 'ಬದುಕು' ಎಂದು ಬಗೆದವರು. ನಾನು, ನನ್ನ ಮತ್ತು ನನ್ನದೆಂದರೆ ಏನು ಎಂಬುದರ ಅರ್ಥಕ್ಕಾಗಲೀ, ಹಿನ್ನೆಲೆಗಾಗಲಿ ಹುಡುಕಾಟ ನಡೆಸದವರು. ಈ ಎಲ್ಲವನ್ನೂ ಯಾಂತ್ರಿಕವಾಗಿ ಒಪ್ಪಿಕೊಂಡವರು. ಇದು ದೇವರು ನಮ್ಮಗಳ ಪಾಲಿಗೆ ಕರುಣಿಸಿದ ಭಿಕ್ಷೆ ಎಂದು ಬಗೆದವರು. ಆತನೇ ಇದಕ್ಕೆ ಸೂತ್ರಧಾರಿ. ಆತ ನಡೆಸಿದಂತೆ ನಡೆಯುವದು ನಮ್ಮ ಇಚ್ಚೆ ಮತ್ತು ವಿಧಿ ಬರಹ ಎಂಬ ಸಂಪ್ರದಾಯಶೀಲತೆಗೆ ಮರುಳಾದವರು.

ಇದರೊಂದಿಗೆ ಮತ್ತೊಂದು ವಾದವು ಇದೆ. ಅದೆಂದರೆ: ಈ ಹುಟ್ಟು 'ಆಕಸ್ಮಿಕ', ಆದರೆ ಸಾವು ಮಾತ್ರ 'ಶಾಶ್ವತ'. ಹಾಗಾಗಿ ಬದುಕಿದ ಪ್ರತಿ ಕ್ಷಣವನ್ನು ಮೋಜಿನಿಂದ, ಜೂಜಿನಿಂದ, ನಕ್ಕು ನಲಿಯುತ್ತಾ ಮನಬಂದಂತೆ ಬಳಸಿಕೊಳ್ಳಬೇಕು ಎಂಬುದೇ ಆಗಿದೆ. ಅದೇ ಸಾರ್ಥಕ ಬದುಕಿನ ಸೂತ್ರ ಎಂಬ ಹಂತ ತಲುಪಿದವರು.

ಆದರೆ ಬುದ್ಧನ ಪರಿಯೇ ವಿಭಿನ್ನ. ಆತನದು ಜ್ಞಾನ ಮತ್ತು ವಿಜ್ಞಾನದ ಮಾರ್ಗ. ಹಾಗಾಗಿ ಈ ವಿಧಿವಾದವನ್ನು ಮತ್ತು ಯಾಂತ್ರಿಕೃತವಾದವನ್ನು ತಿರಸ್ಕರಿಸುತ್ತಾನೆ. ಬದಲಿಗೆ ನಾನು, ನನ್ನ ಮತ್ತು ನನ್ನದೆಂಬ ಈ ದೇಹವು ಕಾರ್ಯಕಾರಣ ಸಂಬಂಧಗಳಿಂದಾಗಿ ಹುಟ್ಟಿದೆ. ಅದು ಭೂಮಿ, ತೇವ, ಉಷ್ಣ ಮತ್ತು ಗಾಳಿ ಎಂಬ ನಾಲ್ಕು ಮಹಾ ಮೂಲತತ್ವಗಳಿಂದ ಪೋಷಿಸಲ್ಪಟ್ಟಿದೆ. ಹಾಗಾಗಿ ಅದು ಐದು ಬಂಧನ ತತ್ವರಾಶಿಗಳಿಗೂ ಹಾಗೂ ನಾಲ್ಕು ಆರ್ಯ ಸತ್ಯಗಳಿಗೂ ಬದ್ಧವಾಗಿದೆ ಎನ್ನುತ್ತಾನೆ. ಆದ್ದರಿಂದ ಈ ನಂಟಿನ ವಿಭಜನೆ, ವಿಶ್ಲೇಷಣೆ ಮತ್ತು ಚಿಕಿತ್ಸಕ ದೃಷ್ಟಿಕೋನದತ್ತ ಸಾಗುತ್ತಾನೆ. ಅದರಿಂದ ಮಾತ್ರ ಈ ನಾನು, ನನ್ನ ಮತ್ತು ನನ್ನದೆಂಬ ಮಮಕಾರದ ಹಿಂದಿರುವ ಪೊಳ್ಳು ಅಹಂಕಾರ, ದರ್ಪ, ಸ್ವಾರ್ಥ,ಹಗೆತನ ಹಾಗೂ ಸಂಘರ್ಷಕ್ಕೆ ವಿಮುಕ್ತಿ ದೊರೆಯುತ್ತದೆ ಎನ್ನುತ್ತಾನೆ.

ಈ ಬಗೆಯ ಅಮೂಲ್ಯವೂ ಮತ್ತು ಮೂಲಭೂತ ಪ್ರಶ್ನೆಗಳನ್ನು ಒಳಗೊಂಡಿರುವ ಈ ಉಪದೇಶವನ್ನು ಬುದ್ಧ ತನ್ನ ಪರಮ ಶಿಷ್ಯನಾದ ಸಾರಿಪುತ್ರನಿಗೆ ಅಂದಿನ ದಿನಗಳಲ್ಲಿ ಕಥೆಯ ರೂಪದಲ್ಲಿ ಬೋಧಿಸುತ್ತಾರೆ. ಒಂದು ಪದವೂ ತಪ್ಪಿಲ್ಲದಂತೆ ಕಂಠಪಾಠ ಮಾಡಿದ ಸಾರಿಪುತ್ರರು ತನ್ನೊಂದಿಗೆ ತಂಗಿದ್ದ ಕಿರಿಯ ಭಿಕ್ಷು ಸಹೋದರರನ್ನು ಉದ್ದೇಶಿಸಿ ಆ ಕಥೆಯನ್ನು ಹೀಗೆ ಹೇಳತೊಡಗುತ್ತಾರೆ:

ಸಹೋದರರೇ, ಬುದ್ಧರು ಬೋಧಿಸಿದ 'ಮಹಾಹತ್ಥಿ ಪದೋಪಮ ಸುತ್ತ'ವನ್ನು ಚಾಚೂ ತಪ್ಪದೇ ಬೋಧಿಸುತ್ತೇನೆ. ಶ್ರದ್ಧೆಯಿಂದ ಕೇಳಿ. ಮನನ ಮಾಡಿಕೊಳ್ಳಿ, ಆ ಸತ್ಯ ಮಾರ್ಗದಲ್ಲಿ ನಡೆದು ನಿಮ್ಮದಾಗಿಸಿಕೊಳ್ಳಿ. ಆ ಮೂಲಕ ಸಮಗ್ರದೃಷ್ಟಿ ಮತ್ತು ಸಮ್ಯುಕ್ ಪ್ರಜ್ಞೆಯನ್ನು ಪಡೆಯಿರಿ. ಪರಿಪೂರ್ಣವಾಗಿ ಮುನ್ನಡೆಯಿರಿ' ಎಂದು ಸಾರಿಪುತ್ರರು ಮುಂದುವರೆದು: 'ಸಹೋದರರೇ, ಈ ದೇಹವನ್ನು ನಾನು, ನನ್ನ ಮತ್ತು ನನ್ನದೆಂದು ಅಹಂಕಾರ ಪಟ್ಟುಕೊಳ್ಳುತ್ತೇವೆ. ಇದು ನನ್ನ ಸ್ವತ್ತು ಎಂದು ಭ್ರಮಿಸುತ್ತೇವೆ. ಅದು ತನ್ನಿಂದ, ತನಗಾಗಿ, ತಾನೇ ಸೃಜಿಸಿಕೊಂಡ ಸ್ವತಂತ್ರ ಅಸ್ತಿತ್ವ ಎಂದು ಬೀಗುತ್ತೇವೆ. ಆದರೆ ಈ ಬಗೆಯ ಪ್ರತಿಷ್ಠೆಯು ತರವಲ್ಲ. ಅದು ಅಂಧಕಾರದ ಮಾರ್ಗ. ಈ ನಾನು, ನನ್ನ ಮತ್ತು ನನ್ನದೆಂಬುದು ನನ್ನದಲ್ಲ. ಅದಕ್ಕೆ ಪ್ರತ್ಯೇಕವಾದ ಯಾವ ಅಸ್ತಿತ್ವವೂ ಇಲ್ಲ. ಕಾರ್ಯಕಾರಣ ಸಂಬಂಧವೇ ಹುಟ್ಟಿನ ಮೂಲ. ಆದ್ದರಿಂದ ಯಾರು ಕಾರ್ಯಕಾರಣ ಸಂಬಂಧವನ್ನು ಸರಿಯಾಗಿ ಅರಿಯುತ್ತಾರೋ, ಅವರು ಧರ್ಮವನ್ನು ಅರಿಯುತ್ತಾರೆ. ಯಾರು ಧರ್ಮವನ್ನು ಅರಿಯುತ್ತಾರೋ, ಅವರು ಕಾರ್ಯಕಾರಣ ಸಂಬಂಧವನ್ನು ಅರಿಯುತ್ತಾರೆ. ಇದು ಹೇಗೆಂದರೆ ನಡೆದಾಡುವ ಎಲ್ಲ ಪ್ರಾಣಿ ಜೀವಿಗಳು ತಮ್ಮದೇ ಆದ ಪಾದದ ಆಕಾರವನ್ನು ಹೊಂದಿರುತ್ತವೆ. ಆದರೆ ಆ ಎಲ್ಲ ಪ್ರಾಣಿ ಜೀವಿಗಳ ಪಾದದ ಗುರುತುಗಳು 'ಆನೆ ಪಾದ ದೊಳಗೆ ಹೊಂದಿಕೆಯಾಗಿ ಅಡಕವಾಗುತ್ತದೆ.' ಅದೇ ರೀತಿ ಎಲ್ಲ ಕುಶಲ ಧರ್ಮಗಳು ನಾಲ್ಕು ಆರ್ಯ ಸತ್ಯಗಳಲ್ಲಿ ಸಂಗ್ರಹವಾಗಿ ಅಡಕ ವಾಗಿದೆ.'

'ಆಯುಷ್ಮಾಂತರೇ, ಆ ನಾಲ್ಕು ಧರ್ಮಗಳು ಯಾವುವು?'

'ಸಹೋದರರೇ, ದುಃಖಧರ್ಮ, ದುಃಖದ ಹುಟ್ಟಿನ ಧರ್ಮ, ದುಃಖ ನಿರೋಧಕ ಧರ್ಮ ಮತ್ತು ದುಃಖ ನಿರೋಧಕ್ಕೆ ಒಯ್ಯುವ ಧರ್ಮ. ಆದರೆ ಈ ನಾಲ್ಕು ಧರ್ಮಗಳು ಐದು ಬಗೆಯ ಬಂಧನ ತತ್ವರಾಶಿಗಳಿಂದ ಕೂಡಿದೆ.'

'ಆಯುಷ್ಮಾಂತರೇ, ಆ ಐದು ಬಂಧನ ತತ್ವರಾಶಿಗಳು ಯಾವುವು? ಅವುಗಳು ಏನನ್ನು ಹೊಂದಿದೆ?'

'ಸಹೋದರರೇ, ಅವುಗಳೆಂದರೆ ಆಕಾರಬಂಧನ ತತ್ವರಾಶಿ, ಅನುಭವ ತತ್ವರಾಶಿ, ಗ್ರಹಿಕೆಬಂಧನ ತತ್ವರಾಶಿ, ಮನೋನಿರ್ಮಾಣ ಬಂಧನ ತತ್ವರಾಶಿ ಮತ್ತು ಅರಿವು ಬಂಧನ ತತ್ವರಾಶಿಯೇ ಆಗಿದೆ.'

'ಆಯುಷ್ಮಾಂತರೇ, ಆಕಾರ ಬಂಧನ ತತ್ವರಾಶಿ ಎಂದರೆ ಏನು? ಅದು ಏನನ್ನು ಒಳಗೊಂಡಿದೆ'

'ಸಹೋದರರೇ, ಅದು ಭೂಮಿಯ ಒಳಗಿನ ಮತ್ತು

ಹೊರಗಿನ ಅಸ್ಥಿತ್ವದಿಂದ ಶಿಥವಾ ಹರಡುವಿಕೆಯಿಂದ ಕೂಡಿದೆ. ಯಾವುದು ಕಠಿಣ ಮತ್ತು ಘನ ಎಂದು ಅರಿಯಬಹುದೋ, ಅಥವಾ ಅಂಥಹ ಗುಣ ಲಕ್ಷಣಗಳಿಂದ ಹೊಂದಿಕೆಯಾಗಿದೆಯೋ ಅದು ಒಳಗಿನ ಹರಡುವಿಕೆಯಾಗಿದೆ. ಅವುಗಳೆಂದರೆ: ಚರ್ಮ, ಮಾಂಸ, ಸ್ನಾಯು, ಮೂಳೆ, ಮೈಕೂದಲು, ತಲೆಕೂದಲು, ಹೃದಯ ಮುಂತಾದದ್ದು. ಆದರೆ ಇವುಗಳಿಂದ ಕೂಡಿದ ದೇಹ ಸಮೂಹವನ್ನು ಇದು ನಾನು, ಇದು ನನ್ನದು ಎಂದು ಬೀಗುತ್ತೇವೆ. ಆದರೆ ಅದು ಕೇವಲ ಭೂಮಿಸತ್ವ ಅದು ನನ್ನದಲ್ಲ, ನಾನಲ್ಲ, ನಾವೆಲ್ಲ ಎಂಬುದನ್ನು ಯತಾರ್ಥವಾಗಿ ಅರಿತರೆ ಭೂಮಿಸತ್ವವನ್ನು ಅನಾದರಿಸುತ್ತಾನೆ. ಚಿತ್ತವನ್ನು ಭೂಮಿಸತ್ವದಿಂದ ವಿಮೋಚನೆಗೊಳಿಸುತ್ತಾನೆ'

ಸಹೋದರರೇ, ಒಂದು ಕಾಲ ಬಂದೇ ಬರುತ್ತದೆ. ಆಗ ಭೂಮಿಸತ್ವ ಕೂಡ ಕ್ಷೋಭೆಗೆ ಒಳಗಾಗುತ್ತದೆ. ಹೊರಗಿನ ಸತ್ವವು ಕಾಣದಾಗುತ್ತದೆ. ಕ್ಷಯಿಸುತ್ತದೆ. ಕ್ಷೀಣಿಸುತ್ತದೆ ಮತ್ತು ಬದಲಾಗುತ್ತದೆ. ಹೀಗೆ ಸ್ವಲ್ಪಕಾಲವೇ ಬದುಕುಳಿಯಬಲ್ಲ, ಅಶಾಶ್ವತವಾದ ಹಾಗೂ ಬಯಕೆಗಳಿಂದ ಹುಟ್ಟಿಬಂದ ಈ ದೇಹಕ್ಕೆ ಇದು ನಾನು, ನನ್ನದು, ಮತ್ತು ನನ್ನಿಂದ ಎಂಬ ಅಹಂಕಾರದ ಮಾತೇಕೆ? ಪ್ರಕೃತಿಯಲ್ಲಿ ಆ ತರದ ಯಾವ ಶಾಶ್ವತವು ಮತ್ತು ಸ್ವತಂತ್ರ ವಸ್ತು ಇಲ್ಲ'

'ಎಲೈ ಭಿಕ್ಷು ಸಹೋದರರೇ, ಆದ್ದರಿಂದ ನೀವುಗಳು ಸಾಮಾನ್ಯರಂತೆ ವರ್ತಿಸಬೇಡಿ. ಯಾರಾದರು ನಿಮ್ಮನ್ನು ಪೀಡಿಸಿದರೆ, ಬಯ್ದರೆ, ಹೊಡೆದರೆ, ರೇಗಿಸಿದರೆ ಅಥವಾ ದೂಷಿಸಿದರೆ, ನೀವುಗಳು ಹೀಗೆ ಆಲೋಚಿಸಿರಿ:ನನ್ನಲ್ಲಿ ಹುಟ್ಟಿರುವ ಈ ದುಃಖ ಅನುಭವವು 'ಕಿವಿಯ' ಕೇಳುವಿಕೆಯಿಂದ ಉಂಟಾಗಿದೆ. ಅದಕ್ಕೆ ಸ್ಪರ್ಶ, ಅನುಭವ, ಗ್ರಹಿಕೆ, ಮನೋನಿರ್ಮಾಣ, ಅರಿವು ಮತ್ತು ಚಿತ್ತವು ಮೂಲಕಾರಣ ಎಂಬುದನ್ನು ಅರಿಯಿರಿ. ಅವುಗಳ ಮೇಲೆ ಸಂಯಮವನ್ನು, ನಿಯಂತ್ರಣವನ್ನು ಸಾಧಿಸಿ, ಉಪೇಕ್ಷೆಯಿಂದ ಕೂಡಿದ ಸಮಭಾವ ಸ್ಥಿತಿಯಲ್ಲಿ ನೆಲೆಗೊಳಿ, ಇದು ಭಿಕ್ಷುವೊಬ್ಬನು ತಲುಪಬೇಕಾದ ಸಾಧನೆಯ ಹಂತ.'

'ಸಹೋದರರೇ, ಇದೆ ಬಗೆಯಲ್ಲಿ ತೇವಸತ್ವ, ಉಷ್ಣಸತ್ವ ಮತ್ತು ಗಾಳಿಸತ್ವದ ಒಳ ಹೊರಗನ್ನು ಅರಿಯಿರಿ. ಕಾಲ ಬಂದಾಗ ಅವುಗಳೂ ಕೂಡ ತಮ್ಮ ಹಿಂದಿನ ಸ್ಥಿತಿಯಿಂದ ಪಲ್ಲಟಗೊಳ್ಳುತ್ತವೆ. ಕ್ಷಯಿಸುತ್ತವೆ. ಕ್ಷೀಣಿಸುತ್ತವೆ ಮತ್ತು ಬದಲಾಗುತ್ತವೆ ಎಂಬುದನ್ನು ಅರಿಯಿರಿ. ಇದೂ ಕೂಡ ಅನಿತ್ಯ ಎಂಬುದನ್ನು ಮನಗಾಣಿ ಇಂತಹ ಮಹಾ ಪ್ರಕೃತಿಯೇ ತನ್ನದೇ ಆದ ನೀತಿ ನಿಯಮಗಳ ಅನುಸಾರ ಕಣ್ಮರೆಯಾಗುವಾಗ, ಸ್ವಲ್ಪ ಕಾಲವೇ ಬದುಕುಳಿಯಬಲ್ಲ ಈ ದೇಹವನ್ನು ನಾನು, ನನ್ನ ಮತ್ತು ನನ್ನದೆನ್ನುವುದು ಸರಿಯೇ? ಹೀಗೆ ಆಸೆ ಪಡುವುದರಿಂದ ಏನನ್ನು ಸಾಧಿಸಬಹುದು?'

'ಎಲೈ, ಸಹೋದರರೇ, ನಮ್ಮೆದುರಿಗಿನ ಅಗಾಧ ಪ್ರಕೃತಿಯನ್ನು ನೋಡುತ್ತಾ ಅಲ್ಪವಾದ ದೇಹದ ಆಸೆಯನ್ನು ಮತ್ತು ಅಹಂಕಾರವನ್ನು ನೀಗಿಸಿಕೊಳ್ಳುವುದೇ ಪ್ರಕೃತಿ ಸಹಜವಾದ ಧರ್ಮ. ಏಕೆಂದರೆ, ಇಲ್ಲಿ ಆ ತರಹದ ಯಾವ ಶಾಶ್ವತವೂ, ಸ್ಥಿರವೂ ಆದ ವಸ್ತು ಇಲ್ಲಿ ಹುಟ್ಟಿಲ್ಲ ಮತ್ತು ನೆಲೆ ನಿಂತಿಲ್ಲ ಎಂಬುದನ್ನು ಸಮ್ಯಕ್ ಪ್ರಜ್ಞೆಯಿಂದ ಅರಿತಾಗ ಈ ತೇವ ಸತ್ವ, ಉಷ್ಣಸತ್ವ ಮತ್ತು ಗಾಳಿಸತ್ವಗಳು ಅವುಗಳ ಸ್ಥಾನದಲ್ಲಿ ಅವುಗಳು ಕೇವಲ 'ಅದೇ' ಆಗಿರುತ್ತವೆ. ಆಗ ಅಲ್ಪತನವು ಅರಿವಿಗೆ ಬಂದು ಇದು ನಾನಲ್ಲ, ನನ್ನದಲ್ಲ ಎಂಬ ಹಂತ ತಲುಪುತ್ತದೆ.'

ನಾನು, ನನ್ನ ಮತ್ತು ನನ್ನದೆಂಬ ಅಹಂಕಾರ ಮತ್ತು ಆರೋಪವನ್ನು ನೀಗಿಕೊಳ್ಳಬಹುದು. 'ನಾನು' ಎಂಬ ಈ ದೇಹವು ಪ್ರಕೃತಿಯ ಕೊಡುಗೆ ಹಾಗೂ ಪ್ರಕೃತಿಯ ಒಂದು ಅಂಶ. ಒಂದು ತೃಣ ಅಥವಾ ಒಂದು ಅಣು ಎಂಬುದನ್ನು ಅರಿಯಬಹುದು. ಈ ಹಂತದವರೆಗೆ ನಾವುಗಳು ಸಾಗಿ ಬಂದರೆ ಅದು ನಿಜಕ್ಕೂ ಬಹಳ ಸಾಧನೆಯೇ ಸರಿ.

'ಸಹೋದರರೇ, ಅದು ಹೇಗೆಂದರೆ: ಮಣ್ಣು, ಬಿದಿರು, ಹುಲ್ಲು ಮತ್ತು ಬಳ್ಳಿಗಳಿಂದ ಬೀಗಿದು ಕಟ್ಟಿ ನಿರ್ಮಿಸಿದ ಆಕಾರಕ್ಕೆ 'ಮನೆ' ಎಂದು ಕರೆದಂತೆ. ಅದೇ ರೀತಿ ಸಹೋದರರೇ, ಮೂಳೆ, ನರ, ಮಾಂಸ, ಚರ್ಮಗಳಿಂದ ಕೂಡಿದ ಆಕಾರವನ್ನು 'ದೇಹ' ಎಂದು ಕರೆದಂತಾಯಿತು. ಕೇವಲ ಇದರಿಂದಷ್ಟೇ ಆ ದೇಹ ಸ್ವಯಂ ಪೂರ್ಣವಾಗುವುದಿಲ್ಲ. ಈ ದೇಹಕ್ಕೆ ಕಣ್ಣು ಬರಬೇಕು. ಒಂದು ವೇಳೆ ಒಳಗಿರುವ ಕಣ್ಣು ಚೆನ್ನಾಗಿದ್ದರೂ ಹೊರಗಿನ ಆಕೃತಿಗಳು ದೃಷ್ಟಿಪಟಲದ ಮೇಲೆ ಹಾಯದಿದ್ದರೆ? ಆತ ಅಷ್ಟೇ ದೊಡ್ಡ ದೇಹವನ್ನು ಹೊಂದಿಯೂ ಕೂಡ 'ಕುರುಡನಾಗಿರಬೇಕು!' ಇದರಿಂದ ಇಡೀ ದೇಹ ಜಡವೇ ಸರಿ. ಇಲ್ಲವೆಂದರೆ ದೇಹವಿದ್ದು ಕಣ್ಣಿಲ್ಲದಿದ್ದರೆ ಮಾನಸಿಕ ಪ್ರತಿಸ್ಪಂದನ ಉಂಟಾಗುವುದಿಲ್ಲ. ಅದು ಕೇವಲ 'ಆಕಾರ' ಮಾತ್ರವೇ ಆಗಿ ಬಿಟ್ಟಿರುತ್ತದೆ.'

'ಸಹೋದರರೇ, ಯಥಾಸ್ಥಿತಿ ಹೀಗಿರುವಾಗ ಈ ದೇಹವು ನಾನು, ನನ್ನದು ಎನ್ನಲು ಇಲ್ಲಿ ನಿನ್ನ ಹಂಗೇನಿದೆ? ನಿನ್ನ ಅಹಂಕಾರಕ್ಕೆ ನಿನ್ನ ಕೊಡುಗೆ ಏನು? ಏನೂ ಅಲ್ಲದ ನಿನ್ನನ್ನು ನೀನೇ ಇದು ನಾನು, ನನ್ನ ಮತ್ತು ನನ್ನದು ಎಂದರೆ ಅದಕ್ಕೆ, ಏನಾದರೂ ಸಂಬಂಧವಾಗಲಿ, ಅರ್ಥವಾಗಲಿ ಇದೆಯೇ? ಇದು ಹೇಗಾಯಿತೆಂದರೆ, ತನ್ನ ಮಗನಿಗೆ ಮದುವೆ ಮಾಡಿಕೊಂಡು ಸೊಸೆಯನ್ನು ಮಾವ ಮನೆಗೆ ಕರೆತಂದ ಬಳಿಕ ಆಕೆ ದರ್ಪದಿಂದ ಮಾವನನ್ನು ಉದ್ದೇಶಿಸಿ: ನೀನ್ಯಾರು? ನಿನ್ನ ಮಗನ್ಯಾರು? ನಿನ್ನ ಊರ್ಯಾವುದು? ನಡೆ ಆಚೆ ಎಂದಂತಾಯಿತು! ಇದೇ ಅಜ್ಞಾನ, ಇದೇ ದರ್ಪ ಮತ್ತು ಅಹಂಕಾರ.

ಸಹೋದರರೇ, ಆದ್ದರಿಂದ ನಮ್ಮ ಒಳಗಿನ ಕಣ್ಣು ಮತ್ತು ಹೊರಗಿನ ದೃಷ್ಟಿಪಟಲ ಸರಿಯಾಗಿರಬೇಕು. ಆಗ ಮಾತ್ರ ಹೊರಗಿನ ಆಕೃತಿಗಳು ಒಳಗಣ್ಣಿಗೆ ಕಾಣುವುದು. ಅದೇ ದೃಷ್ಟಿ ಅಥವಾ ದರ್ಶನ. ಆಗ ಮಾತ್ರ ಮಾನಸಿಕ ಪ್ರತಿಸ್ಪಂದನ ಸಾಧ್ಯ. ಈ ಸರಳ ಸತ್ಯವನ್ನು ಅರ್ಥಮಾಡಿಕೊಳ್ಳಿ ನಾನು, ನನ್ನ ಮತ್ತು ನನ್ನದು ಎಂಬ ಮಮಕಾರದ ಹಿಂದೆ ನಿಮ್ಮದೆಂಬ ಯಾವ ಹಂಗು ಹಾಗೂ ಋಣವಿಲ್ಲ ಎಂಬುದನ್ನು ಮನನ ಮಾಡಿಕೊಳ್ಳಿ, ನಿರಂತರ ಗುಲಾಮರಂತಿರುವ ನೀವು ಯಜಮಾನನಂತೆ ಬೀಗುವುದು ಅನರ್ಥವಲ್ಲವೇ? ಮೊದಲು 'ನಾನು' ಎಂಬ ಋಣಭಾರವನ್ನು ನಿನ್ನ ತಲೆಯ ಮೇಲಿಂದ ಕೆಳಗಿಳಿಸು ನಿನ್ನ ಬಾಧೆಗಳು ಕಡಿಮೆಯಾಗುತ್ತದೆ. ನಿನ್ನ ಮನಸ್ಸು ಹಗುರವಾಗುತ್ತದೆ. ಆಗ ಮಾತ್ರ ನಿನ್ನೊಳಗೆ ಹೊಂದಿಕೊಂಡು, ನಿನ್ನೊಳಗೇ ಅಡಕವಾಗಿರುವ ಆಕಾರ, ಅನುಭವ, ಗ್ರಹಿಕೆ, ಮನೋನಿರ್ಮಾಣ ಮತ್ತು ಅರಿವು ಎಂಬ ತತ್ವರಾಶಿಗಳನ್ನು ಕಾಣುತ್ತೀಯೇ ಹಾಗೂ ಇದ್ದಂತೆಯೇ ಸ್ವೀಕರಿಸುತ್ತೀಯೆ. ಅದೇ ಕ್ಷಣದಲ್ಲಿ ಅವುಗಳಿಗೆ ನೀನು ಸದಾ ಋಣಿಯಾಗುತ್ತೀಯೆ. ಅದು ನಾನಲ್ಲ, ನನ್ನದಲ್ಲ ಅದು ನೀನು, ನಿನ್ನಿಂದಾ ದದ್ದು, ನಿನ್ನ ಕೊಡುಗೆ ಅದಕ್ಕೆ ನೀನೇ ಯಜಮಾನ ಎಂಬ ಪರಮಸತ್ಯವನ್ನು ಅರಿತಾಗ ಈ ದೇಹದ ಬಗ್ಗೆ ನಿನಗೆ 'ವಿನಮ್ರತೆ' ಮೂಡುತ್ತದೆ. ಅದು ವಿನಯಕ್ಕೂ, ವಿದ್ವತ್ತಿಗೂ ದಾರಿ ಮಾಡಿಕೊಡುತ್ತದೆ.'

ಸಹೋದರರೇ, ಹೀಗೆ ನಾವುಗಳು ಈ ಬಗೆಯ ಐದು ಬಂಧನ ತತ್ವರಾಶಿಗಳನ್ನು ಅರಿಯಬೇಕು. ಅವುಗಳು ಆಸೆ, ಇಂದ್ರಿಯಕಾಮನೆ ಮತ್ತು ವ್ಯಕ್ತಿ ಹಾಗೂ ವಿಷಯಗಳೊಂದಿಗೆ ಸುಖಿಸುವ ಸಲುವಾಗಿ ವಿಶ್ವಾಸವನ್ನು ಹೊಂದಲೇಬೇಕು ಎಂಬ ಇಚ್ಛೆಯನ್ನು ಸದಾ ಪ್ರಚೋದಿಸುತ್ತಲೇ ಇರುತ್ತವೆ. ಇದೇ ದುಃಖದ ಹುಟ್ಟಿಗೆ ಕಾರಣ ಎಂಬುದನ್ನು ಅರಿಯಬೇಕು. ಇದು ಹುಟ್ಟುಹಾಕಿದ ಪಾಪದ ಫಲವೇ ನಾನು, ನನ್ನ ಮತ್ತು ನನ್ನದೆಂಬುದಾಗಿ ಗ್ರಹಿಸಬೇಕು. ಆದ್ದರಿಂದ ಈ ಆಸೆ ಮತ್ತು ಅನುರಾಗ ಬಂಧನವನ್ನು ನಿಯಂತ್ರಿಸುವುದರ ಮೂಲಕ ತೊರೆಯಬೇಕು. ಇದೇ ದುಃಖ ನಿರೋಧಕ್ಕೆ ಇರುವ ಏಕೈಕ ಮಾರ್ಗ.'

'ಎಲೈ ಸಹೋದರರೇ, ಇದೇ ಧರ್ಮ. ಇದೇ ಜ್ಞಾನ. ಇದೇ ವಿಜ್ಞಾನ. ಇದನ್ನು ಅರಿತು ಸಾಧಿಸಿ ಪಡೆದಾಗ ಮಾತ್ರವೇ ನಾನು, ನನ್ನ ಮತ್ತು ನನ್ನದೆಂಬ ಅಹಂಕಾರ ಮತ್ತು ಆರೋಪವನ್ನು ನೀಗಿಕೊಳ್ಳಬಹುದು. ಬದಲಿಗೆ 'ನಾನು' ಎಂಬ ಈ ದೇಹವು ಪ್ರಕೃತಿಯ ಕೊಡುಗೆ ಹಾಗೂ ಪ್ರಕೃತಿಯ ಒಂದು ಅಂಶ. ಒಂದು ತೃಣ ಅಥವಾ ಒಂದು ಅಣು ಎಂಬುದನ್ನು ಅರಿಯಬಹುದು. ಈ ಹಂತದವರೆಗೆ ನಾವುಗಳು ಸಾಗಿ ಬಂದರೆ ಅದು ನಿಜಕ್ಕೂ ಬಹಳ ಸಾಧನೆಯೇ ಸರಿ.'

'ಎಲೈ ಸಹೋದರರೇ, ಈ ಕಾರಣಕ್ಕಾಗಿಯೇ ಬುದ್ಧರು ಹೇಳಿದ್ದು: ಯಾರು ಕಾರ್ಯಕಾರಣ ಸಂಬಂಧಿ ಹುಟ್ಟನ್ನು ಅರಿಯುತ್ತಾರೋ, ಅವರು ಧರ್ಮವನ್ನು ಅರಿಯುತ್ತಾರೆ. ಅಥವಾ ಯಾರು ಧರ್ಮವನ್ನು ಅರಿಯುತ್ತಾರೋ, ಅವರು ಕಾರ್ಯಕಾರಣ ಸಂಬಂಧಿ ಹುಟ್ಟನ್ನು ಅರಿಯುತ್ತಾರೆ ಎಂದದ್ದು!'

'ಎಲೈ ಭಿಕ್ಷು ಸಹೋದರರೇ, ಹಾಗಾದರೆ ಈಗ ಹೇಳಿ: ಈ ಬಗೆಯ ಹುಟ್ಟಿನಿಂದ ಆಕಾರ ಪಡೆದ ದೇಹವನ್ನು ನಾನು, ನನ್ನ ಹಾಗೂ ನನ್ನದೆನ್ನಲುಂಟೆ? ಅಥವಾ ಇಂಥಹ ಸಂಯುಕ್ತ ವಸ್ತುವಾದ ಶರೀರವನ್ನು ಬರೀ ಕೇಡಿಗಾಗಿ ಮೀಸಲಿರಿಸಲುಂಟೆ......?!' ಎನ್ನಲು ಭಿಕ್ಷುಗಳು ಒಕ್ಕೊರಲಿನಿಂದ :

'ಆಯುಷ್ಮಂತರೇ, ಖಂಡಿತಾ ಇಲ್ಲ.......! ಖಂಡಿತ ಇಲ್ಲಾ......! ಪ್ರಕೃತಿಯ ಅಂಶವಾದ ಈ ದೇಹವನ್ನು ಕುಶಲಕ್ಕೂ ಮತ್ತು ಕಲ್ಯಾಣಕ್ಕೂ ಬಳಸುವುದೇ ಧರ್ಮ!' ಎಂದರು. ಆಗ ಸಾರಿಪುತ್ರರು ಮನದಲ್ಲಿ ಬುದ್ಧರನ್ನು ನೆನೆದು:

'ಹೌದು. ಅದೇ ಸರಿ...... ಅದೇಸರಿ....! ನನ್ನನ್ನು ನಾನು ಅರಿಯುವ ಜ್ಞಾನವನ್ನು ಕರುಣಿಸಿದ ಬುದ್ಧರು ಧರ್ಮಗುರುವೇ ಸರಿ.......! ಲೋಕಗುರುವೇ ಸರಿ...!!! ಎಂದು ಶಿರಬಾಗಿ ವಂದಿಸಿದರು.

(ಪಾಳಿಮೂಲ: ಮಹಾಹತ್ಥಿ ಪದೋಪಮ ಸುತ್ತ ಮಜ್ಜಿಮ ನಿಕಾಯ. ಸಂಪುಟ-೩)

'**SAMVADA**' Kannada Monthly, Sept. 2008 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಸಾಧನೆಗೆ ಅಂಗವಿಕಲತೆ ಸಮಸ್ಯೆಯೇ ಅಲ್ಲ...

ಅಂಗವಿಕಲರಲ್ಲಿ ಹುದುಗಿರುವ ಪ್ರತಿಭೆಯು ಬೆಳಕಿಗೆ ಬರುವಂತಾಗಲು ಸರ್ಕಾರ ಅವರಿಗಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದೆ.

ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು:

* ಶಿಕ್ಷಣ
* ಉದ್ಯೋಗ ಮತ್ತು ತರಬೇತಿ
* ಪುನರ್ವಸತಿ
* ಸಾಮಾಜಿಕ ಭದ್ರತೆ
* ವಿದ್ಯಾರ್ಥಿ ವೇತನ
* ಶ್ರವ್ಯ ಗ್ರಂಥಾಲಯ ಸ್ಥಾಪನೆ
* ಸ್ವಯಂ ಉದ್ಯೋಗ
* ದೂರವಾಣಿ ಬೂತ್ ಸೌಲಭ್ಯ
* ಸಾಲ ಸೌಲಭ್ಯ
* ವಿಮಾ ಯೋಜನೆ
* ಮಾಸಿಕ ನಿರ್ವಹಣೆ ಭತ್ಯೆ (ರೂ. ೧೨೫/-)
* ಉದ್ಯೋಗದಲ್ಲಿ ಶೇಕಡ ೫ರಷ್ಟು ಮೀಸಲು
* ವಿಶೇಷ ವಾಹನ
* ರಿಯಾಯಿತಿ ಬಸ್ ಪಾಸ್
* ಅಂಗವಿಕಲರಿಗಾಗಿ ಶಾಲೆಗಳು

ಉದಾಸೀನತೆ ಬಿಡಿ– ಉತ್ತೇಜನ ನೀಡಿ

ಕರ್ನಾಟಕ ವಾರ್ತೆ
Karnataka Information